ಸಂವಾದ

ಡಿಸೆಂಬರ್ ೨೦೦೬

ರೂ. ೨೦

ಜನಸಂಸ್ಕೃತಿಯ ಬಾಬಾ-ದತ್ತ

ಕ್ಷೀಣಿಸುತ್ತಿರುವ ಮುಸ್ಲಿಂ ಪ್ರಾತಿನಿಧ್ಯ

ಬಾಬಾ ಸಾಹೇಬರ ಜ್ಞಾನೋದಯ ಅನಂತರ...

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೨

ಡಿಸಂಬರ್ ೨೦೦೬

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು.ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿ ರಸ್ತೆ.

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

✆ ೨೩೨೮೭೯೪೩/೯೪೪೮೦ ೪೮೩೦೬

ಇ-ಮೇಲ್ : samvaada@hotmail.com

honnapura@yahoo.co.in

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e-mail : samvaada@hotmail.com

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೩
- ❑ ಹೊಸ ಪುಸ್ತಕ ೪
- ❑ ಅಂತ ರಂಗ ೫
- ❑ ಅಫ್ಜಲ್ ಗುರುಗೆ ನೇಣು: ೬
  - ○ ಶಿವಸುಂದರ್
- ❑ ಜನ ಸಂಸ್ಕೃತಿಯ ಬಾಬಾ-ದತ್ತ ೮
  - ○ ನರಸಿಂಹ ಗುಂಜಹಳ್ಳಿ

- ❑ ಕ್ಷೀಣಿಸುತ್ತಿರುವ ಮುಸ್ಲಿಮರ ಪ್ರಾತಿನಿಧ್ಯ ೧೨
  - ○ ಸಿದ್ಧಾರ್ಥ್ ವರದರಾಜನ್
- ❑ ಕರಾವಳಿ ಕರ್ನಾಟಕ ೧೪
  - ○ ಡಾ॥ ವಿ. ಲಕ್ಷ್ಮೀನಾರಾಯಣ
- ❑ ಸಂಘ ಸೇವೆ ಮತ್ತು ಸಂವಿಧಾನ ೧೯
  - ○ ಕೃಷ್ಣಮೂರ್ತಿ ಸೀತಾರಾಂ
- ❑ 'ಕೆನೆಪದರ'ದ ನೀತಿ ೨೦
  - ○ ಕೆ.ವಿ. ವಿಶ್ವನಾಥನ್
- ❑ ಬಾಬಾಸಾಹೇಬರ ಜ್ಞಾನೋದಯ ೨೨
  - ○ ಡಾ॥ ನಟರಾಜ್ ಹುಳಿಯಾರ್
- ❑ ಸುವರ್ಣ ಕರ್ನಾಟಕದ ಸವಿ ನೆನಪಲಿ ೨೫
  - ○ ನಾ. ದಿವಾಕರ
- ❑ ಇಂಗ್ಲಿಷ್ ಮರುಳಿನಲ್ಲಿ ೨೮
  - ○ ಡಿ.ಎಸ್. ನಾಗಭೂಷಣ
- ❑ ಭಯೋತ್ಪಾದಕ ಇಂಗ್ಲಿಷ್ ೩೩
  - ○ ಸವಿತಾ ನಾಗಭೂಷಣ
- ❑ ಬ್ರಾಹ್ಮಿನ್ ಫೋಬಿಯಾ-ಭಾಗ ಎರಡು ೩೪
  - ○ ಡಾ॥ ಸಿ.ಜಿ. ಲಕ್ಷ್ಮಿಪತಿ
- ❑ ದಲಿತ್ ಡೈರಿ ೩೮
  - ○ ಚಂದ್ರ ಭಾನ್ ಪ್ರಸಾದ್
- ❑ ಬುದ್ಧಾಯಣ ೪೨
  - ○ ಸಿ. ಎಚ್. ರಾಜಶೇಖರ್

ಕವನಗಳು :
- ❑ ಹಾಡು ಪಾಡು ೧೬
- ❑ ಹಾಡು ಕೃಷಿ ೩೬



ಮುಖ ಪುಟ ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಗಳು

ನಿಮ್ಮೊಡನೆ ಸದಾ ನಾವಿದ್ದೇವೆ

ಪ್ರೀತಿಯ ಓಕುಳಿ!

ಪ್ರೀತಿಯ ಇಂದೂಧರ್ ಸಾರ್,

ನವೆಂಬರ್ 'ಸಂವಾದ'ದಲ್ಲಿ ಡಾ॥ ಎಚ್. ನಾಗವೇಣಿ ಅವರ ನನ್ನ ಪ್ರೀತಿಯ ಕಡಲು ಓದಿ ರೋಮಾಂಚನವಾಯಿತು. ಅದೆಂಥಾ ಅದ್ಭುತವಾದ ಪ್ರಬಂಧ! ಬಯಲು ಸೀಮೆಯಿಂದ ಬಂದ ನನಗೆ ನಿಜವಾಗಿಯೂ ದಕ್ಷಿಣ ಕನ್ನಡದಲ್ಲಿ ಓಡಾಡಿ ಬಂದಷ್ಟು ಖುಷಿಯಾಯಿತು.

ನಾಗವೇಣಿಯವರ ಜೀವನ ಪ್ರೀತಿ ಅದ್ಭುತ! ಸಣ್ಣ ಪುಟ್ಟ ವಿವರಗಳನ್ನು ಅವರು ಕೂಡಿಟ್ಟು ಅದರಿಂದ ಶಬ್ಧ ಚಿತ್ರ ರಚಿಸುವ ಅವರ ಕಲಾ ನೈಪುಣ್ಯವೂ ಅಷ್ಟೇ ಚಂದ 'ಸಂವಾದ'ದಲ್ಲಿ ಗಂಭೀರ ಲೇಖನಗಳನ್ನು ಮಾತ್ರ ಓದುತ್ತಿದ್ದ ನನಗೆ 'ಪ್ರೀತಿಯ ಕಡಲು' ಪ್ರೀತಿಯ ಓಕುಳಿಯನ್ನೇ ಹರಿಸಿತು. ಸಂವಾದ ಬಳಗಕ್ಕೆ ನನ್ನ ಅಭಿನಂದನೆಗಳು.

ಕೆ. ಶಾಂತ ಕುಮಾರಿ
ಜ್ಞಾನಭಾರತಿ, ಬೆಂಗಳೂರು,

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಪ್ರೀತಿಯ ಇಂದೂಧರವರಿಗೆ,

ಪತ್ರಿಕೆಯು ವೈಚಾರಿಕ ಬೀಜವನ್ನು ಬಿತ್ತಿ ಅದರ ಫಲ ವಿವಿಧ ಹಂತದಲ್ಲಿದೆ ಎಂದು ಭಾವಿಸುತ್ತೇನೆ. ಸುಳ್ಳನ್ನು ನೂರು ಸಾರಿ 'ಇದೆ ನಿಜ ಇದೆ ನಿಜ' ಎಂದು ಸತ್ಯವನ್ನು ಮಾಡಲು ಹೊರಟಿರುವ ಇಂದಿನ ಸ್ಥಿತಿಯನ್ನು ನೆನಸಿಕೊಂಡರೆ, ಈ ನೆಲದಲ್ಲಿ ಹುಟ್ಟಿ ಸತ್ಯ ಧರ್ಮ (ಯಾವಾಗಲು ನೈತಿಕತೆಯ ನೆಲಗಟ್ಟಿನ ಮೇಲೆ ನಿಲ್ಲುವಂತದ್ದು) ನೈತಿಕತೆಯನ್ನು ಬೆಳಸಿ ಪೋಷಿಸಿ ಸ್ವಸ್ತ ಸಮಾಜವನ್ನು ಕಟ್ಟಿದ ಬುದ್ಧನಿಗೆ ಮಾಡಿದ ಅಪಚಾರ ಎಂದು ಅನ್ನಿಸುತ್ತದೆ.

ಮೀಸಲಾತಿ ಕುರಿತು ಬಂದ ಲೇಖನಗಳು ತುಂಬಾ ಚೆನ್ನಾಗಿವೆ. "CNN IBN" T.V ಯಲ್ಲಿ ಬಂದ ಸಂದರ್ಶನದ ಅನುವಾದ "ಶೌರಿ ಬೆವರಿಳಿಸಿದ ಕರಣ್ ಥಾಪರ್" ಈ ಸಂದರ್ಶನವನ್ನು ವೀಕ್ಷಿದೆ ಇದ್ದ ಎಷ್ಟೋ ಜನರಿಗೆ ಪತ್ರಿಕೆಯ ಮುಖ್ಯ ಸತ್ಯದರ್ಶನ ಮಾಡಿಸಿದ್ದೀರಾ.

ಚಂದ್ರಭಾನ್ ಪ್ರಸಾದ್‌ರವರ "ದಲಿತ ಡೈರಿ" ಬುದ್ಧಾಯಣ "ಇಡಿ ಬಿಡಿ ರಾಜಕಾರಣಕ್ಕೆ" ಬಂದ ಪ್ರತಿಕ್ರಿಯಗಳು ಉತ್ತಮವಾಗಿದ್ದವು.

ಅಕ್ಟೋಬರ್ ತಿಂಗಳಿನ "ರಾಜಕೀಯದಲ್ಲಿ ನೈತಿಕತೆ" ಬಿ.ಯು. ಸುಮಾರವರ ಲೇಖನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬೌದ್ಧ ಧರ್ಮ ದೀಕ್ಷೆ ಸ್ವೀಕರಿಸಿದ ೫೦ ವರ್ಷಗಳ ನಂತರವೂ ಶೋಷಿತ ಸಮಾಜ ಹಾಗೂ ಬಾಬಾ ಸಾಹೇಬರ ಅನುಯಾಯಿಗಳು ಮೀಸಲಾತಿಯಿಂದ ಅನುಕೂಲ ಪಡೆದು ಮುಂದೆ ಬಂದು ಅತ್ತ ತಿರುಗಿಯು ಸಹ ನೋಡದ ಸಮಾಜದ ಜಡತ್ವಕ್ಕೆ ಪೆಟ್ಟುಕೊಟ್ಟು ಬಡಿದೆಬ್ಬಿಸಿದಂತಿದೆ. ಈ ಲೇಖನ ಬಹಳ ಮಹತ್ವ ಪೂರ್ಣ ಅಂಶಗಳನ್ನು ಒಳ'ಗೊಂಡಿದೆ. ಲೇಖನ ಬರೆದ ಸುಮಾರವರಿಗೂ ಮತ್ತು ಪ್ರಕಟಿಸಿದ ನಿಮಗೂ ತುಂಬಾ ಧನ್ಯವಾದಗಳು.

ಪತ್ರಿಕೆಗಳು ಮಾಧ್ಯಮಗಳು ರೂಪಿಸಲು ಹೊರಟಿರುವ ನಾಯಕರುಗಳಿಗಿಂತ, ರೂಪಿಸಿದ ನಾಯಕರಿಗಿಂತ, ದನಿಯಿಲ್ಲದವರಿಗೆ ದನಿಕೊಟ್ಟ ಈ ನಾಡಿನ ಮಾನವೀಯ ಮುಖ್ಯಮಂತ್ರಿಯಾಗಿದ್ದ ದಿ॥ ಡಿ ದೇವರಾಜ್ ಅರಸುರವರನ್ನು ತಲೆಯ ಮೇಲೆ ಮಲ ಹೊರುವ ಅನಿಷ್ಟ, ಅಮಾನವೀಯ ಪದ್ಧತಿಯನ್ನು ನಿಷೇಧಿಸಲು ಮಹಾನ್ ಕೊಡುಗೆ ಕೊಟ್ಟ ಧೀಮಂತ ನಾಯಕ ಬಿ. ಬಸವಲಿಂಗಪ್ಪರವರನ್ನು ಬರದಲ್ಲಿ ತತ್ತರಿಸುತ್ತಿದ್ದ ನಾಡಿಗೆ ಆಳವಾದ ಅಧ್ಯಯನ ಮತ್ತು ಚಿಂತನಶೀಲತೆಯಿಂದ ಈ ನಾಡಿನ ಜನತೆಗೆ ನೀರುಣಿಸಿದ ಹಳ್ಳಿ ಹಳ್ಳಿಗೂ ಬ್ಯೋರ್‌ವೆಲ್ ಕೊರೆಸಿ "ಪಾನಿ ಸಾಬ್" ಎಂದೇ ಕರೆಸಿಕೊಂಡ ಅಬ್ದುಲ್ ನಜೀರ್ ಸಾಬ್‌ರವರು ಈ ನಾಡಿನ ಜನರ ಮನದಾಳದಲ್ಲಿ ಸದಾ ನೆಲಸಿರುತ್ತಾರೆ.

ಪತ್ರಿಕೆಯ ಸಾಮಾಜಿಕ ಕಾಳಜಿ, ವೈಚಾರಿಕ ಚಿಂತನೆ, ಬದ್ಧತೆಗೆ ನಿಮ್ಮ ಮತ್ತು ನಿಮ್ಮ ಬಳಗವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತ ನಿಮ್ಮೊಡನೆ ಸದಾ ನಾವಿದ್ದೇವೆ ಎಂದು ಹೇಳುತ್ತಾ ಈ ಪತ್ರಕ್ಕೆ ಪೂರ್ಣ ವಿರಾಮ ಹಾಕುತ್ತೆ!?

ಇತಿ ವಂದನೆಗಳೊಡನೆ
ಎಚ್. ಶಿವರಾಜು, ಮೈಸೂರು.

ಗಡಿಗಳ ವಾಸ್ತವತೆ ವೈಚಾರಿಕ ವಿಶ್ಲೇಷಣೆ

ಗೌರವಾನ್ವಿತ ಸಂಪಾದಕರಿಗೆ

ಗಡಿಗಳ ವಾಸ್ತವತೆ ರಾಜಕೀಯಕ್ಕಾಗಿ ಗಡಿವಿವಾದವನ್ನು ಬೆಳಸಿಕೊಳ್ಳುವ ರಾಜಕಾರಣಿ ಹಾಗೂ ಚಳವಳಿಗಾರರ ಮುಖಕ್ಕೆ ಕನ್ನಡಿ ಹಿಡಿದಂತಿದೆ. ಗಡಿ ಸಮಸ್ಯೆಯನ್ನು ನಿರಂತರವಾಗಿ ಜೀವಂತವಾಗಿಟ್ಟುಕೊಳ್ಳುವ ಕೆಲಸವನ್ನು ಎಲ್ಲ ಪಕ್ಷಗಳು ಹಾಗೂ ಎಲ್ಲ ರಾಜ್ಯಗಳ ಮುಖಂಡರು ಮಾಡುತ್ತಲೇ ಬಂದಿದ್ದಾರೆ.

ತಮಗೇನಾದರೂ ಸಂಕಟ ಬಂದಾಗಲೆಲ್ಲ ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಅಧಿಕಾರಸ್ಥರು ಇಂಥ ಕೆಲಸಕ್ಕೆ ಮೊರೆ ಹೋಗುತ್ತಾರೆ. ಹಿಂದೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಪಾಕಿಸ್ತಾನದೊಂದಿಗೆ ಕಾರ್ಗಿಲ್ ಎಂಬ ಹುಸಿ ಯುದ್ಧವನ್ನೇ ಸಾರಿ ಜನರಿಗೆ ಮಂಕು ಬೂದಿ ಎರಚಲಿಲ್ಲವೆ?

ಜನ ಎಚ್ಚೆತ್ತುಕೊಳ್ಳದಿದ್ದರೆ ಪುಢಾರಿಗಳ ವಂಚನೆಗೆ ಕೊನೆಯೆಂಬುದೇ ಇಲ್ಲವಾಗುತ್ತದೆ. ವೈಚಾರಿಕ ವಿಶ್ಲೇಷಣೆ ಮೂಲಕ ಇಂಥ ಎಚ್ಚರಿಕೆ ನೀಡಿದ ಡಾ॥ ವಸು ಅವರಿಗೆ ವಂದನೆಗಳು.

ಎಚ್.ಕೆ ಸುರೇಶ್‌ಶೆಟ್ಟಿ
ಕುಂದಾಪುರ

ಮೂಲಭೂತವಾದದ ಪರವಹಿಸಬೇಕೆ?

ಪ್ರಿಯ ಇಂದೂಧರ್,

'ಸಂವಾದ'(ನವೆಂ-೦೬)ದಲ್ಲೂ 'ಸನ್ಮಾರ್ಗ'ದಿಂದ ಆಯ್ದ ಲೇಖನಗಳೇ? ('ವಂದೇ ಮಾತರಂ' ಕುರಿತಂತೆ) ಹಿಂದೂ ಮೂಲ ಭೂತವಾದಿಗಳ ರಾಜಕಾರಣ ಖಂಡಿಸಲು ಹೋಗಿ ನಾವು ಮುಸ್ಲಿಂ ಮೂಲಭೂತವಾದಿಗಳ ಪರ ವಹಿಸ ಬೇಕೆ?

'ವಂದೇ ಮಾತರಂ' ಗೀತೆಯನ್ನು 'ಆನಂದಮಠ' ಕಾದಂಬರಿಯ ಜತೆಗಿಟ್ಟುಕೊಂಡೇ ಚರ್ಚಿಸುವುದು, ೨೦ನೇ ಶತಮಾನದ ಆರಂಭದಿಂದಲೂ ಮುಸ್ಲಿಂ ಲೀಗ್ ನಡೆಸಿಕೊಂಡು ಬರುತ್ತಿರುವ ವಿಭಜನೆಯ ರಾಜಕಾರಣವಾಗಿದೆ. ಬಂಕಿಮರು 'ಆನಂದಮಠ' ಬರೆಯುವ ಬಹು ವರ್ಷಗಳ ಮುನ್ನವೇ 'ವಂದೇ ಮಾತರಂ'ನ್ನು ಒಂದು ಬಂಗಾಳಿ ದೇಶ ಭಕ್ತಿ ಗೀತೆಯಾಗಿ ಬರೆದಿದ್ದರು; ನಂತರ ಅದನ್ನು ಕಾದಂಬರಿಗಾಗಿ ಬಳಸಿಕೊಂಡರಷ್ಟೇ. ಕಾದಂಬರಿಯ ಹಿನ್ನೆಲೆ ಗೊತ್ತಿಲ್ಲದ ಎಲ್ಲ ಧರ್ಮಿಯರೂ ಅದನ್ನ ಸ್ವಾತಂತ್ರ ಹೋರಾಟದ ಗೀತೆಯಾಗಿ ಹಾಡುತ್ತಿದ್ದರು. ರವೀಂದ್ರರೇ ಅದನ್ನು ೧೯೦೬ರಲ್ಲಿ ವಾರಾಣಾಸಿಯ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಿದ್ದರು. ಮುಸ್ಲಿಂ ಲೀಗ್ ರಾಜಕಾರಣದಿಂದಾಗಿ, ಅದು ಕಾಂಗ್ರೆಸ್ ವಲಯದಲ್ಲಿ ಚರ್ಚಿತವಾಗಿ, ೩೦ ರ ದಶಕದ ನಂತರ ಎಲ್ಲ ಧರ್ಮೀಯರೂ ಹಾಡಬಹುದಾದ ಆವೃತ್ತಿಯಲ್ಲಿ ಸಂಪಾದಿಕರಾಗಿ ಜನಪ್ರಿಯವಾಯಿತು. ಈ ಸಂಪಾದಿತ ಆವೃತ್ತಿಯ ಬಗ್ಗೆಯೂ ಈಗ ಮಾಡುತ್ತಿರುವ ರಾಜಕಾರಣವು ಮೇಲ್ನೋಟಕ್ಕೇ ಎದ್ದು ಕಾಣುವಷ್ಟು ಕೋಮುವಾದಿಯಾಗಿದೆ. ಕುಕ್ಕಿಲರ ಲೇಖನವೇ ಇದಕ್ಕೆ ಸಾಕ್ಷಿ. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣರಾದ ತಾಳಿಕೋಟೆ ಯುದ್ಧವನ್ನು ಹಿಂದೂ ಮುಸ್ಲಿಂ ಯುದ್ಧವೆಂದು ನೋಡಬಾರದೆಂದು ಹೇಳುವ ನಾವು 'ಆನಂದ ಮಠ'ದ ಕಾಲ್ಪನಿಕ ಯುದ್ಧದ ಬಗೆಗೇಕೆ ಇಷ್ಟೊಂದು ಅರಚಾಡತೊಡಗಿದ್ದೇವೆ?

ಡಿ.ಎಸ್. ನಾಗಭೂಷಣ,
ಶಿವಮೊಗ್ಗ



ಹೊಸ ಪುಸ್ತಕ

ನೀಲಿ
ಲೇ: ಹರ್ಷಾದ್ ವರ್ಕಾಡಿ
ಬೆಲೆ: ರೂ. ೫೦/-

ವೃತ್ತಿಯಲ್ಲಿ ಪರ್ತಕರ್ತರಾಗಿರುವ ಹರ್ಷಾದ್ ವರ್ಕಾಡಿ ಅವರ ಹನಿಗವಿತೆಗಳ ಸಂಕಲನವಿದು. ತಮ್ಮ ತಾರುಣ್ಯಕ್ಕೆ ಸಹಜವೆಂಬಂತೆ ಇಲ್ಲಿನ ತುಣುಕುಗಳಲ್ಲಿ ಹೊಸತನವಿದೆ. ಇಲ್ಲಿನ ಎಲ್ಲ ಐವತ್ತನಾಲ್ಕು ಹನಿಗಳಲ್ಲೂ ಕವಿ ಶಬ್ದದ ಜತೆ ಅನಗತ್ಯ ಕಸರತ್ತು ಮಾಡುವುದಿಲ್ಲ. ಬದಲಾಗಿ ಸರಳ ಸುಲಲಿತ ಚಿತ್ತಾರ ಮೂಡಿದಂತೆ, ಸುಂದರ ಪದಗಳ ಚಂದದ ಜೋಡಣೆ ಮೂಲಕ ಕಣ್ಣ ಮುಂದೆ ಚಿತ್ರ ಬಿಡಿಸಿದಂತೆ ಕಾಣುತ್ತದೆ. ಕಾವ್ಯಾಭಿವ್ಯಕ್ತಿಗೆ ದೊಡ್ಡ ಪದ್ಯಗಳೇನೂ ಅಗತ್ಯವಿಲ್ಲ ಎನ್ನವಷ್ಟು ಭಾವಾಭಿವ್ಯಕ್ತಿ ಈ ಸಣ್ಣ ತುಣುಕುಗಳಲ್ಲಿದೆ.

ಪ್ರಕಾಶಕರು: ಹೇಮಾಂಶು ಪ್ರಕಾಶನ
ದೇರೆಬೈಲು, ಮಂಗಳೂರು-೫೭೫೦೦೬

ರಂಗ ಸ್ಪಂದನ
ಲೇ: ಎಸ್ಕೆ ಕೊನೆ ಸಾಗರ
ಬೆಲೆ: ರೂ. ೩೦/-

ವೃತ್ತಿಯಲ್ಲಿ ಶಿಕ್ಷಕ ಹಾಗೂ ಪ್ರವೃತ್ತಿಯಲ್ಲಿ ರಂಗಭೂಮಿ. ಪತ್ರಿಕೋದ್ಯಮ ಹಾಗೂ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಕೊನೆ ಸಾಗರ ಅವರ ನಾಟಕ ವಿಮರ್ಶೆಗಳ ಸಂಕಲನ ಇದು. ರಂಗ ಪ್ರದರ್ಶನಗಳನ್ನು ನೋಡಿ ಆ ಕ್ಷಣಕ್ಕೆ, ಪತ್ರಿಕೆಗಳಿಗೆ ಬರೆಯುವ ವಿಮರ್ಶೆಗಳಂತೆ ಇಲ್ಲಿನ ಬರಗಳು ಇವೆ. ಸುಮಾರು ೨೫ ರಂಗ ಪ್ರದರ್ಶನಗಳ ವಿಮರ್ಶೆಗಳು ಇಲ್ಲಿವೆ. ರಂಗ ಪ್ರದರ್ಶನಗಳ ವಿಮರ್ಶೆ ಹೇಳಿ ಕೇಳಿ ಆ ಕ್ಷಣದ ಪ್ರತಿಕ್ರಿಯೆಗಳಂತಿರುತ್ತವೆಂಬ ಮಿತಿಯನ್ನು ಇಟ್ಟುಕೊಂಡೇ ಈ ಕೃತಿಯನ್ನು ಗಮನಿಸಬೇಕು. .

ಪ್ರಕಾಶಕರು: ಸಂಗಮ ಪ್ರಕಾಶನ
ಹುನಗುಂದ, ಬಾಗಲಕೋಟೆ ಜಿಲ್ಲೆ.

ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಲೇ: ವಿಶ್ವಾರಾಧ್ಯ ಸತ್ಯಂಪೇಟೆ
ಬೆಲೆ: ರೂ. ೭೫/-

ವಿವಿಧ ಸಂದರ್ಭಗಳಲ್ಲಿ ನಡೆಸಿದ ಸಂದರ್ಶನಗಳು ಹಾಗೂ ಇತರೆ ಲೇಖನಗಳನ್ನೊಳಗೊಂಡ ಕೃತಿ ಇದು ಇಲ್ಲಿನ ಸಂದರ್ಶನಗಳು ಈಗಾಗಲೇ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡು ವ್ಯಾಪಕ ಚರ್ಚೆಗೆ ಒಳಗಾಗಿವೆ. ನೇರ ನಿಷ್ಠುರ ಪ್ರಶ್ನೆಗಳೊಂದಿಗೆ ಸಂದರ್ಶಕರನ್ನು ಎದುರಿಸುವ ಜಾಣ್ಮೆ ಹಾಗೂ ಉತ್ತರಿಸುವವರನ್ನು ಇಕ್ಕಟ್ಟಿಗೆ ಸಿಲುಕಿಸುವ ಚಾತುರ್ಯ ಲೇಖಕದಲ್ಲಿ ಎದ್ದುಕಾಣುತ್ತದೆ. ಇಲ್ಲಿನ ಎಲ್ಲ ಬರಹಗಳಲ್ಲಿ ಲೇಖಕರ ವೈಚಾರಿಕ ಕಾಳಜಿ ಸಮರ್ಥವಾಗಿ ವ್ಯಕ್ತವಾಗಿದೆ.

ಪ್ರಕಾಶಕರು: ಬಸವ ಮಾರ್ಗ ಪ್ರಕಾಶನ
ಶಹಾಪುರ, ಕಲ್ಬುರ್ಗಿ ಜಿಲ್ಲೆ

ಗುಬ್ಬಿಯೊಂದು ಗೂಡು ಕಟ್ಯಾದೊ
ಲೇ: ಡಾ॥ ಬಸವರಾಜ ಸಂಬರದ
ಬೆಲೆ: ರೂ. ೪೦/-

ಇದು ಸಬರದರ ಹನ್ನೊಂದನೇ ಕವನ ಸಂಕಲನ. ಪ್ರಸ್ತುತ ಕವನ ಸಂಕಲನವು ಹಾಡುಗಳ ಸಂಕಲನವಾಗಿದೆ. ಇಲ್ಲಿನ ಅನೇಕ ಹಾಡುಗಳು ಈಗಾಗಲೇ ಧ್ವನಿಸುರಳಿ ರೂಪದಲ್ಲಿ ಜನಮನವನ್ನು ತಲುಪಿವೆ. ಕಾಲಕಾಲಕ್ಕೆ ಕನ್ನಡ ಕಾವ್ಯದಲ್ಲಾದ ಬದಲಾವಣೆಗಳಿಗೆ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುತ್ತ ಇದೀಗ ಹಾಡಿನ ಗೂಡು ಕಟ್ಟುವ ಸೃಜನಶೀಲ ಕ್ರಿಯೆಯಲ್ಲಿ ಕವಿ ವಿಶೇಷ ಕೌಶಲ್ಯವನ್ನು ತಂದಿದ್ದಾರೆ. ಇಲ್ಲಿನ ಕೆಲವು ಹಾಡುಗಳು ಬೆರಗಿನ ಬೆಡಗಿನಿಂದ ಗುಂಗು ಹಿಡಿಸುವಂತಿವೆ.

ಪ್ರಕಾಶಕರು: ಪಲ್ಲವಿ ಪ್ರಕಾಶನ
ಗುಲಬರ್ಗಾ-೫೮೫೧೦೫



ಮಹಿಳೆ ಮತ್ತು ಜಾತಿ
ಲೇ: ಡಾ॥ ಎಂ. ಉಷಾ
ಬೆಲೆ: ರೂ. ೩೦/-

ಜಾತಿ ಮತ್ತು ಮಹಿಳೆ ಪ್ರಶ್ನೆಗಳ ಸಂಬಂಧವನ್ನು ಸೈದ್ಧಾಂತಿಕವಾಗಿ ಚರ್ಚಿಸಿರುವ ಕೃತಿ ಇದು. ಜಾತಿಯ ಅಸಮಾನತೆಯು ಪಿತೃಪ್ರಧಾನತೆಯ ಉತ್ಪನ್ನ ಎಂದು ವಾದಿಸುತ್ತಾ ಆಧುನಿಕ ಸಮಾಜಗಳಲ್ಲಿಯೂ ಇದು ನವಪಿತೃ ಪ್ರಧಾನತೆಯ ರೂಪದಲ್ಲಿ, ನವಜಾತೀಯತೆಯ ರೂಪದಲ್ಲಿ ಮೈದಾಳಿದೆ ಎನ್ನುವುದನ್ನು ವಿಮರ್ಶಿಸಿದ್ದಾರೆ. ಪಿತೃಪ್ರಧಾನತೆ ಮತ್ತು ಜಾತಿವ್ಯವಸ್ಥೆಗಳು ವೈಚಾರಿಕವಾಗಿ ಅಂತರ್ ಸಂಬಂಧಿ ಯಾದವು ಎನ್ನುವುದನ್ನು ಸಮರ್ಪಕವಾಗಿ ತೋರಿಸಿಕೊಟ್ಟಿದ್ದಾರೆ.

ಪ್ರಕಾಶಕರು: ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಐದು ಬೀದಿ ನಾಟಕಗಳು
ಲೇ: ಡಾ॥ ಬಸವರಾಜ ಸಬರದ
ಬೆಲೆ: ರೂ. ೮೦/-

ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೈಯಾಡಿಸಿರುವ ಬಸವರಾಜ ಸಬರದರ ಐದು ಬೀದಿನಾಟಕಗಳ ಸಂಕಲನ ಇದು. ಸಬರದ ಈಗಾಗಲೇ ಬೀದಿ ನಾಟಕಗಳ ಎರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಇದು ಅವರ ಬೀದಿನಾಟಕಗಳ ಮೂರನೇ ಕೃತಿ. ಬೀದಿಯಲ್ಲಿ ನಿಂತ ಪ್ರೇಕ್ಷಕನ ಕಲ್ಪನಾ ಶಕ್ತಿಯನ್ನು ಎಷ್ಟು ಪ್ರಮಾಣದಲ್ಲಿ ದುಡಿಸಿಕೊಳ್ಳಲು ನಿರ್ದೇಶಕ ಶಕ್ತನೋ ಅಷ್ಟು ಯಶಸ್ವಿಯಾಗಬಲ್ಲ ನಾಟಕಗಳು ಇಲ್ಲಿವೆ. ವಾಸ್ತವವಾದಿ ರಂಗವನ್ನು ಕಟ್ಟಿಕೊಡಬಲ್ಲ ಸಮರ್ಥ ನಿರ್ದೇಶಕನಿಗೆ ರಂಗದ ಮೇಲೆ ಸವಾಲಾಗಬಲ್ಲಂಥ ನಾಟಕಗಳೂ ಇಲ್ಲಿವೆ. ಸಬರದರು ರಂಗ ಪ್ರಯೋಗದ ಬಗೆಗೂ ತಿಳಿದವರಾದ್ದರಿಂದ ಈ ಸಮನ್ವಯ ಸಾಧ್ಯವಾಗಿದೆ.

ಪ್ರಕಾಶಕರು: ಪಲ್ಲವಿ ಪ್ರಕಾಶನ
ಗುಲಬರ್ಗಾ-೫೮೫೧೦೫

ಸಂಪಾದಕೀಯ



ನಾಗರಿಕ ಸಮಾಜ ಉಳಿಯುವುದೇ?

ಕೇಂದ್ರದಲ್ಲಿ ಅಧಿಕಾರದ ನೇತೃತ್ವವಹಿಸಿರುವ ಕಾಂಗ್ರೆಸ್ ಪಕ್ಷಕ್ಕೀಗ ನಿಜಕ್ಕೂ ಕುತ್ತಿಗೆಗೆ ಬಂದಿದೆ. ಸದಾ ಸಾಮಾಜಿಕ ನ್ಯಾಯದ ವಕ್ತಾರನಂತೆ ವರ್ತಿಸುವ ಕಾಂಗ್ರೆಸ್ ಈಗ ಏನು ಮಾಡಲೂ ತೋಚದೆ ಚಡಪಡಿಸುತ್ತಿದೆ. ಒಂದು ಕಡೆ ಪರಿಶಿಷ್ಟಜಾತಿ ಮತ್ತು ವರ್ಗಗಳ ಮೀಸಲಾತಿಯಲ್ಲಿ 'ಕೆನೆಪದರ' ನೀತಿ ಅಳವಡಿಸಬೇಕೆಂಬ ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದರೆ, ಮತ್ತೊಂದು ಕಡೆ ತಾನೇ ರಚಿಸಿದ ಮುಸ್ಲಿಮರ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಕುರಿತ ನ್ಯಾಯ ಮೂರ್ತಿ ರಾಜೇಂದರ್ ಸಾಚಾರ್ ವರದಿಯ ಶಿಫಾರಸು ಮತ್ತು ಸತ್ಯಾಂಶಗಳನ್ನು ಎದುರಿಸಲಾರದೆ ಕುಸಿದು ಕುಳಿತಿದೆ.

ಭಾರತದ ನ್ಯಾಯಾಂಗ ತಳಸಮುದಾಯಗಳ ಅಭಿವೃದ್ಧಿ ಕುರಿತು ಹೃದಯವಂತಿಕೆಯನ್ನು ತೋರದೆ ಬಹಳ ಕಾಲವೇ ಆಯಿತು. ಮೀಸಲಾತಿ ಕುರಿತಂತೆ ವಿವಿಧ ನ್ಯಾಯಾಲಯಗಳು ಆಗಾಗ್ಗೆ ನೀಡುತ್ತಿರುವ ತೀರ್ಪುಗಳು ಹೆಚ್ಚಾಗಿ ಮೀಸಲಾತಿಯನ್ನು ತಪ್ಪಿಸುವ ವಿವಿಧ ಬಗೆಗಳನ್ನು ಹೇಳಿಕೊಡುವ ಮಾದರಿಯಲ್ಲೇ ಇರುತ್ತವೆ. ಬೆರಳೆಣಿಕೆಯಷ್ಟಿರುವ ಜನ ದೇಶದ ಅಧಿಕಾರ-ಸಂಪತ್ತಿನಲ್ಲಿ ಸಿಂಹಪಾಲು ಪಡೆಯುತ್ತಿರಬೇಕಾದರೆ, ಬಹು ಸಂಖ್ಯಾತರಾದ ತಳಸಮುದಾಯಗಳಿಗೆ ಒಟ್ಟು ಮೀಸಲಾತಿ ನೂರಕ್ಕೆ ಐವತ್ತಕ್ಕಿಂತ ಹೆಚ್ಚು ಇರಬಾರದೆಂಬ ತೀರ್ಪು ಇದಕ್ಕೊಂದು ಸ್ಪಷ್ಟ ಉದಾಹರಣೆಯಾಗಿದೆ.

ಪರಿಶಿಷ್ಟ ಜಾತಿ ವರ್ಗದವರಿಗೆ ಸಂವಿಧಾನದಲ್ಲಿ ಮೀಸಲಾತಿ ನಿಗದಿ ಪಡಿಸಿದಾಗ ಎಲ್ಲೂ ನಮೂದಿಸದ 'ಕೆನೆಪದರ' ಈಗ ಸುಪ್ರೀಂ ಕೋರ್ಟಿಗೆ ಸಂವಿಧಾನ ಬದ್ಧವಾಗಿ ಕಾಣುತ್ತಿರುವುದರ ಹಿಂದಿನ ಉದ್ದೇಶವೇನು? ಹಾಲಿ ಜಾರಿಯಲ್ಲಿರುವ ಮೀಸಲಾತಿ ವಿತರಣೆಯಲ್ಲಿ ಪ್ರಾಮಾಣಿಕತೆಯೇ ಇಲ್ಲದಿರುವಾಗ 'ಕೆನೆ ಪದರ'ದ ಮಾತಾಡುವುದು ಆತ್ಮ ವಂಚನೆಯಲ್ಲವೆ? ಕೇಂದ್ರ ಸರ್ಕಾರ, ರಾಜ್ಯ ಸರ್ಕಾರವೂ ಸೇರಿದಂತೆ ಸರ್ಕಾರಿ, ಅರೆ ಸರ್ಕಾರಿ ಸ್ವಾಮ್ಯದ ಯಾವ ಕ್ಷೇತ್ರದಲ್ಲೂ ನಿಗದಿತ ಮೀಸಲಾತಿಯನ್ನು ಇನ್ನೂ ತುಂಬಲಾಗಿಲ್ಲ ಎಂದು ಸರ್ಕಾರಿ ಅಂಕಿ ಅಂಶಗಳೇ ಹೇಳುವಾಗ 'ಕೆನೆ ಪದರ'ದ ಪ್ರಸ್ತಾಪದ ಹಿಂದೆ ಯಾವ ನ್ಯಾಯ-ಸದುದ್ದೇಶ ಇದೆ?

ಮೇಲಿನ ಪ್ರಶ್ನೆ ಈಗ ಪ್ರತಿಯೊಬ್ಬ ಪ್ರಜ್ಞಾವಂತನನ್ನು ಕಾಡುತ್ತಿದೆ. ಸುಪ್ರೀಂ ಕೋರ್ಟಿನ ತೀರ್ಮಾನ, ಸಂವಿಧಾನದ ಸ್ಪಷ್ಟ ಉಲ್ಲಂಘನೆಯಾಗಿರುವುದು ಸಂವಿಧಾನದ ಪ್ರಾಥಮಿಕ ಜ್ಞಾನ ಉಳ್ಳ ಯಾರಿಗಾದರೂ ಮನದಟ್ಟಾಗುತ್ತದೆ. ಪರಿಶಿಷ್ಟ ಜಾತಿ/ವರ್ಗಗಳನ್ನು ಇಡಿಯಾಗಿ ಒಂದು ಘಟಕವಾಗಿ ಸಂವಿಧಾನ ಗುರುತಿಸಿದೆ. ಅದರಲ್ಲಿ ಯಾರು ಮೇಲಲ್ಲ. ಯಾರೂ ಕೀಳಲ್ಲ. ಯಾರೂ ಶ್ರೀಮಂತರಲ್ಲ. ಯಾರೂ ಬಡವರಲ್ಲ. ಅದು ಕೇವಲ ಜಾತಿ ಆಧಾರಿತ ಮೀಸಲಾತಿ. ಅದರಲ್ಲಿ 'ಕೆನೆ ಪದರ' ಹುಡುಕುವುದು, ಮೊಸರಿನಲ್ಲಿ ಕಲ್ಲು ಹುಡುಕಿದಂತಾಗಿದೆ.

ಹಿಂದೆ ಆಂಧ್ರ ಪ್ರದೇಶ ಸರ್ಕಾರ ರಾಜಕೀಯ ಕಾರಣಗಳಿಗಾಗಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನಿಗದಿ ಪಡಿಸಿ ಆಜ್ಞೆ ಮಾಡಿದಾಗ, ಇದೇ ಸುಪ್ರೀಂ ಕೋರ್ಟ್ ಹಾಗೆ ಮಾಡಲು ಸಂವಿಧಾನದಲ್ಲಿ ಅವಕಾಶವಿಲ್ಲ ಎಂದು ಅದನ್ನು ರದ್ದುಗೊಳಿಸಿತು. ಆದರೆ ಅದೇ ಸುಪ್ರೀಂ ಕೋರ್ಟ್ ಈಗ ಪರಿಶಿಷ್ಟ ಜಾತಿಯವರಲ್ಲಿ ವಿಭಾಗಗಳನ್ನು ಮಾಡಲು ಹೊರಟಿದೆ. ತನಗಿಲ್ಲದ ಅಧಿಕಾರವನ್ನು ಸುಪ್ರೀಂ ಕೋರ್ಟ್ ತನ್ನ ಮೇಲೆ ಹೇರಿಕೊಂಡು ಪ್ರಜಾಸತ್ತೆ ಮತ್ತು ಅದರ ಪ್ರಾತಿನಿಧಿಕ ರೂಪವಾದ ಸಂಸತ್ ಮೇಲೆ ಸವಾರಿ ಮಾಡಲು ಹೊರಟಿರುವುದು ಇದರಿಂದ ಸ್ಪಷ್ಟವಾಗುತ್ತಿದೆ. ಆಡಳಿತದಲ್ಲಿ ನ್ಯಾಯಾಲಯದ ವಿನಾಕಾರಣ ಹಸ್ತಕ್ಷೇಪ ಇದಾಗಿದ್ದು, ದೇಶಾದ್ಯಂತ ಈ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕಾಗಿದೆ. ಹಾಗೂ ನ್ಯಾಯಾಲಯಗಳ ಮಿತಿ ಮತ್ತು ವ್ಯಾಪ್ತಿಯ ಬಗೆಗೂ ರಾಷ್ಟ್ರವ್ಯಾಪಿ ಚರ್ಚೆ ಅಗತ್ಯವಾಗಿದೆ.

ಪರಿಶಿಷ್ಟ ಜಾತಿಗಳೊಳಗೆ ಸೌಲಭ್ಯ ವಿತರಣೆಯಲ್ಲಿ 'ಸಮಾನ ಹಂಚಿಕೆ'ಯಾಗಿದೆ ಎಂಬುದು ನನ್ನ ವಾದವಲ್ಲ. ಸಮಾನ ಹಂಚಿಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾದ ಸಾಮಾಜಿಕ ಒತ್ತಡ ಈಗ ನಿರ್ಮಾಣವಾಗುತ್ತಿದೆ. ಅದಕ್ಕೆ ಅಗತ್ಯವಾದ ಸಾಂವಿಧಾನಿಕ ಕ್ರಮಗಳನ್ನು ಕೈಗೊಂಡು, ಸಂವಿಧಾನ ತಿದ್ದುಪಡಿಯ ಮೂಲಕವೇ ಈ 'ಅಸಮಾನ ಹಂಚಿಕೆ'ಯನ್ನು ತಪ್ಪಿಸಬೇಕಾಗಿದೆ. ಆದರೆ, ಇರುವ ಮೀಸಲಾತಿಯನ್ನೇ ತುಂಬದೆ, ಅದರಲ್ಲಿ 'ಕೆನೆ ಪದರ'ವನ್ನು ಹೊರಗಿಟ್ಟರೆ, ಅದೊಂದು ಸಾಮಾಜಿಕ ಅಪರಾಧವಾಗುತ್ತದೆ. 'ಆದ್ಯತೆಯ ಮೀಸಲಾತಿ' ಕುರಿತು ಮಾತನಾಡುವುದಾದರೆ ಅದಕ್ಕೊಂದು 'ನ್ಯಾಯ'ದ ಚೌಕಟ್ಟಾದರೂ ಇರುತ್ತದೆ. ಇಲ್ಲದಿದ್ದರೆ, ಇದು ಮೀಸಲಾತಿ ತಪ್ಪಿಸುವ ಬಹು ದೊಡ್ಡ ಹುನ್ನಾರವಾಗುತ್ತದೆ.

ದೇಶದಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರನ್ನು ಕುರಿತಂತೆ ವ್ಯಾಪಕವಾದ ಅಸಹನೆ ಬೆಳೆಯುತ್ತಿದೆ. ಕೇವಲ ಸಂಘ ಪರಿವಾರದ ಕೆಲವು ಸಂಘಟನೆಗಳಿಗಷ್ಟೇ ಸೀಮಿತವಾಗಿದ್ದ ಈ ರೋಗ ಈಗ ಸರ್ಕಾರದ ಅಂಗ ಸಂಸ್ಥೆಗಳಿಗೂ ಹಬ್ಬಿದೆ. ಈಚಿನ ಮಾಹಿತಿಯಂತೆ ಸರ್ಕಾರದ ಸೂಕ್ಷ್ಮ ಇಲಾಖೆಗಳಾವುದರಲ್ಲೂ ಮುಸ್ಲಿಮರನ್ನು ನೇಮಕ ಮಾಡಿಕೊಳ್ಳಲಾಗುತ್ತಿಲ್ಲ. ತನಿಖಾ ಸಂಸ್ಥೆಗಳಾದ ರಾ(RAW) ದಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಇಲ್ಲ. ಅತಿಗಣ್ಯರ ರಕ್ಷಣಾದಳದಲ್ಲಿ ಒಬ್ಬನೇ ಒಬ್ಬ ಸಿಕ್ ಆಗಲಿ ಮುಸ್ಲಿಂ ಆಗಲಿ ಇಲ್ಲ! ಇದೆಂಥಾ ನಾಚಿಕೇಗೇಡಿನ ಸಂಗತಿ ಯೋಚಿಸಿ ನೋಡಿ. ಯಾರೋ ಒಬ್ಬ ಸಿಕ್ ಇಂದಿರಾ ಗಾಂಧಿಯನ್ನು ಕೊಂದರೆ ಇಡೀ ಸಿಕ್ ಜನಾಂಗಕ್ಕೇ ಬಹಿಷ್ಕಾರ! ಯಾರೋ ಕೆಲವು ಮುಸ್ಲಿಂ ಯುವಕರು ಭಯೋತ್ಪಾದಕರಾದರೆ ಇಡೀ ಮುಸ್ಲಿಂ ಜನಾಂಗಕ್ಕೇ ಬಹಿಷ್ಕಾರ! ಆದರೆ ಗಾಂಧಿಯನ್ನು ಕೊಂದಂಥ ನಾಥೂರಾಂ ಗೋಡ್ಸೆಯ ಬಗ್ಗೆ ಯಾಕೆ ಇಂಥ ನಿರ್ಧಾರವಾಗುವುದಿಲ್ಲ? ಗೋಡ್ಸೆಯ ವಂಶಸ್ಥರು ಇಂದೂ ಗಾಂಧಿ ಕೊಲೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಗೋಡ್ಸೆ ಪ್ರತಿನಿಧಿಸುವ ಜನಾಂಗಕ್ಕೆ ಯಾಕೆ ಈ ಬಹಿಷ್ಕಾರ ಇಲ್ಲ?

ಕೋಮುವಾದ ಇಂದು ಭಾರತದ ಬದುಕನ್ನು ಸಂಪೂರ್ಣ ಆವರಿಸಿಕೊಂಡಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೇಲಂತೂ ಸರ್ಕಾರದ ಎಲ್ಲ ಅಂಗಗಳು ಕೋಮುವಾದದ ವಿಷದಿಂದ ತುಂಬಿ ಹೋಗಿವೆ. ಮಧ್ಯಪ್ರದೇಶದ ಬಿಜೆಪಿ ಸರ್ಕಾರ ಸರ್ಕಾರಿ ನೌಕರರಿಗೆ ಆರ್‌ಎಸ್‌ಎಸ್ ಸೇರಲು ಕೆಂಪು ಹಾಸನ್ನು ಹಾಸಿದೆ. ತೋರಿಕೆಗಾದರೂ ಭಾರತದ ಜಾತ್ಯತೀತತೆಯನ್ನು ಪ್ರತಿಪಾದಿಸಬೇಕಾದ ನ್ಯಾಯಾಂಗ ಬಹಿರಂಗವಾಗಿ ತಳಸಮುದಾಯದ ಹಕ್ಕುಗಳನ್ನು ಕಿತ್ತುಕೊಳ್ಳಲು ಹೊರಟಿದೆ. ಮಾಧ್ಯಮಗಳು ನಿರಂತರವಾಗಿ ತಳಸಮುದಾಯಗಳು ಮತ್ತು ಅಲ್ಪಸಂಖ್ಯಾತರ ವಿರುದ್ಧ ಪ್ರಚಾರಕ್ಕೆ ನಿಂತಿವೆ. ನೈತಿಕತೆ-ಹೃದಯವಂತಿಕೆ ಇರಬೇಕಾದ ಕಡೆ ಕಡು ಭ್ರಷ್ಟತೆ ಮತ್ತು ಕ್ರೌರ್ಯ-ಅಸೂಯೆಗಳು ತುಂಬಿ ತುಳುಕುತ್ತಿವೆ. ಇದು ಹೀಗೆ ಮುಂದುವರೆದರೆ ಭಾರತ ಸಮಾಜ ನಾಗರಿಕ ಸಮಾಜವಾಗಿ ಉಳಿಯವುದೇ?

○ ಇಂದೂಧರ ಹೊನ್ನಾಪುರ

ಅಫ್ಜಲ್ ಗುರುಗೆ ನೇಣು: ನ್ಯಾಯವೆಷ್ಟು? ಪೂರ್ವಾಗ್ರಹವೆಷ್ಟು?

ಈ ಸಾಮಾಜಿಕ ಮಾನಸಿಕತೆಯನ್ನು ಮತ್ತು ಅದಕ್ಕೆ ಏನು ಮಾಡಿದರೆ ತೃಪ್ತಿ ಸಿಗುತ್ತದೆಂಬುದನ್ನು ನಿರ್ಧರಿಸುವವರು ಯಾರು? ಅದನ್ನು ನಿರ್ಧರಿಸುವವರು ಸಮಾಜದ ಪ್ರಧಾನ ಧಾರೆಯೇ ವಿನಃ ಧ್ವನಿಯಿಲ್ಲದ ವಂಚಿತ ಸಮುದಾಯವಲ್ಲ. ಹಾಗಿದ್ದ ಮೇಲೆ ಅದು "ನ್ಯಾಯ" ಹೇಗಾಗುತ್ತದೆ?.. ಒಂದು ವೇಳೆ ಅದೇ ತರ್ಕವನ್ನು ಒಪ್ಪಿಕೊಂಡರೂ ಗಾಂಧಿಯನ್ನು ಕೊಂದಾಗಲೂ ಇಷ್ಟೇ ಆತಂಕ ಹಾಗೂ ಸಾಮಾಜಿಕ ಕ್ಷೋಭೆ ಉಂಟಾಗಿತ್ತಲ್ಲವೇ? ಹಾಗಿದ್ದಲ್ಲಿ ಸಂಚಿನಲ್ಲಿ ಭಾಗವಹಿಸಿದ್ದವರಿಗೆ ಮಾತ್ರವಲ್ಲ. ಆ ಸಂಚಿನಲ್ಲಿ ವಿವಿಧ ಹಂತದಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಏಕೆ ನ್ಯಾಯಾಲಯ ಮರಣ ಶಿಕ್ಷೆ ವಿಧಿಸಲಿಲ್ಲ. ಅಥವಾ 'ಸಮಾಜದ ಸಾಮೂಹಿಕ ಮಾನಸಿ ಕತೆ'ಯೇ ಪ್ರಮುಖವಾಗಿದ್ದಲ್ಲಿ ಇಂದು ಇಡೀ ಕಾಶ್ಮೀರದ ಜನತೆಯ ಮಾನಸಿಕತೆಯೇ ಅಫ್ಜಲ್‌ಗೆ ಮರಣ ದಂಡನೆ ವಿಧಿಸಿದರೆ ಕ್ಷೋಭೆಗೊಳಗಾಗುತ್ತದೆ.

ಶಿವಸುಂದರ್

ಇದೇ ಅಕ್ಟೋಬರ್ ಇಪ್ಪತ್ತರಂದು, ೨೦೦೧ರ ಡಿಸೆಂಬರ್ ೧೩ರಂದು ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದ ಆರೋಪಕ್ಕೆ ಗುರಿಯಾಗಿದ್ದ ಅಫ್ಜಲ್ ಗುರುವನ್ನು "ಸಾಯುವ ತನಕ ನೇಣಿಗೆ ಏರಿಸಬೇಕೆಂದು" ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಅಫ್ಜಲ್ ಗುರುಗೆ ಕೊಟ್ಟಿರುವ ಮರಣದಂಡನೆ ಶಿಕ್ಷೆಯನ್ನು ಜೀವಾವಧಿಗಾದರೂ ಇಳಿಸಬೇಕೆಂದು ಆತನ ಹೆಂಡತಿ ಮತ್ತು ಚಿಕ್ಕ ವಯಸ್ಸಿನ ಮಗ ರಾಷ್ಟ್ರಪತಿಗಳಲ್ಲಿ ಕ್ಷಮಾದಾನ ಕೋರಿದ್ದಾರೆ. ಅಫ್ಜಲ್‌ಗೆ ಮರಣದಂಡನೆ ವಿಧಿಸುವುದು ಕಾನೂನು ದೃಷ್ಟಿಯಿಂದ ಹಾಗೂ ನ್ಯಾಯದ ದೃಷ್ಟಿಯಿಂದ ಅನ್ಯಾಯವೆಂದು ಅರುಂಧತಿ ರಾಯ್‌ರಂತ ಪ್ರಖ್ಯಾತರನ್ನು ಒಳಗೊಂಡು ಹಲವು ಮಾನವ ಹಕ್ಕು ಹೋರಾಟಗಾರರು ಮತ್ತು ವಂಚಿತ ಮತ್ತು ದುರ್ಬಲ ಜನರ ಪರವಾಗಿ ಹೋರಾಡುತ್ತಲೇ ಬಂದಿರುವ ಹಲವಾರು ನ್ಯಾಯಪರರು ಸಕಾರಣವಾಗಿ ದನಿಯೆತ್ತಿದ್ದಾರೆ. ಮತ್ತೊಂದು ಕಡೆ ಅಫ್ಜಲ್‌ನ ತಾಯ್ನೆಲವಾದ ಕಾಶ್ಮೀರದಲ್ಲಿ ಅಫ್ಜಲ್‌ನನ್ನು ಬಿಡುಗಡೆ ಮಾಡಬೇಕೆಂದು ದಿನನಿತ್ಯ ಸಾವಿರಾರು ಕಾಶ್ಮೀರಿಗಳು ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಈ ಒತ್ತಡಕ್ಕೆ ಮಣಿದೇ ಕಾಶ್ಮಿರದ ಬಿಜೆಪಿಯನ್ನು ಹೊರತುಪಡಿಸಿ ಎಲ್ಲಾ ರಾಜಕೀಯ ಪಕ್ಷಗಳೂ ಅಫ್ಜಲ್ ಗುರುವನ್ನು ಗಲ್ಲಿಗೇರಿಸಬಾರದೆಂದು ರಾಷ್ಟ್ರಪತಿಯ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿ ಮತ್ತು ಸಂಘ ಪರಿವಾರದ ಹುಸಿ ದೇಶಭಕ್ತರು ಇದನ್ನು ತಮ್ಮ ಮುಸ್ಲಿಂ ವಿರೋಧಿ ಹಿಂದೂ ದೇಶ ಪ್ರೇಮವನ್ನು ಪ್ರದರ್ಶಿಸಲು ಮತ್ತೊಂದು ಪ್ರಕರಣವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಯಾವ ಕಾರಣಕ್ಕೂ ದೇಶದ ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದ ದೇಶ ದ್ರೋಹಿಗೆ ಮರಣದಂಡನೆ ರದ್ದು ಮಾಡಬಾರದೆಂದೂ, ಹಾಗೆ ಕೇಳುವುದೇ ದೇಶದ್ರೋಹವೆಂದೂ ಪ್ರಚಾರ ಮಾಡುತ್ತಿದ್ದಾರೆ. ಹಲವಾರು ಮುಸ್ಲಿಂ ಮುಖಂಡರೂ ಸಹ ತಮ್ಮ ಭಾರತ ಭಕ್ತಿಯನ್ನು ತೋರಿಸಲು ಇದೇ ಸಕಾಲವೆಂದು ಅಫ್ಜಲ್ ಗುರುಗೆ ನೇಣು ಹಾಕಲೇಬೇಕೆಂದು ಆಗ್ರಹಿಸುತ್ತಿದ್ದಾರೆ.



ಮಾನವಹಕ್ಕುಗಳ ಬಗೆಗಿನ ಚರ್ಚೆಯಲ್ಲಾಗಲೀ, ದೇಶಪ್ರೇಮವೇನೆಂಬುದರ ಬಗೆಗಿನ ಜಿಜ್ಞಾಸೆಯಲ್ಲಾಗಲೀ ಉನ್ಮಾದ ಮತ್ತು ಗುಪ್ತ ಹಿಂದೂವಾದಿ ತಿಳಿವಳಿಕೆಗಳೇ ಪ್ರಧಾನವಾಗಿರುವ ಕರ್ನಾಟಕದಲ್ಲೂ ಅಫ್ಜಲ್ ಗುರು ಪ್ರಕರಣದ ಬಗ್ಗೆಯೂ ಮಾನವಹಕ್ಕು ದೃಷ್ಟಿಕೋನದ ಮತ್ತು ಭಾರತದ ಸಂವಿಧಾನಬದ್ಧ ನ್ಯಾಯಸಂಹಿತೆಯ ಹಾಗೂ ಮೂಲಭೂತ ನ್ಯಾಯಪರತೆಯ ದೃಷ್ಟಿಕೋನಗಳಿಗಿಂತ ಹಿಂದುತ್ವವಾದಿ ರಾಷ್ಟ್ರಪ್ರೇಮದ ತಿಳವಳಿಕೆಯಿಂದ ಪ್ರೇರಿತವಾದ ಉನ್ಮಾದತರ್ಕವೇ ಪ್ರಧಾನ ಧಾರೆಯಲ್ಲಿದೆ. ಇದಕ್ಕೆ ಭಿನ್ನವಾದ ಸಣ್ಣದಾದರೂ ಸತ್ಯದ ಪರವಾದ ಧ್ವನಿಯನ್ನು ಹೊರಡಿಸುವುದೂ ಕಷ್ಟವಾದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇಂತಹ ಸಮಯದಲ್ಲೇ ಕಹಿಯಾದರೂ ಕೆಲವು ನಿಷ್ಠುರ ಸತ್ಯಗಳನ್ನು ಹೇಳಲೇ ಬೇಕಾದ ಒತ್ತಡ ಹಿಂದೆಂದಿಗಿಂತಲೂ ಹೆಚ್ಚಿನದಾಗಿ ನಿರ್ಮಾಣಗೊಳ್ಳುತ್ತದೆ!

ಅಫ್ಜಲ್ ಗುರುವನ್ನು ನೇಣುಹಾಕಬೇಕೆ ಅಥವಾ ಹಾಕಬಾರದೆ ಎಂಬ ನಮ್ಮ ನಮ್ಮ ಅಭಿಪ್ರಾಯಗಳ ಹಿಂದೆ ನಮ್ಮ ರಾಜಕೀಯ ತಿಳವಳಿಕೆ ಕೆಲಸ ಮಾಡುವುದು ನಿಜವಾದರೂ "rule of law" ಅಂದರೆ ಕಾನೂನಿನ ಆಡಳಿತ ಎಂದರೆ ಯಾರೆ ಆಗಲೀ ಎಲ್ಲರಿಗೂ ಒಂದೇ ಕಾನೂನು ಎಂಬ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಾವಿದ್ದೇವೆ ಎನ್ನುವುದೇ ನಿಜವಾದಲ್ಲಿ ಅಫ್ಜಲ್ ಪ್ರಕರಣವನ್ನೂ ನಮ್ಮ ಪೂರ್ವಾಗ್ರಹಗಳಾಚೆ ನಿಷ್ಪಕ್ಷಪಾತ ಚೌಕಟ್ಟಿನೊಳಗಿಟ್ಟೇ ಪರಿಶೀಲಿಸಬೇಕು.

ಮೊದಲನೆಯದಾಗಿ ಪ್ರಪಂಚದ ಬಹಳಷ್ಟು ಮುಂದುವರೆದ ದೇಶಗಳು ಅದರಲ್ಲೂ ವಿಶೇಷವಾಗಿ ಐರೋಪ್ಯ ದೇಶಗಳು ತಮ್ಮ ದೇಶಗಳಲ್ಲಿ ಎಂಥ ನೀಚ ಅಪರಾಧಕ್ಕೂ ಮರಣದಂಡನೆ ಕೂಡದೆಂದು ರದ್ದು ಮಾಡಿವೆ.

* ಭಾರತದಲ್ಲೂ ಮರಣದಂಡನೆ ರದ್ದಾಗದಿದ್ದರೂ "rarest of rare cases"ಗಳಲ್ಲಿ ಮಾತ್ರ ಅಂದರೆ ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಮಾತ್ರ ಮರಣದಂಡನೆಯನ್ನು ವಿಧಿಸಬಹುದೆಂದು ವಿವರಿಸಿದೆ.

* ಹಾಗೂ ಅಂಥ ಪ್ರಕರಣದಲ್ಲಿ ಆರೋಪಿಯ ಅಪರಾಧ ಅನುಮಾನಕ್ಕೆಡೆಯಿಲ್ಲದಂತೆ ರುಜುವಾತಾಗಿರಬೇಕೆಂದು ಷರತ್ತನ್ನು ಸಹಾ ವಿಧಿಸಿದೆ. ಅಲ್ಲದೆ ಅಪರೂಪ ಪ್ರಕರಣಗಳು ಯಾವುವು ಎಂಬ ಬಗ್ಗೆ ನಾಲ್ಕು ಮಾನದಂಡಗಳನ್ನು ನಿರ್ಣಯಿಸಿದೆ. **೧) ಅಪರಾಧದ ಉದ್ದೇಶ ೨) ಸಾಮಾಜಿಕವಾಗಿ ತಿರಸ್ಕಾರಕ್ಕೊಳಪಡುವಂಥ ಸ್ವರೂಪದ ಅಪರಾಧ ೩) ಅಪರಾಧದ ಪ್ರಮಾಣ ೪)ಅಪರಾಧಕ್ಕೆ ಬಲಿಯಾದವರ ವ್ಯಕ್ತಿತ್ವ**

* ಅಂದರೆ ಸಾರಾಂಶದಲ್ಲಿ ಭಾರತದ ನ್ಯಾಯಾಲಯಗಳು ಸಾಧ್ಯವಾದಷ್ಟು ಕಡಿಮೆ ಮರಣದಂಡನೆ ಶಿಕ್ಷೆ ಕೊಡಬೇಕೆಂದೂ ಹಾಗೂ ಅವೆಲ್ಲವೂ ನ್ಯಾಯಬದ್ಧ ಮತ್ತು ಪಾರದರ್ಶಕವಾಗಿಯೂ ಇರಬೇಕೆಂದೂ ವಿಧಿಸುತ್ತವೆ.

ಆದರೆ ಈಗ ನಮ್ಮ ಮುಂದಿರುವ ಪ್ರಶ್ನೆ ಇವೆಲ್ಲವನ್ನೂ ಅಫ್ಜಲ್ ಪ್ರಕರಣದಲ್ಲಿ

ಪಾಲಿಸಿದೆಯೇ ಎಂಬುದು..!

ಮೊದಲನೆಯದಾಗಿ ಅಫ್ಜಲ್‌ನ ಅಪರಾಧ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತಾಗಿದೆಯೇ?:

ಇಲ್ಲ. ದೆಹಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳೇ ಸ್ಪಷ್ಟವಾಗಿ ಹೇಳಿರುವಂತೆ ಅಫ್ಜಲ್‌ನ ಅಪರಾಧ ಸಾಬೀತಾಗಿರುವುದು ಸಾಂದರ್ಭಿಕ ಸಾಕ್ಷ್ಯಗಳಿಂದಾಗಿಯೇ ವಿನಃ ನೇರ ಮತ್ತು ನಿರ್ವಿವಾದವಾಗಿ ಅಲ್ಲ. ಏಕೆಂದರೆ ಕೆಳಗಿನ ಟಾಡಾ ಕೋರ್ಟು ವಿಚಾರಣೆಯಲ್ಲಿ ಆಧಾರವೆಂದು ಪರಿಗಣಿಸಿದ್ದು ಪೋಲಿಸರ ಸೆರೆಯಲ್ಲಿದ್ದಾಗ ಆತ ನೀಡಿದನೆಂದು ಹೇಳಲಾದ ತಪ್ಪೊಪ್ಪಿಗೆ ಹೇಳಿಕೆ. ಆದರೆ ದೆಹಲಿ ಹೈಕೋರ್ಟು ಪೋಲಿಸರ ಮುಂದೆ ಮಾಡಿಕೊಂಡ ತಪ್ಪೊಪ್ಪಿಗೆಯನ್ನು ಸಾಕ್ಷ್ಯವೆಂದು ಪರಿಗಣಿಸಲಾಗುವುದಿಲ್ಲವೆಂದು ತಳ್ಳಿ ಹಾಕಿದೆ. ಅಲ್ಲದೆ ವಿಚಾರಣೆಯ ವೇಳೆ ದಾಖಲೆಗಳೆಂದು ಪೋಲಿಸರು ಅಫ್ಜಲ್‌ನ ರೂಮಿನಿಂದ ಜಪ್ತಿ ಮಾಡಿದ ವಸ್ತುಗಳನ್ನು ಕೋರ್ಟು ನಿರಾಕರಿಸಿದೆ. ಏಕೆಂದರೆ ಆ ಜಪ್ತಿಯನ್ನು ಪೋಲಿಸರು ಯಾವುದೇ ಪಂಚನಾಮೆಯಿಲ್ಲದೆ ರಾತ್ರೋರಾತ್ರಿ ರೂಮಿನ ಬೀಗ ಒಡೆದು ಸಂಪಾದಿಸಿದ್ದು ಅನುಮಾನಕ್ಕೆಡೆ ಮಾಡಿಕೊಡುವಂತಿದೆ ಎಂಬುದು ಕೋರ್ಟಿನ ಅಭಿಪ್ರಾಯವಾಗಿತ್ತು.

ಎರಡನೆಯದಾಗಿ ಮರಣದಂಡನೆ ವಿಧಿಸಬಹುದಾದ ಅಥವಾ ತೀವ್ರ ಶಿಕ್ಷೆ ವಿಧಿಸಬಹುದಾಗಿದ ಮತ್ತೊಂದು ಅಪರಾಧವೆಂದರೆ ಟಾಡಾ ಕಾಯಿದೆ ಪ್ರಕಾರ ಯಾವುದಾದರೂ ನಿಷೇಧಿಸಲ್ಪಟ್ಟ ಸಂಘಟನೆಯ ಸದಸ್ಯನಾಗಿರುವುದು. ಆದರೆ ದೇಶದ ಸುಪ್ರೀಂ ಕೋರ್ಟು ಅಫ್ಜಲ್‌ನನ್ನು ಈ ಅಪವಾದದಿಂದ ಮುಕ್ತಗೊಳಿಸಿದೆ. ಏಕೆಂದರೆ ಆತ ಯಾವುದೇ ಉಗ್ರಗಾಮಿ ಸಂಘಟನೆಯ ಸದಸ್ಯನಲ್ಲವೆಂಬುದು ಸಾಬೀತಾಗಿತ್ತು. ಮತ್ತು ಈ ಹಿಂದೆ ಅಫ್ಜಲ್ ಒಂದು ಕಾಶ್ಮೀರಿ ಸಂಘಟನೆಯ ಸದಸ್ಯನಾಗಿದ್ದು ಮೂರು ವರ್ಷಗಳ ಹಿಂದೆ ಸರ್ಕಾರಕ್ಕೆ ಶರಣಾಗತನಾಗಿದ್ದ. ಅಲ್ಲದೆ ತನ್ನೊಂಡಿಗೆ ಇತರ ಮೂವರನ್ನು ಶರಣಾಗುವಂತೆ ಮಾಡಿದ್ದ. ಇದನ್ನು ಸರ್ಕಾರ ಸಹ ಗುರುತಿಸಿತ್ತು. ವಾಸ್ತವವಾಗಿ ಇವೆಲ್ಲವನ್ನು ಬಿಟ್ಟು ತನ್ನ ಪಾಡಿಗೆ ತಾನಿದ್ದ ಅಫ್ಜಲ್‌ಗೆ ಇತರ ಮೂರು ಉಗ್ರಗಾಮಿಗಳನ್ನು ದೆಹಲಿಗೆ ಕರದೆಕೊಂಡು ಬರುವಂತೆ ಹೇಳಿದ್ದೇ ಪೋಲಿಸರೆಂಬುದನ್ನು ಸಹಾ ಪೋಲಿಸರು ನಿರಾಕರಿಸಿಲ್ಲ.

ಮೂರನೆಯದಾಗಿ ಈ ದಾಳಿಯಲ್ಲಿ ನೇರವಾಗಿ ಪಾಲ್ಗೊಂಡ ನಾಲ್ವರೂ ಸಂಸತ್ ಭವನದ ಬಳಿಯೇ ಹತರಾಗಿದ್ದು ಉಳಿದವರ ಮೇಲೆ ಹಾಕಬಹುದಾದ ಆರೋಪವೆಂದರೆ ಸಂಚಿನದ್ದು. ನ್ಯಾಯಶಾಸ್ತ್ರದ ಪ್ರಕಾರ ಸಂಚನ ಪ್ರಧಾನ ರೂವಾರಿ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳದಿದ್ದರೂ ಅಷ್ಟೇ ಪ್ರಮಾಣದ ಶಿಕ್ಷೆಗೆ ಪಾತ್ರನಾಗಿರುತ್ತಾನೆ. ಆದರೆ ಅಂಥ ಸಂಚಿನಲ್ಲಿ ನೇರವಾಗಿ ಪಾಲ್ಗೊಳ್ಳದವರು ಮತ್ತು ಸಂಚಿನ್ನು ರೂಪಿಸದ ಆದರೆ ಅದರ ಕಾರ್ಯಾಚರಣೆಯಲ್ಲಿ ಪರೋಕ್ಷವಾಗಿ ಸಹಕರಿಸಿದ್ದವರು ತಪ್ಪೆಸಗಿರುತ್ತಾರಾದರೂ ಅದು ಮರಣದಂಡನೆ ವಿಧಿಸುವ ಪ್ರಮಾಣದಷ್ಟು ಗುರುತರವಾದ ಅಪರಾಧವಲ್ಲ. ಈ ವಿಚಕ್ಷಣೆಯನ್ನೇ ನ್ಯಾಯಾಲಯಗಳು ರಾಜೀವ್ ಗಾಂಧಿ ಹತ್ಯೆ ಕೇಸಿನಲ್ಲೂ ಇಂದಿರಾಗಾಂಧಿ ಹತ್ಯೆ ಕೇಸಿನಲ್ಲೂ ಅನುಸರಿಸಿವೆ.

ಅಫ್ಜಲ್ ಮೇಲೆ ಸಿದ್ಧ ಪಟ್ಟಿರುವ ಆರೋಪ ಆತ ಮೂರು ಅಥವಾ ನಾಲ್ಕನೇ ಸ್ಥರದಲ್ಲಿ ಸಂಚಿಗೆ ಸಹಾಯ ಮಾಡಿದ ಎಂಬುದೇ ವಿನಃ ಆತ ಸಂಚು ರೂಪಿಸಿದ ಎಂಬುದಾಗಲೀ ಸಂಚನ್ನು ಕಾರ್ಯಗತಗೊಳಿಸಿದ ಎಂಬುದಾಗಲೀ ಅಲ್ಲ.

> **ನೇಣಿಗೆ ಅರ್ಹರು ಎಂಬುದಾಗಿದ್ದರೆ ಗಾಂಧಿ ಕೊಲೆ ಸಂಚಿನ ಪ್ರಧಾನ ಆರೋಪಿ ಗೋಪಾಲ್ ಗೋಡ್ಸೆಯನ್ನು ನೇಣಿಗೇರಿಸಲೇಬೇಕಲ್ಲವೇ? ಹಾಗೆ ನೋಡಿದರೆ ಗಾಂಧಿಯನ್ನು ಕೊಲೆಗೈದ ನಾಥೂರಾಂ ಗೋಡ್ಸೆಯನ್ನು ಬಿಟ್ಟರೆ ಆ ಸಂಚನ್ನು ರೂಪಿಸಿದ್ದ ಅದರ ಪ್ರಧಾನ ರೂವಾರಿಗಳಾಗಿದ್ದ ಆರೆಸ್ಸಿಗರಿಗೂ ಮರಣ ದಂಡನೆ ವಿಧಿಸಲಿಲ್ಲ. ಎಲ್ಲರಿಗೂ ಒಂದೇ ಕಾನೂನು ಎಂದಾದರೆ ಸಂಚಿನ ನೇರ ರೂವಾರಿಯೂ ಅಲ್ಲದ ಪಾತ್ರಧಾರಿಯೂ ಅಲ್ಲದ ಅಫ್ಜಲ್‌ಗೆ ಮಾತ್ರ ಹೇಗೆ ನೇಣು ಶಿಕ್ಷೆ ವಿಧಿಸಲು ಸಾಧ್ಯ? ತಾನೆ ವಿಧಿಸಿದ ನ್ಯಾಯ ಸಂಹಿತೆ ಯಿಂದ ನ್ಯಾಯಾಲಯಗಳೇ ಈ ರೀತಿ ಹಿದ್ಸರಿಯುತ್ತಿರುವುದು ಏಕೆ?**

ಅಲ್ಲದೆ ಮೇಲೆ ಹೇಳಲಾದ ನಾಲ್ಕು ಸಂದರ್ಭಗಳು ಖಾಸಗಿ ಸ್ವರೂಪದ ಅಪರಾಧಗಳೇ ವಿನಃ ಒಂದು ರಾಜಕೀಯ ಉದ್ದೇಶದ ಅಪರಾಧಗಳನ್ನು ಹೇಗೆ ನಿಭಾಯಿಸಬೇಕೆಂಬುದರ ಬಗ್ಗೆ ಅದರಲ್ಲಿ ಮಾರ್ಗದರ್ಶನವಿಲ್ಲ. ಒಂದು ವೇಳೆ ಅದು ಈ ಪ್ರಕರಣಕ್ಕೆ ಅನ್ವಯಿಸುತ್ತದೆ ಎಂದಾದರೂ ಮೇಲೆ ಹೇಳಿದ ಕಾರಣಗಳಿಗಾಗಿಯೇ ಅದು ಅಫ್ಜಲ್ ಗುರುವಿಗೆ ಅನ್ವಯಿಸುವುದಿಲ್ಲ.

ಗಾಂಧಿ ಕೊಲೆ ಸಂಚಿನ ಗೋಪಾಲ್ ಗೋಡ್ಸೆಗೇಕೆ ನೇಣಿಲ್ಲ?:

ಒಂದು ವೇಳೆ ಯಾವುದೇ ಸ್ಥರದಲ್ಲಿ ಸಂಚಿನಲ್ಲಿ ಪಾಲ್ಗೊಂಡಿದ್ದರೂ ಅವರು ನೇಣಿಗೆ ಅರ್ಹರು ಎಂಬುದಾಗಿದ್ದರೆ ಗಾಂಧಿ ಕೊಲೆ ಸಂಚಿನ ಪ್ರಧಾನ ಆರೋಪಿ ಗೋಪಾಲ್ ಗೋಡ್ಸೆಯನ್ನು ನೇಣಿಗೇರ್ಸಲೇ ಬೇಕಲ್ಲವೇ? ಹಾಗೆ ನೋಡಿದರೆ ಗಾಂಧಿಯನ್ನು ಕೊಲೆಗೈದ ನಾಥೂರಾಂ ಗೋಡ್ಸೆಯನ್ನು ಬಿಟ್ಟರೆ ಆ ಸಂಚನ್ನು ರೂಪಿಸಿದ್ದ ಅದರ ಪ್ರಧಾನ ರೂವಾರಿಗಳಾಗಿದ್ದ ಆರೆಸ್ಸಿಗರಿಗೂ ಮರಣ ದಂಡನೆ ವಿಧಿಸಲಿಲ್ಲ. ಎಲ್ಲರಿಗೂ ಒಂದೇ ಕಾನೂನು ಎಂದಾದರೆ ಸಂಚಿನ ನೇರ ರೂವಾರಿಯೂ ಅಲ್ಲದ ಪಾತ್ರಧಾರಿಯೂ ಅಲ್ಲದ ಅಫ್ಜಲ್‌ಗೆ ಮಾತ್ರ ಹೇಗೆ ನೇಣು ಶಿಕ್ಷೆ ವಿಧಿಸಲು ಸಾಧ್ಯ? ತಾನೆ ವಿಧಿಸಿದ ನ್ಯಾಯ ಸಂಹಿತೆಯಿಂದ ನ್ಯಾಯಾಲಯಗಳೇ ಈ ರೀತಿ ಹಿದ್ಸರಿಯುತ್ತಿರುವುದು ಏಕೆ?

ನಿಷ್ಪಕ್ಷಪಾತ ನ್ಯಾಯವೋ? ಪ್ರತೀಕಾರದ ಪೂರ್ವಾಗ್ರಹವೋ?:

ಸ್ಪಷ್ಟವಾಗಿ ಕಾಣುವಂತೆ ಅಫ್ಜಲ್ ಪ್ರಕರಣದಲ್ಲಿ ನ್ಯಾಯಾಲಯವು ಆ ಬಗೆಯ ನಿಸ್ಪಕ್ಷಪಾತತೆಯನ್ನು ಅನುಸರಿಸಿಲ್ಲ. ತನ್ನ ತೀರ್ಪಿನ ಕೊನೆ ಭಾಗದಲ್ಲಿ ತನ್ನ ಈ ನಿರ್ಧಾರಕ್ಕೆ ಕಾರಣಗಳನ್ನು ಸೂಚಿಸುತ್ತಾ ನ್ಯಾಯಾಲಯವು“ ***the incident which resulted in heavy casulaity has shaken the nation and the collective conscious of society will be satisfied if capital punishment is awarded to offender”*** ಅಂದರೆ **“ ಅಪಾರ ಹಾನಿಯನ್ನುಂಟು ಮಾಡಿರುವ ಈ ಪ್ರಕರಣವು ದೇಶವನ್ನು ಆತಂಕಕ್ಕೆ ದೂಡಿದೆ. ಮರಣದಂಡನೆಯನ್ನು ನೀಡಿದರೆ ಮಾತ್ರ ಸಮಾಜದ ಸಾಮೂಹಿಕ ಮಾನಸಿಕತೆಗೆ ತೃಪ್ತಿಯುಂಟಾಗುತ್ತದೆ”** ಎಂದು ಹೇಳಿದೆ. ಇದು ಯಾವುದೇ ನಿಷ್ಪಕ್ಷಪಾತ ನ್ಯಾಯಸಂಹಿತೆಯಲ್ಲ. ಈ ಸಾಮಾಜಿಕ ಮಾನಸಿಕತೆಯನ್ನು ಮತ್ತು ಅದಕ್ಕೆ ಏನು ಮಾಡಿದರೆ ತೃಪ್ತಿ ಸಿಗುತ್ತದೆಂಬುದನ್ನು ನಿರ್ಧರಿಸುವರು ಯಾರು? ಅದನ್ನು ನಿರ್ಧರಿಸುವರು ಸಮಾಜದ ಪ್ರಧಾನ ಧಾರೆಯೇ ವಿನಃ ಧ್ವನಿಯಿಲ್ಲದ ವಂಚಿತ್ತ ಸಮುದಾಯವಲ್ಲ. ಹಾಗಿದ್ದ ಮೇಲೆ ಅದು “ನ್ಯಾಯ” ಹೇಗಾಗುತ್ತದೆ?.. ಒಂದು ವೇಳೆ ಅದೇ ತರ್ಕವನ್ನು ಒಪ್ಪಿಕೊಂಡರೂ ಗಾಂಧಿಯನ್ನು ಕೊಂದಾಗಲೂ ಇಷ್ಟೇ ಆತಂಕ ಹಾಗೂ ಸಾಮಾಜಿಕ ಕ್ಷೋಭೆ ಉಂಟಾಗಿತ್ತಲ್ಲವೇ? ಹಾಗಿದ್ದಲ್ಲಿ ಸಂಚಿನಲ್ಲಿ ಭಾಗವಹಿಸಿದ್ದವರಿಗೆ ಮಾತ್ರವಲ್ಲ. ಆ ಸಂಚಿನಲ್ಲಿ ವಿವಿಧ ಹಂತದಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಏಕೆ ನ್ಯಾಯಾಲಯ ಮರಣ ಶಿಕ್ಷೆ ವಿಧಿಸಲಿಲ್ಲ.

ಅಥವಾ “ಸಮಾಜದ ಸಾಮೂಹಿಕ ಮಾನಸಿಕತೆ”ಯೇ ಪ್ರಮುಖವಾಗಿದ್ದಲ್ಲಿ ಇಂದು ಇಡೀ ಕಾಶ್ಮೀರದ ಜನತೆಯ ಮಾನಸಿಕತೆಯೇ ಅಫ್ಜಲ್‌ಗೆ ಮರಣ ದಂಡನೆ ವಿಧಿಸಿದರೆ ಕ್ಷೋಭೆಗೊಳಗಾಗುತ್ತದೆ. ಇದು ದಿನನಿತ್ಯ ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ವ್ಯಕ್ತಪಡಿಸುತ್ತಿವೆ. ಹಾಗಿದ್ದ ಮೇಲೆ ಈ ಕಾರಣವನ್ನು ಮುಂದು ಮಾಡಿ ಏಕೆ ಅಫ್ಜಲ್ ಮರಣ ದಂಡನೆಯನ್ನು ರದ್ದುಗೊಳಿಸಬಾರದು? ಅದರ ಬದಲಿಗೆ ಇದೇ ನ್ಯಾಯಾಲಯಗಳು ಮರಣಶಿಕ್ಷೆಯನ್ನು ರದ್ದು ಮಾಡುವಲ್ಲಿ ರಾಜಕೀಯ ಒತ್ತಡಗಳು ಮತ್ತು ಕಾರಣಗಳನ್ನು ಪರಿಗಣಿಸಬಾರದೆಂದು ಅಭಿಪ್ರಾಯಪಟ್ಟಿವೆ. ಹಾಗಿದ್ದ ಮೇಲೆ ಒಂದೋ ಇದೇ ನ್ಯಾಯಾಲಯಗಳು “ಸಮಾಜದ ಸಾಮೂಹಿಕ ಮಾನಸಿಕತೆಯ ತೃಪ್ತಿಯನ್ನು” ಪರಿಗಣಿಸದೇ ಪರಿಶುದ್ಧ ನ್ಯಾಯದ ದೃಷ್ಟಿಯನ್ನು ಮುಂದಿಟ್ಟುಕೊಂಡು ಅಫ್ಜಲ್‌ಗೆ ಮರಣದಂಡನೆ ರದ್ದು ಮಾಡಬೇಕು.. ಅಥವಾ ಕಾಶ್ಮೀರವು ಭಾರತದಲ್ಲಿ ಇರುವುದು ನಿಜವಾದರೆ ಕಾಶ್ಮೀರಿ “ಸಮಾಜದ ಸಾಮೂಹಿಕ ಮಾನಸಿಕ ತೃಪ್ತಿಯನ್ನು ಗಮನದಲ್ಲಿಟ್ಟುಕೊಂಡು” ಅಫ್ಜಲ್‌ನ ಮರಣದಂಡನೆಯನ್ನು ರದ್ದುಗೊಳಿಸಬೇಕು.

ಆದರೆ ನ್ಯಾಯಾಲಯವೂ ಸಾರ್ವತ್ರಿಕ ನ್ಯಾಯ ಸಂಹಿತೆಯನ್ನು ಅನುಸರಿಸುತ್ತಿಲ್ಲ. ಮತ್ತೊಮ್ಮೆ ಈ ದೇಶದಲ್ಲಿ ದ್ವಿಮುಖ “ರೂಲ್ ಆಫ್‌ಲ್” ಇವೆಯೆಂಬ ಅಭಿಪ್ರಾಯವನ್ನು ಈ ನ್ಯಾಯಾದೇಶವೂ ಗಟ್ಟಿಗೊಳಿಸುತ್ತಿದೆ. ಇದು ಕಾಶ್ಮೀರವನ್ನು ಮತ್ತು ಕಾಶ್ಮೀರಿಗಳನ್ನು ಮತ್ತಷ್ಟು ಭಾರತದಿಂದ ದೂರ ಸರಿಯುವಂತೆ ಮಾಡುತ್ತದೆ. ೧೯೮೪ರಲ್ಲಿ ಕಾಶ್ಮೀರಿ ಜನತೆಯ ನಾಯಕ ಮಕ್ಬೂಲ್ ಭಟ್‌ನನ್ನು ಗಲ್ಲಿಗೇರಿಸಿದಾಗಲೂ ಇದೇವಾತಾವರಣವಿತ್ತು. ಭಾರತ ಸರ್ಕಾರ ಭಟ್‌ರನ್ನು ಗಲ್ಲಿಗೇರಿಸಿದ್ದು ಅಲ್ಲಿನ ಕಾಶ್ಮೀರಿ ವಿಮೋಚನಾ ಹೋರಾಟ ಇನ್ನಷ್ಟು ಗಟ್ಟಿಗೊಳ್ಳಲು, ಆ ನಂತರದ ಸರ್ಕಾರದ ದಮನ ನೀತಿಯಿಂದಾಗಿ ಕಾಶ್ಮೀರಿ ಜನತೆ ಭಾರತದಿಂದ ದೂರಗೊಳ್ಳಲು ಕಾರಣವಾಯಿತು. ಇಂದು ಮತ್ತೆ ಭಾರತ ನ್ಯಾಯಾಲಯ

(೧೧ನೇ ಪುಟಕ್ಕೆ)

ಜನ ಸಂಸ್ಕೃತಿಯ ಬಾಬಾ-ದತ್ತಾ

ದಕ್ಷಿಣ ಭಾರತದಲ್ಲಿ ಕೋಮುವಾದಿಗಳು ತಮ್ಮ ಕರಾಳ ಮುಖವನ್ನು ಪ್ರದರ್ಶಿಸಲು ತೊಂಭತ್ತರ ದಶಕದಿಂದ ಶತ ಪ್ರಯತ್ನ ಮಾಡುತ್ತಲೇ ಇದ್ದಾರೆ. ಕೇರಳದಲ್ಲಿ ನಾರಾಯಣ ಗುರು ಚಳುವಳಿ ಹಾಗೂ ಕಮ್ಯುನಿಸ್ಟ್‌ರ ಪ್ರಾಬಲ್ಯ ಹೆಚ್ಚಿರುವುದರಿಂದ, ಆಂಧ್ರ ಪ್ರದೇಶದಲ್ಲಿ ನಕ್ಸಲೀಯರ ಚಳುವಳಿ ಎಡಪಂಥಿಯ ಸಂಘಟನೆಗಳು ಹೆಚ್ಚಿರುವುದರಿಂದ ಹಾಗೂ ತಮಿಳುನಾಡಿನಲ್ಲಿ ತಿರುಮಲವನ್ ಮತ್ತು ಪೆರಿಯಾರ್ ರಾಜಕೀಯ ಚಳುವಳಿ ಹಾಗೂ ಪ್ರಾದೇಶಿಕ ಪಕ್ಷಗಳ ಪ್ರಭಾವ ಹೆಚ್ಚಿರುವುದರಿಂದ ಆ ರಾಜ್ಯಗಳಲ್ಲಿ ಕೋಮುವಾದ ಹುಟ್ಟು ಹಾಕುವುದು ಬಹಳ ಕಷ್ಟ. ಆದರೆ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಚಾತುರ್ವರ್ಣ ವಿರುದ್ಧ ಬಸವಣ್ಣನವರ ವಚನ ಚಳುವಳಿ ಬಿಟ್ಟರೆ ಬೇರೆ ಚಳುವಳಿ ನಡೆದಿರುವುದು ಬಹಳ ಕಡಿಮೆ. ಹಾಗಾಗಿ ಸಂಘಪರಿವಾರ ಇಲ್ಲಿ ಬೇರೂರಲು ಹವಣಿಸುತ್ತಿದೆ.

ನರಸಿಂಹ ಗುಂಜಹಳ್ಳಿ

ಸೌಹರ್ದ, ನಿರ್ಮಲ ಹಾಗೂ ಶಾಂತವಾಗಿರುವ ಚಂದ್ರ ದ್ರೋಣ ಪರ್ವತಕ್ಕೆ ಕೋಮುವಾದಿಗಳು ಬೆಂಕಿ ಹಚ್ಚಿ ಚಳಿಕಾಯಿಸಿ ಕೊಳ್ಳುತ್ತಿದ್ದಾರೆ. ಅಮಾಯಕ ಜನರಲ್ಲಿ ಹಿಂದುತ್ವದ ವಿಷ ಬೀಜ ಬಿತ್ತಿ ಮಾಲೆ ಹಾಕಿಸಿ, ಅದರ ಲಾಭ ಪಡೆದು ರಾಜಕೀಯ ಅಧಿಕಾರ ಹಿಡಿಯುವ ಹುನ್ನಾರ ನಡೆಸಿದ್ದಾರೆ.

ದಕ್ಷಿಣ ಭಾರತದಲ್ಲಿ ಕೋಮುವಾದಿಗಳು ತಮ್ಮ ಕರಾಳ ಮುಖವನ್ನು ಪ್ರದರ್ಶಿಸಲು ತೊಂಭತ್ತರ ದಶಕದಿಂದ ಶತ ಪ್ರಯತ್ನ ಮಾಡುತ್ತಲೇ ಇದ್ದಾರೆ ಕೇರಳದಲ್ಲಿ ನಾರಾಯಣ ಗುರು ಚಳುವಳಿ ಹಾಗೂ ಕಮ್ಯುನಿಸ್ಟ್‌ರ ಪ್ರಬಲ್ಯ ಹೆಚ್ಚಿರುವುದರಿಂದ, ಆಂಧ್ರ ಪ್ರದೇಶದಲ್ಲಿ ನಕ್ಸಲಿಯರ ಚಳುವಳಿ ಎಡಪಂಥಿಯ ಸಂಘಟನೆಗಳು ಹೆಚ್ಚಿರುವು ದರಿಂದ ಹಾಗೂ ತಮಿಳುನಾಡಿನಲ್ಲಿ ತಿರುಮಲವನ್ ಮತ್ತು ಪೆರಿ ಯಾರ್ ರಾಜಕೀಯ ಚಳುವಳಿ ಹಾಗೂ ಪ್ರಾದೇಶಿಕ ಪಕ್ಷಗಳ ಪ್ರಭಾವ ಹೆಚ್ಚಿರುವುದರಿಂದ ಆ ರಾಜ್ಯಗಳಲ್ಲಿ ಕೋಮುವಾದ ಹುಟ್ಟು ಹಾಕುವುದು ಬಹಳ ಕಷ್ಟ. ಆದರೆ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಚಾತುರ್ವರ್ಣ ವಿರುದ್ಧ ಬಸವಣ್ಣನವರ ವಚನ ಚಳುವಳಿ ಬಿಟ್ಟರೆ ಬೇರೆ ಚಳುವಳಿ ನಡೆದಿರುವುದು ಬಹಳ ಕಡಿಮೆ. ಎಂಭತ್ತರ ದಶಕದಲ್ಲಿ ರೈತ ಸಂಘ ದ.ಸಂ.ಸ, ಸಮುದಾಯ, ಬಂಡಾಯ ಸಂಘಟನೆಗಳು ಬಹಳ ಪ್ರಬಲವಾಗಿದ್ದವು.

ಯಾವುದೇ ಶೋಷಿತ ವ್ಯವಸ್ಥೆ ವಿರುದ್ಧ ಹುಟ್ಟಿದ ರಾಜಕೀಯ ಜನಪರ ಚಳುವಳಿ ಆ ವ್ಯವಸ್ಥೆ ಜೀವಂತವಾಗಿರುವವರೆಗೂ ಅವ್ಯವಸ್ಥೆಯನ್ನು ವಿರೋಧಿಸುವ ಜನಪರ ಚಳುವಳಿಗಳು ಜೀವಂತವಾಗಿರಬೇಕು. ಆದರೆ ದುರದೃಷ್ಟವಶಾತ್ ತೊಂಭತ್ತರ ದಶಕದಲ್ಲಿ ರೈತ ಸಂಘ ದ.ಸಂ.ಸ, ಒಡಕುಂಟಾದರೆ, "ಸಮುದಾಯ" ಮತ್ತು ಬಂಡಾಯದಂತ ಸಂಘಟನೆಗಳು ಹಾಗಾಗಿ ಕೋಮುವಾದಿಗಳು ದಕ್ಷಿಣ ಭಾರತದಲ್ಲಿ ತಮ್ಮ ಕರಾಳ ಮುಖವನ್ನು ಪ್ರದರ್ಶಿಸುವುದಕ್ಕೆ ಆಯ್ದುಕೊಂಡ ಜಾಗವೇ ಕರ್ನಾಟಕ, ಅದರಲ್ಲಿ ಬಾಬಾ ಬುಡನ್ ಗಿರಿ ಶಿಶುನಾಳ ಷರೀಫರ ಹಾಗೂ ಇನ್ನಿತರ ಸೂಫಿ ದರ್ಗಾಗಳು, ಮತ್ತು ಕರಾವಳಿ ಪ್ರದೇಶಗಳು, ಈ ಸ್ಥಳಗಳಲ್ಲಿ ಕೋಮುದಳ್ಳುರಿ ಹೆಚ್ಚಿಸಿ ಕರ್ನಾಟಕವನ್ನು ಮತ್ತೊಂದು ಗುಜರಾತು ಮಾಡಲು ಕೋಮುವಾದಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ. ಒಟ್ಟಾರೇ ಬಾಬಾ ಬುಡನ್ ಗಿರಿಯಲ್ಲಿ ಇರುವುದಾದರೆ ಏನು?

ದಾದಾಹಯತ್ ಮೀರು ಖಲಂದರು ಎಂಬ ಸೂಫಿ ಸಂತರು ನೆಲೆಸಿದ್ದರು ಎಂದು ಪ್ರಸಿದ್ಧವಾಗಿರುವ ಬಾಬಾ ಬುಡಾನ್ ಗಿರಿಯ ಮಧ್ಯಭಾಗದಲ್ಲಿ ಮಠ ಅಥವಾ ಖಾನಕವಿದೆ, ಗುಹೆಯಿದೆ, ಸೂಫಿ ಸಂತರ ಹಾಗೂ ದರ್ಗಾದ ಮುಖ್ಯಸ್ಥರ ಅವರ ಕುಟುಂಬದವರ ನೂರಾರು ಸಮಾದಿಗಳಿವೆ, ಗುಹೆಯಲ್ಲಿ ನಾಲ್ಕು ಸಮಾಧಿಗಳಿವೆ ಅವು ಬಾಬಾ ಬುಡನ್‌ರ ಶಿಷ್ಯರವು ಎನ್ನಲಾಗುತ್ತಿದೆ. ಪಾದುಕೆ ನಂದದೀಪ, ಸುರಂಗ, ಚಿಲುಮೆಗಳಿವೆ, ಗುಹೆಯ ಹೊರಗೆ ಚೌಕಿದೆ, ಅಲ್ಲಿ ತೆಂಗಿನ ಕಾಯಿ ಒಡೆಯುತ್ತಾರೆ. ಚೌಕಿನ ಮುಂದೆ ಸ್ತಂಭವಿದೆ, ಅದರಲ್ಲಿ ಪಾರಸಿ ಶಾಸನವಿದೆ, ಮಸೀದಿಯಿದೆ. ದರ್ಗಾದ ಮುಖ್ಯಸ್ಥರಾದ ಸೈಯದ್ ಶಾಖಾದ್ರಿ ಎಂಬ ಬಿರುದ್ವುಳ್ಳ ಸಜ್ಜಾದುನಶಿನರು ಇರುವ ಕೋಣೆಯಿದೆ. ಮಾಣಿಕ್ಯದಾರ ಎನ್ನುವ ಜಲಪಾತವಿದೆ ಗಾಳಿ ಕೆರೆಯಿದೆ. ಗಿರಿಗೆ ಹೋದವರೆಲ್ಲಾ ಇಲ್ಲೇ ಸ್ನಾನ ಮಾಡುತ್ತಾರೆ. ಇದು ಬಾಬಾ ಬುಡನ್ ಗಿರಿಯ ಮೇಲ್ನೋಟದ ಚಿತ್ರಣ.

೧೯೬೪ ರಲ್ಲಿ ವಕ್ಫ ಬೋರ್ಡ್‌ಗಳನ್ನು ಪಟ್ಟಿ ಮಾಡಿ ಬಾಬಾ ಬುಡನ್ ಗಿರಿಯನ್ನು ವಕ್ಫ ಬೋರ್ಡ್‌ಗಳಿಗೆ ವರ್ಗಾಯಿಸಲಾಯಿತು. ಈ ಶ್ರದ್ಧಾಕೇಂದ್ರ ಹಿಂದು-ಮುಸ್ಲಿಂ ಇಬ್ಬರಿಗೆ ಸೇರಿದ್ದರಿಂದ ವಕ್ಫ ಬೋರ್ಡ್‌ಗೆ ಸೇರಿಸಿದರೆ ಹಿಂದುಗಳಿಗೆ ಧಕ್ಕೆ ಬರಬಹುದು ಎಂದು ವಕ್ಫ ಬೋರ್ಡ್‌ನಿಂದ ಬಾಬಾ ಬುಡನ್ ಗಿರಿಯನ್ನು ಧಾರ್ಮಿಕದತ್ತಿ ಇಲಾಖೆಗೆ ವರ್ಗಾಯಿಸಬೇಕೆಂದು ೧೯೭೬ರಲ್ಲಿ ಚಿಕ್ಕಮಗಳೂರು



ಜಿಲ್ಲಾ ನ್ಯಾಯಾಲಯ ಆದೇಶ ನೀಡಿರುತ್ತದೆ.

ಆದರೆ ಹಿಂದುತ್ವವಾದಿಗಳು ಹಿಂದುಗಳಿಗೆ ತಮ್ಮ ಪದ್ಧತಿಗಳಂತೆ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ನ್ಯಾಯಾಲಯ ತೀರ್ಪು ನೀಡಿತ್ತು. ಎಂಬ ಸುಳ್ಳು ಪ್ರಚಾರ ಮಾಡುತ್ತಿದೆ. ಹಿಂದುಗಳ ಪೂಜಾ ವಿಧಾನವೆಂದರೆ ೧೯೭೫ ಕ್ಕೆ ಪೂರ್ವ ರೀತಿಯಲ್ಲಿದ್ದ ನಂದದೀಪ, ಪಾದುಕೆಗಳಿಗೆ ಶ್ರೀ ಗುರು ದತ್ತಾತ್ರೇಯ ಪೀಠಕ್ಕು ಹಾಗೂ ದಾದಾಹಯತ್ ಖಲಂದರ್ ದರ್ಗಾಕ್ಕು ಸಜ್ಜಾದ್‌ನಶಿನರೇ ಮಠದ ಗುರುಗಳಾಗಿರುತ್ತಾರೆ. ಇದನ್ನು ಸರಕಾರ ದಾಖಲೆಗಳಲ್ಲಿ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಎಂದು ಪರಿಗಣಿಸಲ್ಪಟ್ಟಿದೆ. ಮುಜರಾಯಿ ಇಲಾಖೆಯಿಂದ ಉರುಸ್ ಸಂದರ್ಭಗಳಲ್ಲಿ ಖರ್ಚುವೆಚ್ಚಗಳಿಗೆ ಅನುದಾನ ಪಡೆಯುತ್ತಿದೆ. ೮೦ರ ದಶಕದಿಂದ ಬಾಬ್ರಿ ಮಸೀದಿ ಧ್ವಂಸವರೆಗೆ ದೇಶದಲ್ಲಿ ರಾಮಜನ್ಮ ಭೂಮಿ ಹೆಸರಲ್ಲಿ ಕೋಮುವಾದ ಹರಡುತ್ತಿದ್ದ ಕಾಲ. ಈ ಸಂದರ್ಭದಲ್ಲಿ ಪ್ರಥಮ ಬಾರಿಗೆ ೧೯೮೭ರಲ್ಲಿ ಸಂಘ ಪರಿವಾರದವರು ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಕೇಂದ್ರವು ದತ್ತಾ ಪೀಠ ಆಗಿದೆಯೆಂದು ಅಲ್ಲಿ ಮಾರ್ಗಶಿರ ಹುಣ್ಣಿಮೆಯ ದಿನದಂದು ಒಂದು ದಿನಗಳ ಕಾಲ ಹೋಮ ಹವನಗಳಿಗೆ ಅವಕಾಶ ಕೊಡಬೇಕು ಹಾಗೂ ದರ್ಗಾದ ಗುರುವಾಗಿದ್ದ ಸಜ್ಜಾದನಶೀನರ ಆಡಳಿತವನ್ನು ಕೊನೆಗೊಳಿಸಬೇಕೆಂದು ಆಗ್ರಹ ಪಡಿಸಿತು.

ಆಡಳಿತ ಮಂಡಳಿ ಸಾರ್ವಜನಿಕ ವಿಚಾರಣೆ ಸ್ಥಳ ಪರಿಶೀಲಿಸಿ ೧೯೮೯ ಫೆಬ್ರವರಿ ೨೫ ರಂದು ಧಾರ್ಮಿಕ ದತ್ತಿ ಯುಕ್ತರು ೧೯೭೫ ಜೂನ್ ಪೂರ್ವ ದರ್ಗಾದಲ್ಲಿದ್ದ ಆಚರಣೆಗಳನ್ನೇ ಪಾಲಿಸಬೇಕೆಂದು ಆದೇಶ ಹೊರಡಿಸಿತು. ೧೯೭೫ಕ್ಕೆ ಮುನ್ನಾ ಆಚರಣೆಗಳೆಂದರೆ ದರ್ಗಾ, ಪೀಠ ವಸ್ತುವಾದಿಯನ್ನು ಸಜ್ಜಾದ್‌ನ ಶಿಷ್ಯರು ನಿರ್ವಹಿಸುತ್ತಾರೆ. ನಶಿನರುನೇಮಿಲ್ಪಟ್ಟ ಮುಜಾವರರು ಗರ್ಭಗುಡಿಯೊಳಗೆ ಹೋಗಿ ದಿನಾ ನಿತ್ಯದ ಪೂಜಾ ವಿಧಿಗಳನ್ನು ಮಾಡಿ ಹಿಂದೂ ಮುಸ್ಲಿಂ ಭಕ್ತಾದಿಗಳಿಗೆ ತೀರ್ಥ ವಿತರಿಸುತ್ತಾರೆ. ಪಾದುಕೆಗಳಿಗೆ ಹೂವು ಅರ್ಪಿಸಿ ನಂದದೀಪ ಹಚ್ಚಿಸುತ್ತಾರೆ, ಗುಹೆಯಲ್ಲಿ ಸಮಾದಿಗಳಿಗೆ ಲೋಬಾನ, ಸಾಂಬ್ರಾಣಿ ಹಾಕುವರು. ದರ್ಗಕ್ಕೆ ಕಲ್ಲು ಸಕ್ಕರೆ ಓದಿಸುವುದು ಊರು ಬತ್ತಿ ಹಚ್ಚುತ್ತಾರೆ ಫತಾಹಾ ಓದುವುದು ಸಂಜೆ ನಗಾರಿ ಬಾರಿಸುವುದು, ದೂಪ ಹಾಕುವುದು ತೆಂಗಿನ ಕಾಯಿ ಹೊಡೆಯುವುದು ಕುರಿ-ಕೋಳಿ ಕೊಯ್ದು ಅಡುಗೆ ಮಾಡುವುದು ಸಜ್ಜಾದ್‌ನಶಿನರಿಗೆ ನಮಸ್ಕಾರ ಮಾಡುವುದು ಕರ್ಪೂರ ಅರ್ಪಿಸುವುದು ಇಲ್ಲಿ ಪ್ರತಿ ವರ್ಷ ಬೃಹತ್ ಉರಸ್ ನಡೆಯುತ್ತದೆ. ಈ ಉರಸ್‌ಗೆ ಫಕೀರರು ಹಾಗೂ ದಾದಾನಜೀರ್ (ಪೀರ್ ಎಂದರೆ ಸೂಫಿ ಗುರುವಿನ ಹೆಸರು) ಹೆಸರುಳ್ಳ ಸಾವಿರಾರು ಭಕ್ತರರು ಬರುತ್ತಾರೆ. ೧೯೭೫ ಕ್ಕೂ ಮುಂಚೆ ದತ್ತಾ ಜಯಂತಿ. ದತ್ತಾ ಮಾಲೆ, ಶೋಭಾಯಾತ್ರೆ, ಅನಸೂಯ ಜಯಂತಿ, ಹೋಮ ಹವನ, ಭಜನೆ ಇವು ಯಾವು ಇರಲಿಲ್ಲ. ೧೯೭೫ ಕ್ಕೂ ಮುನ್ನಾ ದರ್ಗಾದಲ್ಲಿದ್ದ ಆಚರಣೆಗಳನ್ನು ಚಿಕ್ಕಮಗಳೂರು ನ್ಯಾಯಾಲಯ ಎತ್ತಿ ಹಿಡಿದಿದೆ ಹಾಗೂ ೧೯೯೧ ರಲ್ಲಿ ಹೈಕೋರ್ಟ್ ಕೂಡ ಬಾಬಾ ಬುಡನ್ ಗಿರಿಯಲ್ಲಿ ೧೯೭೫ ಜೂನ್ ಮುಂಚೆಯಿದ್ದ ಆಚರಣೆ ಪಾಲಿಸಬೇಕೆಂದು ಆದೇಶ ಹೊರಡಿಸಿದೆ.

ಎಂಭತ್ತು-ತೊಂಭತ್ತು ದಶಕದಲ್ಲಿ ಬಾಬ್ರಿ ಮಸೀದಿ. ರಾಮ ಜನ್ಮಭೂಮಿ ವಿವಾದದ ಸಂದರ್ಭ ೧೯೮೯ ಡಿಸೆಂಬರ್‌ನಲ್ಲಿ L.K. ಅಡ್ವಾಣಿ ನೇತೃತ್ವದ ರಾಮಶಿಲಾಯಾತ್ರೆ ೮-೧೨-೮೯ ರಿಂದ ೧೩-೧೨-೧೯೮೯ ರವರಗೆ ಕರ್ನಾಟಕದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಮಾರ್ಗವಾಗಿ ಶಿಲಾಯಾತ್ರೆ ಹೋಗುತ್ತಲಿತ್ತು. ಈ ಯಾತ್ರೆಯ ಸಂಘಟರು ಹಾಗೂ ದತ್ತಾತ್ರೇಯ ಪೀಠದ ಟ್ರಸ್ಟ್‌ನವರು. ೧೨-೧೨-೧೯೮೯ ರಂದು ಮಾರ್ಗಶಿರ ಹುಣ್ಣಿಮೆಯ ದಿನದಂದು ಗುರು ದತ್ತಾತ್ರೇಯ ಜಯಂತಿಯನ್ನು ದತ್ತಾಪೀಠದಲ್ಲಿ ನಡೆಸತ್ತೇವೆಂದು ಜಿಲ್ಲಾ ಆಡಳಿತದ ಸಹಕಾರಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು. ಸಂಘ ಪರಿವಾರದವರ ಅರ್ಜಿಯನ್ನು ಪರಿಶೀಲಿಸಿ ಸಂಘ ಪರಿವಾರದವರು ಹುಟ್ಟು ಹಾಕಿದ್ದ ದತ್ತ ಜಯಂತಿಗೆ ಜಿಲ್ಲಾ ಆಡಳಿತ ನೀರು, ಬಸ್ಸು, ತೀರ್ಥ, ಪ್ರಸಾದ, ಮಠಧಿಪತಿಗಳ ಭೇಟಿ ಇನ್ನಿತರ ವ್ಯವಸ್ಥೆ ಕಲ್ಪಿಸಿತು. ೧೯೭೫ ಕ್ಕು ಮುನ್ನಾ ಇರದೇ ಇದ್ದ ದತ್ತಾ ಜಯಂತಿ ಆಚರಣೆಗೆ ಅವಕಾಶ ಕೊಟ್ಟರೆ ಕಾನೂನು ಉಲ್ಲಂಘನೆಯಾಗುತ್ತದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳದೇ ಜಿಲ್ಲಾಡಳಿತ ಅವಕಾಶ ಮಾಡಿಕೊಟ್ಟಿತು. ೧೯೮೯ ಫೆಬ್ರವರಿಯಲ್ಲಿ ನೀಡಿದ ಆದೇಶವನ್ನು ೧೯೮೯ ಡಿಸೆಂಬರ್‌ನಲ್ಲಿ ಜಿಲ್ಲಾಡಳಿತ ಉಲ್ಲಂಘಿಸಿತು.

ಪಾರಸಿ ಉರ್ದು ಭಾಷೆಯ ಸೂಫಿ ಸಂತರ ಚರಿತ್ರೆಗಳ ಪ್ರಕಾರ ಬಾಬಾ ಬುಡನ್ ಗಿರಿಗೆ ಮೆಕ್ಕದಿಂದ "ಅಬ್ದಲ್ ಅಜಿಜ್ ಯೂಸುಫ್ ಮಕ್ಕಿ" ಎಂಬ ಸೂಫಿ ಸಂತರು ಬಂದರು. "ದಾದಾ ಹಯತ್ ಖಲಂದರ್" ಎಂಬುದು ಹೆಸರಲ್ಲಿ ಅದೊಂದು ಪದವಿ ದಾದಾ ಎಂದರೆ ಅಜ್ಜ ಎಂದರ್ಥ. ಸಂತರನ್ನು ಬಾಬಾ (ತಂದೆ) ದಾದಾ (ಅಜ್ಜ) ಎಂದು ಕರೆಯುವುದು ಸೂಫಿಗಳಲ್ಲಿ ವಾಡಿಕೆ ಹಯತ್ ಎಂದರೆ ದೀರ್ಘಾಯುಷ್ಯ ಎಂದರ್ಥ ಸಂತರು ಯೋಗ, ಧ್ಯಾನಗಳ ಮೂಲಕ ದೃಢವಾದ ದೇಹವನ್ನು ಪಡೆದಿದ್ದವರು. ಖಲಂದರ್ ಎಂದರೆ ಸೂಫಿ ಪಂಥದ ಶಾಖೆಯ ಹೆಸರು. ಸೂಫಿಗಳು ಪರಿಯತ್ ಮೌಢ್ಯ ಕಂದಚಾರ ಇಸ್ಲಾಂ ಮೂಲ ಭೂತವಾದವನ್ನು ವಿರೋಧಿಸುತ್ತಾರೆ. ಆದ್ದರಿಂದ ಮುಸ್ಲಿಂರು ಸೂಫಿ ಸಂತರನ್ನು ನಿಯಮ ಬಾಹಿರರು ಎಂದು ಕರೆಯುವರು. ಖಲಂದರ್ ಎಂದರೆ ನಿರಂಕುಶ ಮತಿಗಳು ಎಂದರ್ಥ. ಸಂಚಾರಿಗಳಾದ ಸೂಫಿಸಂತರು ಗುಹೆಗಳಲ್ಲಿ ದಟ್ಟವಾದ ಕಾಡುಗಳಲ್ಲಿ ವಾಸಮಾಡುತ್ತಿದ್ದರು. ದಾದಾಹಯತ್‌ರವರ ಶಿಷ್ಯನೇ ಬಾಬಾಬುಡನ್.

ಗಿರಿಯಲ್ಲಿರುವ ಹಸಿರು ಧ್ವಜದ ಪಕ್ಕಕ್ಕೆ ತಾತ್ಕಾಲಿಕವಾಗಿ ಭಗಧ್ವಜವನ್ನು ಶಾಶ್ವತವಾಗಿ ಇಡಲು ಪ್ರಾರಂಭಿಸಿದರು. ನಂತರ ಸೂಫಿ ಧ್ವಜವನ್ನೆ ಹರಿದು ಹಾಕಿದರು. ೧೯೯೯ ರಿಂದ ದತ್ತಮಾಲೆ ಅಭಿಯಾನ ೨೦೦೦ ರಿಂದ ಶೋಭಯಾತ್ರೆ ೧೯೯೭ ರಿಂದ ರಥಯಾತ್ರೆ ಎಂಬ ಕಪೋಲ ಆಚರಣೆಗಳನ್ನು ಸಂಘ ಪರಿವಾರದವರು ಪ್ರಾರಂಭಿಸಿದರು. ೨೦೦೧ ರಲ್ಲಿ ಆಡಳಿತ ಮಂಡಳಿ ಸಭೆಯಲ್ಲಿ ಪ್ರತಿ ವರ್ಷ ದತ್ತಜಯಂತಿ ದತ್ತಾಮಾಲೆ ಭಿಯಾನ ಸಂದರ್ಭದಲ್ಲಿ ಭಗವಾಧ್ವಜವನ್ನು ಮೂರು ದಿನಗಳು ಹಾರಿಸಲು ಹಾಗೂ ಉರುಸ್ ಸಂದರ್ಭದಲ್ಲಿ ಮೂರು ದಿನಗಳು ಸೂಫಿಯ ಹಸಿರು ಧ್ವಜವನ್ನು ಹಾರಿಸಲು ಉಳಿದ ದಿನಗಳು ಪೀಠದಲ್ಲಿ ಯಾವುದೇ ಧ್ವಜ ಹಾರಾಟ ಬೇಡ ಎಂದು ಸಮಿತಿಯಲ್ಲಿ ತೀರ್ಮಾನಿಸಲಾಯಿತು. ನಂತರ ಇನ್ನೊಂದು ಆಡಳಿತ ಮಂಡಳಿ ಸಭೆಯಲ್ಲಿ ಇದ್ದರೆ ಭಾಗವಾಧ್ವಜ ಹಾಗೂ ಹಸಿರು ಧ್ವಜ ಎರಡು ಇರಲಿ ಇಲ್ಲದಿದ್ದರೆ ಎರಡು ಧ್ವಜ ಬೇಡ ಎಂದು ತೀರ್ಮಾನಿಸಲಾಯಿತು.

೨೦೦೨ ರಿಂದ ಗುಹೆಯೊಳಗೆ ಪ್ರಾರ್ಥನೆ ಗಣಪತಿ ಹೋಮ ರುದ್ರಭಿಷೇಕ, ದುರ್ಗಾ ಹೋಮ, ಸತ್ಯನಾರಾಯಣ ಪೂಜೆ ಇವೆಲ್ಲವುಗಳು ಆಡಳಿತ ಮಂಡಳಿ ಸಮಿತಿಯ ಮೂಲಕ ಸಂಘ ಪರಿವಾರದವರು ಅಧಿಕೃತ ಕಾರ್ಯಕ್ರಮಗಳಾಗಿ ಸೇರ್ಪಡಿಸಿದರು ಹಾಗೂ ಇದೇ ವರ್ಷದಿಂದ ನಗರ ಸಂಕೀರ್ತನ ಯಾತ್ರೆ ಎಂಬ ಹೊಸ ಕಪೋಲ ಆಚರಣೆಯನ್ನು ಸಂಘ ಪರಿವಾರದವರು ಪ್ರಾರಂಭಿಸಿದ್ದಾರೆ. ಹಾಗೂ ಬಾಬಾ ಬುಡನ್ ಗಿರಿಯಲ್ಲಿ ಹಿಂದು ಅರ್ಚಕರ ನೇಮಕ, ಕೇಸರಿ ಬಟ್ಟೆ ಪೀಠಕ್ಕೆ ಹೊದಿಸುವುದು ಧ್ವಜ ಸ್ಥಾಪನೆ ಗಂಟೆ ಅಳವಡಿಸುವುದು ಗುಹೆಯಲ್ಲಿರುವ ಗೋರಿಗಳನ್ನು ತೆಗೆಸುವುದು ಇವೆಲ್ಲವುಗಳನ್ನು ಆಡಳಿತ ಮಂಡಳಿಗೆ ಸಂಘ ಪರಿವಾರದವರು ಆಗ್ರಹ ಪಡಿಸುತ್ತಲೆ ಇದ್ದಾರೆ.

ಈ ಪೀಠಕ್ಕೆ ಗುರುದತ್ತಾತ್ರೇಯ ಬಾಬಾ ಬುಡನ್ ಗಿರಿ ಸ್ವಾಮಿ ದರ್ಗಾ ಎಂದು ಬರಲು ಕಾರಣ ಏನೆಂದು ತಿಳಿದುಕೊಳ್ಳಲು ಅವಶ್ಯಕವಾಗಿ ತೊಡಗಿದೆ. ಪಾರಸಿ ಉರ್ದು ಭಾಷೆಯ ಸೂಫಿ ಸಂತರ ಚರಿತ್ರೆಗಳ ಪ್ರಕಾರ ಬಾಬಾ ಬುಡನ್ ಗಿರಿಗೆ ಮೆಕ್ಕದಿಂದ "ಅಬ್ದಲ್ ಅಜಿಜ್ ಯೂಸುಫ್ ಮಕ್ಕಿ" ಎಂಬ ಸೂಫಿ ಸಂತರು ಬಂದರು. "ದಾದಾಹಯತ್ ಖಲಂದರ್" ಎಂಬುದು ಹೆಸರಲ್ಲಿ ಅದೊಂದು ಪದವಿ ದಾದಾ ಎಂದರೆ ಅಜ್ಜ ಎಂದರ್ಥ. ಸಂತರನ್ನು ಬಾಬಾ (ತಂದೆ) ದಾದಾ (ಅಜ್ಜ) ಎಂದು ಕರೆಯುವುದು ಸೂಫಿಗಳಲ್ಲಿ ವಾಡಿಕೆ ಹಯತ್ ಎಂದರೆ ದೀರ್ಘಾಯುಷ್ಯ ಎಂದರ್ಥ ಸಂತರು ಯೋಗ, ಧ್ಯಾನಗಳ ಮೂಲಕ ದೃಢವಾದ ದೇಹವನ್ನು ಪಡೆದಿದ್ದವರು. ಖಲಂದರ್ ಎಂದರೆ ಸೂಫಿ ಪಂಥದ ಶಾಖೆಯ ಹೆಸರು. ಸೂಫಿಗಳು ಪರಿಯತ್ ಮೌಢ್ಯ ಕಂದಚಾರ ಇಸ್ಲಾಂ ಮೂಲ ಭೂತವಾದವನ್ನು ವಿರೋಧಿಸುತ್ತಾರೆ. ಆದ್ದರಿಂದ ಮುಸ್ಲಿಂರು ಸೂಫಿ ಸಂತರನ್ನು ನಿಯಮ ಬಾಹಿರರು ಎಂದು ಕರೆಯುವರು. ಖಲಂದರ್ ಎಂದರೆ ನಿರಂಕುಶ ಮತಿಗಳು ಎಂದರ್ಥ. ಸಂಚಾರಿಗಳಾದ ಸೂಫಿಸಂತರು ಗುಹೆಗಳಲ್ಲಿ ದಟ್ಟವಾದ ಕಾಡುಗಳಲ್ಲಿ ವಾಸ ಮಾಡುತ್ತಿದ್ದರು. ದಾದಾಹಯತ್‌ರವರ ಶಿಷ್ಯನೇ ಬಾಬಾಬುಡನ್. ತನ್ನ ಶಿಷ್ಯನನ್ನು ತನ್ನ ಉತ್ತಾರಿಧಿಕಾರಿಯಾಗಿ ನೇಮಿಸಿರುವುದ

ರಿಂದ ಈ ಬೆಟ್ಟಕ್ಕೆ ಬಾಬಾ ಬುಡನ್‌ಗಿರಿ ಎಂದು ಹೆಸರು ಬಂದಿತು.

ಅರೆಬಿಯಾದ ಹಜರತ್ ಜಮಾಲುದ್ದಿನ್ ಮುಗ್ಗಿಬಿ ಎಂಬ ಸೂಫಿಸಂತನು ಕಾಫೀ ಬೀಜಗಳನ್ನು ಚಂದ್ರ ದ್ರೋಣ ಪರ್ವತಕ್ಕೆ ಪರಿಚಯಿಸಿದನು. ಕಾಫೀ ಬೆಳೆಗೂ ಹಾಗೂ ಸೂಫಿಗೆ ವಿಶಿಷ್ಟ ಸಂಬಂಧವಿದೆ, ಸಂತರಿಗೆ ಹಾಗೂ ಫಕೀರರಿಗೆ ಧ್ಯಾನ ತಪ್ಪಸ್ಸು ತಿರುಗಾಟ ದೇಹ ದಂಡನೆ ಸಾಧನೆಗಳು ಮಾಡುವಾಗ ಅಮಲಿಗಾಗಿ ಕಾಫೀ ಬೀಜ ಭಂಗಿ ಇನ್ನಿತರ ಅಮಲಿನ ವಸ್ತುಗಳನ್ನು ಗುರು ಪಂಥಗಳು ಬಳಸುತ್ತಿದ್ದರು. ನಾಲ್ಕು ಸಾವಿರ ಅಡಿ ಎತ್ತರ ಬೆಟ್ಟದಲ್ಲಿ ಕಾಫಿ, ಭಂಗಿ, ಚಳಿಕಾಯಿಸಲು ಬೆಂಕಿ ಇವು ಅಗತ್ಯವಾಗಿರಬಹುದು.

ಬಾಬಾಬುಡನ್‌ಗಿರಿಯಲ್ಲಿ ಪ್ರತಿದಿನ ಜನರು ಹೋಗುತ್ತಲೇ ಇರುತ್ತಾರೆ. ಹರಕೆ ಮಾಡಿಕೊಂಡವರು ಹೊಸದಾಗಿ ಮದುವೆಯಾದವರು ಹೊಸ ವಾಹನಗಳನ್ನು ಕೊಂಡು ಕೊಡವರು ಹುಟ್ಟಿದ ಮಕ್ಕಳಿಗೆ ತಲೆ ಕೂದಲು ತೆಗೆಸುವುದಕ್ಕೆ ಕಾಯಿಲೆ ಬಂದರೆ ವಾಸಿಯಾಗಬೇಕೆಂದು ಹರಕೆ ಮಾಡಿಕೊಳ್ಳುವುದಕ್ಕೆ ಮನೆಯಲ್ಲಿ ಶುಭಕಾರ್ಯಗಳು ಒಳ್ಳೆಯ ಮಳೆ, ಬೆಳೆ, ಬರಲಿ ಎಂದು ಹರಕೆ ಮಾಡಿಕೊಳ್ಳುವುದಕ್ಕೆ ಜನರು ಬರುತ್ತಲೇ ಇರುತ್ತಾರೆ. ಒಟ್ಟಾರೆ ಜೀವನದಲ್ಲಿ ಕಷ್ಟಗಳು ತೊಲಗಿ ನೆಮ್ಮದಿಯ ಜೀವನ ಬರಲಿ ಎಂದು ಜನತೆ ಹರಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿಗೆ ಬರುವವರು ದುಡಿಯುವ ಜನತೆ. ತಮ್ಮ ನೋವು ನಲಿವುಗಳನ್ನು ಹಂಚಿಕೊಳ್ಳುವುದಕ್ಕೆ ಬಾಬಾಬುಡನ್‌ಗಿರಿಗೆ ಬರುತ್ತಾರೆ. ಎಲ್ಲರು ಜಾತ್ಯತೀತ ಭಾವನೆವುಳ್ಳವರು. ಈಗ ಮುಖ್ಯವಾದ ಸಮಸ್ಯೆ ಎಂದರೆ ದತ್ತಾತ್ರೇಯ ಪೀಠ ಎಂಬ ಹೆಸರು ಬರಲು ಕಾರಣವೇನು?

ಬಾಬಾಬುಡನ್‌ಗಿರಿ ಬೆಟ್ಟದ ಕೆಳಗೆ ಪೂರ್ವಕ್ಕೆ ಮುತ್ತಿನಪೂರ ಎಂಬಲ್ಲಿ ಆದಿಗದ್ದುಗೆ ಗುರುದತ್ತಾತ್ರೇಯ ಫಲಹಾರ ಮಠವಿದೆ. ಎತ್ತರಕ್ಕೆ ಕೆಮ್ಮಣ್ಣುಗುಂಡಿ ರಸ್ತೆಯಲ್ಲಿ ಇನಾರಿ ಬಿಸಗ್ನಿ ಮಠ ಗ್ರಾಮದಲ್ಲಿ ಗುರುದತ್ತಾತ್ರೇಯ ಆದಿ ಗದ್ದುಗೆ ಬಿಸಗ್ನಿ ಮಠವಿದೆ. ಇವೆರಡು ಶೈವ ಮಠಗಳು. ಆದರೂ ಇದಕ್ಕೆ ಕೆಳಜಾತಿಯ ಜನರು ಶಿಷ್ಯರಾಗಿದ್ದಾರೆ. ಎರಡು ಮಠಗಳಲ್ಲಿ ವೈದಿಕ ವಿರೋಧಿ ಮೂರ್ತಿಗಳಾದ ಬೈರವ ವೀರಭದ್ರ ಇದ್ದಾರೆ. ಬಲಿ ಪದ್ಧತಿ ಇದೆ. ಭಾರತದಲ್ಲಿ ದತ್ತಕ್ಷೇತ್ರಗಳು ಇರುವ ಕಡೆಯಲ್ಲಾ ಪ್ರತಿಕ್ಷೇತ್ರವು ನಿರ್ದಿಷ್ಟ "ಯತಿ" ಹೆಸರಿನಿಂದ ಪ್ರಸಿದ್ಧವಾಗಿದೆ. ಉದಾ:- ಗಾಣಗಪೂರ ನರಸಿಂಹ ದತ್ತ ಅಕ್ಕಲಕೋಟೆಯ ಸ್ವಾಮಿ ಸಮರ್ಥ, ಕುರುಮಗಡ್ಡೆಯ ಶ್ರೀಪಾದವಲ್ಲಭ, ಆದರೆ ಬಾಬಾಬುಡನ್‌ಗಿರಿಗೆ ಯಾವ ದತ್ತ ಪಂಥದ "ಯತಿ" [ಶಂಖಾ ಪ್ರಕಾರ ವೇದ ಪ್ರಮಾಣವನ್ನು ಒಪ್ಪದ, ಜಾತಿ ಪದ್ಧತಿ ನಿರಾಕರಿಸುವ ಸನ್ಯಾಸಿ ಪಂಥಕ್ಕೆ ಯತಿ ಪಂಥ ಎಂದು ಹೆಸರು] ಹೆಸರು ಇಲ್ಲ. ಇಲ್ಲಿ ದಾದಾಹಯತ್ ಹಾಗೂ ಬಾಬಾಬುಡನ್ ಎಂಬ ಇಬ್ಬರು ಸೂಫಿಗಳ ಹೆಸರುಗಳಿವೆ. ದಾದಾಹಯತ್‌ರನ್ನು ಜನರು ದತ್ತಾತ್ರೇಯ ಎಂದು ಆರಾದಿಸುತ್ತಿರಬಹುದು. ಅಥವಾ ಬಾಬಾಬುಡನ್ ಗಿರಿಯ ಸೂಫಿ ಸಂತರಲ್ಲಿ ದತ್ತಾ ಪಂಥದ ಯತಿಗಳಿಗೆ ಸ್ನೇಹ ಸಂಬಂಧ ಇರಬಹುದು, ಯತಿಗಳು ಸೂಫಿ ಸಂತರ ಹತ್ತಿರ ಬರಬಹುದು ಸೂಫಿಸಂತರು ಯತಿಗಳ ಹತ್ತಿರ ಹೋಮ ಬರುತ್ತಿರಬಹುದು. ಜನರು ದಾದಾ ಹಯತ್ ದತ್ತಾತ್ರೇಯ ಸ್ವಾಮಿ ಎಂದು ಕರೆದಿರಬಹುದು ಗುಹೆಯಲ್ಲಿ ಖಲಂದರ್ ಪಂಥ-ದತ್ತಪಂಥಗಳಿಂದ

ಸೂಫಿಗಳು ದತ್ತಾತ್ರೇಯನಾಗುವುದು ದತ್ತಪಂಥದ ಯತಿಗಳು ಸೂಫಿಸಂತರಾಗುವುದು ಸಾಮಾನ್ಯವಾಡಿಕೆ. ಶ್ರೀ ಪಾದ ವಲ್ಲಭರು ಕುರುಮಗಡ್ಡೆಯಲ್ಲಿ ಕೃಷ್ಣ ನದಿಯ ಬೆಸ್ತರ ರಿಗೆ ನಾನು ಮುಂದಿನ ಜನ್ಮದಲ್ಲಿ ಮುಸ್ಲಿಂನಾಗಿ ಹುಟ್ಟಿ ರಾಜನಾಗುತ್ತಾನೆ ಎಂದು ಹೇಳಿದರೆಂಬ ಕಥೆಯಿದೆ. ಮಹಾರಾಷ್ಟ್ರದ ದೌಲತ್‌ಬಾದ್‌ನ ದತ್ತಾವತಾರಿ ಜನಾರ್ಧನ್ ಸ್ವಾಮಿಯವರಿಗೆ ದತ್ತಾತ್ರೇಯನು ಸೂಫಿಸಂತನ ರೂಪದಲ್ಲಿ ದರ್ಶನ ಕೊಟ್ಟನಂತೆ ದತ್ತಾತ್ರೇಯನು ಗ್ವಾಲಿಯರಿನ ನಾರಾಯಣ ಮಹಾರಾಜರಿಗೆ ಫಕೀರರ ವೇಷದಲ್ಲಿ ದರ್ಶನ ಕೊಟ್ಟನಂತೆ, ಎಂಬ ಕತೆಗಳಿವೆ, ದತ್ತಾವತಾರಿ ಮಾಣಕ ಪ್ರಭುರನ್ನು ಮುಸ್ಲಿಂರು ಪಿರಾನೆಪೀರ್ ದಸ್ತಿಗಿರ್ ಎಂದು ಕರೆಯುತ್ತಾರಂತೆ [ದಸ್ತಗೀರ್ ಎಂಬುದು ಖಾದ್ರಿ ಪಂಥದ ಗುರುವಿನ ಹೆಸರು] ಈ ಮೇಲಿನ ಅಂಶಗಳ ಅರ್ಥ ದತ್ತಾ ಹಾಗೂ ಸೂಫಿಗಳ ಮಿಲನದ ಸಂಬಂಧ ಸೂಚಿಸುತ್ತದೆ.

ಕೂಡಿದೆ. ಈ ಗುಹೆಗೆ ದರ್ಗಾ ಹಾಗೂ ದತ್ತಾತ್ರೇಯ ಪೀಠ ಎಂದು ಹೆಸರು ಬಂದಿರಬಹುದು. ಇಲ್ಲಿದ್ದ ಸಂತರನ್ನು ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ಎಂದು ಜನರು ಕರೆಯತೊಡಗಿರಬಹುದು.

ಅದು ಹೇಗೆ ಸೂಫಿಸಂತರಿಗೆ ದತ್ತನೆಂದು ಕರೆಯಲು ಸಾಧ್ಯ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಸೂಫಿಗಳು ದತ್ತಾತ್ರೇಯನಾಗುವುದು ದತ್ತಪಂಥದ ಯತಿಗಳು ಸೂಫಿಸಂತರಾಗುವುದು ಸಾಮಾನ್ಯವಾಡಿಕೆ. ಶ್ರೀ ಪಾದವಲ್ಲಭರು ಕುರುಮಗಡ್ಡೆಯಲ್ಲಿ ಕೃಷ್ಣ ನದಿಯ ಬೆಸ್ತರಿಗೆ ನಾನು ಮುಂದಿನ ಜನ್ಮದಲ್ಲಿ ಮುಸ್ಲಿಂನಾಗಿ ಹುಟ್ಟಿ ರಾಜನಾಗುತ್ತಾನೆ ಎಂದು ಹೇಳಿದರೆಂಬ ಕಥೆಯಿದೆ. ಮಹಾರಾಷ್ಟ್ರದ ದೌಲತ್‌ಬಾದ್‌ನ ದತ್ತಾವತಾರಿ ಜನಾರ್ಧನ್ ಸ್ವಾಮಿಯವರಿಗೆ ದತ್ತಾತ್ರೇಯನು ಸೂಫಿಸಂತನ ರೂಪದಲ್ಲಿ ದರ್ಶನ ಕೊಟ್ಟನಂತೆ ದತ್ತಾತ್ರೇಯನು ಗ್ವಾಲಿಯರಿನ ನಾರಾಯಣ ಮಹಾರಾಜರಿಗೆ ಫಕೀರರ ವೇಷದಲ್ಲಿ ದರ್ಶನ ಕೊಟ್ಟನಂತೆ, ಎಂಬ ಕತೆಗಳಿವೆ, ದತ್ತಾವತಾರಿ ಮಾಣಕ ಪ್ರಭುರನ್ನು ಮುಸ್ಲಿಂರು ಪಿರಾನೆಪೀರ್ ದಸ್ತಿಗಿರ್ ಎಂದು ಕರೆಯುತ್ತಾರಂತೆ [ದಸ್ತಗೀರ್ ಎಂಬುದು ಖಾದ್ರಿ ಪಂಥದ ಗುರುವಿನ ಹೆಸರು] ಈ ಮೇಲಿನ ಅಂಶಗಳ ಅರ್ಥ ದತ್ತಾ ಹಾಗೂ ಸೂಫಿಗಳ ಮಿಲನದ ಸಂಬಂಧ ಸೂಚಿಸುತ್ತದೆ. ಉತ್ತರ ಭಾರತದಲ್ಲಿ ದತ್ತಾ, ನಾಥ, ಸೂಫಿ ಪಂಥಗಳು ಮಿಲನದ ನಂತರ ಹದಿನಾಲ್ಕುನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದು ಸೂಫಿಗಳು ದರ್ಗಾವನ್ನು ದತ್ತಯತಿಗಳು ಪೀಠಗಳನ್ನು ಹಾಗೂ ನಾಥಯತಿಗಳು ಬೈರವ ವೀರಭದ್ರ ಗುಡಿಗಳನ್ನು ಸ್ಥಾಪಿಸಿದರೆಂದು ಸಂಶೋಧನೆಗಳಿಂದ ತಿಳಿಯುತ್ತದೆ. ಬಾಬಾಬುಡನ್‌ಗಿರಿಯಲ್ಲಿ ದರ್ಗಾ ಹಾಗೂ ಪೀಠಗಳ ಆಡಳಿತವನ್ನು ಖಲಂದರ ಪಂಥದ ಗುರುಗಳು ಜವಾಬ್ದಾರಿ ವಹಿಸಿಕೊಂಡಂತೆ ದೇಶದಲ್ಲಿ ಹಲವಾರು ದರ್ಗಾಗಳ ಆಡಳಿತವನ್ನು ಹಿಂದುಗಳ

ನೇತೃತ್ವದಲ್ಲಿವೆ. ಶಿರಡಿಯ ಸಾಯಿಬಾಬಾ ದರ್ಗಾ ಹಾಗೂ ಮುಂಬಯಿಯ ಕಲ್ಯಾಣ ಬೆಟ್ಟದ ಮೇಲಿರುವ ದರ್ಗಾದಲ್ಲಿ ಬ್ರಾಹ್ಮಣರು ಅರ್ಚಕರು ಆಗಿದ್ದಾರೆ.

ಸೂಫಿ ಹಾಗೂ ದತ್ತಸಂತರು ಹಲವಾರು ಜಾತಿಗಳಿಗೆ ಸೇರಿದವರು. ದತ್ತಪಂಥವು ಜಾತಿ ನಿರಾಕರಿಸುವುದರಿಂದ ವೈದಿಕತೆಯನ್ನು ವಿರೋಧಿಸುವುದರಿಂದ ಬಹಳ ಬೇಗನೆ ಜನಪ್ರಿಯವಾಯಿತು, ದ್ತತಪಂಥಿಗಳು ಒಂದು ಕಡೆ ಹುಟ್ಟಿ ಇನ್ನೊಂದು ಕಡೆ ಜನಪ್ರಿಯವಾಗಿ ಮತ್ತೊಂದು ಕಡೆ ಪ್ರಾಣ ಬಿಟ್ಟಿದ್ದಾರೆ. ಅವರು ನೆಲೆ ನಿಂತ ಜಾಗಗಳೆಲ್ಲಾ ಆರಾಧನೆ ಸ್ಥಳಗಳಾಗಿವೆ. ಉದಾ:- ಶ್ರೀಪಾದವಲ್ಲಭ ಆಂಧ್ರದ ಪೀಠಪುರುದಲ್ಲಿ ಹುಟ್ಟಿ ರಾಯಚೂರು ಪಕ್ಕ ಕೃಷ್ಣ ನದಿಯ ನಡುವೆಯಿರುವ ಕುರುಮಗಡ್ಡೆಯಲ್ಲಿ ಸಮಾದಿಯಾಗಿದ್ದಾರೆ. ಸೂಫಿ ಹಾಗೂ ದತ್ತಪಂಥಗಳಲ್ಲಿ ಗುರುವಿನ ಪಾದುಕೆಗಳಿಗೆ ಸಮಾಧಿಗಳಿಗೆ ಆರಾಧನೆ ಮಾಡುವುದು ವಾಡಿಕೆ, ಸಂಚಾರಿಗಳಾದ ದತ್ತಾ ಪಂಥದಸಂತರು ಪಕ್ಕದಲ್ಲಿರುವ ದತ್ತಾತ್ರೇಯ ಆದಿಗದ್ದುಗೆಗಳಾದ ಫಲಹಾರ ಮಠ ಹಾಗೂ ಬಿಸಗ್ನಿ ಮಠಗಳಿಗೆ ಹೋಗಿ ಬರುತ್ತಿರಬಹುದು ಹಾಗೂ ಬಾಬಾಬುಡನ್‌ಗಿರಿಯ ಗುಹೆಯೊಳಗೆ ಹೋಗಿ ಬರುತ್ತಿರಬಹುದು. ಇಲ್ಲಿಗೆ ಬಂದ ದತ್ತಸಂತರು. ಕೆಲ ಕಾಲ ಸೂಫಿಸಂತರ ಜೊತೆಯಲ್ಲಿ ನೆಲೆ ನಿಂತಿರಬಹುದು ಅವರ ಜ್ಞಾಪಕರ್ಥವಾಗಿ ಗುಹೆಯೊಳಗೆ ಪಾದುಕೆಗಳಿರಬಹುದು. ಆದರೆ ನಿರ್ದಿಷ್ಟ ಹೆಸರಿನ ದತ್ತಯತಿ ಇದ್ದ ಎಂಬ ಬಗ್ಗೆ ಇನ್ನು ತಿಳಿದಿಲ್ಲ ಹಾಗೂ ದತ್ತಯತಿ ಹೆಸರಲ್ಲಿ ಕಾರ್ಯಕ್ರಮಗಳು ನಡೆದಿರುವ ದಾಖಲೆಗಳು ಇಲ್ಲ.

ಪುರೋಹಿತಶಾಹಿಯನ್ನು ವಿರೋಧಿಸಿದ ದತ್ತ ಪಂಥ ಹಾಗೂ ಷರಿಯತ್, ಕಂದಚಾರ, ಮೌಢ್ಯ, ಇಸ್ಲಾಂ ಮೂಲಭೂತವಾದವನ್ನು ವಿರೋಧಿಸಿದ ಸೂಫಿಪಂಥ ಇವರೆಡು ಗುರುಪಂಥಗಳನ್ನು ಹೊಂದಿರುವ ಬಾಬಾಬುಡನ್‌ಗಿರಿ ಅದು ದೇವಾಸ್ಥಾನ ಅಲ್ಲ, ಮಸೀದಿ ಅಲ್ಲ. ಅದು ಸಮಾಜದ ಕೆಳವರ್ಗದ ಜನರು ಶೋಷಣೆಯೊಳಪಟ್ಟಿರುವವರು. ತಮ್ಮ ಕಷ್ಟ-ಸುಖಗಳನ್ನು ಹಂಚಿಕೊಳ್ಳುತ್ತಿರುವ ಸೂಫಿದರ್ಗಾ, ಸೂಫಿ ಹಾಗೂ ದತ್ತಾ ಪಂಥಗಳನ್ನು ಹೊಂದಿರುವ ಬಾಬಾಬುಡನ್‌ಗಿರಿ ಜಾತ್ಯತೀತತೆ ಬೆಳೆಸಿದೆ ಹಾಗೂ ಹಿಂದುವಲ್ಲದ-ಮುಸ್ಲಿಂವಲ್ಲದ ಮೂರನೆಯ ಧರ್ಮ ಜನತೆಯ ಧರ್ಮ ಬಂಡಾಯ ಧರ್ಮವನ್ನು ಸ್ಥಾಪಿಸಿದೆ. ಜನ ಸಂಸ್ಕೃತಿ ಕಟ್ಟಿದೆ. ಈ ಬಾಬಾಬುಡನ್ ಗಿರಿಯನ್ನು ಸಂಘ ಪರಿವಾರದವರು ವಿವಾದವನ್ನಾಗಿ ಮಾಡಿ ಹಿಂದು-ಮುಸ್ಲಿಂ, ಕೆಳಜಾತಿಯ ಜನರು ಸೇರುವ ಸೌಹರ್ದ ಮಿಲನದ ಸಂಸ್ಕೃತಿಯನ್ನು ನಾಶ ಮಾಡಿ ಸೂಫಿಸಂತರ ದರ್ಗಾಗಳಿಗೆ ಹೋಗುತ್ತಿರುವ ಕೆಳಜಾತಿಯ ಜನರ ಸಂಬಂಧಗಳನ್ನು ಮುರಿದು ಅದರ ಆ ವೈದಿಕ ಸಂಸ್ಕೃತಿಯನ್ನು ಧ್ವಂಸ ಮಾಡಿ ವೈದಿಕ ಸಂಸ್ಕೃತಿಗೆ ತಂದು ಮಾಂಸಹಾರ ಬಲಿ ಪದ್ಧತಿ ಮತ್ತು ಬೈರವ ವೀರಭದ್ರ ಆ ವೈದಿಕ ದೇವತೆಗಳ ಮೂಲಕ ಕೆಳಜಾತಿಯ ಭಕ್ತರಿಂದ ಕೂಡಿದ ಬಾಬಾಬುಡನ್‌ಗಿರಿಯಲ್ಲಿ ಸಜ್ಜಾದ್ ನಶಿನರನ್ನು ಕಿತ್ತು ಹಾಕಿ ಪುರೋಹಿತರನ್ನು ನೇಮಕ ಮಾಡಿ ಹೋಮ ಹವನ, ಹಿಂದು ಆಗಮಿಕ ಪೂಜಾ ಪದ್ಧತಿಗಳ ಮೂಲಕ ಬ್ರಾಹ್ಮಣ್ಯ ಯಜಮಾನಿಕೆಯನ್ನು ಸ್ಥಾಪಿಸುವ ಸಂಚು ನಡೆದಿದೆ.

ಬಾಬಾಬುಡನ್‌ಗಿರಿಯನ್ನು ದತ್ತಾಪೀಠವೆಂದು ಬದಲಾಯಿಸುವುದು ಬಾಬಾಬುಡನ್‌ಗಿರಿ ಎಂಬ ಶಬ್ದವನ್ನು ಮೈಲುಗಲ್ಲುಗಳಿಂದ ಲೋಕೋಪಯೋಗಿ ಇಲಾಖೆಯ ಬೋರ್ಡ್‌ಗಳಿಂದ, ಪ್ರವಾಸೋದ್ಯಮ ಇಲಾಖೆಯ ಬೋರ್ಡ್‌ಗಳಿಂದ ಸರಕಾರಿ ದಾಖಲೆಯಿಂದ, ಬರವಣಿಗಳಿಂದ, ತೆಗೆದು ಹಾಕುವುದು ನಾಲ್ಕು ವೇದಗಳನ್ನು ನಾಲ್ಕು ನಾಯಿಗಳನ್ನು ಮಾಡಿದ ಅವೈದಿಕ ದತ್ತನಿಗೆ ಜನಿವಾರ ತೊಡಿಗಿಸುವುದು, ಟಿಪ್ಪುವನ್ನು ಮತಾಂಧ ಕನ್ನಡ ದ್ರೋಹಿ ಎಂದು ಕರೆಯುವುದರ ಮೂಲಕ ಶೂದ್ರರ ಐತಿಹಾಸಿಕ ದಾಖಲೆಗಳನ್ನು ನೆನಪಿನ ಶಕ್ತಿಗಳನ್ನು ಮೂಲ ಗುರುತುಗಳನ್ನು ಸಂಘ ಪರಿವಾರದವರು ಬಹಳ ವ್ಯವಸ್ಥಿತವಾಗಿ ನಾಶಮಾಡಿ ವರ್ಣಾಶ್ರಮ ಧರ್ಮದ ಚೌಕಟ್ಟಿನೊಳಗೆ ತರುವ ಪ್ರಯತ್ನ ಮಾಡುತ್ತಿದ್ದಾರೆ. ಒಟ್ಟಾರೆ ಬಾಬಾಬುಡನ್ ಗಿರಿಯನ್ನು ಮತ್ತೊಂದು ಅಯೋಧ್ಯೆ ಮಾಡುವ ಸಂಚು ಪರಿವಾರ ನಡೆಸಿದೆ.

೧೯೯೧ ರಿಂದ ಜಾಗತಿಕರಣ ಪ್ರಭಾವದಿಂದ ಜನರು ತಮ್ಮ ಜೀವನಾಧಾರಗಳನ್ನು ಕಳೆದುಕೊಂಡಿದ್ದಾರೆ. ಅವರ ಹತ್ತಿರ ಈಗ ಕಣ್ಣೀರು ಮಾತ್ರ ಉಳಿದಿದೆ. ಜಾಗತಿಕರಣದಿಂದ ಜನರ ಹಸಿವಿನ ಸಾವುಗಳು. ರೈತರ ಆತ್ಮಹತ್ಯೆಗಳು, ನಿರೋದ್ಯೋಗ ಸಮಸ್ಯೆ, ಬಡತನ, ಸಾಮಾಜಿಕ-ಆರ್ಥಿಕ ಅಸಾಮಾನ್ಯತೆ ಹೆಚ್ಚಾಗುತ್ತಲೆ ಇವೆ. ಜನರ ಮೂಲಭೂತ ಸೌಲಭ್ಯಗಳಾದ ಅನ್ನ, ನೀರು, ಮನೆಯಿಲ್ಲದೆ ತುತ್ತು ಅನ್ನಕ್ಕೂ ಪರದಾಡುತ್ತಿದ್ದಾರೆ. ಇವೆಲ್ಲಿ ಸಮಸ್ಯೆಗಳ ವಿರುದ್ಧ ಜನರ ದನಿಯೆತ್ತದಂತೆ ಅವರ ಗಮನವನ್ನು ಬೇರೆ ಕಡೆಗೆ ತಿರುಗಿಸಲು ಆಳುವವರು ಕಂಡುಕೊಂಡ ಮಾರ್ಗವೇ 'ಕೋಮುವಾದ' ಹಾಗಾಗಿ ೧೯೯೧ ರಿಂದ ಜಾಗತಿಕರಣ ಭರಟೆ ಹೆಚ್ಚಾದಂತೆ ದೇಶದಲ್ಲಿ ಕೋಮುವಾದದ ಕದಬ ಬಾಹುಗಳು ವಿಸ್ತಾರಗೊಳ್ಳತ್ತಲೇ ಇವೆ.

ಪ್ರಪಂಚದಲ್ಲಿ ಹಲವಾರು ದೇಶಗಳಲ್ಲಿ ಪ್ಯಾಸಿಸಂ ವಿವಿಧ ರೂಪದಲ್ಲಿ ಹುಟ್ಟಿದ ಜರ್ಮನಿಯಲ್ಲಿ ಹಿಟ್ಲರು ರೂಪದಲ್ಲಿ ಪ್ಯಾಸಿಸಂ ಹುಟ್ಟಿತು. ಇಟಲಿಯಲ್ಲಿ ಮುಸಲೋನಿಯ ರೂಪದಲ್ಲಿ ಪ್ಯಾಸಿಸಂ ಹುಟ್ಟಿತು. ಆದರೆ ಭಾರತದಲ್ಲಿ ಕೋಮುವಾದ ರೂಪದಲ್ಲಿ ಪ್ಯಾಸಿಸಂ ಹುಟ್ಟುತ್ತಿದೆ. ಕೋಮುವಾದ ಮತ್ತು ಪ್ಯಾಸಿಸಂಗಳು ಪ್ರಜಾತಂತ್ರ ಜಾತ್ಯತೀತತೆ ಸಾಮಾಜಿಕ ನ್ಯಾಯ, ಸಮಾನತೆ ಬಯಸುವುದಿಲ್ಲ. ಆದುದರಿಂದ ಪ್ರಜಾತಂತ್ರ ಹಾಗೂ ಸೌಹರ್ದ ಹೋರಾಟಗಾರರನ್ನು ಕಂಡರೆ ಮೈಪರಚಿಕೊಳ್ಳುತ್ತಿದೆ. ಸಾಮಾಜಿಕ-ಆರ್ಥಿಕ ಅಸಮಾನತೆ, ಬಡತನ, ನಿರುದ್ಯೋಗ ಇವುಗಳನ್ನು ಉಪಯೋಗಿಸಿಕೊಂಡು ಪ್ಯಾಸಿಸಂ ಹುಟ್ಟು ಹಾಕಬಹುದು, ಅವೆಲ್ಲಗಳನ್ನು ಉಪಯೋಗಿಸಿಕೊಂಡು ಪ್ರಜಾತಾಂತ್ರಿಕ ಚಳುವಳಿ [ಚಳುವಳಿ ಎಂದರೆ ಶೋಷಿತ ವರ್ಗವನ್ನು ಸದಾ ಎಚ್ಚರಿಕೆಯಿಂದ ಇಡುವುದು ಮತ್ತು ಅವರ ಬದುಕು ಬದಲಾವಣೆಗೆ ಪ್ರಯತ್ನಿಸುವುದು, ಆ ಕಾರ್ಯದಲ್ಲಿ ಅವರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು] ಯನ್ನು ಹುಟ್ಟು ಹಾಕಬಹುದು. ಈ ಅವಕಾಶವನ್ನು ಕೋಮುವಾದಿಗಳಿಗೆ ಸಿಗದಂತೆ ಈ ನಾಡಿನ ಪ್ರಜ್ಞಾವಂತ ಜನತೆ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಜರ್ಮನಿಯಲ್ಲಿ ಹಿಟ್ಲರು ಬಡತನವನ್ನು ಬಳಸಿಕೊಂಡು ಪ್ಯಾಸಿಸಂ ಹುಟ್ಟು ಹಾಕಿದ್ದು [ಅದೇ ಬಡ ಜನತೆ ಹಿಟ್ಲರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ದೂಡಿದರು]. ಕೋಮುವಾದದ ವಿರುದ್ಧ ದನಿಯೆತ್ತುವುದು ಸಮಾನತೆಗಾಗಿ ಆಗಿದೆ. ಈ ಸಮಾಜದಲ್ಲಿ ಶೋಷಣೆ ರಹಿತ ಪ್ರಜಾತಾಂತ್ರಿಕ ಸಮಾಜ ನಿರ್ಮಾಣವಾದರೆ ಕೋಮುವಾದದ ಕರಾಳ ಮುಖಕ್ಕೆ ಮಸಿ ಬಳಿಯಬಹುದು. □

ಅಫ್ಜಲ್ ಗುರುಗೆ ನೇಣು: ನ್ಯಾಯವೆಷ್ಟು? ಪೂರ್ವಾಗ್ರಹವೆಷ್ಟು?

(೭ನೇ ಪುಟದಿಂದ)

ಹಾಗೂ ಬೇಜವಾಬ್ದಾರಿ ಮತ್ತು ಕೋಮುವಾದಿ ರಾಜಕೀಯ ಪಕ್ಷಗಳು ಅದೇ ಡಬಲ್ ಸ್ಟಾಂಡರ್ಡ್‌ಗಳನ್ನು ಅನುಸರಿಸುತ್ತಿವೆ. ಇದು ಭಾರತದ ಪ್ರಜಾಸತ್ತೆಗೂ ಒಳ್ಳೆಯದಲ್ಲ. ಮಾನವ ಹಕ್ಕು ಮತ್ತು ನ್ಯಾಯಪರತೆಗೂ ಒಳ್ಳೆಯದಲ್ಲ. ಆದ್ದರಿಂದ ರಾಷ್ಟ್ರಪತಿಗಳು ಕ್ಷಮಾದಾನ ನೀಡಿ ಮರಣ ದಂಡನೆ ರದ್ದುಗೊಳಿಸಲೇ ಬೇಕು.

ಏನಿಲ್ಲವೆಂದರೂ ಮರಣದಂಡನೆ ಎಂಬುದು ಸರ್ವಶಕ್ತ ಪ್ರಭುತ್ವ ನಿಸ್ಸಹಾಯಕ ವ್ಯಕ್ತಿಯೊಬ್ಬನನ್ನು ಹತ್ಯೆ ಮಾಡುವುದೇ ಆಗಿರುತ್ತದೆ. ಯಾವ ಪ್ರಭುತ್ವಕ್ಕೂ ತನ್ನ ನಾಗರಿಕನ ಜೀವವನ್ನು ತೆಗೆಯುವ ಹಕ್ಕಿಲ್ಲ. ಇದೆ ನಾಗರಿಕತೆಯ ಪ್ರಥಮ ಪಾಠ. ಆದ್ದರಿಂದಲೇ ಜಗತ್ತಿನಾದ್ಯಂತ ಮರಣದಂಡನೆ ರದ್ದು ಗೊಳಿಸಬೇಕೆಂಬ ಚಳವಳಿ ಗಟ್ಟಿಗೊಳ್ಳುತ್ತಿದೆ. ಯುದ್ಧೋನ್ಮಾದಿ ಮತ್ತು ಕ್ರೌರ್ಯವೇ ಪ್ರಭುತ್ವವಾಗಿರುವ ಅಮೆರಿಕದಂತ ದೇಶಗಳಲ್ಲಿ ಮಾತ್ರ ಮರಣ ದಂಡನೆ ಶಿಕ್ಷೆ ಇದೆ. ಭಾರತದಲ್ಲೂ ಇದೆ. ಭಾರತ ಒಂದು ನಾಗರಿಕ, ಹಾಗೂ ಪ್ರಜಾತಾಂತ್ರಿಕ ದೇಶವಾಗಬೇಕೆಂದರೂ ಮರಣದಂಡನೆ ರದ್ದಾಗಬೇಕಿದೆ.

ಪ್ರಪಂಚದಲ್ಲಿ ಮರಣದಂಡನೆಗೆ ಗುರಿಯಾಗುವ ನೂರಕ್ಕೆ ತೊಂಭತ್ತೋಭತ್ತು ಜನ ಕೆಳ ವರ್ಗ, ಜಾತಿ, ಹಾಗೂ ದಮನಿತ ಜನಾಂಗಗಳಿಂದಲೇ ಬಂದಿರುತ್ತಾರೆ. ಅದಕ್ಕೆ ಕಾರಣ ಅವರು ತಪ್ಪು ಮಾಡಿರುತ್ತಾರೆ ಎಂಬುದಲ್ಲ. ನ್ಯಾಯ ಸಂಹಿತೆಯ ಮಾನದಂಡವೇ ಮೇಲ್ವರ್ಗ, ಮೇಲ್ಜಾತಿ ಮತ್ತು ದಮನ ಕೋರ ಜನಾಂಗದ ನ್ಯಾಯ ಸಂಹಿತೆಯಾಗಿರುತ್ತದೆ. ಒಂದರ್ಥದಲ್ಲಿ ಮಾನವ ಜನಾಂಗದ ನ್ಯಾಯಸಂಹಿತೆಯ ವಿಕಾಸವನ್ನು ಈ ವಿಕಾರಗಳಿಂದ ಹೊರಬರುತ್ತಿರುವ ಹೆಜ್ಜೆ ಗುರುತುಗಳಲ್ಲಿ ಅಳೆಯಬಹುದು. ಈ ಅರ್ಥದಲ್ಲಿ ಭಾರತ ಎತ್ತ ಸಾಗುತ್ತಿದೆ ಎನ್ನುವುದಕ್ಕೆ ಮರಣದಂಡನೆಯ ಬಗ್ಗೆ ನಮ್ಮ ಸಮಾಜದ, ನ್ಯಾಯಾಂಗದ ಮತ್ತು ಸರ್ಕಾರದ ನಿಲುವೂ ಒಂದು ದಿಕ್ಸೂಚಿಯಾಗಿರುತ್ತದೆ.

ಕೊನೆಗೊಂದು ಮಾತು...

ಸಂಸತ್ ಮೇಲೆ ದಾಳಿ ಮಾಡಿದವರಿಗೆ ಗಲ್ಲು ಶಿಕ್ಷೆ.. ಸಂಸತ್ತನ್ನೇ ಮಾರಿಕೊಂಡವರಿಗೆ ಯಾವ ಶಿಕ್ಷೆ?:

ಇಂದು ಸಂಸತ್ ಮೇಲೆ ದಾಳಿ ಮಾಡಿದವರಿಗೆ ಯಾವ ಕಾರಣಕ್ಕೂ ದಯಾಭಿಕ್ಷೆ ನೀಡಬಾರದೆಂದು ವಾದಿಸುತ್ತಿರುವವರಲ್ಲಿ ಬಿಜೆಪಿಗಳು ಪ್ರಮುಖರು. ಆದರೆ ಇವರ ಸರ್ಕಾರ ೧೯೯೬ರಲ್ಲಿ ೧೩ ದಿನಗಳ ಕಾಲ ಅಧಿಕಾರದಲ್ಲಿದ್ದಾಗ ಎನ್ರಾನ್ ಎಂಬ ಅಮೆರಿಕನ್ ಕಂಪನಿಗೆ ಭಾರತದ ಸಂಸತ್ ಭವನವನ್ನೂ ಸೇರಿದಂತೆ ಇಡೀ ಭಾರತದ ಸಂಪತ್ತನ್ನೇ ಅಡವಿಟ್ಟಿತ್ತು. ಈಗ ಕೇಳಬೇಕಿರುವ ಪ್ರಶ್ನೆಯೆಂದರೆ ಸಂಸತ್ತಿನ ಮೇಲೆ ದಾಳಿ ಮಾಡಿದವರಿಗೆ ಗಲ್ಲು ಶಿಕ್ಷೆ ಎಂದಾದರೆ ಸಂಸತ್ತನ್ನೇ ಮಾರಿಕೊಂಡವರಿಗೆ ಯಾವ ಶಿಕ್ಷೆ ..?? □

‘ಭಯೋತ್ಪಾದನೆ ವಿರುದ್ಧ ಯುದ್ಧ’ ಈಗಾಗಲೇ ಬಿಗಡಾಯಿಸಿರುವ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಿದೆ. ಮತಾಂಧತೆಯಿಂದ ಬಳಲುತ್ತಿರುವ ಬಹಳಷ್ಟು ಪೋಲೀಸರು ಈ ನೆಪವನ್ನು ಬಳಸಿಕೊಂಡು ಅಸಹನೆಯಿಂದ ನಡೆದುಕೊಳ್ಳುತ್ತಿರುವ ನಿದರ್ಶನಗಳಿವೆ. ಕೋಮುಗಲಭೆಗಳಲ್ಲಿ ಪೋಲೀಸರು ಮುಸ್ಲಿಮರನ್ನು ತಪ್ಪಿತಸ್ಥರನ್ನಾಗಿ ನೋಡುವ ವಿದ್ಯಮಾನ ಹೊಸದೇನಲ್ಲ. ೨೦೦೨ ರ ಗುಜರಾತ್ ಗಲಭೆ ಸಮಯದಲ್ಲಿ ಪೋಲೀಸರು ಕೂಡ ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ದೌರ್ಜನ್ಯ ನಡೆಸಿರುವುದು ಎಲ್ಲರಿಗೂ ತಿಳಿದ ಖಂಡನಾರ್ಹ ವಿಷಯ. ಆದರೆ ಇಂಥಹ ಘಟನೆಗಳು ದೇಶದ ವಿವಿಧೆಡೆ, ವಿವಿಧ ಸಮಯದಲ್ಲಿ ನಡೆದಿರುವುದೂ ಸತ್ಯ. ಕಾನೂನು ಪರಿಹಾರದ ವಿಷಯದಲ್ಲಿ ಸರ್ಕಾರವಾಗಲೀ, ನ್ಯಾಯಾಂಗವಾಗಲೀ ತುರ್ತಾಗಿ ಕ್ರಮ ಕೈಗೊಳ್ಳುವಲ್ಲಿ ಹಿಂದೆ ಬೀಳುತ್ತವೆ.

ಸಿದ್ಧಾರ್ಥ್ ವರದರಾಜನ್
ಅನು: ಸತ್ಯಪ್ರಕಾಶ್ ಎಂ.ಆರ್

ಕ್ಷೀಣಿಸುತ್ತಿರುವ ಮುಸ್ಲಿಮರ ಪ್ರಾತಿನಿಧ್ಯ

ಮುಸ್ಲಿಮರ ಸಾಮಾಜಿಕ-ಆರ್ಥಿಕ ಸ್ಥಾನಮಾನ ಕುರಿತು ನ್ಯಾಯಮೂರ್ತಿ ರಾಜೆಂದರ್ ಸಚಾರ್ ಸಮಿತಿ ಸದ್ಯದಲ್ಲೇ ವರದಿ ಸಲ್ಲಿಸಿದಾಗ ಮುಸ್ಲಿಂ ಸಮುದಾಯದ ಪ್ರತ್ಯೇಕತೆಯ ಸಂಪೂರ್ಣ ಆಯಾಮ ಎಲ್ಲರಿಗೂ ಸ್ಪಷ್ಟವಾಗಿ ಗೋಚರಿಸಲಿದೆ. ಮುಸ್ಲಿಮರ ಓಲೈಕೆಯ ಮೂಲಕ ರಾಜಕೀಯ ರಂಗದಲ್ಲಿ ತಮ್ಮ ಬೇಳೆ ಬೇಯಿಸಿಕೊಂಡವರಿಗೆ ಕೂಡ ವಿಷಯ ಸ್ಪಷ್ಟವಾಗಲಿದೆ.

ಈವರೆಗೆ ದೊರಕಿರುವ ದಾಖಲೆಗಳ ಪ್ರಕಾರ ೧೭%ರಷ್ಟು ‘ಪ್ರವೇಶ ತಿರಸ್ಕೃತ ಮುಸ್ಲಿಮರು’ ಸಮಾಜದ ಎಲ್ಲಾ ಕ್ಷೇತ್ರಗಳಿಗೆ ಪ್ರವೇಶಿಸುವಲ್ಲಿ ಸೋತಿದ್ದಾರೆ. ಆಡಳಿತ, ನ್ಯಾಯಾಂಗ, ಪೋಲೀಸ್ ಕ್ಷೇತ್ರಗಳಷ್ಟೇ ಅಲ್ಲದೆ ಖಾಸಗಿ ವಲಯದಲ್ಲಿಯೂ ಕೆಲವು ಕಾಣದ ಪಕ್ಷಪಾತಿ ಕೈಗಳ ಒತ್ತಡದ ಫಲವಾಗಿ ಮುಸ್ಲಿಮರಲ್ಲಿ ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆ ವೃದ್ಧಿಸಿ, ಈ ಸಮುದಾಯದ ‘ಮೀಸಲಾತಿ’ ಪ್ರಮಾಣ ೫%ರಿಂದ ೩%ಗೆ ಇಳಿಕೆ ಕಂಡಿದೆ. ಭಾರತೀಯ ಜನತಾ ಪಕ್ಷ ಮತ್ತು ಕೆಲವು ಮಾಧ್ಯಮ ಸಂಸ್ಥೆಗಳ ಒತ್ತಡದ ಪ್ರಚಾರದ ಫಲವಾಗಿ ಸಶಸ್ತ್ರ ಪಡೆಗಳಲ್ಲಿರುವ ಮುಸ್ಲಿಮರ ಕುರಿತ ಮಾಹಿತಿ ಸಚಾರ್ ಸಮಿತಿಗೆ ದೊರಕಲೇ ಇಲ್ಲ. ಆದರೆ ಸಶಸ್ತ್ರ ಪಡೆಗಳಲ್ಲಿ ಕೂಡ ೩% ಫಾರ್ಮುಲಾ ಚಾಲ್ತಿಯಲ್ಲಿರುವುದು ಸತ್ಯ

ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿಯೂ ಮುಸ್ಲಿಮರ ಪ್ರಾತಿನಿಧಿತ್ವ ಕಡಿಮೆ ಇದೆ. ಜತೆಗೆ ಈ ಸಮುದಾಯದ ಶಿಕ್ಷಣದಲ್ಲಿಯೂ ಗಂಭೀರವಾದ ಅಸಮಾನತೆ ತಾಂಡವವಾಡುತ್ತಿದೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಸ್ಲಿಂ ಮಕ್ಕಳ ದಾಖಲಾತಿ ಮತ್ತು ಉಳಿಕೆಯ ಪ್ರಮಾಣ ರಾಷ್ಟ್ರೀಯ ಶೇಕಡಾವಾರು ಪ್ರಮಾಣಕ್ಕಿಂತ ಕಡಿಮೆ ಇದೆ. ಈ ಅಸಮಾನತೆ ಕಾಲೇಜು ಮಟ್ಟದಲ್ಲಿಯೂ ಮುಂದುವರೆದು, ಕಡೆಗೆ ಉದ್ಯೋಗ ವಲಯದಲ್ಲಿಯೂ ಮುಂದುವರೆಯುತ್ತದೆ. ಸಾಮಾಜಿಕ-ಆರ್ಥಿಕ ಸ್ಥಾನಮಾನದ ಬಗ್ಗೆ ಲಭ್ಯವಿರುವ ಯಾವುದೇ ಸೂಚಕಗಳನ್ನು ತೆಗೆದುಕೊಂಡರೂ, ಮುಸ್ಲಿಮರು ರಾಷ್ಟ್ರೀಯ ಮಟ್ಟಕ್ಕಿಂತ ಕೆಳಗಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಪುರುಷರು ಮತ್ತು ಮಹಿಳೆಯರ ಬಗ್ಗೆ ಕೂಡ ಗಮನಹರಿಸಬಹುದು. ಲಭ್ಯ ಅಂಕಿ ಅಂಶಗಳ ಪ್ರಕಾರ ಅಸಮಾನತೆಯ ಪ್ರಮಾಣ ಕಡಿಮೆಯಾಗುತ್ತಿಲ್ಲ.

ಈ ಅಂಕಿಅಂಶಗಳಷ್ಟೇ ಅಲ್ಲದೆ, ಇತ್ತೀಚೆಗೆ ಬಹಳಷ್ಟು ನಗರಗಳಲ್ಲಿ ಕಂಡುಬರುತ್ತಿರುವ ವಿದ್ಯಮಾನ ಕೂಡ ಮುಸ್ಲಿಮರ ದಯನೀಯ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಡುತ್ತದೆ. ಉದಾಹರಣೆಗೆ ಕೆಲವು ಮೆಟ್ರೋಗಳಲ್ಲಿ “ಮುಸ್ಲಿಂ ಪ್ರದೇಶ”ಗಳಿಂದಾಚೆಗೆ



ಆಸ್ತಿ ಕೊಂಡುಕೊಳ್ಳುವುದಾಗಲೀ, ಬಾಡಿಗೆಗೆ ಮನೆ ಪಡೆದುಕೊಳ್ಳುವುದಾಗಲೀ ಮುಸ್ಲಿಮರಿಗೆ ಸಾಧ್ಯವೇ ಇಲ್ಲ. ಕೆಲವು ಪತ್ರಕರ್ತರಷ್ಟೇ ಅಲ್ಲದೆ, ಕೇಂದ್ರ ಮಂತ್ರಿ ಮಂಡಲದಲ್ಲಿರುವ ಮುಸ್ಲಿಮರೊಬ್ಬರು ದೆಹಲಿಯಲ್ಲಿ ಫ್ಲ್ಯಾಟ್ ಕೊಂಡುಕೊಳ್ಳಲು ತಮ್ಮ ಹಿಂದೂ ಸಹದ್ಯೋಗಿಗಳ ಸಹಾಯ ಪಡೆದ ನಿದರ್ಶನವಿದೆ. ಮುಂಬೈನಲ್ಲಂತೂ ಪರಿಸ್ಥಿತಿ ಇನ್ನೂ ಕಳಪೆಯಾಗಿದೆ. ಇಲ್ಲಿ ಬಹಳಷ್ಟು ಮುಸ್ಲಿಮರು ಸಾಲ ಪಡೆದುಕೊಳ್ಳುವಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಇದಿಷ್ಟೇ ಅಲ್ಲದೆ ಮುಸ್ಲಿಮರು ಪ್ರತಿ ಹಂತದಲ್ಲಿಯೂ ಸಂಶಯಾಸ್ಪದವಾಗಿ ನೋಡುವ ಅಧಿಕಾರಿಗಳನ್ನು ಎದುರಿಸಬೇಕಿದೆ. ರಾಜಕೀಯ ರಂಗದಲ್ಲಿಯೂ ಪರಿಸ್ಥಿತಿ ವಿಭಿನ್ನವಾಗೇನೂ ಇಲ್ಲ. ಕೇರಳ ರಾಜ್ಯವನ್ನು ಹೊರತುಪಡಿಸಿ ಉಳಿದೆಲ್ಲ ರಾಜ್ಯ ವಿಧಾನ ಸಭೆ ಹಾಗೂ ಲೋಕಸಭೆಯಲ್ಲಿ ಕೂಡ ಮುಸ್ಲಿಮರ ಪ್ರಾತಿನಿಧಿತ್ವ ಕಡಿಮೆ ಇದೆ ಎಂಬ ಅಂಶ ಇಕ್ಬಾಲ್ ಅನ್ಸಾರಿ ಅವರ ಇತ್ತೀಚಿನ 'ಭಾರತದಲ್ಲಿ ಮುಸ್ಲಿಮರ ರಾಜಕೀಯ ಪ್ರಾತಿನಿಧಿತ್ವ' ('Political Rere sentation of Muslims in India, ೧೯೫೨–೨೦೦೪') ಕೃತಿಯಲ್ಲಿ ಬೆಳಕಿಗೆ ಬಂದಿದೆ. ಮುಸ್ಲಿಮರ ಜನಸಂಖ್ಯೆಗನುಗುಣವಾಗಿ ಕೇವಲ ಅರ್ಧದಷ್ಟು ಮುಸ್ಲಿಂ ಲೋಕಸಭಾ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಮಾತ್ರ ಆಯ್ಕೆಯಾಗುತ್ತಾರೆ. ನಮ್ಮ ರಾಜಕೀಯ ಪಕ್ಷಗಳು ಸೂಕ್ತ ಸಂಖ್ಯೆಯ ಮುಸ್ಲಿಂ ಜನಪ್ರತಿನಿಧಿಗಳನ್ನು ಸೃಷ್ಟಿಸುವಲ್ಲಿ ವಿಫಲರಾಗುತ್ತಿರುವ ಹಿನ್ನೆಲೆಯಲ್ಲಿ, ಈ ಸ್ಥಾನಗಳನ್ನು ಮುಲ್ಲಾಗಳು, ಧಾರ್ಮಿಕ ಗುರುಗಳು ತುಂಬುತ್ತಿದ್ದಾರೆ.

'ಭಯೋತ್ಪಾದನೆ ವಿರುದ್ಧ ಯುದ್ಧ' ಈಗಾಗಲೇ ಬಿಗಡಾಯಿಸಿರುವ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಿದೆ. ಮತಾಂಧತೆಯಿಂದ ಬಳಲುತ್ತಿರುವ ಬಹಳಷ್ಟು ಪೊಲೀಸರು ಈ ನೆಪವನ್ನು ಬಳಸಿಕೊಂಡು ಅಸಹನೆಯಿಂದ ನಡೆದುಕೊಳ್ಳುತ್ತಿರುವ ನಿದರ್ಶನಗಳಿವೆ. ಕೋಮುಗಲಭೆಗಳಲ್ಲಿ ಪೊಲೀಸರು ಮುಸ್ಲಿಮರನ್ನು ತಪ್ಪಿತಸ್ಥರನ್ನಾಗಿ ನೋಡುವ ವಿದ್ಯಮಾನ ಹೊಸದೇನಲ್ಲ. ೨೦೦೨ರ ಗುಜರಾತ್ ಗಲಭೆ ಸಮಯದಲ್ಲಿ ಪೊಲೀಸರು ಕೂಡ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ದೌರ್ಜನ್ಯ ನಡೆಸಿರುವುದು ಎಲ್ಲರಿಗೂ ತಿಳಿದ ಖಂಡನಾರ್ಹ ವಿಷಯ. ಆದರೆ ಇಂಥಹ ಘಟನೆಗಳು ದೇಶದ ವಿವಿಧೆಡೆ, ವಿವಿಧ ಸಮಯದಲ್ಲಿ ನಡೆದಿರುವುದೂ ಸತ್ಯ. ಕಾನೂನು ಪರಿಹಾರದ ವಿಷಯದಲ್ಲಿ ಸರ್ಕಾರವಾಗಲೀ, ನ್ಯಾಯಾಂಗವಾಗಲೀ ತುರ್ತಾಗಿ ಕ್ರಮ ಕೈಗೊಳ್ಳುವಲ್ಲಿ ಹಿಂದೆ ಬೀಳುತ್ತವೆ. ಮುಂಬೈ ಸ್ಫೋಟದಂತಹ ಭಯೋತ್ಪಾದಕ ಅಪರಾಧ ಪ್ರಕರಣಗಳನ್ನು ನ್ಯಾಯಾಲಯ ಶೀಘ್ರವಾಗಿ ಇತ್ಯರ್ಥಗೊಳಿಸುವುದು ಸ್ವಾಗತಾರ್ಹ. ಆದರೆ ಇದೇ ವೇಗದಲ್ಲಿ ೧೯೯೨ ಮತ್ತು ೧೯೯೩ರ ಮುಸ್ಲಿಮರ ಹತ್ಯಾಕಾಂಡಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಇನ್ನೂ ಇತ್ಯರ್ಥಗೊಳಿಸಲಾಗಿಲ್ಲ. ಗಲಭೆಗಳಲ್ಲಿ ತಪ್ಪೆಸಗಿರುವ ಪೊಲೀಸರ ವಿರುದ್ಧ ಶ್ರೀ ಕೃಷ್ಣ ಆಯೋಗ ಮಾಡಿರುವ ಶಿಫಾರಸ್ಸುಗಳು ಕೂಡ ಅನುಷ್ಠಾನಗೊಂಡಿಲ್ಲ.

ಮಾಧ್ಯಮಗಳು ಕೂಡ ತಮ್ಮ ಜವಾಬ್ದಾರಿಯನ್ನು ಸೀಮಿತವಾಗಿ ನಿರ್ವಹಿಸಿದೆ ಎಂದರೆ ತಪ್ಪಿಲ್ಲ. ಮಾಧ್ಯಮಗಳ ಒಂದು ಗುಂಪು ಮುಸ್ಲಿಮರ ಪರವಾಗಿದ್ದರೆ ಮತ್ತೊಂದು ಗುಂಪು ಮುಸ್ಲಿಮರಿಗೆ ಸಂಬಂಧಿಸಿದ ಅನವಶ್ಯಕ ವಿಚಾರಗಳ ಬಗ್ಗೆ ಚರ್ಚೆಗಳನ್ನು ನಡೆಸುವುದಷ್ಟೇ ಅಲ್ಲದೆ, ಮುಸ್ಲಿಮರನ್ನು ಪ್ರತಿನಿಧಿಸದ, ಸಮುದಾಯದ ಸಾಮಾನ್ಯ ವ್ಯಕ್ತಿಗಳ ಹೇಳಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ

ಹಿಂದೆ ಅಮೆರಿಕದಲ್ಲಿ ಯೆಹೂದ್ಯರು ಯಾವಾಗಲೂ ಸುದ್ದಿಯಲ್ಲಿರುತ್ತಿದ್ದರು. ಈಗ ಭಾರತದಲ್ಲಿ ಕೂಡ ಮುಸ್ಲಿಮರನ್ನು ಅನಾಗರಿಕರನ್ನಾಗಿ ಅಥವಾ ಮತಾಂಧರನ್ನಾಗಿ ಬಿಂಬಿಸುವ ಯಾವುದೇ ಕಾರ್ಯಕ್ರಮದ ಟಿಆರ್‌ಪಿ ರೇಟಿಂಗ್ ಒಮ್ಮೆಲೆ ಗಗನಕ್ಕೇರುತ್ತದೆ. ಇಲ್ಲಿ ತಾರ್ಕಿಕ ವಾದಕ್ಕೆ ಅವಕಾಶವಿಲ್ಲ. ಇತ್ತೀಚೆಗೆ ಟಿವಿ ವಾಹಿನಿಯೊಂದು ಮುಸ್ಲಿಂ ಸಂಸತ್ ಸದಸ್ಯರೊಬ್ಬರನ್ನು ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವ ವಿಷಯ ಕುರಿತ ಚರ್ಚೆಗೆ ಆಹ್ವಾನಿಸಿದಾಗ, ಚರ್ಚೆಯಲ್ಲಿ ಭಾಗವಹಿಸಲು ಸಮ್ಮತಿಸಿದ ಇವರು, ಉದ್ದೇಶಿತ ಮುಸ್ಲಿಂ ಮೀಸಲಾತಿಯನ್ನು ವಿರೋಧಿಸುವುದಾಗಿ ಷರತ್ತು ಹಾಕಿದರು. ಟಿವಿ ವಾಹಿನಿಯ ವರದಿಗಾರ ಉದ್ದೇಶಿತ ಮೀಸಲಾತಿಯ ಪರವಾಗಿ ಮಾತನಾಡಲು ಮಾನ್ಯ ಸದಸ್ಯರನ್ನು ಓಲೈಸಿದ ಮೇಲೂ ಅವರು ಒಪ್ಪಿಗೆ ನೀಡದ ಕಾರಣ, ಅಂತಿಮವಾಗಿ ಟಿವಿ ವಾಹಿನಿ ಅವರಿಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ನೀಡಲಿಲ್ಲ. ಇತ್ತೀಚೆಗೆ ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಯೊಬ್ಬರು, 'ತಾಜ್ ಮಹಲ್‌ನಂತಹ ಅದ್ಭುತ ಕಲಾಕೃತಿಯನ್ನು ನಿರ್ಮಿಸಿದ ಕೈಗಳು ಮುಸ್ಲಿಮರದು.' ಮುಸ್ಲಿಮರು 'ತಪ್ಪಿತಸ್ಥ ಮನೋಭಾವ' ತೊರೆಯಬೇಕು ಎಂದು ಸಲಹೆ ನೀಡಿದರು.

ನೀಡುವ ಪರಿಪಾಠ ಬೆಳೆಸಿಕೊಂಡಿವೆ. ಉದಾಹರಣೆಗೆ ಮುಸ್ಲಿಮರ ಕೌಟುಂಬಿಕ ಕಲಹಗಳನ್ನು ಟೆಲಿವಿಷನ್‌ನಲ್ಲಿ ಬಿತ್ತರಿಸಿ, ಆ ಮೂಲಕ ಮುಸ್ಲಿಮರನ್ನು 'ಹಿಂದುಳಿದ ಸಮುದಾಯ'ದವರೆಂದು ಬಿಂಬಿಸುವುದನ್ನು ನಾವು ಇಲ್ಲಿ ಗಮನಿಸಬಹುದು.

ಹಿಂದೆ ಅಮೆರಿಕದಲ್ಲಿ ಯೆಹೂದ್ಯರು ಯಾವಾಗಲೂ ಸುದ್ದಿಯಲ್ಲಿರುತ್ತಿದ್ದರು. ಈಗ ಭಾರತದಲ್ಲಿ ಕೂಡ ಮುಸ್ಲಿಮರನ್ನು ಅನಾಗರಿಕರನ್ನಾಗಿ ಅಥವಾ ಮತಾಂಧರನ್ನಾಗಿ ಬಿಂಬಿಸುವ ಯಾವುದೇ ಕಾರ್ಯಕ್ರಮದ ಟಿಆರ್‌ಪಿ ರೇಟಿಂಗ್ ಒಮ್ಮೆಲೆ ಗಗನಕ್ಕೇರುತ್ತದೆ. ಇಲ್ಲಿ ತಾರ್ಕಿಕ ವಾದಕ್ಕೆ ಅವಕಾಶವಿಲ್ಲ. ಇತ್ತೀಚೆಗೆ ಟಿವಿ ವಾಹಿನಿಯೊಂದು ಮುಸ್ಲಿಂ ಸಂಸತ್ ಸದಸ್ಯರೊಬ್ಬರನ್ನು ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವ ವಿಷಯ ಕುರಿತ ಚರ್ಚೆಗೆ ಆಹ್ವಾನಿಸಿದಾಗ, ಚರ್ಚೆಯಲ್ಲಿ ಭಾಗವಹಿಸಲು ಸಮ್ಮತಿಸಿದ ಇವರು, ಉದ್ದೇಶಿತ ಮುಸ್ಲಿಂ ಮೀಸಲಾತಿಯನ್ನು ವಿರೋಧಿಸುವುದಾಗಿ ಷರತ್ತು ಹಾಕಿದರು. ಟಿವಿ ವಾಹಿನಿಯ ವರದಿಗಾರ ಉದ್ದೇಶಿತ ಮೀಸಲಾತಿಯ ಪರವಾಗಿ ಮಾತನಾಡಲು ಮಾನ್ಯ ಸದಸ್ಯರನ್ನು ಓಲೈಸಿದ ಮೇಲೂ ಅವರು ಒಪ್ಪಿಗೆ ನೀಡದ ಕಾರಣ, ಅಂತಿಮವಾಗಿ ಟಿವಿ ವಾಹಿನಿ ಅವರಿಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ನೀಡಲಿಲ್ಲ. ಇತ್ತೀಚೆಗೆ ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಯೊಬ್ಬರು, 'ತಾಜ್ ಮಹಲ್‌ನಂತಹ ಅದ್ಭುತ ಕಲಾಕೃತಿಯನ್ನು ನಿರ್ಮಿಸಿದ ಕೈಗಳು ಮುಸ್ಲಿಮರದು.' ಮುಸ್ಲಿಮರು 'ತಪ್ಪಿತಸ್ಥ ಮನೋಭಾವ' ತೊರೆಯಬೇಕು ಎಂದು ಸಲಹೆ ನೀಡಿದರು. ದಲಿತರು ತಮ್ಮ ಏಳ್ಗೆಗಾಗಿ "ಏನನ್ನೂ ಮಾಡದಿರುವುದನ್ನು' ಎತ್ತಿ ತೋರಿಸಲೂ ಹೆದರುವ ಮಂದಿ ಮುಸ್ಲಿಮರಲ್ಲಿ ಕಂಡುಬರುವ ಬಡತನ, ಮತ್ತು ಕಳಪೆ ಶಿಕ್ಷಣ ಮಟ್ಟಕ್ಕೆ ಮುಸ್ಲಿಮರೆಡೆಗೇ ಬೆಟ್ಟು ಮಾಡಿ ತೋರಿಸುತ್ತಾರೆ. ಒಟ್ಟಾರೆ ಶಿಕ್ಷಣ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸುವ ಬದಲು ಮುಸ್ಲಿಮರಿಗೆ ಪುಕ್ಕಟ್ಟೆ ಸಲಹೆಗಳನ್ನು ನೀಡಲು ಮಾತ್ರ ಈ ಮಂದಿ ಹಿಂಜರಿಯುವುದಿಲ್ಲ.

ಮೀಸಲಾತಿ ಬಲೆ

ಇಂತಹ ವಿಷಕಾರಿ ವಾತಾವರಣ ಮನೆಮಾಡಿರುವ ಹಿನ್ನೆಲೆಯಲ್ಲಿ ಮನಮೋಹನ್ ಸಿಂಗ್ ಸರ್ಕಾರ ಸಚಾರ್ ಸಮಿತಿ ವರದಿಗೆ ಸೂಕ್ತ ಪ್ರತಿಕ್ರಿಯೆ ನೀಡಬೇಕಿದೆ. ಸರ್ಕಾರ ವ್ಯವಸ್ಥೆಯಲ್ಲಿಯೇ ಅಂತರ್ಗತವಾಗಿರುವ ಅಸಮಾನತೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಸಮಸ್ಯೆಯನ್ನು ಪರಿಹರಿಸಲು ಸರ್ಕಾರಕ್ಕೆ ರಾಜಕೀಯ ಸ್ಥೈರ್ಯ ಬೇಕು. ಮುಸ್ಲಿಂರನ್ನು ಅಂಚಿಗೆ ದೂಡಿರುವ ಸಮಸ್ಯೆ ಎಷ್ಟು ಗಂಭೀರ ಸ್ವರೂಪದ್ದೆಂದರೆ, ಸಮಸ್ಯೆಯ ಸೂಕ್ತ ಪರಿಹಾರಕ್ಕೆ ಈಗ ಕಾಂಗ್ರೆಸ್ ಪಕ್ಷ, ತುರ್ತಾಗಿ ಬಿಜೆಪಿಯನ್ನು ಒಳಗೊಂಡಂತೆ ಇತರ ಪಕ್ಷಗಳ ಸಹಮತ ಪಡೆಯಬೇಕಿದೆ.

ರಾಜಕೀಯ ನೆಲೆಯಲ್ಲಿ ಹಾಗೂ ಅಸಮಾನತೆ ಸರಿದೂಗಿಸುವಲ್ಲಿ ಮೀಸಲಾತಿ ಪರಿಣಾಮಕಾರಿ ಪರಿಹಾರ ಎನಿಸಿಕೊಳ್ಳುವುದಿಲ್ಲ. ಮುಸ್ಲಿಂ ನಾಯಕರು ಮತ್ತು ಮುಸ್ಲಿಮರ ಪರವಾಗಿದ್ದೇವೆಂದು ಮಾತನಾಡುವ ಇತರರು, ಮೀಸಲಾತಿಯ ಬಲೆಗೆ ಬೀಳದಿದ್ದರೆ ಉತ್ತಮ. ೬೦ ವರ್ಷದಿಂದ ಜಾರಿಯಲ್ಲಿರುವ ಮೀಸಲಾತಿ ದಲಿತರ ಸ್ಥಾನಮಾನವನ್ನು ಉತ್ತಮಪಡಿಸುವಲ್ಲಿ ಸ್ವಲ್ಪಮಟ್ಟಿಗಿನ ಕೆಲಸ ಮಾಡಿರಬಹುದು. ಆದರೆ ದೇಶದಲ್ಲಿ ಈಗಲೂ ಕಂಡುಬರುವ ಜಾತಿ ಆಧಾರಿತ ತಾರತಮ್ಯದ ಮೂಲ ಕಾರಣಗಳನ್ನು ನಿರ್ಲಕ್ಷಿಸಲು ಸರ್ಕಾರ ಮತ್ತು ನಾಯಕರು ಮೀಸಲಾತಿಯನ್ನು ನೆಪವನ್ನಾಗಿಸಿಕೊಂಡಿರುವುದನ್ನು ನಾವು ಮರೆಯುವಂತಿಲ್ಲ.

"ಫಲಿತಾಂಶಗಳ ಸಮಾನತೆ" ಮತ್ತು "ಸಮಾನಾವಕಾಶ" ಪರಿಕಲ್ಪನೆಗಳನ್ನು ಸಮಗ್ರವಾಗಿ ಪರಿಗಣಿಸಬೇಕೆನ್ನುವುದು ವಿಶ್ವದಾದ್ಯಂತ ಸಮ್ಮತಿ ಪಡೆದ ವಿಚಾರ. "ಸಮಾನಾವಕಾಶ" ಪರಿಕಲ್ಪನೆಯಲ್ಲಿಯೂ ಕೂಡ ಔಪಚಾರಿಕ ಮತ್ತು ವಾಸ್ತವಿಕ ಅಸಮಾನತೆ ಎಂಬ ಆಯಾಮಗಳಿವೆ. ಜಾತಿ, ಧರ್ಮ, ಲಿಂಗ ಆಧಾರಿತ ಅಸಮಾನತೆಯನ್ನು ತೊಡೆದು ಹಾಕುವುದು "ಔಪಚಾರಿಕ ಸಮಾನತೆ." ಸ್ಥಳೀಯ ಸಂದರ್ಭಗಳಿಂದಾಗಿ ತಮ್ಮ ಪೋಷಕರಿಂದ ಬಳುವಳಿಯಾಗಿ ಪಡೆದ ಅಡೆತಡೆಗಳನ್ನು ಬದಿಗಿರಿಸಿ ಸಮಾನ ಪ್ರತಿಭೆ

(೧೬ನೇ ಪುಟಕ್ಕೆ)

ಕರಾವಳಿ ಕರ್ನಾಟಕದ ಕೋಮು ಸಂಘರ್ಷದ ಸುತ್ತ

ಡಾ॥ ವಿ.ಲಕ್ಷ್ಮೀನಾರಾಯಣ

ನಿರೀಕ್ಷೆಯಂತೆ ತನ್ನ ಕೋಮುವಾದಿ ಸ್ವರೂಪವನ್ನು ಹೊರಗೆಡಹುತ್ತಿರುವ ಸಮ್ಮಿಶ್ರ ಸರ್ಕಾರ, ಧರ್ಮನಿರಪೇಕ್ಷತೆಯ ಅರ್ಥವೇ ಗೊತ್ತಿಲ್ಲವೆಂದು ಪ್ರಮಾಣವಚನ ಸ್ವೀಕರಿಸಿದ ಕೂಡಲೇ ಘೋಷಿಸಿದ, ಕುಮಾರಸ್ವಾಮಿಯವರ ನೇತೃತ್ವದಲ್ಲಿ ಒಂದೇ ಬಾರಿಗೆ ಎರಡು ದೋಣಿಗಳಲ್ಲಿ ಕಾಲಿರಿಸಿ ಸಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ಜೆ.ಡಿ.ಎಸ್‌ನ ಸರ್ವೋಚ್ಛ ನಾಯಕ ಮಾಜಿ ಪ್ರಧಾನಿ ದೇವೇಗೌಡರ ಉಳಿಗಮಾನ್ಯ ಸಿದ್ಧಾಂತಗಳಿಗನುಗುಣವಾಗಿ ನಡೆಯುತ್ತಿರುವ ಈ ಸರ್ಕಾರದಲ್ಲಿ, ಭಾ.ಜ.ಪ ತನ್ನ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಕ್ರಮೇಣವಾಗಿ, ವ್ಯವಸ್ಥಿತವಾಗಿ ಜಾರಿಗೊಳಿಸುತ್ತಿದೆ. ಈ ನಿಟ್ಟಿನಲ್ಲಿ, ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿರುವ ಬಾಬಾಬುಡನ್‌ಗಿರಿಯಲ್ಲಿ, ಬ್ರಾಹ್ಮಣೀಯ ಆಗಮ ಶೈಲಿಯ ಪೂಜಾ ಕ್ರಮಗಳನ್ನು ಆಚರಿಸುವ ಮೂಲಕ ಮುಸ್ಲಿಂ ಸಮುದಾಯದಿಂದ ದತ್ತಪೀಠವನ್ನು ವಶಪಡಿಸಿಕೊಳ್ಳಲು ಭಾ.ಜ.ಪ ಯತ್ನಿಸುತ್ತಿದೆ.

ಇತ್ತೀಚಿನ ಕರ್ನಾಟಕದ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಉನ್ನತ ಮಟ್ಟದ ಭ್ರಷ್ಟಾಚಾರ, ಅತಿಯಾದ ಭಾಷಾಭಿಮಾನ, ಟಿಪ್ಪುಸುಲ್ತಾನ ಮತ್ತು ಪೂಜಾ ಸ್ಥಳಗಳ ಸುತ್ತ ವಿವಾದ ಮತ್ತು ಎಲ್ಲಕ್ಕಿಂತಲೂ ಗಂಭೀರವಾದ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ಕರಾಳ ರೂಪದ ಪ್ರದರ್ಶನ ಮುಖ್ಯವಾಗಿ ಗೋಚರಿಸುತ್ತದೆ. ನಿರೀಕ್ಷೆಯಂತೆ ತನ್ನ ಕೋಮುವಾದಿ ಸ್ವರೂಪವನ್ನು ಹೊರಗೆಡಹುತ್ತಿರುವ ಸಮ್ಮಿಶ್ರ ಸರ್ಕಾರ, ಧರ್ಮನಿರಪೇಕ್ಷತೆಯ ಅರ್ಥವೇ ಗೊತ್ತಿಲ್ಲವೆಂದು ಪ್ರಮಾಣವಚನ ಸ್ವೀಕರಿಸಿದ ಕೂಡಲೇ ಘೋಷಿಸಿದ, ಕುಮಾರಸ್ವಾಮಿಯವರ ನೇತೃತ್ವದಲ್ಲಿ ಒಂದೇ ಬಾರಿಗೆ ಎರಡು ದೋಣಿಗಳಲ್ಲಿ ಕಾಲಿರಿಸಿ ಸಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ಭಾಜಪ ವಿಧಾನ ಮಂಡಲ ಸದಸ್ಯ ಜನಾರ್ಧನ ರೆಡ್ಡಿಯವರ ಗಣಿ ಲಂಚ ಆರೋಪದಿಂದ ತಪ್ಪಿಸಿಕೊಳ್ಳಲು, ನ್ಯಾಯಾಂಗ ತನಿಖೆ ನಡೆಸಲು ನಿರ್ಧರಿಸಿರುವ ಮುಖ್ಯಮಂತ್ರಿಗಳಿಗೆ, ಈ ನ್ಯಾಯಾಂಗ ಸಮಿತಿ ಹಲ್ಲಿಲ್ಲದ ಹಾವೆಂದು ತಿಳಿದಿದೆ. ಜೆ.ಡಿ.ಎಸ್‌ನ ಸರ್ವೋಚ್ಛನಾಯಕ ಮಾಜಿ ಪ್ರಧಾನಿ ದೇವೇಗೌಡರ ಉಳಿಗಮಾನ್ಯ ಸಿದ್ಧಾಂತಗಳಿಗನುಗುಣವಾಗಿ ನಡೆಯುತ್ತಿರುವ ಈ ಸರ್ಕಾರದಲ್ಲಿ, ಭಾ.ಜ.ಪ ತನ್ನ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಕ್ರಮೇಣವಾಗಿ, ವ್ಯವಸ್ಥಿತವಾಗಿ ಜಾರಿಗೊಳಿಸುತ್ತಿದೆ. ಈ ನಿಟ್ಟಿನಲ್ಲಿ, ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿರುವ ಬಾಬಾಬುಡನ್ ಗಿರಿಯಲ್ಲಿ, ಬ್ರಾಹ್ಮಣೀಯ ಆಗಮ ಶೈಲಿಯ ಪೂಜಾ ಕ್ರಮಗಳನ್ನು ಆಚರಿಸುವ ಮೂಲಕ ಮುಸ್ಲಿಂ ಸಮುದಾಯದಿಂದ ದತ್ತಪೀಠವನ್ನು ವಶಪಡಿಸಿಕೊಳ್ಳಲು ಭಾ.ಜ.ಪ ಯತ್ನಿಸುತ್ತಿದೆ.

ಪಕ್ಷದ ಅಧ್ಯಕ್ಷ ಸದಾನಂದ ಗೌಡರ ನೇತೃತ್ವದಲ್ಲಿ ಬೃಹತ್ ದತ್ತಮಾಲಾ ಅಭಿಯಾನವನ್ನು ಸಂಘಟಿಸಿದ ಭಾಜಪ, ಜನತೆಯ ಸೂಕ್ಷ್ಮ ಭಾವನೆಗಳನ್ನು ಕೆರಳಿಸುವಲ್ಲಿ ಬಹುತೇಕ ಯಶಸ್ವಿಯಾಗಿದೆ. ವಾಸ್ತವವಾಗಿ ರಾಜ್ಯ ಉಚ್ಛನ್ಯಾಯಾಲಯವು, ದತ್ತಪೀಠದಲ್ಲಿ ೧೯೭೫ರ ಮುಂಚಿನ ಪೂಜಾ ವಿಧಿವಿಧಾನಗಳನ್ನು ಮಾತ್ರ ಆಚರಿಸಬೇಕೆಂದು ಆದೇಶಿಸಿತ್ತಾದರೂ ಸಂಘ ಪರಿವಾರವು ಅಕ್ಟೋಬರ್ ೧೧ರಂದು ಅಲ್ಲಿ ಕರ್ಪೂರದ ಹೋಮ ಮಾಡುವ ಮೂಲಕ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವುದೇ ಅಲ್ಲದೆ, ಭಜರಂಗಿಗಳು ಸಾಂಕೇತಿಕ ನಾಟಕೀಯ ಬಂಧನದ ನಂತರ ಬಿಡುಗಡೆಯನ್ನೂ ಹೊಂದಿದ್ದಾರೆ.

ಇದಕ್ಕೂ ಮುನ್ನ ರಾಜ್ಯದ ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿಯವರು, ಟಿಪ್ಪು ಸುಲ್ತಾನ್ ತನ್ನ ಆಡಳಿತಾವಧಿಯಲ್ಲಿ ಪರ್ಶಿಯನ್ ಭಾಷೆಯನ್ನು ಬೆಂಬಲಿಸುತ್ತಿದ್ದುದರಿಂದ, ಅವನು ಕನ್ನಡ ವಿರೋಧಿ, ಅವನ ಚರಿತ್ರೆಯನ್ನು ಪಠ್ಯ ಪುಸ್ತಕದಲ್ಲಿ ಸೇರಿಸಬಾರದೆಂದು, ಹೇಳಿಕೆ ನೀಡಿದ್ದು ಭಾರೀ ವಿವಾದ ಸೃಷ್ಟಿಸಿತ್ತು. ಅನೇಕ ಪ್ರಜಾತಾಂತ್ರಿಕ ಸಂಘಟನೆಗಳ ಮತ್ತು ಬುದ್ಧಿ ಜೀವಿಗಳ ಪ್ರತಿಭಟನೆಗೆ ಮಣಿದು ಕ್ಷಮೆ ಯಾಚಿಸಿದ ಸಚಿವರು ತಮ್ಮ ಹೇಳಿಕೆಯನ್ನು ಹಿಂದೆಗೆದುಕೊಳ್ಳಲಿಲ್ಲ. ಇತ್ತ ದೇವೇಗೌಡರು, ತನ್ನ ಆಡಳಿತವಧಿಯಲ್ಲಿ ಮೂವತ್ತಕ್ಕೂ ಹೆಚ್ಚು ಭಾಷೆಗಳನ್ನು ಬಳಸುತ್ತಿದ್ದ ಟಿಪ್ಪುವನ್ನು ಹುತಾತ್ಮನೆಂದು ಬಣ್ಣಿಸಿ, ಯಾವುದೇ ಸಚಿವರು ಅಥವಾ ಶಾಸಕರು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಮೀರಿ ಹೇಳಿಕೆ ನೀಡಬಾರದೆಂದು ಆದೇಶಿಸಿದ ಮೇಲೆ, ಏನೇ ಆದರೂ ಕುರ್ಚಿ ಬಿಡದ ಸರ್ಕಾರ ವಿವಾದವನ್ನು ತಣ್ಣಗಾಗಿಸಿತು. ಇದೇ ಹಿನ್ನೆಲೆಯಲ್ಲಿ ಅಕ್ಟೋಬರ್ ೪ ರಂದು ನಡೆದ ಕರ್ನಾಟಕ ಬಂದ್‌ನ ಯಶಸ್ಸು, ಕನ್ನಡ ಭಾಷಾಭಿಮಾನಿಗಳಿಗೆ ಯಶಸ್ಸಿನ ಮೆಟ್ಟಿಲಾಗಿತ್ತು. ಬೆಳಗಾವಿ ವಿವಾದದಲ್ಲಿ ಕೇಂದ್ರ ಸರ್ಕಾರ ಮಹಾರಾಷ್ಟ್ರ ಪರ ನಿಲುವು ತೆಗೆದುಕೊಂಡಿರುವುದರ ವಿರುದ್ಧ ನಡೆದ ಈ ಬಂದ್‌ನ ಯಶಸ್ಸು ಒಂದು ರೀತಿಯ ಅತಿ ಭಾಷಾ ಪ್ರೇಮ ಮತ್ತು ಉತ್ಕಟತೆಯ ಸನ್ನಿವೇಶವನ್ನು ಸೃಷ್ಟಿಸಿತ್ತು.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲೇ ಕರಾವಳಿ ಪ್ರದೇಶದಲ್ಲಿ ನಡೆದ ಕೋಮು ಗಲಭೆಗಳು, ಕರ್ನಾಟಕದ ರಾಜಕೀಯ ಭವಿಷ್ಯವನ್ನು ಸೂಚಿಸುತ್ತದೆ ಎಂದು ಹೇಳಬಹುದು. ಅಕ್ಟೋಬರ್ ಮೂರರಂದು ಬಂಟ್ವಾಳ, ಮಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಮುಸ್ಲಿಮರ ವಿರುದ್ಧ ನಡೆದ ದಾಳಿಗಳು, ಸಂಘ ಪರಿವಾರದ ವ್ಯವಸ್ಥಿತ ಸಂಚಾಗಿತ್ತೆಂದು ಹೇಳಬೇಕಿಲ್ಲ. ರಂಜಾನ್ ಸಮಯದಲ್ಲಿ ನಡೆದ ಈ ಗಲಭೆ, ಸಂಘರ್ಷಗಳಿಗೆ ಅನೇಕ ದಶಕಗಳಿಂದ ಹಿಂದು ಮತ್ತು ಮುಸ್ಲಿಂ ಸಮುದಾಯಗಳಲ್ಲಿ ಉಂಟಾಗಿರುವ ಸಮಾಜೋ ಆರ್ಥಿಕ ಬದಲಾವಣೆಗಳು ಕಾರಣೀಭೂತವಾಗಿವೆ.

ಎಲ್ಲಿಯೇ ಆದರೂ ಮುಸ್ಲಿಂ ಜನಾಂಗದಲ್ಲಿ ಕಂಡು ಬರುವ ಒಂದು ದೌರ್ಬಲ್ಯವೆಂದರೆ ಅವರಿಗೆ ಯಾವುದೇ ರಾಜಕೀಯ ಬೆಂಬಲ ಇರುವುದಿಲ್ಲ. ಮಂಗಳೂರಿನಲ್ಲೂ ಇದೇ ಪ್ರವೃತ್ತಿಯನ್ನು ಕಾಣಬಹುದು. ಒಂದೆಡೆ ಪ್ರಭುತ್ವದ ಬೆಂಬಲವಿಲ್ಲದೆ ಪರದಾಡುವ ಈ ಸಮುದಾಯಕ್ಕೆ ಪೋಲೀಸರಾಗಲೀ, ಮಾಧ್ಯಮವಾಗಲೀ ಎಂದಿಗೂ ಬೆಂಬಲಿಸುವುದಿಲ್ಲ. ಈ ಪ್ರದೇಶದಲ್ಲಿ ಮುಸ್ಲಿಂ ಲೀಗ್ ಬಲಹೀನವಾಗಿದ್ದು, ಕಾಂಗ್ರೆಸ್ ಮತ್ತು ಎಡ ಪಕ್ಷಗಳ ಪ್ರಾಬಲ್ಯವೂ ಕ್ಷೀಣಿಸಿದೆ.

ಹಾಗಾಗಿ ಮುಸ್ಲಿಂ ಸಮುದ್ಾಯದಲ್ಲಿ ಮೂಲಭೂತವಾದಿಗಳು ಬೇರೂರಲು ಸಾಧ್ಯವಾಗಿದೆ. ಹಿಂದೂ ಕೋಮುವಾದಿಗಳನ್ನು ಎದುರಿಸಲು ಮುಸ್ಲಿಂ ಕೋಮುವಾದವನ್ನು ಬಳಸುವ ಈ ತಂತ್ರದಿಂದ ಎರಡೂ ಗುಂಪುಗಳು ಪರಸ್ಪರ ಅವಲಂಬಿತರಾಗಿ ಬೆಳೆಯುತ್ತಿರುವುದು ದುರದೃಷ್ಟಕರ. ಈ ಕೋಮು ರಾಜಕೀಯದಿಂದಲೇ ರಾಜ್ಯದಲ್ಲಿ ತನ್ನ ಕದಂಬ ಬಾಹುಗಳನ್ನು ಚಾಚಿರುವ ಭಾಜಪ, ಸಂಘ ಪರಿವಾರದ ಮೂಲಕ ಈ ಕ್ಷೇತ್ರದಲ್ಲಿ ಸುಭದ್ರ ನೆಲೆ ಪಡೆದುಕೊಂಡಿರುವುದು ಅಚ್ಚರಿಯ ಅಂಶವೇನಲ್ಲ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ ೩ರಿಂದ ೭ರವರೆಗೆ ನಡೆದ ಕೋಮು ಸಂಘರ್ಷವನ್ನು ವಿಶ್ಲೇಷಿಸಬೇಕಾಗಿದೆ. ಅಕ್ಟೋಬರ್ ೩ರಂದು ಬಜಪೆ ನಗರದಲ್ಲಿ ನಡೆದ ಶಾರದ ಉತ್ಸವದಲ್ಲಿ ದುರ್ಗಾಪರಮೇಶ್ವರಿ ಸ್ತಬ್ದ ಚಿತ್ರಕ್ಕೆ, ಬಪ್ಪಬ್ಯಾರಿ ಪಂಗಡಕ್ಕೆ ಸೇರಿದ ಮುಸ್ಲಿಂ ಒಬ್ಬ ನಮಸ್ಕರಿಸುತ್ತಿರುವ ಆಕೃತಿ, ಕೆಲವು ಮುಸ್ಲಿಮರನ್ನು ರೊಚ್ಚಿಗೆಬ್ಬಿಸಿತ್ತು. ಅವರ ಆಕ್ಷೇಪಣೆಯ ಪರಿಣಾಮವಾಗಿ ಗೊಂದಲ ಉಂಟಾಗಿ, ಮೆರವಣಿಗೆಯನ್ನು ರದ್ದುಪಡಿಸಲಾಗಿತ್ತು. ಆದರೆ ಅದೇ ದಿನ ಲಾಠಿ ಹಿಡಿದ ಏಳು ಸಾವಿರ ಜನ ಸಂಘ ಪರವಾರದ ಕಾರ್ಯಕರ್ತರು ಇನ್ನೊಂದು ಮೆರವಣಿಗೆ ಸಂಘಟಿಸಿ, ಅದೇ ನೆಪದಲ್ಲಿ ಮುಸ್ಲಿಮರು ಮಸೀದಿ ಮತ್ತು ಮನೆ, ಅಂಗಡಿಗಳ ಮೇಲೆ ಧಾಳಿ ನಡೆಸಿ, ಅಪಾರ ಆಸ್ತಿ ಪಾಸ್ತಿ ಹಾನಿ ಮಾಡಿದರು. ಇದರಿಂದ ಕುಪಿತಗೊಂಡ ಸ್ಥಳೀಯ ಮುಸ್ಲಿಮರು ಆಯುಧಗಳನ್ನು ಹಿಡಿದು ಪ್ರತಿಧಾಳಿ ನಡೆಸಿದರು. ಕೇವಲ ೧೨ ಘಂಟೆಗಳೊಳಗೆ ಕರಾವಳಿಯ ವಿವಿಧ ಪ್ರದೇಶಗಳಿಗೆ ಕೋಮು ದಳ್ಳುರಿ ವ್ಯಾಪಿಸಿ, ಇದೇ ವೇಳೆಯಲ್ಲಿ ಬಹುಪಾಲು ಪೋಲೀಸ್ ಪಡೆಗಳನ್ನು, ಸಂಘ ಪರಿವಾರದ ಇನ್ನೊಂದು ಫ್ಯಾಸಿಸ್ಟ್ ಕಾರ್ಯ ಸೂಚಿಯನ್ನು ನಿಭಾಯಿಸಲು, ಬಾಬಾಬುಡನ್ ಗಿರಿಗೆ ನಿಯೋಜಿಸಲಾಗಿದ್ದರಿಂದ, ಪರಿಸ್ಥಿತಿ ನಿಯಂತ್ರಣಕ್ಕೆ ಬರುವಷ್ಟರಲ್ಲಿ ಸಾಕಷ್ಟು ಅನಾಹುತ ನಡೆದು ಹೋಗಿತ್ತು.

ಇನ್ನೊಂದು ಘಟನೆಯಲ್ಲಿ ಪೂಜಾರಿ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬ ಮುಸ್ಲಿಂ ವ್ಯಾಪಾರಿಗೆ ದನವನ್ನು ಮಾರಿದನೆಂದೂ, ಅದನ್ನು ಸಾಗಿಸುತ್ತಿದ್ದ ವಾಹನ ಓರ್ವ ಮಹಿಳೆಗೆ ಡಿಕ್ಕಿ ಹೊಡೆದು ಪರಾರಿಯಾಯಿತೆಂದೂ, ಆಕೆ ತೀವ್ರವಾಗಿ ಗಾಯಗೊಂಡಳೆಂದೂ ಸುದ್ದಿ ಹಬ್ಬಿಸಲಾಯಿತು. ಈ ವಾಹನವನ್ನು ಹಿಂಬಾಲಿಸಿದ, ಸಂಘ ಪರಿವಾರದ ಗೋರಕ್ಷಕ ದಳದ, ನವ ಸಾಂಸ್ಕೃತಿಕ ಆರಕ್ಷಕರನ್ನು ಕುದ್ರೋಳಿಯ ಕಸಾಯಿಖಾನೆಯ ಬಳಿ ಮುಸ್ಲಿಮರು ಕಲ್ಲು ತೂರಾಟದ ಮೂಲಕ ಎದುರಿಸಿದರು. ಏತನ್ಮಧ್ಯೆ ಹಿಂದೂ ಉಪಾಧ್ಯಾಯನೊಬ್ಬನನ್ನು ಮುಸ್ಲಿಮರು ಕೊಂದರೆಂಬ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಈ ಸುದ್ದಿಗಳಿಂದ ಹೊತ್ತಿಕೊಂಡ ಕೋಮುವಾದಿ ಸಂಘರ್ಷದ ಕಿಚ್ಚು, ಅಕ್ಟೋಬರ್ ೪ ರಂದು ಭಜರಂಗದಳ ಬಂದ್ ಕರೆ ನೀಡುವುದರಲ್ಲಿ ಪರ್ಯಾವಸಾನ ಹೊಂದಿತ್ತು. ಬಂದ್ ವೇಳೆಯಲ್ಲಿ ಇಬ್ಬರು ಮೋಟಾರ್ ಸೈಕಲ್ ಸವಾರರು ಮೌಲ್ವಿಯನ್ನು ಇರಿದು ಕೊಂದು, ಶಾಂತಿ ಸಭೆಯ ನಂತರ ಮುಸ್ಲಿಮರ ಮನೆಗಳ ಮೇಲೆ ದಾಳಿ ಆರಂಭಿಸಿದರು. ಕೇಸರಿ ಮುಖವಾಡ ಧರಿಸಿದ್ದ ಈ ಬೈಕ್ ಸವಾರರು ಬಂದ್ ಜಾರಿಗೊಳಿಸಲು ಜನರನ್ನು ಬೆದರಿಸಿದ್ದೇ ಅಲ್ಲದೆ ಪೋಲೀಸರ ನೆರವಿನಿಂದಲೇ ಮುಸ್ಲಿಮರ ಮನೆಗಳ ಮೇಲೆ ದಾಳಿ ನಡೆಸಲಾರಂಭಿಸಿದರು. ಈ ದಾಳಿಗಳಿಗೆ ಆಯುಧಗಳನ್ನು ಪೂರೈಸಲು ಜಿಲ್ಲಾ ಉಸ್ತುವಾರಿ ಸಚಿವ, ಭಾಜಪದ ನಾಗರಾಜ ಶೆಟ್ಟಿಯವರ ವಿದ್ಯಾ ಸಂಸ್ಥೆಗೆ ಸೇರಿದ ವಾಹನವನ್ನೇ ಮುಕ್ತವಾಗಿ ಉಪಯೋಗಿಸಲಾಗಿತ್ತು. ಇನ್ನೊಂದು ಘಟನೆಯಲ್ಲಿ ವಿದೇಶಕ್ಕೆ ಹೊರಡಲು ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್ ಮೂಲಕ ಹೋಗುತ್ತಿದ್ದ ಮುಸ್ಲಿಂ ವ್ಯಕ್ತಿಯನ್ನು ಹೊರಗೆಳೆದು, ಇರಿದು ಕೊಲ್ಲಲಾಯಿತು.

ಬಾಬಾಬುಡನ್‌ಗಿರಿಯಲ್ಲಿ ಕಾನೂನು ಉಲ್ಲಂಘಿಸಲೆತ್ನಿಸಿದ ಹಿಂದೂಸೇನೆಯ ನಾಯಕ ಪ್ರಮೋದ್ ಮುತಾಲಿಕ್‌ನನ್ನು ಪೋಲೀಸರು ಬಂಧಿಸಿದರು ಎಂಬ ಕಾರಣಕ್ಕೆ ಹಿಂದೂ ಸೇನೆ ಅಕ್ಟೋಬರ್ ೬ ರಂದು ಕರಾವಳಿ ಬಂದ್ ಕರೆ ನೀಡಿತು. ಆ ದಿನವೂ ಲೂಟಿ, ಬೆಂಕಿ ಹಚ್ಚುವುದು, ಕಲ್ಲು ತೂರಾಟ, ರಸ್ತೆ ತಡೆ ಮುಂದುವರೆಯಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೋಲೀಸರು ಅಕ್ಟೋಬರ್ ೮ ರಂದು ಕರ್ಫ್ಯೂ ವಿಧಿಸಿದ ನಂತರ, ಪರಿ ಸ್ಥಿತಿ ಹತೋಟಿಗೆ ಬಂದು ಜನರಿಗೆ ಚಾರಿತ್ರಿಕವಾಗಿ ಕರಾವಳಿ ಪ್ರದೇಶ ಅನೇಕ ಧರ್ಮಗಳ, ಭಾಷೆಗಳ, ಸಮಾಜೋ ಸಾಂಸ್ಕೃತಿಕ ಒಡನಾಟಗಳ ಸಂಗಮ ಸ್ಥಳವಾಗಿದೆ. ಕ್ರಿಶ್ಚಿಯನ್ ಸಂಸ್ಥೆಗಳ ಶೈಕ್ಷಣಿಕ ಕೊಡುಗೆಯಿಂದಾಗಿ ಸಮಾ ಜದ ಎಲ್ಲಾ ಸ್ತರಗಳಲ್ಲಿ ಸಾಕ್ಷರಣೆ ಮತ್ತು ಶಿಕ್ಷಣ ಮಟ್ಟ ಹೆಚ್ಚಾಗಿದೆ.

ಇತ್ತ ಬಾಬಾಬುಡನ್‌ಗಿರಿಯಲ್ಲಿ ಕಾನೂನು ಉಲ್ಲಂಘಿಸಲೆತ್ನಿಸಿದ ಹಿಂದೂಸೇನೆಯ ನಾಯಕ ಪ್ರಮೋದ್ ಮುತಾಲಿಕ್‌ನನ್ನು ಪೋಲೀಸರು ಬಂಧಿಸಿದರು ಎಂಬ ಕಾರಣಕ್ಕೆ ಹಿಂದೂ ಸೇನೆ ಅಕ್ಟೋಬರ್ ೬ ರಂದು ಕರಾವಳಿ ಬಂದ್ ಕರೆ ನೀಡಿತು. ಆ ದಿನವೂ ಲೂಟಿ, ಬೆಂಕಿ ಹಚ್ಚುವುದು, ಕಲ್ಲು ತೂರಾಟ, ರಸ್ತೆ ತಡೆ ಮುಂದುವರೆಯಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೋಲೀಸರು ಅಕ್ಟೋಬರ್ ೮ ರಂದು ಕರ್ಫ್ಯೂ ವಿಧಿಸಿದ ನಂತರ, ಪರಿಸ್ಥಿತಿ ಹತೋಟಿಗೆ ಬಂದು ಜನರಿಗೆ ಚಾರಿತ್ರಿಕವಾಗಿ ಕರಾವಳಿ ಪ್ರದೇಶ ಅನೇಕ ಧರ್ಮಗಳ, ಭಾಷೆಗಳ, ಸಮಾಜೋ ಸಾಂಸ್ಕೃತಿಕ ಒಡನಾಟಗಳ ಸಂಗಮ ಸ್ಥಳವಾಗಿದೆ. ಕ್ರಿಶ್ಚಿಯನ್ ಸಂಸ್ಥೆಗಳ ಶೈಕ್ಷಣಿಕ ಕೊಡುಗೆಯಿಂದಾಗಿ ಸಮಾಜದ ಎಲ್ಲಾ ಸ್ತರಗಳಲ್ಲಿ ಸಾಕ್ಷರಣೆ ಮತ್ತು ಶಿಕ್ಷಣ ಮಟ್ಟ ಹೆಚ್ಚಾಗಿದೆ. ಇಲ್ಲಿ ಬ್ಯಾಂಕ್, ಮೀನುಗಾರಿಕೆ, ಗೋಡಂಬಿ ಬೆಳೆ ಮತ್ತು ಹೆಂಚಿನ ಕಾರ್ಖಾನೆಗಳು ಹೆಚ್ಚು ಪ್ರಬುದ್ಧವಾಗಿದ್ದರೆ, ವೈದ್ಯಕೀಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಕೊಡುಗೆ ನೀಡಿವೆ. ದೇವರಾಜ ಅರಸುರವರ ಭೂಸುಧಾರಣೆಗಳು ಇಲ್ಲಿ ಯಶಸ್ವಿಯಾಗಿ ಜಾರಿಗೊಂಡಿರುವುದರಿಂದ, ಮಧ್ಯಮ ಜಾತಿಗಳಾದ ಪೂಜಾರಿ ಮುಂತಾದ ಗೇಣಿದಾರ ಸಮುದಾಯಗಳು ಸಬಲೀಕರಣಗೊಂಡಿವೆ. ಇನ್ನೊಂದೆಡೆ ಭೂಸುಧಾರಣೆಗಳಿಂದ ಕೃಷಿ ಕಾರ್ಮಿಕರು ಯಾವುದೇ ಫಲ ಪಡೆಯದಿದ್ದರೂ ಇಲ್ಲಿ ಅವರಿಗೆ ಅತಿ ಹೆಚ್ಚಿನ ಕೂಲಿ ನೀಡಲಾಗುತ್ತಿದೆ. ಇದರಿಂದ ರಾಜ್ಯದ ಇತರ ಬರಪೀಡಿತ ಜಿಲ್ಲೆಗಳಿಂದ ಹೆಚ್ಚು ಹೆಚ್ಚು ಜನ ಕರಾವಳಿಗೆ ವಲಸೆ ಬರಲಾರಂಭಿಸಿದ್ದಾರೆ.

ಇಲ್ಲಿ ಚಾರಿತ್ರಿಕವಾಗಿ ಬೇರು ಬಿಟ್ಟಿರುವ ಎರಡು ಸಮುದಾಯಗಳೆಂದರೆ ಮೀನುಗಾರರಾದ ಮೊಗವೀರರು ಮತ್ತು ಮೀನುಗಳನ್ನು ಕೊಂಡು ವ್ಯಾಪಾರ ನಡೆಸುವ ಬ್ಯಾರಿ ಸಮುದಾಯದ ಮುಸ್ಲಿಮರು. ಈ ಎರಡೂ ಕೋಮುಗಳ ನಡುವಿನ ಆರ್ಥಿಕ ಸಂಘರ್ಷಗಳನ್ನು ಸಂಘ ಪರಿವಾರ ತನ್ನ ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಂಡು, ಮುಂಬೈನಿಂದ ಮಾಫಿಯಾಗಳ ಸಹಾಯದಿಂದ, ಪ್ರಮುಖವಾಗಿ ಬಂಟ್ಸ್ ಮತ್ತು ಪೂಜಾರಿ ಸಮುದಾಯಗಳ ಕ್ರಿಮಿನಲ್ ಶಕ್ತಿಗಳ ನೆರವಿನಿಂದ, ಕರಾವಳಿಯ ಕೋಮುವಾದೀಕರಣಕ್ಕೆ ಬುನಾದಿ ಹಾಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಿಂದೂ ಮೂಲಭೂತವಾದಿಗಳು, ಪರಂಪರಾನುಗತವಾಗಿ ನಡೆದುಬಂದಿರುವ ಹಿಂದೂ-ಮುಸ್ಲಿಂ ಸಮುದಾಯಗಳ ಸಾಮಾನ್ಯ ಸಾಂಸ್ಕೃತಿಕ-ಧಾರ್ಮಿಕ ಆಚರಣೆಗಳನ್ನು ನಾಶಮಾಡಲು ಯತ್ನಿಸುತ್ತಿದ್ದಾರೆ. ಮುಸ್ಲಿಂ ಸಂತರ ನೆನಪಲ್ಲಿ ನಡೆಸುವ ಉರುಸ್ ವಿರುದ್ಧ ಪ್ರಚಾರ ಮಾಡುವ ಮೂಲಕ, ಉರುಸ್‌ಗೆ ಭೇಟಿ ನೀಡುವ ಹಿಂದೂಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದೂ ಮಹಿಳೆಯರ ಮೇಲೆ ನಿಗಾ ಇಡುವುದನ್ನೇ ತಮ್ಮ ಕಾರ್ಯಕ್ರಮವನ್ನಾಗಿ ಮಾಡಿಕೊಂಡಿರುವ ಭಜರಂಗದಳ, ಇತ್ತೀಚೆಗೆ ಮುಸ್ಲಿಂ ಸಹೋದ್ಯೋಗಿಗಳೊಡನೆ ಪಿಕ್‌ನಿಕ್ ಹೋಗಿದ್ದ ಹಿಂದೂ ಮಹಿಳೆಯರ ಮೇಲೆ ಧಾಳಿ ಮಾಡಿದ್ದಾರೆ.

ಹಿಂದು ಮತ್ತು ಮುಸ್ಲಿಂ ಮೂಲಭೂತವಾದಿಗಳೂ ಸಹ ಚಾರಿತ್ರಿಕವಾಗಿ ಕೆನರಾದಲ್ಲಿ ಬೇರೂರಲು ಕರಾವಳಿ ಪ್ರದೇಶದ ಈ ಸಂಘರ್ಷಪೂರ್ಣ ಸಂಬಂಧಗಳು ಅನುಕೂಲವಾಗಿವೆ. ತಳಮಟ್ಟದಲ್ಲೂ ಜನರನ್ನು ಧರ್ಮದ ಆಧಾರದ ಮೇಲೆ ಒಡೆಯುವ ಸಂಚಿನಲ್ಲಿ ಸಫಲರಾಗಿರುವ ಮೂಲಭೂತವಾದಿಗಳು, ಇಲ್ಲಿನ ಉನ್ನತ ಜೀವನ ಮಟ್ಟ, ಕೊಲ್ಲಿಯಿಂದ ಹರಿದು ಬರುವ ಹಣದ ಹೊಳೆ, ದುಡಿಯುವ ಜನರ ವಲಸೆ ಇತರ ಬೃಹತ್ ನಗರಗಳಲ್ಲಿ ಹೋಟೆಲ್, ಸಣ್ಣ ವ್ಯಾಪಾರ ಮತ್ತು ಇತರ ಕೆಲಸಗಳಿಂದ ಹರಿದು ಬರುವ ಹಣ, ಇವೆಲ್ಲವನ್ನೂ ಉಪಯೋಗಿಸಿಕೊಂಡು, ತಮ್ಮ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಕರ್ನಾಟಕದ ಇತರೆಡೆಯ ಮುಸ್ಲಿಮರಂತೆ ಕರಾವಳಿಯ ಮುಸ್ಲಿಮರು ತೀರ ಬಡತನ ಅಥವಾ ಭೂಹೀನತೆಯಿಂದ ಪರದಾಡುತ್ತಿಲ್ಲ. ತಮ್ಮ ಕುಶಲ ಕರ್ಮಿಕಾಯಕ ಮತ್ತು ವ್ಯಾಪಾರದಿಂದ ಹಿಂದೂ ವ್ಯಾಪಾರಿಗಳ, ಮುಖ್ಯವಾಗಿ ಕೊಂಕಣಿಗಳ, ಅಧಿಪತ್ಯಕ್ಕೆ ಸವಾಲೆಸೆದಿರುವುದರಿಂದ, ಎರಡೂ ವ್ಯಾಪಾರಿ ಸಮುದಾಯಗಳ ನಡುವೆ ಪೈಪೋಟಿಗಳೇ ಕೋಮುವಾದದ ಮೂಲವಾಗಿ ಪರಿಣಮಿಸಿದೆ.

ಕರಾವಳಿಯಲ್ಲಿ ಮುಸ್ಲಿಂ ವಿರೋಧಿ ಕೋಮುಗಲಭೆಗಳ ಕುಖ್ಯಾತ ಇತಿಹಾಸವೇ ಕಂಡುಬರುತ್ತದೆ. ೧೯೬೮ ರಲ್ಲಿ ಮುಸ್ಲಿಂ ಮತ್ತು ಮೊಗವೀರರ ನಡುವೆ, ವಾರಗಟ್ಟಲೆ ನಡೆದ ಘರ್ಷಣೆಯಲ್ಲಿ ಅನೇಕ ಜನ ಗೋಲಿಬಾರ್‌ನಲ್ಲಿ ಮೃತಪಟ್ಟಿದ್ದರು. ೧೯೭೬ ರಲ್ಲಿ ಕಕ್ಕಡಾ

ಎಂಬಲ್ಲಿ ಇಸ್ಮಾಯಿಲ್ ಎಂಬಾತನನ್ನು ಅಪಹರಿಸಿ ಕೊಲ್ಲಲಾಗಿತ್ತು. ಇದರ ಪರಿಣಾಮವಾಗಿ ನಡೆದ ಕೋಮುಗಲಭೆಗಳಲ್ಲಿ ಅನೇಕ ಜನ ಮೃತಪಟ್ಟಿದ್ದರು. ಅದೇ ವರ್ಷ ಪ್ರೇಮ್‌ನಾಥ್ ಎಂಬ ಭಾಜಪ ಕಾರ್ಯಕರ್ತನನ್ನು ಕೊಂದದ್ದರಿಂದ ಗಲಭೆ ಏರ್ಪಟ್ಟಿತ್ತು. ೧೯೯೨ ರಲ್ಲಿ ಅಯೋಧ್ಯೆ ಗಲಭೆಗಳ ಹಿನ್ನೆಲೆಯಲ್ಲಿ ಕರ್ಫ್ಯೂ ಹೇರಲಾಗಿತ್ತು. ೧೯೯೮ ರ ಜನವರಿಯಲ್ಲಿ ಮಿಲಿಟರಿ ಅಶ್ರಾಫ್ ಎಂಬ ಯುವಕ ಸೌಮ್ಯ ಎಂಬ ಯುವತಿಯನ್ನು ಅಪಹರಿಸಿದ ಹಿನ್ನೆಲೆಯಲ್ಲಿ ಕೋಮು ಗಲಭೆ ಉಂಟಾಗಿತ್ತು. ೧೯೯೮-೯೯ ರಲ್ಲಿ ಹಿಂದೂ ಯುವತಿಯೊಬ್ಬಳನ್ನು ಮುಸ್ಲಿಂ ಯುವಕ ಚುಡಾಯಿಸಿದ ಹಿನ್ನೆಲೆಯಲ್ಲಿ ನಡೆದ ತೀವ್ರತರವಾದ ಗಲಭೆಗಳಲ್ಲಿ ಸೂರತ್ಕಲ್‌ನಲ್ಲಿ ಮುಸ್ಲಿಂ ಸಮುದಾಯದ ಮೇಲೆ ಮಾರಣಾಂತಿಕ ದಾಳಿ ನಡೆದು, ೧೨ ಜನ ಮೃತಪಟ್ಟಿದ್ದರು. ನಿರಾಳವಾಯಿತು. ಈ ಮತೀಯ ಗಲಭೆಗಳಲ್ಲಿ ಇಬ್ಬರು ಸಾವಿಗೀಡಾದರೆ, ಸುಳ್ಯಕ್ಕೆ ಹೋಗಿದ್ದ ಅಬ್ದುಲ್ ಗಫೂರ್ ಎಂಬ ಮೌಲ್ವಿಯನ್ನು ಬಿಜೈಸ ಮಸೀದಿಯಲ್ಲಿ ಇರಿದುಕೊಲ್ಲಲಾಯಿತು. ಬಂಟ್ವಾಳದ ಬೋಳಿಯಾರ್‌ನಲ್ಲಿ ಆಂಬ್ಯುಲೆನ್ಸ್ ಮೇಲೆ ದಾಳಿ ಮಾಡಿ ಇಬ್ರಾಹಿಂ ಎಂಬಾತನನ್ನು ಇರಿದು ಕೊಲ್ಲಲಾಯಿತು. ನಾಲ್ವರಿಗೆ ತೀವ್ರ ಗಾಯಗಳಾಗಿವೆ. ಈ ಗಲಭೆಗೆ ಸಂಬಂಧಿಸಿದಂತೆ ೫೦ ಜನರನ್ನು ದಸ್ತಗಿರಿ ಮಾಡಲಾಗಿದ್ದು, ಅವರಲ್ಲಿ ಬಹುಪಾಲು ಮುಸ್ಲಿಮರೇ ಆಗಿದ್ದಾರೆ. ಲಕ್ಷಾಂತರ ರೂಗಳ ಆಸ್ತಿ ಪಾಸ್ತಿ ನಷ್ಟವಾಗಿದ್ದು, ಕೋಟ್ಯಂತರ ರೂಗಳ ವ್ಯಾಪಾರ ವಹಿವಾಟು ನಷ್ಟವಾಗಿದೆ.

ಮುಖ್ಯಮಂತ್ರಿ ಕುಮಾರ ಸ್ವಾಮಿಯವರು, ಉಪ ಮುಖ್ಯ ಮಂತ್ರಿ ಯಡಿಯೂರಪ್ಪನವರ ಜೊತೆ ಸೇರಿ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದರು. ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಯ ಅವಶ್ಯಕತೆಯೇ ಇಲ್ಲವೆಂದು ಘೋಷಿಸಿದರೆ, ಯಡಿಯೂರಪ್ಪನವರು ಈ ಗಲಭೆಗಳಿಗೂ ಭಜರಂಗದಳಕ್ಕೂ ಸಂಬಂಧವೇ ಇಲ್ಲವೆಂದು ಸಾರಿದರು. ಆದರೆ ಗೃಹ ಸಚಿವ ಎಂ.ಪಿ. ಪ್ರಕಾಶ್ ಇಡೀ ಗಲಭೆಗಳಿಗೆ ಭಜರಂಗದಳ, ಶ್ರೀರಾಮಸೇನೆ ಮತ್ತು ಸಿಮಿ ಸಂಘಟನೆಗಳೇ ಕಾರಣ ಎಂದು ಹೇಳಿಕೆ ನೀಡಿದ್ದಾರೆ. ಜೆ.ಡಿ.ಎಸ್.ನ ಜಿಲ್ಲಾಧ್ಯಕ್ಷ ವಸಂತಬಂಗೇರ ಇಡೀ ಪ್ರಕರಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ನಾಗರಾಜಶೆಟ್ಟಿಯೇ ಕಾರಣ ಎಂದು ಹೇಳುವ ಮೂಲಕ ಸರ್ಕಾರೀ ವಲಯಗಳಲ್ಲಿ ಸಂಚಲನ ಮೂಡಿಸಿದರೂ, ದಿನಕ್ಕೊಂದು ನಿಲುವು ವ್ಯಕ್ತಪಡಿಸುತ್ತಿರುವ ಸರ್ಕಾರ ತನ್ನ ಎಡಬಿಡಂಗಿತನ ಪ್ರದರ್ಶಿಸುತ್ತಿದೆ. ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ, ಬಂದ್ ಸಂದರ್ಭದಲ್ಲಿ ಉಂಟಾಗುವ ನಷ್ಟಗಳಿಗೆ, ಸಂಘಟಕರೇ ಹೊಣೆಯಾಗಬೇಕೆಂದು ಹೇಳಿದೆ. ಅದರಂತೆ ಭಜರಂಗದಳ, ಶ್ರೀರಾಮ ಸೇನೆಯ ವಿರುದ್ಧ ದಂಡ ವಿಧಿಸಲು ಪ್ರಗತಿಪರ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸುತ್ತಿವೆ. ಸಿ.ಬಿ.ಐ ತನಿಖೆ ಮಾಡಬೇಕೆಂಬ ಕಾಂಗ್ರೆಸ್‌ನ ಆಗ್ರಹವನ್ನು ತಿರಸ್ಕರಿಸಿರುವ ಮುಖ್ಯಮಂತ್ರಿಗಳು ಬಂದ್ ಕರೆ ನೀಡಿದವರೇ ಬೇರೆ, ಗಲಭೆ ಮಾಡಿದವರೇ ಬೇರೆ ಎಂದು ಹೇಳುವ ಮೂಲಕ ಇನ್ನಷ್ಟು ಗೊಂದಲ ಮೂಡಿಸಿದ್ದಾರೆ.

ಕರ್ನಾಟಕದ ಕರಾವಳಿಯಲ್ಲಿ ಮತೀಯ ಮೂಲಭೂತವಾದ ಮತ್ತು ಕೋಮುವಾದಿ ಫ್ಯಾಸಿಸಂ ಜೊತೆ ಜೊತೆಯಾಗಿಯೇ ಬೆಳೆದಿರುವುದು ಸ್ಪಷ್ಟವಾಗಿದೆ. ವ್ಯಾಪಾರದಲ್ಲಿನ ಮಾರುಕಟ್ಟೆ ಪೈಪೋಟಿಯನ್ನಾಧರಿಸಿ, ಸಮುದಾಯಗಳನ್ನು ವ್ಯವಸ್ಥಿತವಾಗಿ ಕೋಮುವಾದದ ವಿಷವರ್ತುಲದಲ್ಲಿ ಸಿಲುಕಿಸಲಾಗಿದೆ. ಆರ್ಥಿಕವಾಗಿ ಸಬಲೀಕರಣಗೊಂಡಿರುವ ಮುಸ್ಲಿಂ ಸಮುದಾಯಕ್ಕೆ ರಾಜಕೀಯವಾದ ಅಥವಾ ಪ್ರಭುತ್ವದ ಬೆಂಬಲವಿಲ್ಲದಿರುವುದು, ಬಂಡವಾಳಶಾಹಿಯಲ್ಲಿನ ಪೈಪೋಟಿಯೇ, ಮೂಲಭೂತವಾದದ ನೆಲೆಯಾಗಿ ಮಾರ್ಪಟ್ಟಿರುವುದು ಇಲ್ಲಿನ ವಿಶೇಷ. ಈ ವೈರುಧ್ಯದಿಂದಾಗಿ ಮುಸ್ಲಿಂ ಸಮುದಾಯ ಹೆಚ್ಚಿನ ನಷ್ಟ ಅನುಭವಿಸಿದೆ ಎಂದು ಹೇಳಬಹುದು. ಸೆಕ್ಯುಲಾರ್ ನಾಯಕತ್ವದ ಕೊರತೆ ಇಲ್ಲಿನ ಮುಸ್ಲಿಂ ಸಮುದಾಯವನ್ನು ಮೂಲಭೂತವಾದಿಗಳ ಬಲೆಗೆ ಸಿಲುಕಿಸಿದೆ. ೧೯೭೦ರ ದಶಕದಲ್ಲಿ ಪ್ರಬಲವಾಗಿದ್ದ ಎಡ ಪಂಥೀಯ ಮತ್ತು ಕಾರ್ಮಿಕ ಚಳುವಳಿ ಇಂದು ಕ್ಷೀಣಿಸಿದ್ದು, ದಲಿತ ಮತ್ತು ರೈತ ಸಂಘಟನೆಗಳು ಈ ಪ್ರದೇಶದಲ್ಲಿ ಬೇರೂರಲು ವಿಫಲವಾಗಿವೆ. ಇದರಿಂದಾಗಿ ಕೋಮುವಾದಿ ಶಕ್ತಿಗಳು ಕರಾವಳಿ ಸಮಾಜದಲ್ಲಿ ತಳಮಟ್ಟದಿಂದಲೇ ನಿಯಂತ್ರಣ ಸಾಧಿಸುವಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ. ಎಡ ಶಕ್ತಿಗಳ ಪುನರುತ್ಥಾನ ಮತ್ತು ಪ್ರಾಮಾಣಿಕ ಸೆಕ್ಯುಲರ್ ಸಂಘಟನೆಗಳ ಪುನರುಜ್ಜೀವನವೇ ಕರಾವಳಿ ಕರ್ನಾಟಕದಲ್ಲಿ ಶಾಂತಿ ಸೌಹಾರ್ದತೆಯನ್ನು ರಕ್ಷಿಸಿ, ಕೋಮುವಾದಿಗಳನ್ನು, ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸಬಹುದು. □

ಕ್ಷೀಣಿಸುತ್ತಿರುವ

ಮುಸ್ಲಿಮರ ಪ್ರಾತಿನಿಧ್ಯ

(೧೩ನೇ ಪುಟದಿಂದ)

ಹೊಂದಿರುವ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸುವುದು "ವಾಸ್ತವಿಕ ಸಮಾನತೆ." ಭಾರತ ನೆಪಮಾತ್ರಕ್ಕೆ ಮೀಸಲಾತಿಯ ಮೂಲಕ 'ಫಲಿತಾಂಶಗಳ ಸಮಾನತೆ'ಗೆ ಅವಕಾಶ ಕಲ್ಪಿಸಿದೆ. ಆದರೆ "ಸಮಾನಾವಕಾಶ" ಕಲ್ಪಿಸುವ ನಿಟ್ಟಿನಲ್ಲಿ ಹಣಕಾಸಿನ ಯೋಜನೆಗಳನ್ನು ರೂಪಿಸುವಲ್ಲಿ ನಿರ್ಲಕ್ಷ್ಯ ತಳೆದಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹವಾಗಿ ಕಂಡುಬರುತ್ತದೆ. ಹೆಚ್ಚಾಗಿ ಅರ್ಧದಲ್ಲಿಯೇ ಶಾಲೆ ಬಿಡುವ ಮಕ್ಕಳಿಂದಾಗಿ ವಿಶ್ವವಿದ್ಯಾನಿಲಯಗಳನ್ನು ಪ್ರಮೇಯಾತ್ಮಕವಾಗಿ ಪ್ರವೇಶಿಸುವ ದಲಿತರ ಸಂಖ್ಯೆ ಕ್ಷೀಣಿಸುತ್ತಿದೆ.

ತಮ್ಮ ನಾಗರಿಕರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಅಮೆರಿಕಾ ಸರ್ಕಾರ ವ್ಯಯಿಸಬೇಕಾದ ಭೇದಾತ್ಮಕ ವೆಚ್ಚವನ್ನು ಜೂಲಿಯನ್ ಬೆಟ್ಸ್ ಮತ್ತು ಜಾನ್ ರೋಮೆರ್ ೨೦೦೦ರಲ್ಲಿ ಮಾದರಿಯ ಮೂಲಕ ಮಂಡಿಸಿದ್ದಾರೆ. ಈ ಮಾದರಿಯಲ್ಲಿ 'ಬಿಳಿಯರು' ಅಥವಾ 'ಕರಿಯರು', ಹಾಗೂ ಬಾಲಕರ ಪೋಷಕರು 'ಉನ್ನತ' ಅಥವಾ 'ಕೆಳ' ಮಟ್ಟದ ಶಿಕ್ಷಣ ಪಡೆದವರು ಎಂಬ ಆಧಾರದ ಮೇಲೆ ಬಾಲಕರ ನಾಲ್ಕು ವಿಭಾಗಗಳನ್ನು ವಿಂಗಡಿಸಿ, ರೋಮೆರ್ ಮತ್ತು ಬೆಟ್ಸ್ 'ಉನ್ನತ ಸ್ತರದ ಬಿಳಿಯರಿ'ಗಾಗಿ ವ್ಯಯಿಸುವ ವೆಚ್ಚಕ್ಕಿಂತ ಒಂಭತ್ತು ಪಟ್ಟು ಹೆಚ್ಚು ವೆಚ್ಚವನ್ನು 'ಕೆಳಸ್ತರದ ಕರಿಯರಿ'ಗಾಗಿ ಮೀಸಲಿಡಬೇಕು ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಸರ್ವರಿಗೂ ಸಮಾನವಕಾಶವನ್ನು ಕಲ್ಪಿಸಬೇಕೆಂದರೆ 'ಉನ್ನತ ಸ್ತರದ ಕರಿಯರು,' 'ಕೆಳಸ್ತರದ ಕರಿಯರು,' ಹಾಗೂ 'ಕೆಳಸ್ತರದ ಬಿಳಿಯರ' ಗುಂಪುಗಳು ತಮ್ಮ ನೈಜ ತಲಾ ಶೈಕ್ಷಣಿಕ ವೆಚ್ಚಕ್ಕಿಂತ ಹೆಚ್ಚು ಸಂಪನ್ಮೂಲಗಳನ್ನು ಪಡೆಯಬೇಕು ಎಂಬ ಅಂಶವನ್ನೂ ಮುಂದಿಟ್ಟಿದ್ದಾರೆ.

ಅಮೆರಿಕಾ ಮತ್ತು ಭಾರತದಲ್ಲಿ ಶೈಕ್ಷಣಿಕ ಸಂಪನ್ಮೂಲಗಳ ಹಂಚಿಕೆ ಪ್ರತಿಗಮನ ಹಾದಿ ಹಿಡಿದಿದೆ. ಅಲ್ಪ ಪ್ರಮಾಣದ ಜನಸಂಖ್ಯೆ ಹೊಂದಿರುವಂತಹ ಸಮಾಜದ ಉನ್ನತ ವರ್ಗದವರು ಶೈಕ್ಷಣಿಕ ಸಂಪನ್ಮೂಲಗಳ ಬಹುತೇಕ ಪಾಲನ್ನು ಅನುಭವಿಸುತ್ತಿದ್ದಾರೆ. ಸಮಾನತೆಯ ತತ್ತ್ವ (ಮೀಸಲಾತಿ ನೀತಿ) ನಿಜವಾದ ಅರ್ಥದಲ್ಲಿ ಉಳ್ಳವರ ಕೈಗೊಂಬೆಯಾಗಿದೆ. ಕೆಳಸ್ತರದವರಿಗೂ ಶಿಕ್ಷಣದ ಲಾಭ ದಕ್ಕುವಂತೆ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕ ವೆಚ್ಚದ ಪುನರ್‌ಹಂಚಿಕೆಯಾಗಬೇಕು. ಕೇವಲ ಆರ್ಥಿಕ ಕ್ರಮ ತೆಗೆದುಕೊಂಡ ಮಾತ್ರಕ್ಕೆ 'ಸಮುದಾಯ'ದಾದ್ಯಂತ ಆದಾಯದ ಹಂಚಿಕೆಯಾಗುವುದಿಲ್ಲ. ಸಂಪನ್ಮೂಲಗಳ ಹಂಚಿಕೆಗೆ 'ಸಮುದಾಯ'ದಿಂದ ಹೊರಗಿರುವವರನ್ನು ಹಾಗೂ ಅಸಮಾನತೆಯಿಂದ ತತ್ತರಿಸುತ್ತಿರುವವರನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂಬುದು ಬೆಟ್ಸ್ ಮತ್ತು ರೋಮೆರ್ ಅಧ್ಯಯನದಿಂದ ತಿಳಿದು ಬಂದ ಪ್ರಮುಖ ಅಂಶ.

ಉದ್ಯೋಗ, ವಸತಿ, ಸಾಲಮಾರುಕಟ್ಟೆ ಮತ್ತು ಶಿಕ್ಷಣ ವ್ಯವಸ್ಥೆಗಳಂತಹ ಪ್ರಮುಖ ವಿಚಾರಗಳನ್ನು ಗಂಭೀರವಾಗಿ ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುವ ಮೂಲಕ 'ಔಪಚಾರಿಕ ಸಮಾನತೆ'ಗೆ ಅರ್ಥ ಕಲ್ಪಿಸುವ ಗುರುತರ ಜವಾಬ್ದಾರಿ ಭಾರತ ಸರ್ಕಾರಕ್ಕಿದೆ. ಮುಸ್ಲಿಮರಿಗೆ ಹೆಚ್ಚಿನ ಲಾಭ ಒದಗಿಸದೆ, ಕೇವಲ ರಾಜಕೀಯ ಬಿರುಗಾಳಿಯೆಬ್ಬಿಸುವಂತಹ ಮೀಸಲಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಬದಲಿಗೆ, ಆರೋಗ್ಯಕರ ಸಮಾಜದ ನಿರ್ಮಾಣ ಹಾಗೂ ರಾಷ್ಟ್ರದ ಅಭಿವೃದ್ಧಿಯ ಹಿತದೃಷ್ಟಿಯಿಂದ, ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಲ್ಪಿಸಬೇಕೆಂದು ಭಾರತ ಸರ್ಕಾರ ನಿರ್ದೇಶನ ನೀಡಬೇಕು. ವಾಸ್ತವಿಕ ಸಮಾನಾವಕಾಶ ಕಲ್ಪಿಸಲು, ಹಾಗೂ ಅಸಮಾನತೆಯನ್ನು ನಿರ್ಮೂಲನೆ ಮಾಡಲು, ಸರ್ಕಾರ ಮುಸ್ಲಿಮರು, ದಲಿತರು, ಬುಡಕಟ್ಟಿನವರು, ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಎಲ್ಲಾ ಹಂತಗಳಲ್ಲಿಯೂ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಮೊದಲಿಗೆ ಒದಗಿಸಬೇಕಿದೆ. □

ಸೌಜನ್ಯ: 'ದಿ ಹಿಂದೂ'

ಕಾವ್ಯ

ಹಾಡು ಪಾಡು

(ಯಾರ್‍ಯಾರದೂ ಗುರುತಿಲ್ಲ)

ದೀಪ ಹಚ್ಚಿದ್ದೇನೆ
ಸರಿದ ಸೆರಗು ಕಾಣಿಸಲೆಂದು
ಮನೆಯ ಒಳಗೆ
ತುಸು ಅಳುಕು ಇಲ್ಲದೆ
ಮನದ ಒಳಗೆ
ಅತಿಥಿ ದೇವೋಭವ ಎಂದು
ಸೇವೆಗೈಯುತ್ತಲೇ

ವಸಂತದ ರಾತ್ರಿ
ಮಂಚದ ಮೇಲೆ ಮಲಗಿದರೂ
ನಿದ್ದೆ ಬರುತ್ತಿಲ್ಲ
ಕಾಮನನ ಆರ್ಭಟ
ಇದು ನನಗೇ ಹೊಸತಲ್ಲ
ಹೊಟ್ಟೆ ಪಾಡಲ್ಲವೇ

ದೇವರುಗಳವರು
ಹಸಿವ ಇಂಗಿಸ್ಸಲು ಬಂದವರು
ಮನೆತನಕ ಕರೆಯಲು
ಅರೆ ಸಾಹಸ ಪಡಬೇಕು
ನನಗಾಗಿ, ನನ್ನವರಿಗಾಗಿ
ಸಾಕು ಸಾಕೆನಿಸುತ್ತೆ
ಏನೆಲ್ಲಾ ಮಾಡಬೇಕು

ದಾಹ ತಣಿಸಿಕೊಳ್ಳಲು
ಈ ಕಾಡಿನಲ್ಲಿ
ಬಂದವರೆಷ್ಟೋ ಮಂದಿ
ಹೋದವರೆಷ್ಟೋ ಮಂದಿ

ಹುಲಿಯ ಗುರುತಿಲ್ಲ
ಜಿಂಕೆಯ ಗುರುತಿಲ್ಲ
ಯಾರ್‍ಯಾರದೂ ಗುರುತಿಲ್ಲ ನನಗೆ
ಸೆರಗು ಜಾರಿಸಿದ್ದು, ಸೀರೆ ಬಿಚ್ಚಿದ್ದು,
ರವಿಕೆ ಗುಂಡಿ ತೆಗೆದದ್ದು
ಅಷ್ಟೇ ಗೊತ್ತು.

○ ನೇತ್ರಾವತಿ ಕೆ.ವಿ, ಕೋಲಾರ



ಸುಂದರ ಕರ್ನಾಟಕಕ್ಕೆ
ಸುವರ್ಣ ಮಹೋತ್ಸವ
ಸುಮಾರು 2000 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ 1, 1956ರಂದು ಒಂದಾದರು. ಇದು ಏಕೀಕೃತ ಕರ್ನಾಟಕದ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.
ಕರ್ನಾಟಕ - 50 ವರ್ಷಗಳ ಒಂದು ಅವಲೋಕನ
• ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ • "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ • ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ • ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ • ಸಾಕ್ಷರತೆಯಲ್ಲಿ ಗಣನೀಯ ಸಾಧನೆ - ಕೇವಲ ಶೇ.24 ರಷ್ಟಿದ್ದ ಸಾಕ್ಷರತೆ ಈಗ ಶೇ.71ಕ್ಕೆ ಏರಿಕೆ • ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ • ನೀರಾವರಿ ಸಾಮರ್ಥ್ಯ - 23.84 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ • ವಿಶ್ವಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ 'ಭೂಮಿ' ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ • ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ
ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ, ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.
ಎಚ್ ಡಿ ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಬಿ ಎಸ್ ಯಡಿಯೂರಪ್ಪ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕದ ಜನತೆಗೆ ಸುವರ್ಣ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು
ಕರ್ನಾಟಕ ವಾರ್ತೆ

ಸಂಘ ಸೇವೆ ಮತ್ತು ಸಂವಿಧಾನ

ಇದೇ ಆಗಸ್ಟ್ ೨೭ ರಂದು ಮಧ್ಯಪ್ರದೇಶದ ಭಾರತೀಯ ಜನತಾ ಪಕ್ಷದ ಸರ್ಕಾರ ಒಂದು ಆದೇಶದ ಮೂಲಕ ಸರ್ಕಾರಿ ಸೇವಕರು ಆರ್‌ಎಸ್‌ಎಸ್ ಸೇರುವುದರ ಮೇಲೆ ಇದ್ದ ನಿಬಂಧವನ್ನು ತೆಗೆದು ಹಾಕಿತು. ಈ ವಿಷಯವಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂರವರನ್ನು ಮಧ್ಯ ಪ್ರವೇಶಿಸಲು ಕೋರಿದ್ದಾರೆ. ಇದೇ ರೀತಿಯ ಆದೇಶವನ್ನು ಹೊರಡಿಸಿದ್ದ ಗುಜರಾತ್ ಸರ್ಕಾರವನ್ನು ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣ್ ಪ್ರಶ್ನಿಸಿದ್ದನ್ನು ಜ್ಞಾಪಿಸಿದ್ದಾರೆ.

ಆರ್‌ಎಸ್‌ಎಸ್ ನಾಯಕ ಕಾಂತಿಲಾಲ್ ಚಾಟರ್ ಹೇಳುತ್ತಾರೆ. "ಏನು ನಿರ್ಬಂಧ ತೆಗೆಯುವುದು? ಯಾವಾಗ ನಿರ್ಬಂಧ ಹಾಕಲಾಗಿತ್ತು? ನಮಗೆಂದು ಹಾಗೆ ಅನ್ನಿಸಿಲ್ಲವಲ್ಲ"

ಈ ನಿರ್ಬಂಧ ಮೊದಲ ಬಾರಿಗೆ ೧೯೮೧ರಲ್ಲಿ ವಿಧಿಸಿ ೨೦೦೦ ದಲ್ಲಿ ತೆಗೆದು ಹಾಕಲಾಯಿತು. ಆದರೆ ಇದೇ ರೀತಿಯ ಕಾನೂನುಗಳು ಬಹಳ ಹಿಂದಿನಿಂದ ಅನೇಕ ರಾಜ್ಯಗಳಲ್ಲಿ ಜಾರಿಯಲ್ಲಿದೆ. ಮಧ್ಯಪ್ರದೇಶದ ೧೯೬೬ ರ ನಾಗರೀಕ ಸೇವೆ ೫(೧) ನಿಯಮದ ಪ್ರಕಾರ ಸರ್ಕಾರಿ ನೌಕರರು ಯಾವುದೇ ರಾಜಕೀಯ ಸಂಸ್ಥೆ/ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದನ್ನು ನಿಷೇಧಿಸಿದೆ.

ಈಗಿನ ಸರ್ಕಾರದ ಆದೇಶ ಸಂವಿಧಾನದ ೧೪ನೇ ಪರಿಚ್ಛೇದವನ್ನು ಉಲ್ಲಂಘಿಸುತ್ತದೆ. ಕಾನೂನಿನ ಸಂಮುಖ ಸಮಾನತೆಯನ್ನು ನಿರಾಕರಿಸುತ್ತದೆ. ರಾಜಕೀಯ ಕಾರಣಗಳಿಗಾಗಿ ತಮಗೆ ಬೇಕೆಂದ ರೀತಿ, ಸಂವಿಧಾನಾತ್ಮಕವಾಗಿ ತಂದ ಕಾನೂನನ್ನು ಒಂದು ಆಜ್ಞೆಯ ಮೂಲಕ ತೆಗೆದು ಹಾಕುವುದು ಸಂವಿಧಾನ ಕ್ರಿಯೆ. ಬಿಜೆಪಿಯ ಅರುಣ್ ಜೇಟ್ಲೆಯವರು ಆದೇಶದ ಪರ ಮಾತನಾಡುತ್ತಾ, "ಯಾವುದೇ ರೀತಿಯ ರಾಜಕೀಯ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಳುವ ಸಂಘಟನೆಗಳ ಜೊತೆ ಸದಸ್ಯತ್ವ ತೆಗೆದುಕೊಳ್ಳುವುದನ್ನು ಮಾತ್ರ ನಿರ್ಬಂಧಿಸಲಾಗಿದೆ. ("ಟೆಲಿಗ್ರಾಫ್ ಸೆಪ್ಟಂಬರ್ ೨೯). ಅವರ ಹೇಳಿಕೆಯ ಅರ್ಥ ಆರ್‌ಎಸ್‌ಎಸ್ ಒಂದು 'ರಾಜಕೀಯ' ಸಂಘಟನೆಯಲ್ಲವೆಂದು. ಆದರೆ ಅವರೇ ತಿಳಿದಿರುವಂತೆ ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆ ನಡೆಸಿದಾಗ ವಾಜಪೇಯಿಯಿಂದ ಹಿಡಿದು ಸರ್ಕಾರದ ಎಲ್ಲರೂ ಆರ್‌ಎಸ್‌ಎಸ್‌ನ ನಿರ್ಧಾರಗಳಿಗೆ ತಲೆಬಾಗಲೇ ಬೇಕಾಗಿತ್ತು.

ಸಂಘಟನೆ ಸ್ವರೂಪದ ಬಗ್ಗೆ ಆರ್‌ಎಸ್‌ಎಸ್ ಮಾತುಗಳನ್ನೇ ನೋಡೋಣ, ಮಹಾರಾಷ್ಟ್ರದ ಚಾರಿಟಿ ಕಮಿಷನ್ ಮುಂದಿಟ್ಟ ಹೇಳಿಕೆ ಇಂತಿದೆ, "ಆರ್‌ಎಸ್‌ಎಸ್ ಒಂದು ಧರ್ಮದತ್ತಿಯಲ್ಲ. ಇದು ಒಂದು ರಾಜಕೀಯ ಸಂಘಟನೆ. ಆದ್ದರಿಂದ ಅದನ್ನು ಒಂದು ಸಾರ್ವಜನಿಕ ದತ್ತಿಯಾಗಿ ನೋಂದಣಿ ಮಾಡಿಸಲಾಗುವುದಿಲ್ಲ". ಆದರೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮುಂದೆ ಆರ್‌ಎಸ್‌ಎಸ್ ಹೈಕೋರ್ಟ್‌ನಲ್ಲಿ ತದ್ವಿರುದ್ಧ ಹೇಳಿಕೆ ನೀಡುತ್ತದೆ.

ಸಾಂಸ್ಕೃತಿಕ ರಾಜಕಾರಣ

ಸಂಘಟನೆಯ ರಾಜಕೀಯ ಸ್ವರೂಪವನ್ನು ತನ್ನ 'ಸಂಸ್ಕೃತಿ' ವ್ಯಾಖ್ಯಾನದಲ್ಲಿ ಹೇಗೆ ಅಳವಡಿಸಲಾಗಿದೆಯೆಂದು ನೋಡಬಹುದು "ಸಂಸ್ಕೃತಿ ಎಂದರೆ ಬರಿಯ ಕಲೆ, ನಾಟಕ, ಸಂಗೀತ, ನೃತ್ಯಕ್ಕೆ ಸೀಮಿತವಲ್ಲ. "ಸಾಂಸ್ಕೃತಿಕ್" ಎಂಬುದು ಹೆಚ್ಚಿನ ವ್ಯಾಪ್ತಿ ಹೊಂದಿದೆ. ಆರ್‌ಎಸ್‌ಎಸ್‌ನ ಸ್ಥಾಪಕ ಶ್ರೀ ಗೋಳ್‌ವಲ್ಕರ್ ಅವರ ಬರಹಗಳು ಮತ್ತು ಭಾಷಣದಿಂದ ಇದು ಸ್ಪಷ್ಟವಾಗುತ್ತದೆ. ಸಮಾಜದ ಇತರೆ ಎಲ್ಲಾ ಚಟುವಟಿಕೆಗಳು–ರಾಜಕೀಯ, ಸಾಮಾಜಿಕ, ಆರ್ಥಿಕ, ನೈತಿಕ ಮುಂತಾದ ವಿಷಯಗಳನ್ನು 'ಸಾಂಸ್ಕೃತಿಕ್' ಒಳಗೊಳ್ಳುತ್ತದೆ."



ಆರ್‌ಎಸ್‌ಎಸ್ ಮುಖಂಡ ಗೋಳ್‌ವಲ್ಕರ್ ಪ್ರಕಾರ "ರಾಜಕೀಯವು ಧರ್ಮದ ಒಂದು ಅಂಗ. ಇದು ಒಂದು ಸಾಂಸ್ಕೃತಿಕ ಕಾರ್ಯಕ್ರಮ. ಒಂದು ಜವಾಬ್ದಾರಿ" ರಾಜಕೀಯ ಅಧಿಕಾರಕ್ಕಾಗಿ ಸಂಘ ಆಶಿಸುತ್ತದೆಯೆ? ಎಂಬ ಪ್ರಶ್ನೆಗೆ ಗೋಳ್‌ವಲ್ಕರ್ ಹೇಳಿದ್ದು ಇದು: ನಾವು ಶ್ರೀ ಕೃಷ್ಣನನ್ನು ಮಾದರಿಯಾಗಿ ಇಟ್ಟುಕೊಂಡಿದ್ದೇವೆ. ಇಡೀ ಸಾಮ್ರಾಜ್ಯವನ್ನು ತಮ್ಮ ಹತೋಟಿಯಲ್ಲಿಟ್ಟಿದ್ದರೂ ಶ್ರೀ ಕೃಷ್ಣ ಚಕ್ರವರ್ತಿಯಾಗಲಿಲ್ಲ.

ಕೃಷ್ಣಮೂರ್ತಿ ಸೀತಾರಾಂ

ಈ ಹೇಳಿಕೆಯನ್ನು ಆರ್‌ಎಸ್‌ಎಸ್ ಸಂವಿಧಾನದ ಅ.೪ (b)ಗೆ ಹೋಲಿಕೆ ಮಾಡಿ ನೋಡಿ

"ಸಂಘಟನೆಗೆ ಯಾವುದೇ ರಾಜಕೀಯ ಕಾರಣಗಳಿಲ್ಲ. (ಇದು) ಶುದ್ಧವಾಗಿ ಸಾಂಸ್ಕೃತಿಕ ಕೆಲಸಕ್ಕೆ ಮೀಸಲಾಗಿರುತ್ತದೆ.

ಅ. ೪ (b) ಮತ್ತು 'ಸಾಂಸ್ಕೃತಿಕ್' ಹೇಳಿಕೆ ತುಲನೆ ಮಾಡಿದರೆ,

ಅ. ೪ (b) ಸುಳ್ಳಾಗುವುದಿಲ್ಲವೆ?

ಆರ್‌ಎಸ್‌ಎಸ್ ಮುಖಂಡ ಗೋಳ್‌ವಲ್ಕರ್ ಪ್ರಕಾರ "ರಾಜಕೀಯವು ಧರ್ಮದ ಒಂದು ಅಂಗ. ಇದು ಒಂದು ಸಾಂಸ್ಕೃತಿಕ ಕಾರ್ಯಕ್ರಮ. ಒಂದು ಜವಾಬ್ದಾರಿ"

ರಾಜಕೀಯ ಅಧಿಕಾರಕ್ಕಾಗಿ ಸಂಘ ಆಶಿಸುತ್ತದೆಯೆ? ಎಂಬ ಪ್ರಶ್ನೆಗೆ ಗೋಳ್‌ವಲ್ಕರ್ ಹೇಳಿದ್ದು ಇದು: ನಾವು ಶ್ರೀ ಕೃಷ್ಣನನ್ನು ಮಾದರಿಯಾಗಿ ಇಟ್ಟುಕೊಂಡಿದ್ದೇವೆ. ಇಡೀ ಸಾಮ್ರಾಜ್ಯವನ್ನು ತಮ್ಮ ಹತೋಟಿಯಲ್ಲಿಟ್ಟಿದ್ದರೂ ಶ್ರೀ ಕೃಷ್ಣ ಚಕ್ರವರ್ತಿಯಾಗಲಿಲ್ಲ. ರಾಜೇಂದ್ರಸಿಂಗ್ ಮತ್ತು ದೊಯಿರಾ ಹೇಳುವಂತೆ, "ಆರ್‌ಎಸ್‌ಎಸ್ ಇಡೀ ಪ್ರಪಂಚವನ್ನು ಸಾಂಸ್ಕೃತಿಕವಾಗಿ ಆಕ್ರಮಿಸಲು ಬಯಸುತ್ತದೆ" ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳ ಏಕರೂಪ ದಾಖಲೆ ತೋರಿಸುವಂತೆ ಮಧ್ಯ ಪ್ರದೇಶದ ಆಜ್ಞೆ ಸಂವಿಧಾನದ ಮೂಲಭೂತ ಹಕ್ಕುಗಳ ಮೇಲಿನ ಹಲ್ಲೆ ಎನ್ನಲ್ಲೇ ಬೇಕು. ವಲ್ಲಭಬಾಯಿ ಪಟೇಲ್ ಜುಲೈ ೧೫, ೧೯೪೭ ರ ಸಂವಿಧಾನ ಜಂಟಿ ಸಭೆಯಲ್ಲಿ ಹೇಳಿದಂತೆ "ನಾಗರೀಕ ಸೇವೆಯು ರಾಜಕೀಯ ತಟಸ್ಥತೆಯನ್ನು ನಿರೀಕ್ಷಿಸುತ್ತದೆ" ಅದೇ ರೀತಿ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ "ಆಡಳಿತದ ಬುಡಮೇಲು, ಸಂವಿಧಾನದ ಪರೋಕ್ಷ ಬುಡಮೇಲು" ಎಂದು ಧೃಡ ಪಡಿಸಿರುತ್ತಾರೆ.

ಆದ್ದರಿಂದ ಆಡಳಿತದಲ್ಲಿ ನಿಷ್ಪಕ್ಷಪಾತ ನಡವಳಿಕೆ ಬಹಳ ಮುಖ್ಯ. ಅಂಬೇಡ್ಕರ್ ನವಂಬರ್ ೪, ೧೯೪೮ರಲ್ಲಿ ಸಂವಿಧಾನದ ಕರಡು ಪ್ರತಿಯನ್ನು ಪರಿಚಯಿಸಿ ಮಾತನಾಡುತ್ತ ಹೀಗೆ ಹೇಳುತ್ತಾರೆ. "ಆಡಳಿತ ರೂಪವನ್ನು ಉಳಿಸಿಕೊಂಡು, ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳಲು ಸಾಧ್ಯವಾದದ್ದರಿಂದ ನಾಗರೀಕ ಸೇವೆಯಲ್ಲಿ ರಾಜಕೀಯ ತಟಸ್ಥತೆ ಮುಖ್ಯವಾಗುತ್ತದೆ" ಈ ವಿಷಯವಾಗಿ ಸೋನಿಯಾ ಗಾಂಧಿಯವರು ರಾಷ್ಟ್ರಪತಿಯವರನ್ನು ಮಧ್ಯ ಪ್ರವೇಶಿಸಲು ಕೇಳಿರುವುದು ಸೂಕ್ತವಾಗಿದೆ. ಈ ಬಗ್ಗೆ ನಾಗರಿಕರು ಅಥವಾ ವಿರೋಧ ಪಕ್ಷ ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡಲು ಅವಕಾಶವಿದೆ.

(ಎ.ಜಿ. ನೂರಾನಿಯವರ ಲೇಖನ ಸಂಗ್ರಹಾನುವಾದ)

ಸಂವಿಧಾನದ ೧೬ (೪), ೧೬ (೪ಎ), ಮತ್ತು ೧೬ (೪ಬಿ) ವಿಧಿಗಳನ್ನು ವಿಶ್ಲೇಷಿಸುವಾಗ ಹಾಗೂ ಸಾಮಾಜಿಕ ಮೀಸಲಾತಿಗೆ ತಿದ್ದುಪಡಿ ತರುವ ನಿಟ್ಟಿನಲ್ಲಿ ಶಾಸಕಾಂಗಕ್ಕೆ ಕಡಿವಾಣಗಳನ್ನು ಹಾಕುವ ಸಂದರ್ಭದಲ್ಲಿ "ಕೆನೆ ಪದರ" ಎಂಬ ಪದವನ್ನು ಬಳಸಲಾಗಿದೆ ಎಂಬುದು ತೀರ್ಪನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ನಾಗರಾಜ್ ಮೊಕದ್ದಮೆಯಲ್ಲಿ ಬಳಸಲಾಗಿರುವ "ಕೆನೆಪದರ" ಎಂಬ ಪದ ಇತರ ಹಿಂದುಳಿದ ವರ್ಗಗಳಿಗೆ ಮಾತ್ರ ಅನ್ವಯಿಸುತ್ತದೆ, ಪರಿಶಿಷ್ಟ ಜಾತಿ-ಪಂಗಡಗಳಿಗಲ್ಲ. ಈ ಮೊಕದ್ದಮೆಯ ತೀರ್ಪು ನೀಡುವ ಸಂದರ್ಭದಲ್ಲಿ ನ್ಯಾಯಾಲಯ ೧೬ (೪ಎ) ಜತೆಗೆ ೧೬(೪) ಮತ್ತು ೧೬ (೪ಬಿ) ವಿಧಿಗಳನ್ನು ವಿಶ್ಲೇಷಿಸುತ್ತಿದ್ದುದನ್ನು ಮರೆಯುವಂತಿಲ್ಲ. ೧೬(೪) ಮತ್ತು ೧೬ (೪ಬಿ) ಇತರೆ ಹಿಂದುಳಿದ ವರ್ಗಗಳಿಗೂ ಅನ್ವಯಿಸುತ್ತದೆ.

ಕೆ. ವಿ ವಿಶ್ವನಾಥನ್
ಅನು: ಎಂ. ಆರ್. ಎಸ್

'ಕೆನೆಪದರ'ದ ನೀತಿ ಪರಿಶಿಷ್ಟ ಜಾತಿ/ ಪಂಗಡಗಳಿಗೆ ಅನ್ವಯಿಸುವುದಿಲ್ಲ

ಮೀಸಲಾತಿ ಕುರಿತು ನಾಗರಾಜ್ ಮತ್ತು ಇತರರು v/s ಭಾರತ ಸರ್ಕಾರ ಮತ್ತು ಇತರರ ಮೊಕದ್ದಮೆಗೆ ಸಂಬಂಧಿಸಿದ ಇತ್ತೀಚಿಗಿನ ತೀರ್ಪು ಹೊಸ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ. ಸರ್ವೋಚ್ಚ ನ್ಯಾಯಾಲಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ "ಕೆನೆಪದರ"ವನ್ನು ಮೀಸಲಾತಿಯಿಂದ ಹೊರಗಿಡುವ ಕುರಿತು ನೀಡಿರುವ ತನ್ನ ತೀರ್ಪಿನಲ್ಲಿ ಏನನ್ನೂ ಹೇಳದೆ ಇರುವುದರಿಂದ ಈ ವಿವಾದ ಅನವಶ್ಯಕ ಎನ್ನಬಹುದು.

ಸಂವಿಧಾನದ ೧೬ (೪), ೧೬ (೪ಎ), ಮತ್ತು ೧೬ (೪ಬಿ) ವಿಧಿಗಳನ್ನು ವಿಶ್ಲೇಷಿಸುವಾಗ ಹಾಗೂ ಸಾಮಾಜಿಕ ಮೀಸಲಾತಿಗೆ ತಿದ್ದುಪಡಿ ತರುವ ನಿಟ್ಟಿನಲ್ಲಿ ಶಾಸಕಾಂಗಕ್ಕೆ ಕಡಿವಾಣಗಳನ್ನು ಹಾಕುವ ಸಂದರ್ಭದಲ್ಲಿ "ಕೆನೆ ಪದರ" ಎಂಬ ಪದವನ್ನು ಬಳಸಲಾಗಿದೆ ಎಂಬುದು ತೀರ್ಪನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ನಾಗರಾಜ್ ಮೊಕದ್ದಮೆಯಲ್ಲಿ ಬಳಸಲಾಗಿರುವ "ಕೆನೆಪದರ" ಎಂಬ ಪದ ಇತರ ಹಿಂದುಳಿದ ವರ್ಗಗಳಿಗೆ ಮಾತ್ರ ಅನ್ವಯಿಸುತ್ತದೆ, ಪರಿಶಿಷ್ಟ ಜಾತಿ-ಪಂಗಡಗಳಿಗಲ್ಲ. ಈ ಮೊಕದ್ದಮೆಯ ತೀರ್ಪು ನೀಡುವ ಸಂದರ್ಭದಲ್ಲಿ ನ್ಯಾಯಾಲಯ ೧೬ (೪ಎ) ಜತೆಗೆ ೧೬ (೪) ಮತ್ತು ೧೬ (೪ಬಿ) ವಿಧಿಗಳನ್ನು ವಿಶ್ಲೇಷಿಸುತ್ತಿದುದನ್ನು ಮರೆಯುವಂತಿಲ್ಲ. ೧೬(೪) ಮತ್ತು ೧೬ (೪ಬಿ) ಇತರೆ ಹಿಂದುಳಿದ ವರ್ಗಗಳಿಗೂ ಅನ್ವಯಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿನ ಕೆನೆ ಪದರವನ್ನು ಮೀಸಲಾತಿಯಿಂದ ಹೊರಗಿಡುವ ವಿಷಯ ಪ್ರಸ್ತುತ ತೀರ್ಪಿನಲ್ಲಿ ಪರಿಗಣನೆಗೆ ಬರಲಿಲ್ಲ. ಒಂಭತ್ತು ಸದಸ್ಯರನ್ನೊಳಗೊಂಡ ನ್ಯಾಯಪೀಠ (ಇಂದ್ರ ಸಾಹಿ v/s ಭಾರತ ಸರ್ಕಾರ-'ಮಂಡಲ್ ಮೊಕದ್ದಮೆ', ಎಐಆರ್ ೧೯೯೩ ಎಸ್‌ಸಿ ೧೬೨) ಮತ್ತು ಐವರು ಸದಸ್ಯರನ್ನೊಳಗೊಂಡ ಸಂಯೋಜಿತ ನ್ಯಾಯಪೀಠ (ಇ. ವಿ. ಚಿನ್ನಯ್ಯ v/s ಆಂಧ್ರ ಪ್ರದೇಶ ಸರ್ಕಾರ) "ಕೆನೆ ಪದರ" ಪರಿಕಲ್ಪನೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುವುದಿಲ್ಲ ಎಂದು ಈ ವಿಷಯವನ್ನು ಈಗಾಗಲೇ ಇತ್ಯರ್ಥಗೊಳಿಸಿದೆ. ಪ್ರಸ್ತುತ ಅಕ್ಟೋಬರ್ ೧೯, ೨೦೦೬ರ ನಾಗರಾಜ್ ಮೊಕದ್ದಮೆಯಲ್ಲಿ ಐವರು ನ್ಯಾಯಾಧೀಶರನ್ನೊಳಗೊಂಡ ಪೀಠ ನೀಡಿರುವ ತೀರ್ಪು ಈ ಹಿಂದಿನ ತೀರ್ಪಿಗಳಿಗಿಂತ ಭಿನ್ನವಾದ ಧೋರಣೆಯನ್ನೇನೂ ತಳೆದಿಲ್ಲ.

೧೯೯೨ ರಲ್ಲಿ ಸುಪ್ರೀಂಕೋರ್ಟ್ ಹಿಂದುಳಿದ ವರ್ಗಗಳಿಗೆ (ಒಬಿಸಿ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನೊಳಗೊಂಡಿದೆ) ಕಲ್ಪಿಸಲಾಗಿರುವ ಮೀಸಲಾತಿ ಕೇವಲ ಆರಂಭಿಕ ನೇಮಕಾತಿಗೆ ಮಾತ್ರ ಸೀಮಿತವಾಗಿರಬೇಕು, ಭಡ್ತಿಗೆ ಅನ್ವಯಿಸುವಂತಿಲ್ಲ ಎಂಬ ತೀರ್ಪು ನೀಡಿತ್ತು. ಈ ತೀರ್ಪಿನ ವ್ಯತಿರಿಕ್ತ ಪರಿಣಾಮಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಭಡ್ತಿಯಲ್ಲಿಯೂ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ೧೬ (೪ಎ)ನೇ ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಯಿತು. ಭಡ್ತಿಯ ವಿಷಯದಲ್ಲಿ ಮೀಸಲಾತಿ ಅನ್ವಯವಾದರೂ, ಒಂದು ಪಕ್ಷದಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿ ಭಡ್ತಿಯಾದ ಕೆಲಸದಲ್ಲಿ ಒಟ್ಟಿಗೆ "ಸಿಲುಕಿಕೊಂಡರೆ" ಮೀಸಲಾತಿ ಕೊಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತದನಂತರ ತೀರ್ಪು ನೀಡಿತ್ತು. ಈ ತೀರ್ಪಿನ ಪರಿಣಾಮಗಳನ್ನು ಸರಿಪಡಿಸಲು ೧೬ (೪ಎ)ನೇ ವಿಧಿಗೆ ತಿದ್ದುಪಡಿ ತರುವ ಮೂಲಕ ಮೀಸಲಾತಿಯಿಂದ ಭಡ್ತಿ ಪಡೆದವರಿಗೆ ಸೀನಿಯಾರಿಟಿ ಲಭಿಸುವಂತೆ ಕ್ರಮ ಕೈಗೊಳ್ಳಲಾಯಿತು.

ಇದಕ್ಕೂ ಮುಂಚೆ ಲೋಕಸಭೆ ೧೬ (೪ಎ)ನೇ ವಿಧಿಯನ್ನು ಅಳವಡಿಸಿಕೊಂಡಿತ್ತು. ಈ ಉಪ-ಕಲಂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಷ್ಟೇ ಅಲ್ಲದೆ, ಇತರೆ ಹಿಂದುಳಿದ ವರ್ಗಗಳಿಗೂ ಅನ್ವಯಿಸಿದ್ದರಿಂದ ಈ ಚರ್ಚೆಯಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಒಂದು ಪಕ್ಷದಲ್ಲಿ ಮೀಸಲಾಗಿರುವ ಹುದ್ದೆಗಳು ಭರ್ತಿಯಾಗದೆ ಮುಂದುವರೆದರೆ, ಅಂತಹ ಹುದ್ದೆಗಳು ೫೦% ಮಿತಿಗೆ ಒಳಪಡುವುದಿಲ್ಲ ಎಂದು ಈ ಉಪ-ಕಲಂ ಹೇಳುತ್ತದೆ. ಸದರಿ ತಿದ್ದುಪಡಿಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಕನಿಷ್ಠ ಉತ್ತೀರ್ಣಾಂಕಗಳ ಸಡಿಲೀಕರಣ ಕುರಿತು ೩೩೫ನೇ ವಿಧಿಗೆ ತಂದ ತಿದ್ದುಪಡಿಗಳನ್ನು ಪ್ರಶ್ನಿಸಿ ಕೆಲವು ವ್ಯಕ್ತಿಗಳು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಸುಪ್ರೀಂಕೋರ್ಟ್ ಆಗ ಅತ್ಯಂತ ಕ್ಲಿಷ್ಟಕರವಾದ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಇಕ್ಕಟ್ಟಿಗೆ ಸಿಲುಕಿತ್ತು. ಸದರಿ ತಿದ್ದುಪಡಿಗಳು ಸಂವಿಧಾನದ ಮೂಲ ಸ್ವರೂಪಕ್ಕೆ ಯಾವುದೇ ರೀತಿ

ಯಲ್ಲಾದರೂ ಧಕ್ಕೆ ತರುಬಲ್ಲವೇ ಎಂದು ಉಚ್ಚ ನ್ಯಾಯಾಲಯ ನಿರ್ಧಾರ ತಳೆಯಬೇಕಿತ್ತು. ಯಾಕೆಂದರೆ ಸಾಂವಿಧಾನಿಕ ತಿದ್ದುಪಡಿಗಳನ್ನು ಪ್ರಶ್ನಿಸಲು ಶಾಸನಾತ್ಮಕವಾಗಿ ನ್ಯಾಯಾಂಗಕ್ಕೆ ಇದೊಂದೆ ಮಾರ್ಗ ಲಭ್ಯವಿರುವುದು.

ವಿಷಯ ಕುರಿತು ದೀರ್ಘ ಸಮಾಲೋಚನೆ ನಡೆಸಿದ ನಂತರ, ಸದರಿ ತಿದ್ದುಪಡಿಗಳನ್ನು ಅಸಂವಿಧಾನಿಕವೆಂದು ಪರಿಗಣಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ನಿರ್ಧಾರ ತಳೆಯಿತು. ಯಾಕೆಂದರೆ ಈ ತಿದ್ದುಪಡಿಗಳಿಂದ ೫೦% ಮಿತಿಗೆ ಯಾವುದೇ ಧಕ್ಕೆಯಾಗುವುದಿಲ್ಲ. ಕೆನೆಪದರ ಪರಿಕಲ್ಪನೆಗೆ ಅಡಚಣೆಯಾಗುವುದಿಲ್ಲ. ಜತೆಗೆ ಹಿಂದುಳಿದ ಜಾತಿಗಳು ಇನ್ನೂ ಪ್ರಗತಿ ಸಾಧಿಸಿಲ್ಲ ಹಾಗೂ ಸೂಕ್ತವಾಗಿ ಪ್ರಾತಿನಿಧಿತ್ವ ಹೊಂದಿಲ್ಲ. ಇದೆಲ್ಲದರ ಜತೆಗೆ ತಿದ್ದುಪಡಿಗಳಿಂದ ಆಡಳಿತದ ಕಾರ್ಯಕ್ಷಮತೆಗೆ ಯಾವುದೇ ರೀತಿಯಲ್ಲಿ ಅಡ್ಡಿಯುಂಟಾಗುವುದಿಲ್ಲ ಎಂಬ ಕಾರಣಗಳನ್ನು ನ್ಯಾಯಾಲಯ ನೀಡಿತ್ತು. ೧೬ನೇ ವಿಧಿಯಲ್ಲಿರುವ ಸಮಾನಾವಕಾಶಗಳ ಸ್ವರೂಪವನ್ನು ವಿಶ್ಲೇಷಿಸುವಾಗ ಮಾತ್ರ ನ್ಯಾಯಾಲಯ ಈ ತತ್ವಗಳ ಬಗ್ಗೆ ಗಮನ ಹರಿಸಿತ್ತು. ಆಯಾ ರಾಜ್ಯಗಳು ಮೀಸಲಾತಿ ಒದಗಿಸಲು ತರುವ ಶಾಸನಗಳು ಕೂಡ ಸಮಾನಾವಕಾಶ ತತ್ವಗಳನ್ನು ಮಾದರಿಯಾಗಿ ಪರಿಗಣಿಸಬೇಕು ಎಂದು ನ್ಯಾಯಾಲಯ ತೀರ್ಪು ನೀಡಿತ್ತು.

ಇತರೆ ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುವ ೧೬(೪ಬಿ)ನೇ ವಿಧಿಯನ್ನು ಉದ್ದೇಶಿಸಿ ನ್ಯಾಯಾಲಯ ಹೀಗೆ ಹೇಳಿತ್ತು (ಪುಟ ೧೨೫):

"ಆರ್ ಕೆ ಸಭರ್‌ವಾಲ್ ತೀರ್ಪಿನ ನಂತರ ಹುದ್ದೆ ಆಧಾರಿತ ರೋಸ್ಟರ್ ವ್ಯವಸ್ಥೆ ಜಾರಿಗೆ ಬಂತು ಎಂಬುದನ್ನು ನಾವು ೧೬(೪ಬಿ)ನೇ ವಿಧಿಯ ವಿಷಯದಲ್ಲಿ ಗಮನಹರಿಸಬೇಕು. ತದನಂತರ, ಇತರೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಸಾಮಾನ್ಯ ವರ್ಗಗಳ ಅಭ್ಯರ್ಥಿಗಳಿಗೆ ರೋಸ್ಟರ್‌ನಲ್ಲಿ ನಿರ್ದಿಷ್ಟವಾದ ಸ್ಥಳಾವಕಾಶ ಮಾಡಿಕೊಡಬೇಕು. ಆಯಾ ಗುಂಪುಗಳಿಗೆ ಸೇರಿದ ಹುದ್ದೆಗಳಿಗೆ ಅಭ್ಯರ್ಥಿಗಳಿಲ್ಲದೆ ಭರ್ತಿಯಾಗದ ಹುದ್ದೆಗಳು ಹಾಗೇ ಉಳಿಯಬಹುದು. ಆದರೆ ಆಯಾ ಗುಂಪುಗಳಿಗೆ ಸೇರಿದ ಹುದ್ದೆಗಳಿಗೆ ಆಯಾ ವರ್ಗಗಳೇ ನೇಮಕ ಹೊಂದಬೇಕು. ಆದ್ದರಿಂದ ೧೬(೪ಬಿ)ನೇ ವಿಧಿಯನ್ವಯ ಪ್ರಸ್ತುತ ಲಭ್ಯವಿರುವ ಹುದ್ದೆಗಳು ಮತ್ತು ಭರ್ತಿಯಾಗದೆ ಮುಂದುವರೆದ ಹುದ್ದೆಗಳು ಅಥವಾ ಬ್ಯಾಕ್‌ಲಾಗ್ ಹುದ್ದೆಗಳ ಪ್ರತ್ಯೇಕ ವರ್ಗೀಕರಣವನ್ನು ಮಾಡಲಾಗಿದೆ. ಆರ್ ಕೆ ಸಭರ್‌ವಾಲ್ ಮೊಕದ್ದಮೆ ಕುರಿತು ಈ ನ್ಯಾಯಾಲಯ ನೀಡಿದ ತೀರ್ಪಿನ ನಂತರದ ನೇರ ಪರಿಣಾಮವಾಗಿ ಹುದ್ದೆ ಆಧಾರಿತ ರೋಸ್ಟರ್‌ಗೆ ಸಂಬಂಧಿಸಿದ ೧೬(೪ಬಿ)ನೇ ವಿಧಿ ಜಾರಿಗೆ ಬಂತು. ಆದ್ದರಿಂದ ನ್ಯಾಯಾಲಯದ ದೃಷ್ಟಿಯಲ್ಲಿ ೧೬(೪ಎ) ಮತ್ತು ೧೬(೪ಬಿ) ಈ ಎರಡು ವಿಧಿಗಳು ಕೂಡ ಮೀಸಲಾತಿ ವ್ಯವಸ್ಥೆಯ ಅವಿಭಾಜ್ಯ ಅಂಗಗಳು. ನ್ಯಾಯಾಲಯದ ದೃಷ್ಟಿಯಲ್ಲಿ ೧೬(೪), ೧೬(೪ಎ), ೧೬(೪ಬಿ) ವಿಧಿಗಳು ಒಂದೇ ವ್ಯವಸ್ಥೆಯ ಪ್ರಮುಖ ಅಂಶಗಳು. ಈ ಮೇಲೆ ಹೇಳಿದಂತೆ ಇಂದ್ರ ಸಾಹ್ನಿ ಮತ್ತು ಆರ್ ಕೆ ಸಭರ್‌ವಾಲ್ ಕೇಸ್‌ಗಳಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನಿಂದ ಪ್ರೇರಿತವಾಗಿ ೧೬(೪ಎ) ಮತ್ತು ೧೬(೪ಬಿ) ವಿಧಿ ಜನ್ಮ ತಳೆದಿವೆ. ಇವು ಸಂವಿಧಾನದ ೧೪, ಮತ್ತು ೪೬ನೇ

ಎಲ್ಲಾ ಸಂಬಂಧಿತ ತಿದ್ದುಪಡಿಗಳ ಬಗ್ಗೆ ಗಮನಹರಿಸುವಾಗ "ಕೆನೆಪದರ" ಎಂಬ ಪದವನ್ನು ನ್ಯಾಯಾಲಯ ಬಳಸಿದೆ. ತೀರ್ಪಿನಲ್ಲಿ ಪ್ರತ್ಯೇಕವಾಗಿ ನೀಡಲಾಗಿರುವ ಅಂತಿಮ ನಿರ್ಧಾರಗಳು, ಒಟ್ಟಾರೆ ತೀರ್ಪು ಇದನ್ನು ಸ್ಪಷ್ಟೀಕರಿಸುತ್ತದೆ.

ವಿಧಿಯ ಜತೆ ಬೆಸೆದುಕೊಂಡಿವೆ. ನ್ಯಾಯಾಲಯ ೧೬(೪ಎ) ಮತ್ತು ೧೬(೪ಬಿ) ವಿಧಿಯಲ್ಲಿನ ಕೈಗೊಳ್ಳಲಾಗಿರುವ ವರ್ಗೀಕರಣವನ್ನು ಎತ್ತಿ ಹಿಡಿಯುತ್ತದೆ. ಈ ಸಾಂವಿಧಾನಿಕ ತಿದ್ದುಪಡಿಗಳು ಸಮಾನತೆಯ ತತ್ವವನ್ನು ಕಡೆಗಣಿಸುವುದಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಿದೆ."

ಎಲ್ಲಾ ಸಂಬಂಧಿತ ತಿದ್ದುಪಡಿಗಳ ಬಗ್ಗೆ ಗಮನಹರಿಸುವಾಗ "ಕೆನೆಪದರ" ಎಂಬ ಪದವನ್ನು ನ್ಯಾಯಾಲಯ ಬಳಸಿದೆ. ತೀರ್ಪಿನಲ್ಲಿ ಪ್ರತ್ಯೇಕವಾಗಿ ನೀಡಲಾಗಿರುವ ಅಂತಿಮ ನಿರ್ಧಾರಗಳು, ಹಾಗೂ ಒಟ್ಟಾರೆ ತೀರ್ಪು ಇದನ್ನು ಸ್ಪಷ್ಟೀಕರಿಸುತ್ತದೆ. ಸಮಾನತೆಯ ನೀತಿಯನ್ನು ಒಳಗೊಂಡಿರುವ ೧೪, ೧೬(೧), ೧೬(೪), ೧೬(೪ಎ) ಮತ್ತು ೧೬(೪ಬಿ) ವಿಧಿಗಳನ್ನು ಸಮಗ್ರವಾಗಿ ಪರಿಭಾವಿಸುವ ನಿಟ್ಟಿನಲ್ಲಿ ಹಾಗೂ ಈ ವಿಧಿಗಳು ಸಮಾನತೆಯ ಲಕ್ಷಣಗಳನ್ನು ಒಳಗೊಂಡಂತೆ ಹೊರಡಿಸುವ ವಿಶಾಲ ಅರ್ಥಗಳನ್ನು ನ್ಯಾಯಾಲಯ ಕಟ್ಟಿಕೊಡಬೇಕಿತ್ತು.

ಮೂಲಭೂತ ರಚನೆಗೆ ಸಂಬಂಧಿಸಿದ ಸಮಾನತೆ ವಿಧಿಯ ಆಯಾಮಗಳನ್ನು ಗುರುತಿಸುವ ನಿಟ್ಟಿನಲ್ಲಿ ನ್ಯಾಯಾಲಯ "ಕೆನೆಪದರ"ವನ್ನು ಉಲ್ಲೇಖಿಸಿದೆ. "catch up rule" ಮತ್ತು "consequential seniority"ಗಳಂತಹ ಸೇವೆಗೆ ಸಂಬಂಧಿಸಿದ ನ್ಯಾಯಶಾಸ್ತ್ರದ ಲಕ್ಷಣಗಳು ಹಾಗೂ ಸಮಾನತೆಯ ಮೂಲ ರಚನೆಯನ್ನು ಬೇರ್ಪಡಿಸಿ ನೋಡಲು ನ್ಯಾಯಾಲಯ ಸಾಕಷ್ಟು ಪ್ರಯಾಸ ಪಡಬೇಕಾಯಿತು. "consequential seniority" ನೀತಿಯನ್ನು ಮೂಲ ರಚನೆಯ ಸ್ಥಾನಮಾನಕ್ಕೆ ವಿಸ್ತರಿಸಬಹುದು ಎಂದು ನ್ಯಾಯಾಲಯ ನಿರ್ಧಾರ ತಳೆಯಿತು. ಉದಾಹರಣೆಗೆ ನ್ಯಾಯಾಲಯ ಉಲ್ಲೇಖಿಸಿದ ೫೦% ಮೀಸಲಾತಿ ಮಿತಿ ನೀತಿಯನ್ನು ಗಮನಿಸಿ. ೫೦% ತಡೆ ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮಾತ್ರ, ಇತರೆ ಹಿಂದುಳಿದ ವರ್ಗಗಳಿಗೆ ಅನ್ವಯಿಸುವುದಿಲ್ಲ ಎಂದು ಎಂದಾದರೂ ವಾದ ಮಂಡಿಸಲಾಗುವುದೇ?

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಲ್ಲ

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುವಂತೆ "ಕೆನೆಪದರ"ದ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ನೀಡಿಲ್ಲ. ನ್ಯಾಯಾಲಯದ ತೀರ್ಪು ಈ ಅರ್ಥ ಹೊರಡಿಸುವುದಿಲ್ಲ. ಅದು ಈ ರೀತಿಯ ಯಾವುದೇ ಯೋಚನೆ ಹೊಂದಿರಲು ಸಾಧ್ಯವಿಲ್ಲ. ಯಾಕೆಂದರೆ ಈಗಾಗಲೆ ಮಂಡಲ್ ಆಯೋಗದ ಮೊಕದ್ದಮೆಯಲ್ಲಿ "ಕೆನೆಪದರ" ಪರಿಕಲ್ಪನೆ ಕೇವಲ ಇತರೆ ಹಿಂದುಳಿದ ವರ್ಗಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ನಿರ್ಧಾರ ಕೈಗೊಳ್ಳಲಾಗಿದೆ. ಇದೇ ಧೋರಣೆ ಈ ವಿ ಚಿನ್ನಯ್ಯ ಮೊಕದ್ದಮೆಯಲ್ಲೂ ಮನರುಚ್ಚಾರಗೊಂಡಿದೆ. ನಾಗರಾಜ್ ಮೊಕದ್ದಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಲಾಭಕ್ಕಾಗಿ ಕೈಗೊಳ್ಳಲಾಗಿರುವ ಸಾಂವಿಧಾನಿಕ ತಿದ್ದುಪಡಿಗಳನ್ನು ಸಮಗ್ರವಾಗಿ ಪ್ರಶ್ನಿಸಲಾಗಿರುವುದರಿಂದ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗಿರುವ ಸಾಧ್ಯತೆ ಇದೆ.

ಎರಡನೆಯದಾಗಿ, ನಾಗರಾಜ್ ಮೊಕದ್ದಮೆಯ ತೀರ್ಪಿನಲ್ಲಿ ನ್ಯಾಯಾಲಯ, ಮಂಡಲ್ ಆಯೋಗದ ಮೊಕದ್ದಮೆಯನ್ನು ಕೂಡ ಉಲ್ಲೇಖಿಸಿದೆ. "ಕೆನೆಪದರ ಪರಿಕಲ್ಪನೆ ಹಿಂದುಳಿದ ವರ್ಗಗಳಿಗೆ ಮಾತ್ರ ಅನ್ವಯಿಸುತ್ತದೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಇದು ಯಾವುದೇ ರೀತಿಯಲ್ಲಿಯೂ ಅನ್ವಯಿಸುವುದಿಲ್ಲ" ಎಂದು ಮಂಡಲ್ ಮೊಕದ್ದಮೆಯ ತೀರ್ಪಿನಲ್ಲಿ ಸ್ಪಷ್ಟವಾಗಿ ನಿರ್ಧಾರಕ್ಕೆ ಬರಲಾಗಿದೆ.

ಮೂರನೆಯದಾಗಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಆಂತರಿಕವಾಗಿ ಹಿಂದುಳಿದಿದೆ ಎಂದು ಸರ್ಕಾರದಿಂದ ಪರಿಗಣಿತವಾದ ಜಾತಿಗಳಿಗೆ ಮೀಸಲಾತಿ ಒದಗಿಸುವ ನಿಟ್ಟಿನಲ್ಲಿ ಸಂವಿಧಾನದ ೩೪೧ (೧)ನೇ ವಿಧಿಯನ್ವಯ ಜಾರಿಗೆ ಬಂದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಬಂಧಿಸಿದ ರಾಷ್ಟ್ರಪತಿಗಳ ಪಟ್ಟಿಯನ್ನು ಒಡೆಯಲು ಮುಂದಾದ ಆಂಧ್ರಪ್ರದೇಶ ಸರ್ಕಾರದ ಪ್ರಯತ್ನಕ್ಕೆ ನ್ಯಾಯಾಲಯ ಚಿನ್ನಯ್ಯ ಮೊಕದ್ದಮೆಯಲ್ಲಿ ಇತಿಶ್ರೀ ಹಾಡಿದೆ. ರಾಷ್ಟ್ರಪತಿಗಳ ಪಟ್ಟಿಗೆ ಸೇರಿದ ಜಾತಿಗಳು ಪ್ರತ್ಯೇಕ ವರ್ಗವೆಂದು ಪರಿಗಣಿಸಲ್ಪಡುತ್ತವೆ. ಯಾವುದೇ ನೆಲೆಗಟ್ಟಿನಲ್ಲಾದರೂ ಈ ವರ್ಗವನ್ನು ಒಡೆಯುವ ಪ್ರಯತ್ನ ರಾಷ್ಟ್ರಪತಿಗಳ ಪಟ್ಟಿಯನ್ನು ಬದಲಿಸಿದಂತಾಗುತ್ತದೆ ಎಂದು ಆಂಧ್ರದ ಶಾಸನವನ್ನು ಅಸಾಂವಿಧಾನಿಕ ಎಂದು ತಿರಸ್ಕರಿಸಲಾಯಿತು.

ಮಂಡಲ್ ಮೊಕದ್ದಮೆಯಲ್ಲಿ ತಳೆದ ನಿಲುವನ್ನು ಪುನರುಚ್ಚರಿಸಿದ ನ್ಯಾಯಾಲಯ ಈ ರೀತಿ ಹೇಳಿತು: "ಇಂದ್ರ ಸಾಹ್ನಿ ಮೊಕದ್ದಮೆಯ ತೀರ್ಪಿನಲ್ಲಿ ಇತರ ಹಿಂದುಳಿದ ವರ್ಗಗಳ ಉಪ-ವರ್ಗೀಕರಣಕ್ಕೆ ಬಳಸಲಾದ ನೀತಿ ರಾಷ್ಟ್ರಪತಿಗಳ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ-ವರ್ಗೀಕರಣಕ್ಕೂ ಅನ್ವಯಿಸಬಹುದು ಎಂಬುದನ್ನು ನ್ಯಾಯಾಲಯ ಒಪ್ಪುವುದಿಲ್ಲ. ಯಾಕೆಂದರೆ ಇತರೆ ಹಿಂದುಳಿದ ವರ್ಗಗಳ ಉಪ-ವರ್ಗೀಕರಣ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುವುದಿಲ್ಲ ಎಂದು ಇದೇ ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ. ನ್ಯಾಯಾಲಯ ಈ ತೀರ್ಪು ನೀಡಿರುವುದಕ್ಕೆ ಸಂವಿಧಾನವೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಟ್ಟಿಯನ್ನು ರಾಜ್ಯಗಳ ಹಸ್ತಕ್ಷೇಪದಿಂದ ಹೊರಗಿಟ್ಟಿರುವುದು ಪ್ರಮುಖ ಕಾರಣ."

ಭಾರತೀಯ ಸಂವಿಧಾನದಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಟ್ಟಿಗೆ ಇತರೆ ಜಾತಿಗಳನ್ನು ಸೇರ್ಪಡಿಸುವ ಅಥವಾ ತೆಗೆಯುವ ಮತ್ತು ಒಮ್ಮೆ ರಾಷ್ಟ್ರಪತಿಗಳ ಪಟ್ಟಿಗೆ ಸೇರ್ಪಡೆಯಾದ ಜಾತಿ ಅಥವಾ ಪಂಗಡಗಳಿಗೆ ಸೇರಿದ ಯಾವುದಾದರೂ ಸಮೂಹವನ್ನು ಬೇರ್ಪಡಿಸುವ ಅಧಿಕಾರ ಕೇವಲ ಶಾಸಕಾಂಗಕ್ಕಿದೆ (ಸಂವಿಧಾನದ ೩೪೧(೨) ಮತ್ತು ೩೪೨(೨)ನೇ ವಿಧಿ).

ಕೊನೆಯದಾಗಿ, ಯಾವುದೇ ಒಂದು ಮೊಕದ್ದಮೆಯ ತೀರ್ಪು, ಆ ಮೊಕದ್ದಮೆಗೆ ಮಾತ್ರ ಅನ್ವಯಿಸುತ್ತದೆ ವಿನಃ, ಆ ತೀರ್ಪಿನಿಂದಾಗಬಹುದಾದ ದೂರದ ಬೆಳವಣಿಗೆಗಳಿಗೆ ಅನ್ವಯಿಸುವುದಿಲ್ಲ. "ಕೆನೆಪದರ" ನೀತಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುತ್ತದೆ ಎಂದು ನಾಗರಾಜ್ ಮೊಕದ್ದಮೆಯ ತೀರ್ಪಿನಲ್ಲಿ ಹೇಳಲಾಗಿಲ್ಲ.

ಸೌಜನ್ಯ: 'ದಿ ಹಿಂದೂ'

ಬಾಬಾಸಾಹೇಬರ ಜ್ಞಾನೋದಯ ಮತ್ತು ಅನಂತರ . . .

ಡಾ॥ ನಟರಾಜ್ ಹುಳಿಯಾರ್

ಬೌದ್ಧಧಮ್ಮ ಸ್ವೀಕಾರಕ್ಕೂ ಮುನ್ನ ಅಂಬೇಡ್ಕರ್ ಅವರು ಪ್ರಾಚೀನ ಭಾರತದ ಚರಿತ್ರೆಯ ಅನೇಕ ವಿವರಗಳನ್ನು ಪುನರ್‌ನಿರ್ಮಿಸಿಕೊಂಡರು. ಚರಿತ್ರೆಯಲ್ಲಿ ಬೌದ್ಧಧಮ್ಮ ಮತ್ತು ಬ್ರಾಹ್ಮಣವಾದಗಳ ನಡುವೆ ನಡೆದ ಮುಖಾಮುಖಿಯ ಸ್ವರೂಪವನ್ನು ಹಾಗೂ ಬ್ರಾಹ್ಮಣವಾದವು ಯಜಮಾನಿಕೆ ಸ್ಥಾಪಿಸಲು ನಡೆಸುತ್ತಾ ಬಂದ ಹುನ್ನಾರಗಳನ್ನು ಆಳವಾಗಿ ಸಂಶೋಧಿಸಿದರು. ದಲಿತರು ಮೂಲತಃ ಬೌದ್ಧರಾಗಿದ್ದರು ಎಂಬುದನ್ನು ಆಧಾರಸಹಿತವಾಗಿ ಸಾಬೀತುಪಡಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಬೌದ್ಧಧಮ್ಮವನ್ನು ಆಧುನಿಕ ಕಾಲಕ್ಕೆ ತಕ್ಕ ಧಮ್ಮವನ್ನಾಗಿ ವ್ಯಾಖ್ಯಾನಿಸಿ, ಮರುರೂಪಿಸಿದರು. ೧೯೫೪ರಲ್ಲಿ ಮಾಡಿದ ರೇಡಿಯೋ ಭಾಷಣವೊಂದರಲ್ಲಿ 'ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆಗಳ ತತ್ವವನ್ನು ಫ್ರೆಂಚ್ ಕ್ರಾಂತಿಯಿಂದ ನಾನು ಪಡೆಯಲಿಲ್ಲ; ಬುದ್ಧನಿಂದ ಪಡೆದೆ' ಎಂದು ಘೋಷಿಸಿದರು.

ಗೌತಮಬುದ್ಧನಿಗೆ ಜ್ಞಾನೋದಯವಾದ ಹಾಗೆಯೇ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೂ ಒಂದು ಬಹು ದೊಡ್ಡ ಜ್ಞಾನೋದಯವಾಗಿತ್ತು. ದುಃಖ, ಅವಮಾನ, ಅಧ್ಯಯನ, ಹುಡುಕಾಟ ಹಾಗೂ ಸಂಘರ್ಷಗಳಿಂದ ಹುಟ್ಟಿದ ಆ ಜ್ಞಾನೋದಯ ಭಾರತದ ಚರಿತ್ರೆಯ ದಿಕ್ಕನ್ನು ಬದಲಿಸುವಷ್ಟು ಶಕ್ತಿಶಾಲಿಯಾಗಿತ್ತು. ಸುಮಾರು ಐವತ್ತು ವರ್ಷಗಳ ಕೆಳಗೆ ಅಂಬೇಡ್ಕರ್ ಅವರು ಒಂದು ಅಂತಿಮ ತೀರ್ಮಾನಕ್ಕೆ ಬಂದಿದ್ದರು. ಅಲ್ಲಿಯವರೆಗೂ ಭಾರತದ ಎಲ್ಲ ಸುಧಾರಕರ ಹಾಗೆ ಹಿಂದೂ ಧರ್ಮವನ್ನೂ ಇಲ್ಲಿನ ಜಾತಿ ಮನಸ್ಸನ್ನೂ ಬದಲಾಯಿಸಬಹುದೇ ಎಂದು ಚರ್ಚೆ, ವಿಮರ್ಶೆ, ಹೋರಾಟ ಹಾಗೂ ಸಂವಿಧಾನಗಳ ಮೂಲಕ ಸತತವಾಗಿ ಪ್ರಯತ್ನಿಸಿದ್ದರು. ತಮ್ಮ ಕಣ್ಣೆದುರಿಗಿರುವ ಯಾವ ಧರ್ಮದಲ್ಲಿ ದಲಿತರ ಅಸ್ಪೃಶ್ಯತೆಗೆ ಬಿಡುಗಡೆಯಿದೆಯೆಂದು ಆಳವಾಗಿ ಪರಿಶೀಲಿಸಿದ್ದರು. ೧೯೩೫ರಲ್ಲೇ ಹಿಂದೂಧರ್ಮ ತೊರೆಯಲು ನಿರ್ಧರಿಸಿದ ಅಂಬೇಡ್ಕರ್ ಈ ಬಗ್ಗೆ ಸುಮಾರು ಇಪ್ಪತ್ತು ವರ್ಷಗಳ ಕಾಲ ತೀವ್ರವಾಗಿ ಚಿಂತಿಸುತ್ತಲೇ ಅನೇಕ ಬಗೆಯ ಸಾಮಾಜಿಕ ಸಂಘಟನೆಗಳನ್ನೂ ರೂಪಿಸಿದರು. ಕೊನೆಗೆ, ಎಲ್ಲಕ್ಕಿಂತ ಆತ್ಮಗೌರವವೇ ಅತ್ಯಂತ ಮುಖ್ಯ ಎಂದು ನಿರ್ಧರಿಸಿ ಬುದ್ಧಮಾರ್ಗದತ್ತ ನಡೆದರು. ತಮ್ಮ ಈ ನಿರ್ಧಾರ ಭಾರತದ ಕೋಟ್ಯಂತರ ದಲಿತರ ಭವಿಷ್ಯವನ್ನು ನಿರ್ಧರಿಸಲಿದೆಯೆಂಬ ಸತ್ಯ ಅವರಿಗೆ ಗೊತ್ತಿತ್ತು. ಬೌದ್ಧಧಮ್ಮ ಸ್ವೀಕಾರದ ನಂತರ 'ಇವತ್ತು ನನಗೆ ನರಕದಿಂದ ಬಿಡುಗಡೆಯಾದಂತೆ ಅನ್ನಿಸುತ್ತದೆ' ಎಂದು ಬಾಬಾಸಾಹೇಬರು ಹೇಳಿದ್ದು ಭಾರತದ ದಲಿತರ ಸಾಮೂಹಿಕ ಬಿಡುಗಡೆಯ ಪ್ರಾತಿನಿಧಿಕ ದನಿಯಂತಿತ್ತು.

ಬೌದ್ಧಧಮ್ಮ ಸ್ವೀಕಾರಕ್ಕೂ ಮುನ್ನ ಅಂಬೇಡ್ಕರ್ ಅವರು ಪ್ರಾಚೀನ ಭಾರತದ ಚರಿತ್ರೆಯ ಅನೇಕ ವಿವರಗಳನ್ನು ಪುನರ್‌ನಿರ್ಮಿಸಿಕೊಂಡರು. ಚರಿತ್ರೆಯಲ್ಲಿ ಬೌದ್ಧಧಮ್ಮ ಮತ್ತು ಬ್ರಾಹ್ಮಣವಾದಗಳ ನಡುವೆ ನಡೆದ ಮುಖಾಮುಖಿಯ ಸ್ವರೂಪವನ್ನು ಹಾಗೂ ಬ್ರಾಹ್ಮಣವಾದವು ಯಜಮಾನಿಕೆ ಸ್ಥಾಪಿಸಲು ನಡೆಸುತ್ತಾ ಬಂದ ಹುನ್ನಾರಗಳನ್ನು ಆಳವಾಗಿ ಸಂಶೋಧಿಸಿದರು. ದಲಿತರು ಮೂಲತಃ ಬೌದ್ಧರಾಗಿದ್ದರು ಎಂಬುದನ್ನು ಆಧಾರಸಹಿತವಾಗಿ ಸಾಬೀತುಪಡಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಬೌದ್ಧಧಮ್ಮವನ್ನು ಆಧುನಿಕ ಕಾಲಕ್ಕೆ ತಕ್ಕ ಧಮ್ಮವನ್ನಾಗಿ ವ್ಯಾಖ್ಯಾನಿಸಿ, ಮರುರೂಪಿಸಿದರು. ೧೯೫೪ರಲ್ಲಿ ಮಾಡಿದ ರೇಡಿಯೋ ಭಾಷಣವೊಂದರಲ್ಲಿ 'ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆಗಳ ತತ್ವವನ್ನು ಫ್ರೆಂಚ್ ಕ್ರಾಂತಿಯಿಂದ ನಾನು ಪಡೆಯಲಿಲ್ಲ; ಬದಲಿಗೆ ನನ್ನ ಗುರು ಬುದ್ಧನಿಂದ ಈ ತತ್ವಗಳನ್ನು ಪಡೆದೆ'[೧] ಎಂದು ಅಂಬೇಡ್ಕರ್ ಘೋಷಿಸಿದರು. 'ನನ್ನ ಸಿದ್ಧಾಂತದ ಬೇರುಗಳು ಧರ್ಮದಲ್ಲಿವೆಯೇ ಹೊರತು ರಾಜ್ಯಶಾಸ್ತ್ರದಲ್ಲಲ್ಲ' ಎಂದು ಅವರು ಇದೇ ಭಾಷಣದಲ್ಲಿ ಹೇಳಿದ್ದರು.

ಬುದ್ಧನನ್ನು ವೈಚಾರಿಕವಾಗಿ ವಿವರಿಸಲೆತ್ನಿಸಿದ ಅಂಬೇಡ್ಕರ್, ಬುದ್ಧನ ಬಗೆಗಿನ ಸಿದ್ಧಪುರಾಣಗಳನ್ನು ಕೂಡ ಒಡೆಯಲೆತ್ನಿಸಿದರು. ನಾವೆಲ್ಲ ಚರಿತ್ರೆಯ ಜನಪ್ರಿಯ ಪುಸ್ತಕಗಳ ಮೂಲಕ ತಿಳಿದಿರುವಂತೆ ಸಿದ್ಧಾರ್ಥ 'ರೋಗ, ಮುಪ್ಪು ಹಾಗೂ ಸಾವಿನ ಚಿತ್ರಗಳನ್ನು ಕಂಡು ವಿರಾಗಿಯಾದ' ತಾನೆ? ಈ ದೃಶ್ಯಗಳು ರೂಪಕಗಳಾಗಿ ಅತ್ಯಂತ ಅರ್ಥಪೂರ್ಣವಾಗಿವೆಯೆನ್ನುವುದು ನಿಜ. ಆದರೆ ಚರಿತ್ರೆಯ ವಿವರಗಳ ಮೂಲಕ ಅಂಬೇಡ್ಕರ್ ಅವರು ಕಂಡುಕೊಂಡ ಸತ್ಯದ ಪ್ರಕಾರ, ಬುದ್ಧ ಈ ದೃಶ್ಯಗಳನ್ನು ಕಂಡು ವಿರಾಗಿಯಾಗಲಿಲ್ಲ; ಬದಲಿಗೆ, ತನ್ನ ತಂದೆಯ ರಾಜ್ಯಕ್ಕೂ ಪಕ್ಕದ ರಾಜ್ಯಕ್ಕೂ ನದಿಯ ನೀರಿನ ವಿಷಯದಲ್ಲಿ ಉಂಟಾದ ಜಗಳದಿಂದ ಬೇಸರಗೊಂಡು ರಾಜ್ಯ ತೊರೆದ. ಬುದ್ಧನನ್ನು ಹತ್ತು ಅವತಾರಗಳ ಜೊತೆ ಹನ್ನೊಂದಾಗಿಸಿ ನುಂಗಲೆತ್ನಿಸಿದ ಹಿಂದೂ ಪುರಾಣವನ್ನೂ ಅಂಬೇಡ್ಕರ್ ತಿರಸ್ಕರಿಸಿದರು. ಏಸುಕ್ರಿಸ್ತ, ಪೈಗಂಬರರ ಹಾಗೆ ಬುದ್ಧ ತಾನು ದೇವದೂತನೆಂದಾಗಲೀ, ಕೃಷ್ಣನಂತೆ ದೇವರದೇವನೆಂದಾಗಲೀ ಎಂದೂ ಹೇಳಿಕೊಳ್ಳಲಿಲ್ಲ ಎಂಬ ಸತ್ಯವನ್ನು ಒತ್ತಿ ಹೇಳಿದರು. ಜಗತ್ತೇ ದುಃಖಮಯ ಎಂದು ಬುದ್ಧ ಹೇಳಲಿಲ್ಲ; ಈ ಜಗದ ದುಃಖಗಳು ಯಾವುವು ಎಂದು ಗುರುತಿಸಿ, ಆ ದುಃಖದ ನಿವಾರಣೆಯೇ ಧರ್ಮದ ಉದ್ದೇಶ ಎಂಬುದು ಬುದ್ಧನ ಗ್ರಹಿಕೆಯಾಗಿತ್ತು ಎಂಬುದನ್ನು ತೋರಿಸಿಕೊಟ್ಟರು.

ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗ ಅಲ್ಲಿ ವಿಚಾರವಾದಿ ಜಾನ್‌ಡ್ಯುಯಿ ಇವರ ಅಧ್ಯಾಪಕರಾಗಿದ್ದರು. ಅಂಬೇಡ್ಕರ್ ಅವರು ಜಾನ್‌ಡ್ಯುಯಿಯವರ ಧರ್ಮನಿರಪೇಕ್ಷ ಮಾನವೀಯತೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಬುದ್ಧನ

ಚಿಂತನೆಯೊಂದಿಗೆ ಬೆಸೆಯಲೆತ್ನಿಸಿದರು. ಈ ಅಂಶವನ್ನು ಗುರುತಿಸುವ ಮೀರಾನಂದಾ ಅವರ ಪ್ರಕಾರ, 'ಅಂಬೇಡ್ಕರ್ ಅವರಿಂದ ಪುನರ್‌ವ್ಯಾಖ್ಯಾನಗೊಂಡ ಬುದ್ಧಮಾರ್ಗ ಹಿಂದೂ ಆಧ್ಯಾತ್ಮಿಕತೆಯನ್ನು ಹಾಗೂ ಅದು ಒಪ್ಪುವ ಸಹಜ ಅಸಮಾನತೆಯ ತತ್ವವನ್ನು ತೀವ್ರವಾಗಿ ಪ್ರಶ್ನಿಸಿತು.'[೨] ಅದರ ಜೊತೆಗೇ ಬೌದ್ಧಧಮ್ಮವನ್ನು ಮಾರ್ಕ್ಸ್‌ವಾದದ ಹಾಗೆ ಅಂತಿಮವಾಗಿ ಸಮಾನತೆಯನ್ನು ಪ್ರತಿಪಾದಿಸುವ ಮಾರ್ಗವನ್ನಾಗಿಯೂ ಅಂಬೇಡ್ಕರ್ ವಿವರಿಸಿದರು. ಗೇಲ್‌ಓಂವೆಡ್ತ್ ಅವರು ಹೇಳುವಂತೆ 'ಅಂಬೇಡ್ಕರ್ ಅವರು ಬೌದ್ಧಧಮ್ಮ ಮತ್ತು ಕಮ್ಯೂನಿಸಂಗಳನ್ನು ಹೋಲಿಸಿ ನೋಡುವ ರೀತಿ 'ಕಮ್ಯುನಿಸ್ಟ್ ವಿರೋಧಿ' ನಿಲುವಲ್ಲ. ಯಾಕೆಂದರೆ, ಅವರು ಮೂಲ ಬೌದ್ಧಧಮ್ಮದಲ್ಲಿರುವ ಸಮಾಜವಾದಿ ಎಳೆಗಳನ್ನು ಎತ್ತಿತೋರಿಸುತ್ತಾ, ಈ ಕಾಲದಲ್ಲಿ ಸ್ಥಗಿತವಾಗಿದ್ದ ಬೌದ್ಧಧಮ್ಮವನ್ನು ಪರಿವರ್ತಿಸಲೆತ್ನಿಸಿದರು.'[೩] ಅಂದರೆ, ಬೌದ್ಧಧಮ್ಮದಲ್ಲಿ ಕಾಲಕಾಲಕ್ಕೆ ನುಸುಳಿದ ಅನೇಕ ಗೊಂದಲಗಳನ್ನು ಕೈಬಿಟ್ಟು ಅದರ ಮೂಲತತ್ವಗಳ ಆಧಾರದ ಮೇಲೆ ನವ ಬೌದ್ಧಧಮ್ಮವನ್ನು ರೂಪಿಸಿಕೊಂಡರು. ಈ ವ್ಯಾಖ್ಯಾನಗಳ ಹಿಂದೆ ಆಧುನಿಕ ವೈಚಾರಿಕತೆಯ ಜೊತೆಜೊತೆಗೇ ಹತ್ತೊಂಬತ್ತನೇ ಶತಮಾನದ ಭಾರತದ ಜಾತಿವಿರೋಧಿ ಚಳುವಳಿಗಳೂ ಕೆಲಸ ಮಾಡಿದ್ದವು.

ಹೀಗೆ ಅಂಬೇಡ್ಕರ್ ಅವರು ಒಟ್ಟು ತಮ್ಮ ಜೀವಿತದಲ್ಲಿ ಬೌದ್ಧಧಮ್ಮವನ್ನು ಅತ್ಯಂತ ಕರಾರುವಾಕ್ಕಾಗಿ ಹಾಗೂ ವೈಚಾರಿಕವಾಗಿ ವಿವರಿಸಿಕೊಂಡರು. ಧರ್ಮವೊಂದನ್ನು ವಿವರಿಸುವ ಈ ಕ್ರಮ ಇಂದು ಇಡೀ ಆಧುನಿಕ ಜಗತ್ತಿಗೆ ಆದರ್ಶಮಾದರಿಯಾಗಬಲ್ಲದು. ಯಾಕೆಂದರೆ, ಇವತ್ತು ಹಿಂದೂಧರ್ಮ, ಇಸ್ಲಾಂಧರ್ಮ, ಜುದಾಯಿಸಂ ಮುಂತಾದ ಧರ್ಮಗಳನ್ನು ಹಿಂಸೆ, ಅಸಮಾನತೆ ಹಾಗೂ ಪ್ರತ್ಯೇಕತೆಗಳನ್ನು ಉತ್ತೇಜಿಸುವ ಧರ್ಮಗಳಾಗಿ ಪ್ರತಿಪಾದಿಸಲಾಗುತ್ತಿದೆ. ಧರ್ಮಗಳನ್ನು ಈ ರೀತಿಯ 'ಪ್ಯಾಕೇಜ್'ಗಳನ್ನಾಗಿ ಮಾಡಿ ಮಾರುವ ಧಾರ್ಮಿಕ ಮೂಲಭೂತವಾದಿ ಕೈಗಾರಿಕೆ ಜಗತ್ತಿನಾದ್ಯಂತ ಬೆಳೆಯುತ್ತಿದೆ. ಧರ್ಮ ಉಕ್ಕಿಸಬಲ್ಲ ಭಾವನಾತ್ಮಕತೆಯನ್ನು ಜನರನ್ನು ಬೆಸೆಯಲು ಬಳಸದೆ, ಭಾವನಾತ್ಮಕ ವಿಕಾರಗಳನ್ನು ಹಬ್ಬಿಸುವ ಕ್ರೂರ ಕೆಲಸ ಹೆಚ್ಚುಹೆಚ್ಚಾಗಿ ನಡೆಯತೊಡಗಿದೆ. ಇಂಥ ಕಾಲದಲ್ಲಿ, ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ವಿವರಿಸಿರುವ ಆರೋಗ್ಯಕರ ರೀತಿಯನ್ನು ಅನೇಕ ಬರಹಗಾರರು ಈಗಾಗಲೇ ಚರ್ಚಿಸಿದ್ದಾರೆ. ಅವನ್ನು ಹೀಗೆ ಸಂಗ್ರಹಿಸಬಹುದು:

೧. ಉದಾರವಾದಿ ಪ್ರಜಾಪ್ರಭುತ್ವ, ಮಾನವತಾವಾದ, ವೈಜ್ಞಾನಿಕತೆ ಹಾಗೂ ವಿಚಾರವಾದಗಳನ್ನು ಒಪ್ಪುವ ಆಧುನಿಕ ಮನಸ್ಸಿಗೆ ಬೌದ್ಧಧಮ್ಮ ಒಪ್ಪಿತವಾಗುತ್ತದೆ.

೨. ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆಗಳ ತತ್ವವನ್ನು ಈ ಧರ್ಮ ಪ್ರತಿಪಾದಿಸುತ್ತದೆ.

೩. ಧರ್ಮದ ಹೆಸರಿನಲ್ಲಿ ಅನಿಷ್ಟವಾದ ಆಚರಣೆಗಳನ್ನು ಬೌದ್ಧಧಮ್ಮ ಒಪ್ಪುವುದಿಲ್ಲ.

೪. ಬೌದ್ಧಧಮ್ಮ ಜಾತಿಯ ಮೇಲು, ಕೀಳುಗಳನ್ನು ತಿರಸ್ಕರಿಸುತ್ತದೆ.

೫. ಈ ಧಮ್ಮದ ಮಾರ್ಗಗಳನ್ನು ಪ್ರಶ್ನಿಸುವ, ವಿವರಣೆಯ ಮೂಲಕ ಅದಕ್ಕೆ ತಿದ್ದುಪಡಿ ತರುವ ಸ್ವಾತಂತ್ರ್ಯ ಈ ಧರ್ಮದ ಅನುಯಾಯಿಗೆ ಇದೆ.

> **ಇವತ್ತು ಹಿಂದೂಧರ್ಮ, ಇಸ್ಲಾಂಧರ್ಮ, ಜುದಾಯಿಸಂ ಮುಂತಾದ ಧರ್ಮಗಳನ್ನು ಹಿಂಸೆ, ಅಸಮಾನತೆ ಹಾಗೂ ಪ್ರತ್ಯೇಕತೆಗಳನ್ನು ಉತ್ತೇಜಿಸುವ ಧರ್ಮಗಳಾಗಿ ಪ್ರತಿಪಾದಿಸಲಾಗುತ್ತಿದೆ. ಧರ್ಮಗಳನ್ನು ಈ ರೀತಿಯ 'ಪ್ಯಾಕೇಜ್'ಗಳನ್ನಾಗಿ ಮಾಡಿ ಮಾರುವ ಧಾರ್ಮಿಕ ಮೂಲಭೂತವಾದಿ ಕೈಗಾರಿಕೆ ಜಗತ್ತಿನಾದ್ಯಂತ ಬೆಳೆಯುತ್ತಿದೆ. ಧರ್ಮ ಉಕ್ಕಿಸಬಲ್ಲ ಭಾವನಾತ್ಮಕತೆಯನ್ನು ಜನರನ್ನು ಬೆಸೆಯಲು ಬಳಸದೆ, ಭಾವನಾತ್ಮಕ ವಿಕಾರಗಳನ್ನು ಹಬ್ಬಿಸುವ ಕ್ರೂರ ಕೆಲಸ ಹೆಚ್ಚುಹೆಚ್ಚಾಗಿ ನಡೆಯತೊಡಗಿದೆ. ಇಂಥ ಕಾಲದಲ್ಲಿ, ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ವಿವರಿಸಿರುವ ಆರೋಗ್ಯಕರ ರೀತಿಯನ್ನು ಅನೇಕ ಬರಹಗಾರರು ಈಗಾಗಲೇ ಚರ್ಚಿಸಿದ್ದಾರೆ.**

೬. ಧರ್ಮಗಳು ಸಾಮಾನ್ಯವಾಗಿ ಪವಾಡಗಳು, ಅಲೌಕಿಕ ಘಟನೆಗಳು ಹಾಗೂ ಅಲೌಕಿಕ ಶಕ್ತಿಗಳ ಸುತ್ತ ಕಟ್ಟಿದ ಸುಳ್ಳುಗಳ ಮೂಲಕ ಜನರ ಮೇಲೆ ಯಜಮಾನಿಕೆ ಸ್ಥಾಪಿಸುತ್ತಿರುತ್ತವೆ. ಹಿಂದೂಧರ್ಮ ಹೆಚ್ಚಾಗಿ ಈ ಬಗೆಯಲ್ಲೇ ಜನಸಮುದಾಯವನ್ನು ನಿಯಂತ್ರಿಸುತ್ತಾ ಬಂದಿದೆ. ಈ ದೃಷ್ಟಿಯಿಂದ ನೋಡಿದಾಗ, ಬೌದ್ಧಧಮ್ಮ ಪವಾಡಗಳಾಗಲೀ ಅಲೌಕಿಕವಾದ ದೈವದ ಕಲ್ಪನೆಯಾಗಲೀ ಇಲ್ಲದ ಧಮ್ಮ. ಬೌದ್ಧ ಧಾರ್ಮಿಕ ನಾಯಕರಲ್ಲಿ ಅಲೌಕಿಕ ಶಕ್ತಿಯಿದೆಯೆಂದು ಬೌದ್ಧಧಮ್ಮ ಬಿಂಬಿಸುವುದಿಲ್ಲ.

೭. ಸಮಾನತೆಯ ಆಶಯವನ್ನು ಪ್ರತಿಪಾದಿಸುವ ರಾಜಕೀಯ ಕ್ರಾಂತಿಗೆ ಪೂರಕವಾಗಬಲ್ಲ ಧಾರ್ಮಿಕ ಕ್ರಾಂತಿಯನ್ನು ರೂಪಿಸಲು ಬೌದ್ಧಧಮ್ಮ ನೆರವಾಗಬಲ್ಲದು.

೮. ಬುದ್ಧನ ಪ್ರಕಾರ 'ಧಮ್ಮ' ಎನ್ನುವುದು ಮೂಲತಃ ನ್ಯಾಯ ಹಾಗೂ ಸಾಮಾಜಿಕ ನೈತಿಕತೆಯಾಗಿತ್ತು. ಈ ಧಮ್ಮದಲ್ಲಿ ತೀರ್ಥಯಾತ್ರೆಗಳು, ಬಲಿಗಳು ಇತ್ಯಾದಿಗಳಿಗೆ ಅವಕಾಶವಿಲ್ಲ.

೯. ಚರಿತ್ರೆಯುದ್ದಕ್ಕೂ ಅನೇಕ ಧರ್ಮಗಳು ಯಾಜಮಾನ್ಯದ ರಾಜಕಾರಣದ ಹಾಗೂ ಎಲ್ಲವನ್ನೂ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಲಾಭಕೋರ ರಾಜಕಾರಣದ ಮುಖವಾಡಗಳಾಗಿ ಬಳಕೆಯಾಗುತ್ತಾ ಬಂದಿವೆ. ಇದನ್ನು ಮನಗಂಡಿದ್ದ ಅಂಬೇಡ್ಕರ್ 'ನನಗೆ ಧರ್ಮದ ಅಗತ್ಯವಿದೆಯೇ ಹೊರತು ಧರ್ಮದ ಹೆಸರಿನಲ್ಲಿ ಗೋಸುಂಬೆತನವಲ್ಲ' ಎಂದು ಹೇಳಿದರು. ಒಂದು ಉತ್ತಮ ಜೀವನ ಮಾರ್ಗವಾಗಿ ಕೂಡ ಅವರು ಬೌದ್ಧಮಾರ್ಗವನ್ನು ಒಪ್ಪಿಕೊಂಡರು.

೧೦. ಬೌದ್ಧ ಧಮ್ಮ ವೈದಿಕವಾದ ಹಾಗೂ ಬ್ರಾಹ್ಮಣವಾದದ ವಿರುದ್ಧ ಹೋರಾಡುತ್ತಾ ಅಸ್ಪೃಶ್ಯತೆಯನ್ನು ದೃಢವಾಗಿ ವಿರೋಧಿಸಿತ್ತು ಹಾಗೂ ಅಸ್ಪೃಶ್ಯರನ್ನು ತನ್ನ ತೆಕ್ಕೆಗೆ ಸ್ವೀಕರಿಸಿತ್ತು. ಈ ತಾತ್ವಿಕ ಹಾಗೂ ಧಾರ್ಮಿಕ ಬುನಾದಿ ಅಂಬೇಡ್ಕರ್ ಅವರು ವೈದಿಕ ವಿಕಾರಗಳ ವಿರುದ್ಧ ನಡೆಸುತ್ತಿದ್ದ ಹೋರಾಟಕ್ಕೆ ಪೂರಕ ಅಗತ್ಯವಾಗಿತ್ತು.

ಆಧುನಿಕ ಜಗತ್ತಿನ ಶ್ರೇಷ್ಠ ಬೌದ್ಧ ವ್ಯಾಖ್ಯಾನಕಾರರಾದ ಅಂಬೇಡ್ಕರ್ ಅವರು ಧಮ್ಮವನ್ನು ವಿವರಿಸಿಕೊಂಡ ಕ್ರಮದಿಂದಾಗಿ ಬೌದ್ಧಧಮ್ಮ ಹೊಸ ಕಾಲದಲ್ಲಿನ ವಿಮೋಚನೆಯ ಧರ್ಮವಾಗಿ ಪರಿವರ್ತಿತವಾದದ್ದನ್ನು ಗೇಲ್ ಓಂವೆಡ್ತ್ ಚರ್ಚಿಸುತ್ತಾರೆ.[೪] ಜಾತಿ ಅಸಮಾನತೆಯ ಜೊತೆ ಜೊತೆಗೇ ಗಂಡು- ಹೆಣ್ಣಿನ ನಡುವಣ ಅಸಮಾನತೆ ಕುರಿತು ಅಂಬೇಡ್ಕರ್ ನಡೆಸಿದ ಚಿಂತನೆಗೂ ಬೌದ್ಧಧಮ್ಮದಲ್ಲಿ ಪ್ರೇರಣೆಗಳಿದ್ದವು. ಅದರ ಜೊತೆಗೇ ಬೌದ್ಧಧಮ್ಮದ ಮೂಲಕ ಅಂಬೇಡ್ಕರ್ ರೂಪಿಸಿಕೊಂಡ ವೈಜ್ಞಾನಿಕ ವಿಮರ್ಶಾ ವಿಧಾನ ಕೂಡ ಅಷ್ಟೇ ಮುಖ್ಯವಾದುದು. ಮೀರಾನಂದಾ ಅವರ ಪ್ರಕಾರ 'ಅಂಬೇಡ್ಕರ್ ಅವರು ಸನಾತನ ವೈದಿಕ ಲೋಕದರ್ಶನವನ್ನು ತೀವ್ರವಾಗಿ ಪರೀಕ್ಷಿಸುವ ಹಾಗೂ ಅದು ಬೆಂಬಲಿಸುವ ಮೌಲ್ಯಗಳನ್ನು ಪ್ರಶ್ನಿಸುವ ವಿಧಾನಗಳನ್ನು ಕೂಡ ಬೌದ್ಧವಾದದ ಮೂಲಕ ರೂಪಿಸಿಕೊಂಡರು.'[೫] ಮೀರಾನಂದಾ ಅವರೇ ತೋರಿಸಿಕೊಡುವಂತೆ, 'ಅಂಬೇಡ್ಕರ್ ಅವರು ಭಾರತೀಯ ಪರಂಪರೆಗಳಲ್ಲಿ ಕೆಳಗೆ ತುಳಿಯಲಾಗಿದ್ದ ಮೂಲ ವೈಜ್ಞಾನಿಕ ಅಂಶಗಳನ್ನು ಹಾಗೂ ವಿಮರ್ಶಾತ್ಮಕ ಪರಂಪರೆಗಳನ್ನು ಜೀವಂತಗೊಳಿಸಿದರು... ಈ ಅಂಶಗಳು ಬುದ್ಧನ ಬೋಧನೆಗಳ ತಿರುಳಾಗಿವೆ ಎಂಬುದನ್ನು ತೋರಿಸಿಕೊಟ್ಟರು. ಬುದ್ಧನ ಅನುಯಾಯಿಗಳು ಈ ಅಂಶಗಳನ್ನು ಅನುಸರಿಸುವುದು ಅವರ ಪರಮ ಕರ್ತವ್ಯ ಎಂದು ಮನವರಿಕೆ ಮಾಡಿಕೊಟ್ಟರು... ಸಾಂಸ್ಥಿಕ ಧರ್ಮಗಳನ್ನೂ ಅವು ಎತ್ತಿ ಹಿಡಿದ ನೋಟಕ್ರಮಗಳನ್ನೂ ಒಡೆಯಲು ಅಂಬೇಡ್ಕರ್ ಅವರು ಬುದ್ಧ ಪರಂಪರೆಯನ್ನು ಹೀಗೆ ರೂಪಿಸಿಕೊಟ್ಟರು.'[೬] ಈ ದೃಷ್ಟಿಯಿಂದ ಅಂಬೇಡ್ಕರ್ ಅವರ ಬೌದ್ಧ ವ್ಯಾಖ್ಯಾನ ಕೇವಲ ದಲಿತರ ಹೊಸ ಐಡೆಂಟಿಟಿಯ ಉದ್ದೇಶದಿಂದ ಮಾತ್ರ ಹುಟ್ಟಲಿಲ್ಲ. ಗೇಲ್ ಓಂವೆಡ್ತ್ ಅವರು ತೋರಿಸುವಂತೆ 'ದಲಿತರ ಹೊಸ ಐಡೆಂಟಿಟಿಯ ನಿರ್ಮಾಣದ ಜೊತೆಗೆ ಇಡೀ ಭಾರತಕ್ಕೆ ಈ ಬೌದ್ಧ ಸಾಧ್ಯತೆಯನ್ನು ಬಿಂಬಿಸಲು ಅಂಬೇಡ್ಕರ್ ಯತ್ನಿಸಿದರು. ತನ್ಮೂಲಕ ಭಾರತದ ಪುನರ್‌ಸೃಷ್ಟಿಯ ಚಳುವಳಿಯಲ್ಲಿ ದಲಿತರು ಕೇವಲ ಭಾಗಿಗಳಷ್ಟೇ ಆಗದೆ ಈ ಚಳುವಳಿಯನ್ನು ಮುನ್ನಡೆಸುವ ಸಾಧ್ಯತೆಯನ್ನೂ ತೆರೆದರು.'[೭]

ಬಾಬಾಸಾಹೇಬರ ಬೌದ್ಧಧಮ್ಮದ ವ್ಯಾಖ್ಯಾನದ ನಂತರ ಅನೇಕ ಶೂದ್ರ, ದಲಿತ ಚಿಂತಕರು ಬೌದ್ಧಧಮ್ಮದ ಕ್ರಾಂತಿಕಾರಕ ಅಂಶಗಳನ್ನು ಹಾಗೂ ಬೌದ್ಧ ಜ್ಞಾನವಿಧಾನವನ್ನು ಭಾರತೀಯ ಚಿಂತನೆಯ ಕೇಂದ್ರಕ್ಕೆ ತರಲೆತ್ನಿಸುತ್ತಿದ್ದಾರೆ. ಬೌದ್ಧ ಜ್ಞಾನಮಾರ್ಗವನ್ನು ಚರ್ಚಿಸುತ್ತಾ ಕಾಂಚಾ ಇಳಯ್ಯನವರು ಬರೆಯುತ್ತಾರೆ : "ಬ್ರಾಹ್ಮಣವಾದವು 'ಬ್ರಾಹ್ಮಣ ಹಿತಾಯ, ಬ್ರಾಹ್ಮಣ ಸುಖಾಯ'ದ ದುರಾಸೆಯನ್ನು ಪ್ರತಿಪಾದಿಸಿದ ಕಾಲದಲ್ಲಿ ಬುದ್ಧ 'ಬಹುಜನ ಹಿತಾಯ, ಬಹುಜನ ಸುಖಾಯ'ದ ವಿಶಾಲ ಆಶಯವನ್ನು ನಂಬಿದ. ಆದ್ದರಿಂದಲೇ ಶೂದ್ರರು, ಚಂಡಾಲರು ಹಾಗೂ ಬುಡಕಟ್ಟುಗಳ ಜನರನ್ನು ಸಂಘಟಿಸಿ ಬ್ರಾಹ್ಮಣವಾದಕ್ಕೆ ಪರ್ಯಾಯವೊಂದನ್ನು ಕಟ್ಟಿದ... ಈ ಬಗೆಯಲ್ಲಿ

ಗೌತಮಬುದ್ಧ ಜನರನ್ನು ಒಳಗೊಳ್ಳುವ ಚಿಂತನೆ ಹಾಗೂ ವ್ಯವಸ್ಥೆಯ ಮೂಲಕ ನಾಗರಿಕ ಸಮಾಜದಲ್ಲಿ ಹಾಗೂ ರಾಜಕೀಯ ಸಮಾಜದಲ್ಲಿ ಶೂದ್ರರಿಗೆ ನಾಗರಿಕ–ರಾಜಕೀಯ ಅವಕಾಶಗಳನ್ನು ತೆರೆದ. ಲಕ್ಷ್ಮೀ, ಸರಸ್ವತಿಯರನ್ನು ಧನ ಹಾಗೂ ವಿದ್ಯೆಗಳ ದೇವಿಯರೆಂದು ಕರೆಯುತ್ತಿದ್ದ ವೈದಿಕಧರ್ಮ ವಾಸ್ತವದಲ್ಲಿ ಮಹಿಳೆಯರಿಗೆ ಧನದ (ಅಂದರೆ ಆಸ್ತಿಯ) ಹಕ್ಕನ್ನು ಹಾಗೂ ವಿದ್ಯೆಯ ಹಕ್ಕನ್ನು ನಿರಾಕರಿಸಿತ್ತು. ಆರಂಭದಲ್ಲಿಯಲ್ಲದಿದ್ದರೂ, ಆನಂತರದಲ್ಲಿ ಸ್ತ್ರೀಯರು 'ಸಂಘ'ದಲ್ಲಿ ಓದುವ, ಬರೆಯುವ ಅವಕಾಶವನ್ನು ಗೌತಮಬುದ್ಧ ತೆರೆದ. 'ಸಂಘ'ದ ಈ ಅನುಭವದ ಮೂಲಕವೇ ಜಗತ್ತಿನ ಮೊದಲ ಸ್ತ್ರೀವಾದಿ ಗ್ರಂಥ 'ತೆರಿಗಾಥಾ' ಸೃಷ್ಟಿಯಾಯಿತು."[೮]

ಹೀಗೆ ಅಂಬೇಡ್ಕರ್‌ವಾದೀ ಸಾಮಾಜಿಕ ಚಿಂತನೆ ಹಾಗೂ ಅಂಬೇಡ್ಕರ್ ಅವರ ಬೌದ್ಧ ವ್ಯಾಖ್ಯಾನಗಳೆರಡೂ ಇಂದಿನ ಭಾರತೀಯ ಚಿಂತನೆಯ ಬಹುಮುಖ್ಯ ಧಾರೆಯನ್ನು ರೂಪಿಸತೊಡಗಿವೆ. ಹಾಗೆಯೇ ಅಂಬೇಡ್ಕರ್ ಅವರ ಬೌದ್ಧಧಮ್ಮ ಸ್ವೀಕಾರದ ಮಾರ್ಗ ಕೂಡ ವ್ಯಾಪಕವಾಗಿ ಹಬ್ಬತೊಡಗಿದೆ. ಭಾರತದ ದಲಿತ ಚಳುವಳಿಯಲ್ಲಿ ಅಂಬೇಡ್ಕರ್‌ವಾದ ಹಾಗೂ ಬೌದ್ಧಧಮ್ಮಗಳು ಪರಸ್ಪರ ಬೆರೆತುಹೋಗಿವೆ. ದಲಿತರು ತಮ್ಮ ಮೇಲೆ ಹೇರಲಾದ ಕೀಳರಿಮೆಯನ್ನು ಬೌದ್ಧಧಮ್ಮದ ಮೂಲಕ ಮೀರಲೆತ್ನಿಸಿದ್ದಾರೆ. ಅಸ್ಪೃಶ್ಯತೆಯ ಅವಮಾನದಿಂದ ಕುಗ್ಗಿಹೋದ ದಲಿತರ ದೇಹ ಹಾಗೂ ಚೈತನ್ಯಗಳನ್ನು ಬಿಡುಗಡೆಗೊಳಿಸದಿದ್ದರೆ ಆ ಮನಸ್ಸುಗಳಲ್ಲಿ ಯಾವ ಉತ್ಸಾಹವೂ ಹುಟ್ಟುವುದಿಲ್ಲ; ಮನಸ್ಸಿನಲ್ಲಿ ಉತ್ಸಾಹ ಉಕ್ಕದೆ ಪ್ರಗತಿಯಿಲ್ಲ ಎಂಬುದನ್ನು ಅಂಬೇಡ್ಕರ್ ಅವರು ಸ್ಪಷ್ಟವಾಗಿ ಗ್ರಹಿಸಿದ್ದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೌದ್ಧಧಮ್ಮದ ಮೂಲಕ ದಲಿತರ ಮನಸ್ಸುಗಳಲ್ಲಿ ಉಕ್ಕಿದ ಹೊಸ ಚೈತನ್ಯವನ್ನು ಅನೇಕ ಅಧ್ಯಯನಕಾರರು ಕಂಡುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯೋತ್ತರ ದಲಿತ ತಲೆಮಾರುಗಳ ಮೇಲೆ ಬುದ್ಧತತ್ವಗಳ ಪ್ರಭಾವ ಕುರಿತು ಅಧ್ಯಯನ ಮಾಡಿರುವ ಅರುಣ್ ಸಾಧು ತಾವು ಕಂಡ ಬೆಳವಣಿಗೆಯನ್ನು ಹೀಗೆ ದಾಖಲಿಸುತ್ತಾರೆ: 'ಬೌದ್ಧಧಮ್ಮದಿಂದಾಗಿ ದಲಿತರು ತಮ್ಮ ಕೀಳರಿಮೆಯಿಂದ ಹೊರಬಂದಿದ್ದಾರೆ. ಅವರಲ್ಲಿ ಹೊಸ ಐಡೆಂಟಿಟಿ ಹಾಗೂ ಆತ್ಮವಿಶ್ವಾಸ ಕಾಣುತ್ತಿದೆ. ಬೌದ್ಧರಾಗಿರುವ ಯುವಕರು ಪೂರ್ವಜನ್ಮದ ಕರ್ಮದ ಸಿದ್ಧಾಂತವನ್ನಾಗಲೀ ಹಳೆಯ ಆಚರಣೆಗಳನ್ನಾಗಲೀ ನಂಬುವುದಿಲ್ಲ. ಮೇಲುಜಾತಿಯ ಹಿಂದೂ ತರುಣ ತರುಣಿಯರಿಗಿಂತ ಅವರಲ್ಲಿ ಹೆಚ್ಚಿನ ದೃಢತೆ, ವೈಜ್ಞಾನಿಕತೆ ಹಾಗೂ ಪ್ರಗತಿಪರತೆ ಕಂಡುಬರುತ್ತಿದೆ. ಅವರು ಕುರುಡು ನಂಬಿಕೆಗಳಿಂದ ವೈಚಾರಿಕತೆಯ ಕಡೆಗೆ ನಡೆದಿರುವುದರಿಂದ, ಅವರಲ್ಲಿ ಶಿಕ್ಷಣ ಹಾಗೂ ಜ್ಞಾನದ ಹಸಿವು ಹೆಚ್ಚಿದೆ. ಅವರ ಆರ್ಥಿಕ ಪ್ರಗತಿಗೆ ಇದು ಕೂಡ ಮುಖ್ಯ ಕಾರಣವಾಗಿದೆ.'[೯]

ಇವೆಲ್ಲದರ ಜೊತೆಗೆ, 'ಹಿಂದೂಗ್ರಾಮ'ದ ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದ ಹುಟ್ಟುವ ಮಾನಸಿಕ, ದೈಹಿಕ ದಬ್ಬಾಳಿಕೆಯಿಂದ ಬೌದ್ಧ ದಲಿತರು ಬಿಡುಗಡೆಗೊಂಡದ್ದು ಕೂಡ ಅತ್ಯಂತ ಮುಖ್ಯವಾದುದು. ಗೇಲ್ ಓಂವೆಡ್ತ್ ಗುರುತಿಸುವಂತೆ, 'ಮಹಾರಾಷ್ಟ್ರದ ನವಬೌದ್ಧರಲ್ಲಿ ಈ ಬಿಡುಗಡೆಯು ಸಾಮಾಜಿಕ ಬಂಡಾಯದ ಆಯಾಮವನ್ನೂ ಪಡೆಯಿತು. ಹಿಂದೂ ಜಾತಿ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಸವರ್ಣೀಯರು ತಾಕೀತು ಮಾಡಿದಾಗಲೆಲ್ಲ ಸತ್ತ ದನಗಳನ್ನು ಹೊತ್ತೊಯ್ಯುವ ಅಥವಾ ಅಂಥ ಅನೇಕ ಹೀನ ಕೆಲಸಗಳನ್ನು ಮಾಡಬೇಕಾದ ಹಿಡಿತ ಈಗ ಇರಲಿಲ್ಲ. ಈ ದೃಷ್ಟಿಯಿಂದ ಕೂಡ ಹಿಂದೂವಲ್ಲದ ಐಡೆಂಟಿಟಿಯೇ ದಲಿತರಿಗೆ ಒಂದು ಬಿಡುಗಡೆಯಂತೆ ಕಂಡಿದ್ದು ಆಶ್ಚರ್ಯವಲ್ಲ'.[೧೦]

ಅಂಬೇಡ್ಕರ್ ಅವರು ಹುಟ್ಟು ಹಾಕಿದ ರೆನೈಸಾನ್ಸ್ ಅಥವಾ ಪುನರುಜ್ಜೀವನದ ಫಲಗಳನ್ನು ಇವತ್ತು ಭಾರತದ ಬಹುಜನರು ಪಡೆಯಲಾರಂಭಿಸಿದ್ದಾರೆ. ಇಂದಿನ ಅನೇಕ ಬಗೆಯ ಸಾಂಸ್ಕೃತಿಕ ವಿಶ್ಲೇಷಣೆಗಳು, ಸಾಹಿತ್ಯ ಸೃಷ್ಟಿ, ಬೌದ್ಧಿಕ ಚಿಂತನೆ, ಸಬಲೀಕರಣದ ಹೋರಾಟಗಳು, ರಾಜಕೀಯ ಹೋರಾಟಗಳು, ಕೋಮುವಾದ ವಿರೋಧಿ ಹೋರಾಟಗಳು ಅಂಬೇಡ್ಕರ್‌ವಾದದಿಂದ ರೂಪುಗೊಂಡಿವೆ. ಇವೆಲ್ಲಕ್ಕೂ ಬುದ್ಧಮಾರ್ಗದ ಬೆಳಕು ಇನ್ನಷ್ಟು ಬೆರೆಯಬೇಕಾದ ಅಗತ್ಯ ಇವತ್ತು ಹೆಚ್ಚಿಗೆ ಇದೆ. ಇದೀಗ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬೌದ್ಧಧಮ್ಮ ಸ್ವೀಕಾರದ ಐವತ್ತನೇ ವರ್ಷದ ನೆನಪಿನ ಸಂದರ್ಭದಲ್ಲಿ ಈ ಬೌದ್ಧಮಾರ್ಗದ ಮಹತ್ವ ಹಾಗೂ ಪರಿಣಾಮ ಕುರಿತ ಚರ್ಚೆ ಭಾರತದಾದ್ಯಂತ ಆರಂಭವಾಗತೊಡಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಕರ್ನಾಟಕದ ಹಲವು ದಲಿತೇತರ ಬುದ್ಧಿಜೀವಿಗಳು ಅಂಬೇಡ್ಕರ್‌ವಾದದಿಂದ ರೂಪುಗೊಂಡ ದಲಿತ ಚಳುವಳಿಯ ಜೊತೆಜೊತೆಗೇ ಬೆಳೆದವರು. ಆದರೂ ಇವರೆಲ್ಲ ಕರ್ನಾಟಕದಲ್ಲಿ ಅಂಬೇಡ್ಕರ್‌ವಾದವನ್ನು ಆಳವಾಗಿ ಅಧ್ಯಯನ ಮಾಡಿ ಹೊಸಕಾಲಕ್ಕೆ ವಿಸ್ತರಿಸುವ ಕೆಲಸವನ್ನು ಬಹುತೇಕವಾಗಿ ದಲಿತ ಬುದ್ಧಿಜೀವಿಗಳಿಗೇ ಬಿಟ್ಟದ್ದು ಒಂದು ಬೌದ್ಧಿಕ ಕರ್ತವ್ಯಲೋಪವಾಗಿದೆ. ಅದರಲ್ಲೂ ಅಸ್ಪೃಶ್ಯತೆಯ ವಿರುದ್ಧದ ಸಾಮಾಜಿಕ ಹೋರಾಟಗಳನ್ನು ಬೆಂಬಲಿಸಿದ ದಲಿತೇತರ ಬುದ್ಧಿಜೀವಿಗಳು ಅಸ್ಪೃಶ್ಯತೆಯ ಸಮಸ್ಯೆಗೆ ಅಂಬೇಡ್ಕರ್ ಅವರು ಕಂಡುಕೊಂಡ ಧಾರ್ಮಿಕ ಪರಿಹಾರ ಕುರಿತು ಆಳವಾಗಿ ಚಿಂತಿಸಿದಂತಿಲ್ಲ. ಸವರ್ಣೀಯರಲ್ಲಿ ಬೆಳೆಯಬಹುದಾದ ಜಾತ್ಯತೀತತೆ, ವೈಚಾರಿಕತೆಯ ಮೂಲಕ ಹಾಗೂ ದಲಿತ ಸಂಘರ್ಷ ಅಥವಾ ಸಂವಿಧಾನಾತ್ಮಕ ಪರಿಹಾರಗಳ ಮೂಲಕ ಅಸ್ಪೃಶ್ಯತೆಯ ಸಮಸ್ಯೆ ಕೊನೆಗೊಳ್ಳಬಹುದೆಂದು ಇವರಲ್ಲಿ ಬಹುತೇಕರು ಆಶಿಸುತ್ತಾ ಬಂದರು.

> **ಅಂಬೇಡ್ಕರ್ ಅವರು ಹುಟ್ಟು ಹಾಕಿದ ರೆನೈಸಾನ್ಸ್ ಅಥವಾ ಪುನರುಜ್ಜೀವನದ ಫಲಗಳನ್ನು ಇವತ್ತು ಭಾರತದ ಬಹುಜನರು ಪಡೆಯಲಾರಂಭಿಸಿದ್ದಾರೆ. ಇಂದಿನ ಅನೇಕ ಬಗೆಯ ಸಾಂಸ್ಕೃತಿಕ ವಿಶ್ಲೇಷಣೆಗಳು, ಸಾಹಿತ್ಯ ಸೃಷ್ಟಿ, ಬೌದ್ಧಿಕ ಚಿಂತನೆ, ಸಬಲೀಕರಣದ ಹೋರಾಟಗಳು, ರಾಜಕೀಯ ಹೋರಾಟಗಳು, ಕೋಮುವಾದ ವಿರೋಧಿ ಹೋರಾಟಗಳು ಅಂಬೇಡ್ಕರ್‌ವಾದದಿಂದ ರೂಪುಗೊಂಡಿವೆ. ಇವೆಲ್ಲಕ್ಕೂ ಬುದ್ಧಮಾರ್ಗದ ಬೆಳಕು ಇನ್ನಷ್ಟು ಬೆರೆಯಬೇಕಾದ ಅಗತ್ಯ ಇವತ್ತು ಹೆಚ್ಚಿಗೆ ಇದೆ. ಇದೀಗ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬೌದ್ಧಧಮ್ಮ ಸ್ವೀಕಾರದ ಐವತ್ತನೇ ವರ್ಷದ ನೆನಪಿನ ಸಂದರ್ಭದಲ್ಲಿ ಈ ಬೌದ್ಧಮಾರ್ಗದ ಮಹತ್ವ ಹಾಗೂ ಪರಿಣಾಮ ಕುರಿತ ಚರ್ಚೆ ಭಾರತದಾದ್ಯಂತ ಆರಂಭವಾಗತೊಡಗಿದೆ.**

ಆದರೆ ಸವರ್ಣೀಯರ ತಲೆಯೊಳಗಿನ ಜಾತಿವಿಕಾರ ಅಷ್ಟು ಸುಲಭವಾಗಿ ಮಾಯವಾಗುವಂಥದ್ದಲ್ಲ. ಹೀಗಾಗಿ ಧಾರ್ಮಿಕ ಮತಾಂತರದ ಮೂಲಕವೇ ಅಸ್ಪೃಶ್ಯತೆಗೆ ಅಂತಿಮ ಪರಿಹಾರ ದೊರೆಯಬಲ್ಲದು ಎಂಬ ಬಗೆಗಿನ ಚಿಂತನೆ ಈಗ ಹೆಚ್ಚು ವ್ಯಾಪಕವಾಗತೊಡಗಿದೆ. ಅಸ್ಪೃಶ್ಯತೆ ಕೇವಲ ದಲಿತರ ಸಮಸ್ಯೆಯಲ್ಲವೆಂಬುದನ್ನು ಅರಿತು, ದಲಿತರ ಹೋರಾಟಗಳ ಜೊತೆಯಿರುವ ಎಲ್ಲ ಜಾತಿಗಳ ಪ್ರಗತಿಪರರೂ ದಲಿತರ ಈ ಧಾರ್ಮಿಕ ಬಿಡುಗಡೆಯ ಪ್ರಶ್ನೆಯನ್ನು ದಲಿತರ ಹಾಗೂ ದಲಿತ ನಾಯಕತ್ವದ ಅನುಭವದ ಬೆಳಕಿನಲ್ಲಿ ಸರಿಯಾಗಿ ಅರಿಯಲೆತ್ನಿಸಬೇಕಾಗಿದೆ. ಐವತ್ತು ವರ್ಷಗಳ ಕೆಳಗೆ ಈ ರಾಷ್ಟ್ರದ ಶ್ರೇಷ್ಠ ನಾಯಕರಲ್ಲೊಬ್ಬರಾದ ಬಾಬಾಸಾಹೇಬರು ಕಂಡ ಬುದ್ಧ ಬೆಳಕಿನಲ್ಲಿ ನಮ್ಮ ಅನೇಕ ಗೊಂದಲಗಳನ್ನು ಬಗೆಹರಿಸಿಕೊಳ್ಳಬೇಕಾಗಿದೆ; ಅಸ್ಪೃಶ್ಯತೆಯ ಭೀಕರ ಸ್ಥಿತಿಗೆ ಶಾಶ್ವತ ಪರಿಹಾರ ಹುಡುಕಲು ಹಲವು ನಿಟ್ಟಿನ ಚಿಂತನೆ ಹಾಗೂ ಚಳುವಳಿಗಳನ್ನು ಹೊಸದಾಗಿ ರೂಪಿಸಬೇಕಾಗಿದೆ. ಅಂಬೇಡ್ಕರ್‌ವಾದ ಹಾಗೂ ಅಂಬೇಡ್ಕರ್ ಅವರು ವ್ಯಾಖ್ಯಾನಿಸಿ ರೂಪಿಸಿಕೊಟ್ಟ ಬೌದ್ಧಧಮ್ಮ ಆರಂಭಿಸಿದ ಸ್ವಾತಂತ್ರ್ಯೋತ್ತರ ಭಾರತದ ಅಸಲಿ ಪುನರುಜ್ಜೀವನವನ್ನು ದಲಿತ, ಹಿಂದುಳಿದ ವರ್ಗಗಳ ಬಹುಜನಸಮಾಜಕ್ಕೆ ವ್ಯಾಪಕವಾಗಿ ಹಬ್ಬಿಸುವ ಮಹತ್ತರ ಕರ್ತವ್ಯ ಇಂದು ನಮ್ಮೆಲ್ಲರದೂ ಆಗಿದೆ.

ಅಡಿಟಿಪ್ಪಣಿ

1 Shyam Tagade : Buddha Dhamma Mission of Bhodisatta Ambedkar, p.13

2 Meera Nanda: Prophets Facing Backward, Pp.182-184.

3 Gail Omvedt : Dalits and the Democratic Revolution, p.246.

4 Ibid, 247.

5 Meera Nanda: opp.cit., summarised, Pp.201-202.

6 Ibid.

7 Gail Omvedt, opp.cit, p.241.

8 Kancha Ilaiah in (Ed) G. Shah: Dalit Identity and Politics, Pp-116-120, summarised.

9 Arun Sadhu, cited in Ambedkar on Buddhism and its Impact, p.9.

10 Gail Omvedth : opp.cit, pp.248-249, summarised. □

ಸುವರ್ಣ ಕರ್ನಾಟಕದ ಸವಿ ನೆನಪಲಿ

ಕರ್ನಾಟಕದ ಇತಿಹಾಸದ ವೈಶಿಷ್ಟ್ಯವೆಂದರೆ, ತಾನು ಜನಿಸಿದ ದಿನದಿಂದಲೂ ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುವುದು. ಬಂಡವಾಳಶಾಹಿ ಆರ್ಥಿಕತೆಯಲ್ಲಿ ಸಮತೋಲನವಾದ ಆರ್ಥಿಕ ಬೆಳವಣಿಗೆಯನ್ನು ಅಪೇಕ್ಷಿಸುವುದು ಸೂಕ್ತವಲ್ಲವಾದರೂ, ಕರ್ನಾಟಕದಂತಹ ಸಂಪದ್ಭರಿತ ರಾಜ್ಯಕ್ಕೆ ಈ ವಿದ್ಯಮಾನ ಹೊರತಾಗಬಹುದಿತ್ತು. ದೇಶದಲ್ಲಿಯೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ, ಅತಿ ದಟ್ಟವಾದ ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶ, ಉತ್ತಮ ಜಲ ಸಂಪನ್ಮೂಲವಿರುವ ಕಾವೇರಿ, ಕೃಷ್ಣ, ನೇತ್ರಾವತಿ, ಹೇಮಾವತಿ, ಘಟಪ್ರಭ, ಮಲಪ್ರಭ ಮುಂತಾದ ನದಿಗಳು, ಅತ್ಯುತ್ತಮ ನೈಸರ್ಗಿಕ ಸಂಪತ್ತುಳ್ಳ ಬೆಟ್ಟ ಗುಡ್ಡಗಳು ಮತ್ತು ಅಮೂಲ್ಯ ಖನಿಜಗಳುಳ್ಳ ಗಣಿಗಳು ಕರ್ನಾಟಕದಲ್ಲಿವೆ. ಹಾಗಾಗಿಯೇ ಅಲ್ಲವೇ ಕನ್ನಡ ನಾಡನ್ನು ಕವಿವರ್ಯರು 'ಚಿನ್ನದ ನಾಡಿದು ಗಂಧದ ಬೀಡಿದು' ಎಂದು ಹಾಡಿ ಹೊಗಳಿದ್ದು.

ನಾ. ದಿವಾಕರ

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಆಶದೀವಿಗೆಯ ಹೊತ್ತು, ಅಖಂಡ ಕರ್ನಾಟಕದ ಕನಸನ್ನು ಸಾಕಾರಗೊಳಿಸುವ ಮಹದಾಸೆಯನ್ನು ಬೆನ್ನತ್ತಿ, ೧೯೫೬ರ ನವಂಬರ್ ೧ರಂದು ಉದಯಿಸಿದ ಕರ್ನಾಟಕಕ್ಕೆ ಈಗ ಐವತ್ತು ವರ್ಷಗಳ ಸಂಭ್ರಮ. ಸುವರ್ಣ ಮಹೋತ್ಸವದ ಈ ಸಂದರ್ಭ ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆ ತರುವಂತಹುದು. ಸಂಭ್ರಮದ ಜೊತೆಯಲ್ಲೇ ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭವೂ ಹೌದು. ಸ್ವತಂತ್ರ ಭಾರತದಲ್ಲಿ ಹಲವಾರು ರಾಜ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕದ ವಿವಿಧ ಪ್ರಾಂತ್ಯಗಳು, ಭಾಷಾವಾರು ರಾಜ್ಯಗಳ ಸ್ಥಾಪನೆಯಾದಾಗ ಒಂದಾಗಿದ್ದು, ಸುಲಭವಾದ ಪ್ರಕ್ರಿಯೆಯಾಗಿರಲಿಲ್ಲ.

ಒಂದೆಡೆ ಹೈದರಾಬಾದ್ ಕರ್ನಾಟಕ, ಇನ್ನೊಂದೆಡೆ ಆಂಧ್ರ ಮಹಾರಾಷ್ಟ್ರ ಗಡಿ ಪ್ರದೇಶ, ಇತ್ತ ಕಾಸರಗೋಡು, ಹೀಗೆ ಹಲವಾರು ಸಮಸ್ಯೆಗಳನ್ನು ಮಡಿಲಲ್ಲಿಟ್ಟುಕೊಂಡು, ಒಂದು ರಾಜ್ಯವಾಗಿ ಹೊರಹೊಮ್ಮಿದ ಕರ್ನಾಟಕಕ್ಕೆ ಈಗ ೫೦ ರ ಸಂಭ್ರಮ. ಹಲವಾರು ಮಹಾನ್ ಚೇತನಗಳ ಆಶೋತ್ತರಗಳ ಸಾಕಾರವಾಗಿ, ಹೋರಾಟಗಳ ಪ್ರತಿಫಲವಾಗಿ ಸಂಭವಿಸಿದ ಕರ್ನಾಟಕ ಏಕೀಕರಣ ಕನ್ನಡಿಗರ ಸಾಂಸ್ಕೃತಿಕ ಉನ್ನತಿಗೆ ನಾಂದಿಯಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಇಂದು ಆರು ಕೋಟಿ ಜನಸಂಖ್ಯೆ ಹೊಂದಿರುವ ಕರ್ನಾಟಕ ರಾಜ್ಯ, ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಪ್ರಭಾವವನ್ನು ಅಂತರರಾಷ್ಟ್ರೀಯ ಮನ್ನಣೆ, ಜನಪದದಲ್ಲಿ ವಿಶ್ವಮಾನ್ಯತೆ, ವಿಜ್ಞಾನ ರಂಗದಲ್ಲಿ ಅಪ್ರತಿಮ ಸಾಧನೆ, ಹೀಗೆ ಹಲವಾರು ಕ್ಷೇತ್ರಗಳಲ್ಲಿ ಕರ್ನಾಟಕ ಒಂದು ಸಾಂಸ್ಕೃತಿಕ ಜನದನಿಯಾಗಿ ೫೦ ವರ್ಷಗಳನ್ನು ಪೂರೈಸಿದೆ. ಸುವರ್ಣ ಕರ್ನಾಟಕದ ಸಂಭ್ರಮಾಚರಣೆಯೆಂದರೆ, ಕೇವಲ ಘೋಷಣೆ, ಭಾಷಣಗಳ ಸಮ್ಮಿಲನವಾಗದೆ, ಕನ್ನಡ ನಾಡಿನ ಜನತೆಯ ಮನ ಹೃದಯಗಳ ಸಾಂಸ್ಕೃತಿಕ ಸಮ್ಮಿಲನವಾದಲ್ಲಿ, ಹೆಚ್ಚು ಸಾರ್ಥಕತೆ ಪಡೆದೀತು.

ಈ ಸಂದರ್ಭದಲ್ಲಿ ಭಾವುಕತೆಗೊಳಗಾಗದೆ, ಅಭಿಮಾನವೆಂಬ ಪಂಜರದಲ್ಲಿ ಸಿಲುಕದೆ, ಸ್ವಾಭಿಮಾನದ ಮುಷ್ಟಿಯಲ್ಲಿ ಬಂಧಿತರಾಗದೆ, ಕನ್ನಡಿಗರ ನಾಡು, ನುಡಿ, ಕಲೆ, ಸಂಸ್ಕೃತಿ, ಸಾಹಿತ್ಯ, ರಾಜ್ಯಕೀಯ, ಆರ್ಥಿಕತೆ, ಸಾಮಾಜಿಕ ನೆಲೆಗಳು ಮತ್ತು ಅಭಿವೃದ್ಧಿಯ ಬಗ್ಗೆ ತೆರೆದ ಹೃದಯದಿಂದ, ಆತ್ಮಾವಲೋಕನ ಮಾಡಿಕೊಳ್ಳುವುದೇ, ಕನ್ನಡಿಗರ ಧ್ಯೇಯವಾಗಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ೫೦ ವರ್ಷಗಳ ಇತಿಹಾಸವನ್ನು ಹಲವು ಮಜಲುಗಳಲ್ಲಿ ವಿಶ್ಲೇಷಿಸಬಹುದು. ಪ್ರಮುಖವಾಗಿ ಗುರುತಿಸಬಹುದಾದ ಅಂಶಗಳೆಂದರೆ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ, ಸಾಹಿತ್ಯ ಮತ್ತು ಕಲ, ಭಾವೈಕ್ಯತೆ ಮತ್ತು ಭಾಷಾ ಬೆಳವಣಿಗೆ.



ಕರ್ನಾಟಕದ ಇತಿಹಾಸದ ವೈಶಿಷ್ಟ್ಯವೆಂದರೆ, ತಾನು ಜನಿಸಿದ ದಿನದಿಂದಲೂ ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುವುದು. ಬಂಡವಾಳಶಾಹಿ ಆರ್ಥಿಕತೆಯಲ್ಲಿ ಸಮತೋಲನವಾದ ಆರ್ಥಿಕ ಬೆಳವಣಿಗೆಯನ್ನು ಅಪೇಕ್ಷಿಸುವುದು ಸೂಕ್ತವಲ್ಲವಾದರೂ, ಕರ್ನಾಟಕದಂತಹ ಸಂಪದ್ಭರಿತ ರಾಜ್ಯಕ್ಕೆ ಈ ವಿದ್ಯಮಾನ ಹೊರತಾಗಬಹುದಿತ್ತು. ದೇಶದಲ್ಲಿಯೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ, ಅತಿ ದಟ್ಟವಾದ ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶ, ಉತ್ತಮ ಜಲ ಸಂಪನ್ಮೂಲವಿರುವ ಕಾವೇರಿ, ಕೃಷ್ಣ, ನೇತ್ರಾವತಿ, ಹೇಮಾವತಿ, ಘಟಪ್ರಭ, ಮಲಪ್ರಭ ಮುಂತಾದ ನದಿಗಳು, ಅತ್ಯುತ್ತಮ ನೈಸರ್ಗಿಕ ಸಂಪತ್ತುಳ್ಳ ಬೆಟ್ಟ ಗುಡ್ಡಗಳು ಮತ್ತು ಅಮೂಲ್ಯ ಖನಿಜಗಳುಳ್ಳ ಗಣಿಗಳು ಕರ್ನಾಟಕದಲ್ಲಿವೆ. ಹಾಗಾಗಿಯೇ ಅಲ್ಲವೇ ಕನ್ನಡ ನಾಡನ್ನು ಕವಿವರ್ಯರು **"ಚಿನ್ನದ ನಾಡಿದು ಗಂಧದ ಬೀಡಿದು"** ಎಂದು ಹಾಡಿ ಹೊಗಳಿದ್ದು. ಆದರೆ, ಇತಿಹಾಸದ ಭವ್ಯತೆಯ ದಂತದರಮನೆಯಿಂದ ಹೊರಬಂದರೆ ಮೇಲೆ ಹೇಳಿದ ಕವಿ ವಾಣಿ ಅರ್ಥವನ್ನೇ ಕಳೆದುಕೊಂಡು ಬಿಡುವುದೇನೋ ಎಂದು ಭಾಸವಾಗುತ್ತದೆ.

ಒಂದು ಕಾಲದಲ್ಲಿ ಆರು ತಿಂಗಳ ಕಾಲ ಎಡಬಿಡದ ವರ್ಷಧಾರೆಯ ಸುಖವನ್ನು ಅನುಭವಿಸುತ್ತಿದ್ದ ಮಲೆನಾಡು ಇಂದು ಬಯಲುಸೀಮೆಯಂತಾಗಿದೆ. ವನ್ಯ ಮೃಗಗಳ ತಾಣವಾಗಿದ್ದ, ಎಲ್ಲೆಡೆ ಗಂಧದ ಸುವಾಸನೆಯನ್ನು ಸೂಸುವ ದಟ್ಟ ಅಡವಿಗಳ ಸುಂದರ ತಾಣವಾಗಿದ್ದ ಪಶ್ಚಿಮ ಘಟ್ಟಗಳು ಇಂದು ಬೆಂಗಾಡುಗಳಾಗುತ್ತಿವೆ. ರಸಋಷಿ ಕುವೆಂಪುರವರ ಕಾವ್ಯ ಸ್ಫೂರ್ತಿಯಾಗಿದ್ದ ಮಲೆನಾಡಿನ ರಮ್ಯ ತಾಣಗಳು ಇಂದು ಧನಗಾಹಿಗಳ ವಶವಾಗುತ್ತಿದೆ. ಅತ್ಯಮೂಲ್ಯ ಔಷದೀಯ ಸಸ್ಯಗಳಿಗೆ ತಾಣವಾಗಿದ್ದ ಅರಣ್ಯಗಳು ಕಾರ್ಪೋರೇಟ್ ಸಂಸ್ಕೃತಿಗೆ ಬಲಿಯಾಗುತ್ತಿವೆ. ರಾಮನಗರ, ಕೋಲಾರ, ಚಿತ್ರದುರ್ಗ ಮುಂತಾದೆಡೆಗಳಲ್ಲಿರುವ ಬೃಹದಾಕಾರದ ಬೆಟ್ಟ ಗುಡ್ಡಗಳು, ಕಲ್ಲು ಬಂಡೆಗಳು ಗ್ರಾನೈಟ್ ಸಂಸ್ಕೃತಿಗೆ ಬಲಿಯಾಗುತ್ತಿವೆ. ಕರ್ನಾಟಕದ ವನ್ಯ ಸಂಪತ್ತುಗಳಾದ ಪ್ರಾಣಿಗಳು, ತೇಗ, ಗಂಧದ ಮರಗಳು ಮರಗಳ್ಳರ ವಶವಾಗುತ್ತಿವೆ.

ಅಗೋಚರ ವೀರಪ್ಪನ್‌ಗಳು ಆನೆಗಳ ಸಂತತಿಗಳನ್ನೇ ವಿನಾಶದ ಅಂಚಿಗೆ ಕರೆದೊಯ್ಯುತ್ತಿದ್ದಾರೆ. ಇವೆಲ್ಲದರ ನಡುವೆ ಬಂಡವಾಳಶಾಹಿ ಆರ್ಥಿಕ ನೀತಿಯ ಪರಿಣಾಮವಾಗಿ ಪ್ರಾದೇಶಿಕ ಅಸಮತೋಲನ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ೫೦ ವರ್ಷಗಳ ಹಿಂದೆ ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜನರಲ್ಲಿದ್ದ ಅಸಮಾಧಾನದ ಹೊಗೆ ಇಂದಿಗೂ ನಂದಿಲ್ಲ. ಸಾಲದೆಂಬಂತೆ ಈಗ ಪ್ರತ್ಯೇಕತೆಯ ಕೂಗು ಕೇಳಿ ಬರುತ್ತಿದೆ. ಬೆಳಗಾವಿ, ಕಾಸರಗೋಡು ಮತ್ತು ಇತರ ಗಡಿನಾಡ ಸಮಸ್ಯೆಗಳು, ಸಮಸ್ಯೆಗಳಾಗಿಯೇ ಉಳಿದಿವೆ. ಆಳುವ ವರ್ಗಗಳ ಪರಿಭಾಷೆ ಕೇವಲ ಭಾಷೆ, ಗಡಿಗಳನ್ನಾಧರಿಸಿರುವುದೇ ಹೊರತು, ಅಭಿವೃದ್ಧಿಯನ್ನಾಧರಿಸಿಲ್ಲ. ಕನ್ನಡಿಗರ ಸಂಸ್ಕೃತಿಯ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ ನಾವು, ಸಾಂಸ್ಕೃತಿಕವಾಗಿ ಎಲ್ಲೋ ಒಂದು ಕಡೆ ಸಮಾಜೋ-ಆರ್ಥಿಕ ಭಾವೈಕ್ಯತೆಯನ್ನು ಕಳೆದುಕೊಂಡಿದ್ದೇವೆಂದೆನಿಸುತ್ತದೆ.

ಕೇವಲ ಬೆಂಗಳೂರು ಮತ್ತು ಸುತ್ತ ಮುತ್ತಲ ಪ್ರದೇಶಗಳ ಅಭಿವೃದ್ಧಿಯೇ ಇಡೀ ರಾಜ್ಯದ ಅಭಿವೃದ್ಧಿಯಂತೆ ಪ್ರತಿಬಿಂಬಿಸುವ ಆಳುವ ವರ್ಗಗಳ ಕುತಂತ್ರದಿಂದ, ರಾಜ್ಯದ ಒಂದು ಭಾಗದ ಜನತೆ ಅಸಮಾಧಾನ ಹೊಂದಿರುವುದು ಸಹಜವೇ ಆಗಿದೆ. ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕದಲ್ಲಿ ಸ್ಥಾಪಿತವಾದ ಭಾರೀ ಸಾರ್ವಜನಿಕ ಉದ್ದಿಮೆಗಳೂ ಸಹ ಬೆಂಗಳೂರು ಕೇಂದ್ರಿತವಾದದ್ದು ಇಲ್ಲಿ ಗಮನಾರ್ಹ. ಆದಾಗ್ಯೂ, ಕರ್ನಾಟಕದ ಆಳುವ ವರ್ಗಗಳು, ಕಳೆದ ಐವತ್ತು ವರ್ಷಗಳಲ್ಲಿ, ಸರ್ವಾಂಗೀಣ ಅಭಿವೃದ್ಧಿಗಾಗಿ ನಿಷ್ಠೆಯಿಂದ ಶ್ರಮಿಸಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಬೆಳಗಾವಿ ವಿವಾದ ತೀಕ್ಷ್ಣವಾದ ಕೂಡಲೇ ಅಲ್ಲಿ ವಿಧಾನಸಭೆಯ ಕಲಾಪ ನಡೆಸಿ, ಬೆಳಗಾವಿಯನ್ನು ಎರಡನೆಯ ರಾಜಧಾನಿ ಎಂದು ಘೋಷಿಸಿರುವುದು, ಆಳುವ ವರ್ಗಗಳ ದೂರದೃಷ್ಟಿಯ ಕೊರತೆಯನ್ನು ತೋರಿಸುತ್ತದೆ. ಬೆಳಗಾವಿಯಾಗಲೀ, ಕಾಸರಗೋಡಾಗಲೀ ರಾಜ್ಯಗಳು ಬದಲಾದ ಮಾತ್ರಕ್ಕೆ ಜನರ ದೈನಂದಿನ ಸಮಸ್ಯೆಗಳೂ ಬದಲಾಗುವುದಿಲ್ಲ ಎಂಬ ಸಾಮಾನ್ಯ ಗ್ರಹಿಕೆಯೂ ಸರ್ಕಾರಕ್ಕೆ ಇಲ್ಲವಾಗಿದೆ.

ಮಹಾರಾಷ್ಟ್ರವಾಗಲೀ, ಕರ್ನಾಟಕ ವಾಗಲೀ, ತಮ್ಮ ರಾಜ್ಯಗಳಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹತ್ಯೆಗಳನ್ನು ತಡಗಟ್ಟುವುದರಲ್ಲಿ ವಿಫಲವಾಗಿರುವುದು ಇಲ್ಲಿ ಮೂಲ ಪ್ರಶ್ನೆಯಾಗಿ ಎದುರಾಗುತ್ತದೆ. ಇದರ ನಡುವೆ ಜಾಗತೀಕರಣದ ಪ್ರಭಾವದಿಂದ, ಒಂದು ಕಾಲದಲ್ಲಿ ರಾಷ್ಟ್ರದ ಹೆಮ್ಮೆಯ ರತ್ನಗಳೆಂದು, ಆಧುನಿಕ ಭಾರತದ ದೇವಾಲಯಗಳೆಂದು ಕರೆಯಲ್ಪಡುತ್ತಿದ್ದ ಸಾರ್ವಜನಿಕ ಉದ್ದಿಮೆಗಳು ಅವಸಾನದ ಅಂಚಿನಲ್ಲಿದ್ದು, ಚಿನ್ನದ ಬೀಡಾಗಿದ್ದ ಕರ್ನಾಟಕ ಇಂದು ಬರಡಾಗಿದೆ. ಒಂದು ಕಡೆ ನೌಕರಿ ಕಳೆದುಕೊಂಡ ೫ ಲಕ್ಷಕ್ಕೂ ಹೆಚ್ಚು ಕಾರ್ಮಿಕರ ಬವಣೆ, ಇನ್ನೊಂದೆಡೆ ಸಾಲದ ಬಾಧೆ ತಾಳಲಾರದೆ ಆತ್ಮ ಹತ್ಯೆಗೆ ಶರಣಾದ ಸಾವಿರಾರು ರೈತರ ವ್ಯಥೆ, ಐ.ಟಿ. ಬಿ.ಟಿಗಳ ಪ್ರಾಮುಖ್ಯತೆಯಿಂದ ಸೊರಗಿದ ಗ್ರಾಮೀಣ ಸಮಾಜ, ಧರಣಿಗೆ ಹಸಿರು ಸೀರೆ ಹೊದಿಸಿದಂತಿದ್ದ ಲಕ್ಷಾಂತರ ಎಕರೆ ಭೂಮಿಯನ್ನು ಆಕ್ರಮಿಸುತ್ತಿರುವ ಕಾರಿ ಡಾರ್‌ಗಳು ಮತ್ತು ವರ್ತುಲ ರಸ್ತೆ, ಸೂಪರ್ ಹೈವೇಗಳು, ವಾಟರ್ ವರ್ಲ್ಡ್, ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ಬಲಿಯಾಗುತ್ತಿರುವ ಹೊಲ ಗದ್ದೆಗಳು, ಇಂಟರ್‌ನೆಟ್, ಮೊಬೈಲ್



ಸುವರ್ಣ ಕರ್ನಾಟಕ ಮಹೋತ್ಸವವನ್ನು ಆಚರಿಸುವಾಗಲೂ ಕೇವಲ ಆಡಂಬರ, ಭಾವೋನ್ಮಾದಗಳೇ ಹೆಚ್ಚಾಗಿ ಕಾಣುತ್ತಿದ್ದುದು ವಿಷಾದನೀಯ. ರಾಜ್ಯೋತ್ಸವವನ್ನು ಅದ್ದೂರಿಯಾಗಿ ಮಾಡುವುದೊಂದೇ ಸುವರ್ಣ ಕರ್ನಾಟಕದ ಆಚರಣೆಯಾಗಿ ಪರಿಣಮಿಸಿರುವುದು, ಈ ಸುಸಂದರ್ಭದ ವಿಡಂಬನೆ. ಆಚರಣೆಗಳಲ್ಲಿ, ಘೋಷಣೆಗಳಲ್ಲಿ, ಭಾವನೆಗಳಲ್ಲಿ ನಮ್ಮ ರಾಜ್ಯದ ಸಾರ್ಥಕತೆಯನ್ನು ಕಂಡುಕೊಳ್ಳುವುದರಿಂದ, ವಾಸ್ತವತೆ ಮರೆಯಾಗುತ್ತದೆ. ಹಾಗಾಗಿಯೇ ಕಡಕೊಳದ ಘಟನೆ ಈ ಶುಭ ಸಂದರ್ಭದಲ್ಲಿ ಪ್ರಾಮುಖ್ಯತೆ ಪಡೆಯಲೇ ಇಲ್ಲ. ಬೆಳಗಾವಿಯ ಬಗ್ಗೆ ವ್ಯಕ್ತವಾದ ಭಾವುಕತೆ ಕಡಕೊಳದ ಬಹಿಷ್ಕೃತ ದಲಿತರ ಬಗ್ಗೆ ವ್ಯಕ್ತವಾಗಲಿಲ್ಲ. ಇಂಗ್ಲಿಷ್ ಕಲಿಕೆಯ ಬಗ್ಗೆ ನಡೆದ ಚರ್ಚೆ, ಪರ ವಿರೋಧ ವಾದಗಳು ಕನ್ನಡ ಮಾಧ್ಯಮದ ಅನುಷ್ಠಾನದ ಬಗ್ಗೆ ನಡೆಯಲಿಲ್ಲ. ಇವೆಲ್ಲವೂ ಎಲ್ಲೋ ಒಂದು ಕಡೆ ಸಮಾಜದಲ್ಲಿ ಸುಪ್ತವಾಗಿರುವ ಅವ್ಯಕ್ತ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ.

ಸಂಸ್ಕೃತಿಗೆ ಶರಣಾಗುತ್ತಿರುವ ಗ್ರಾಮೀಣ ಸಂಸ್ಕೃತಿ, ಪೆಪ್ಸಿ ಕೋಲಾ, ಪಿಝಾಗಳಿಗೆ ಮೊರೆಹೋಗುತ್ತಿ ರುವ ಯುವ ಜನಾಂಗ, ಈ ಎಲ್ಲ ನ್ಯೂನತೆಗಳ ನಡುವೆ, ನಿಷ್ಕ್ರಿಯರಾಗಿರುವ ಸ್ವಾರ್ಥ ರಾಜಕಾರಣಿಗಳು. ಇದು ಕನ್ನಡ ನಾಡಿನ ವಾಸ್ತವ ಚಿತ್ರಣ.

ಇನ್ನು ಸಾಮಾಜಿಕ ಸ್ತರದಲ್ಲಿ ಕರ್ನಾಟಕ ಸ್ವಾತಂತ್ರ್ಯ ಪೂರ್ವದ ದಿನಗಳಿಂದಲೂ ಸಾಮಾಜಿಕ ನ್ಯಾಯಕ್ಕೆ ಹೆಸರು ಪಡೆದಿರುವುದು ಕನ್ನಡಿಗರ ಹೆಮ್ಮೆಯ ವಿಷಯ. ಆದರೂ ಕಳೆದ ೧೫ ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಜಾತಿ ರಾಜಕಾರಣ ಬಲವಾಗಿ ಬೇರೂರಿದ್ದು, ಇಂದು ಜಾತಿಯೇ ಎಲ್ಲವನ್ನೂ ನಿರ್ಧರಿಸುವ ಮಟ್ಟಕ್ಕೆ ತಲುಪಿದೆ. ೧೦೦ ವರ್ಷಗಳ ಹಿಂದೇ ಮೀಸಲಾತಿ ನೀತಿಯನ್ನು ಜಾರಿಗೆ ತಂದಂತಹ ಪರಂಪರೆಯುಳ್ಳ ರಾಜ್ಯದಲ್ಲಿ, ಇಂದು ಜಾತಿ ಆಧಾರಿತ ಶೋಷಣೆ ತನ್ನ ಪರಾಕಾಷ್ಠೆ ತಲುಪಿದೆ. ೧೦೦ ವರ್ಷಗಳ ಹಿಂದೇ ಮೀಸಲಾತಿ ನೀತಿಯನ್ನು ಜಾರಿಗೆ ತಂದಂತಹ ಪರಂಪರೆಯುಳ್ಳ ರಾಜ್ಯದಲ್ಲಿ, ಇಂದು ಜಾತಿ ಆಧಾರಿತ ಶೋಷಣೆ ತನ್ನ ಪರಾಕಾಷ್ಠೆ ತಲುಪಿರುವುದು ವಿಷಾದನೀಯ. ಐವತ್ತು ವರ್ಷಗಳ ರಾಜ್ಯದ ಇತಿಹಾಸದಲ್ಲಿ ಬೆಳ್ಳಿ ಚುಕ್ಕೆಗಳು ಎಷ್ಟೇ ಇದ್ದರೂ, ಕಂಬಾಲಪಲ್ಲಿ ಎಂಬ ಕಪ್ಪು ಚುಕ್ಕೆ ಶಾಶ್ವತವಾಗಿ ಉಳಿಯುತ್ತದೆ.

ರಾಜ್ಯದಲ್ಲಿ ನೆಲೆಸಿದ್ದ ಸಾಮಾಜಿಕ ಭಾವೈಕ್ಯತೆಯನ್ನು ಕದಡುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. ಕಡ ಕೊಳದ ದಲಿತರ ಮೇಲಿನ ಬಹಿಷ್ಕಾರ ಒಂದು ಇತ್ತೀಚಿನ ಉದಾಹರಣೆ. ಶೋಷಿತ ದಮನಿತ ವರ್ಗಗಳ ಪರ ಹೋರಾಡಲು ರೂಪುಗೊಂಡ ದಲಿತ ಚಳುವಳಿಯಂತಹ ಜನಪರ ಹೋರಾಟಗಳೂ ಸಹ ಇಂದು ಎಡ-ಬಲಗಳ ಗೊಂದಲದಲ್ಲಿ ಸಿಲುಕಿ, ಛಿದ್ರವಾಗಿರುವುದು ವಿಷಾದ ನೀಯ. ಒಂದು ಕಾಲದಲ್ಲಿ ಇಡೀ ವ್ಯವಸ್ಥೆಯ ವಿರುದ್ಧ ಹೋರಾಡುತ್ತಿದ್ದು, ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಕ್ರಾಂತಿಯ ಕಿಡಿಗಳನ್ನು ಸಿಡಿಸುತ್ತಿದ್ದವರು ಇಂದು ಸರ್ಕಾರಿ ಸವಲತ್ತುಗಳನ್ನು ಪಡೆದು ರಾರಾಜಿಸುತ್ತಿದ್ದಾರೆ. ಆದರೆ ಸಾಮಾಜಿಕ ಶೋಷಣೆ ಮಾತ್ರ ಯಥಾಸ್ಥಿತಿಯಲ್ಲಿದೆ. ಬಹುತೇಕವಾಗಿ ದಲಿತ ಹಿಂದುಳಿದ ವರ್ಗಗಳ ಮತ್ತಿತರ ಸಾಮಾಜಿಕ ಚಳುವಳಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ಪರಭಾರೆ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿವೆ.

ಜಾತಿ ಪ್ರಜ್ಞೆ ಗಟ್ಟಿಯಾಗುತ್ತಿದ್ದಂತೆಯೇ ದಲಿತರ ಮೇಲಿನ ಶೋಷಣೆ ಹೆಚ್ಚಾಗುತ್ತಿದೆ. ಅಸ್ಪೃಶ್ಯತೆಯ ಆಚರಣೆ ಇನ್ನೂ ಜೀವಂತವಾಗಿರುವ ಹಲವಾರು ದುರಂತಮಯ ವರದಿಗಳು ಪ್ರಕಟಗೊಳ್ಳುತ್ತಿವೆ. ಪರಿಣಾಮವಾಗಿ ಸಾಮಾಜಿಕ, ಧಾರ್ಮಿಕ ಭಾವೈಕ್ಯತೆ ಮತ್ತು ಕೋಮು ಸೌಹಾರ್ದತೆಗಳಿಗೆ ಹೆಸರಾಗಿದ್ದ ರಾಜ್ಯದಲ್ಲಿ ಇಂದು ಕೋಮು ಗಲಭೆಗಳು ದಿನ ನಿತ್ಯದ ಸುದ್ದಿಗಳಾಗಿವೆ. ಭಟ್ಕಳ, ಸುರತ್ಕಲ್, ಕೋಲಾರ, ಮುಂತಾದ ಗಲಭೆಗಳು ರಾಜ್ಯದ ಧಾರ್ಮಿಕ ಭಾವೈಕ್ಯತೆಯನ್ನು ಶಾಶ್ವತವಾಗಿ ಕೆಡಿಸಿವೆ. ಭಾವೈಕ್ಯತೆಗೆ ಹೆಸರಾದ ಬಾಬಾಬುಡನ್‌ಗಿರಿ ಇಂದು ಧಾರ್ಮಿಕ ಸಂಘರ್ಷದ ಕೇಂದ್ರ ಬಿಂದುವಾಗಿದೆ. ತಾಳ್ಮೆ, ಸಹನೆ ಮತ್ತು ಸಹೋದರ ಭಾವಕ್ಕೆ ಹೆಸರಾದ ರಾಜ್ಯದಲ್ಲಿ ಇಂದು ಅಸಹನೆ, ಹಿಂಸೆ, ಕೊಲೆ, ಸುಲಿಗೆಗಳು ತಾಂಡವಾಡುತ್ತಿವೆ. ಪಾತಕೀಕರಣ ಪ್ರಕ್ರಿಯೆ ಕೇವಲ ರಾಜಕಾರಣಕ್ಕೆ ಮಾತ್ರವಲ್ಲದೆ ಎಲ್ಲಾ ಕ್ಷೇತ್ರಗಳಿಗೂ ಹಬ್ಬಿದೆ. ರಾಜಕೀಯ ಪರಿಭಾಷೆಯೂ ಸಹ ನೈತಿಕತೆಯನ್ನು ಕಳೆದುಕೊಂಡು, ಅಸಂಸದೀಯ ಪದಪುಂಜಗಳು ರಾರಾಜಿಸುತ್ತಿವೆ. ರಾಜಕೀಯ ಭ್ರಷ್ಟಾಚಾರ ಪರಾಕಾಷ್ಠೆ ತಲುಪಿದ್ದು, ಧನಾರ್ಜನೆಯೊಂದೇ ರಾಜಕಾರಣಿಗಳ ಧ್ಯೇಯವಾಗಿದೆ.

ರನ್ನ, ಜನ್ನ, ಪಂಪ, ಕುಮಾರ ವ್ಯಾಸ, ಹರಿಹರ, ರಾಘವ ಈ ಹೆಸರುಗಳನ್ನು ಕೇಳಿದರೇನೇ ರೋಮಾಂಚ

ನವಾಗುವಂತಹ ಸಾಹಿತ್ಯ ರತ್ನಗಳನ್ನು, ವಿಶ್ವಕ್ಕೆ ನೀಡಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ಏಳು ಜ್ಞಾನ ಪೀಠ ಪ್ರಶಸ್ತಿಗಳನ್ನು ಗಳಿಸಿರುವ ಕನ್ನಡ ಸಾಹಿತ್ಯ ಇಂದು ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವ ಬೀರಿದೆ. ನವ್ಯ, ನವೋದಯ, ಬಂಡಾಯ ಹಾಗೂ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದ ಛಾಪು ಮೂಡಿಸಿರುವುದು ಅಲ್ಲಗಳೆಯಲಾಗದ ಸತ್ಯ. ಗೋವಿಂದ ಪೈ, ಬಿ.ಎಂ. ಶ್ರೀ ರವರಿಂದ ಹಿಡಿದು, ಕುವೆಂಪು, ಬೇಂದ್ರೆ, ಅಡಿಗ, ಕಾರಂತ, ಪುತಿನ, ರವರನ್ನೊಳಗೊಂಡು, ಭೈರಪ್ಪ, ಅನಂತಮೂರ್ತಿ, ಕಾರ್ನಾಡ್, ಅನಕೃ, ತ್ರಿವೇಣಿ, ನಿರಂಜನರವರುಗಳ ಹಾದಿ ಕ್ರಮಿಸಿ, ದೇವನೂರು, ಸಿದ್ಧಲಿಂಗಯ್ಯ, ಬರಗೂರು ಮುಂತಾದ ಬಂಡಾಯ ಸಾಹಿತ್ಯದವರೆಗೂ ಕನ್ನಡ ಸಾಹಿತ್ಯ ಲೋಕ ವಿಸ್ತರಿಸಿದೆ.

ಸುವರ್ಣ ಸಂಭ್ರಮದಾಚರಣೆಯ ಸಂದರ್ಭದಲ್ಲಿ ಒಕ್ಕೊರಲಿನಿಂದ ಸಿರಿಗನ್ನಡಂ ಗೆಲ್ಗೆ ಎಂದು ಹೇಳಬೇಕಿದ್ದ ಕನ್ನಡ ಸಾಹಿತ್ಯ ಲೋಕ ಇಂದು ಒಡೆದ ಕನ್ನಡಿಯಂತಾಗಿದೆ. ಪರಸ್ಪರ ದೋಷಾರೋಪಣೆಗಳಿಂದಲೇ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ಸಾಹಿತಿಗಳ ಭ್ರಮಾ ಲೋಕದಲ್ಲಿ ಕನ್ನಡ ಸಾರಸ್ವತ ಲೋಕ ನಲುಗುತ್ತಿದೆ. ತಮ್ಮದೇ ಆದ ಮಠಗಳನ್ನು ನಿರ್ಮಿಸಿಕೊಳ್ಳುವ ಕವಿ ಸಾಹಿತಿಗಳ ಚಾಳಿ ಸಾಹಿತ್ಯಲೋಕವನ್ನೇ ಕಂಗೆಡಿಸು ತ್ತಿದೆ. ಆಂಗ್ಲ ಭಾಷೆ ಕಲಿಕೆಯಾಗಲೀ, ಆಡಳಿತ ಭಾಷೆ ಯಾಗಿ ಕನ್ನಡದ ಜಾರಿಯಾಗಲೀ, ಕವಿ-ಸಾಹಿತಿಗಳ ನಡುವೆ ಏಕಾಭಿಪ್ರಾಯವಿಲ್ಲದೆ, ವೈಯಕ್ತಿಕ ಪ್ರತಿಷ್ಠೆಗಳೇ ಪ್ರಮುಖವಾಗುತ್ತಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಸಾಹಿತಿಗಳೂ ಸಹ ತಮ್ಮ ಮಾತಿನ ಧಾಟಿಯ ಮೌಲಿಕ ಅಧಃಪತನವನ್ನು ಪ್ರದರ್ಶಿಸುತ್ತಿರುವುದು, ಸಾಹಿತ್ಯಕ ಬೆಳವಣಿಗೆಯ ದೃಷ್ಟಿಯಿಂದ ತರವಲ್ಲ ಎಂದಷ್ಟೇ ಹೇಳಬಹುದು. ಜಾಗತೀಕರಣದ ಪ್ರಭಾವದಿಂದ ಯುವ ಜನಾಂಗದಲ್ಲಿ ಕ್ಷೀಣಿಸುತ್ತಿರುವ ಸಾಹಿತ್ಯಾಭಿರುಚಿಗೆ ಇಂಬು ನೀಡುವಂತೆ ಪರಿಸ್ಥಿತಿ ಬೆಳೆಯುತ್ತಿದೆ. ಸಂವೇದನೆಯನ್ನು, ಸೃಜನಶೀಲತೆಯನ್ನು ಸೃಷ್ಟಿಸುವ ಸಾಹಿತ್ಯಲೋಕವೇ ಇಂದು ಅವೆರಡನ್ನೂ ಕಳೆದುಕೊಳ್ಳುತ್ತಿದೆ. ಈ ಹಗ್ಗ ಜಗ್ಗಾ ಟಗಳ ನಡುವೆ ಕನ್ನಡ ಭಾಷೆ ನಲುಗುತ್ತಿದೆ.

ಭಾಷಾವಾರು ರಾಜ್ಯಗಳ ವಿಂಗಡಣೆಯಾದಲ್ಲಿ, ಪ್ರತಿಯೊಂದು ರಾಜ್ಯವೂ ಭೌತಿಕವಾಗಿ, ಸಾಂಸ್ಕೃತಿಕವಾಗಿ ಉನ್ನತಿ ಹೊಂದುತ್ತದೆ ಎಂಬ ಭ್ರಮೆ, ಭ್ರಮೆಯಾಗಿಯೇ ಉಳಿದಿರುವುದು ದುರದೃಷ್ಟಕರ. ಕರ್ನಾಟಕದ ಮಟ್ಟಿಗಂತೂ ಇದು ಅಕ್ಷರಶಃ ಸತ್ಯ. ಐವತ್ತು ವರ್ಷಗಳಾದರೂ ಈವರೆಗೂ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದು ಕರ್ನಾಟಕದ ಆಳುವ ವರ್ಗಗಳಿಗೆ ಸಾಧ್ಯವಾಗಿಲ್ಲ. ಇದು ನಾಚಿಕೇಡಿನ ಸಂಗತಿಯಲ್ಲವೇ. ಆಡಳಿತದಲ್ಲಿ ಕನ್ನಡದ ಬಳಕೆ ಇರಲಿ, ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವನ್ನು ಕಡ್ಡಾಯ ಮಾಡಲೂ ಇಂದಿನವರೆಗೂ ಸಾಧ್ಯವಾಗಿಲ್ಲ. ಮಾತೃ ಭಾಷೆಯನ್ನು ರಕ್ಷಿಸುವುದರೊಂದಿಗೇ ಅನ್ಯ ಭಾಷೆಗಳನ್ನೂ ಅಪ್ಪಿಕೊಳ್ಳುವ ಅವಕಾಶ ಕರ್ನಾಟಕಕ್ಕೆ ಮಾತ್ರ ಇದೆ ಎಂದರೆ ತಪ್ಪಾಗಲಾರದು. ಕರ್ನಾಟಕದಲ್ಲಿನ ಭಾಷಾ ಅಲ್ಪಸಂಖ್ಯಾತರನ್ನು ದೂಷಿಸುವುದರಲ್ಲಿಯೇ ಅಭಿಮಾನವನ್ನು ಕಂಡುಕೊಳ್ಳುವ ಪಟ್ಟ ಭದ್ರ ಹಿತಾಸಕ್ತಿಗಳು ಒಂದು ರೀತಿಯಲ್ಲಿ ಭಾಷಾಭಿವೃದ್ಧಿಗೆ ಕಂಟಕ ಪ್ರಾಯರಾಗಿದ್ದಾರೆಂದೇ ಹೇಳಬಹುದು. ಆದರೆ ಎಲ್ಲವನ್ನೂ ಬೆಂಗಳೂರು ಕೇಂದ್ರಿತ ದೃಷ್ಟಿಯಿಂದಲೇ ನೋಡುವ ನಮ್ಮ ಆಳುವ ವರ್ಗಗಳು ನಮ್ಮ ನಾಡಿನಲ್ಲೇ ಇರುವ ಭಾಷಾ ವೈವಿಧ್ಯತೆಯನ್ನೇ ಕಡೆಗಣಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಎಂದರೆ ಬೆಂಗಳೂರು ಸಾಹಿತ್ಯ ಪರಿಷತ್ ಎನ್ನುವ ಮಟ್ಟಿಗೆ ಪರಿಸ್ಥಿತಿ ಉದ್ಭವಿಸಿದೆ. ಯುವಜನತೆಯಲ್ಲಿ ಸಾಹಿತ್ಯಾಭಿರುಚಿ ಬೆಳೆಸುವ ನಿಟ್ಟಿನಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರವಾಗಲೀ, ಕನ್ನಡ ಪರ ಸಂಘಟನೆಗಳಾಗಲೀ ಕೈಗೊಳ್ಳದಿರುವುದು ಸುವರ್ಣ ಕರ್ನಾಟಕದ ದುರಂತ. ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿ, ಖಾಸಗೀ ಶಾಲೆಗಳ ಬೆಳವಣಿಗೆಗೆ ಕಡಿವಾಣ ಹಾಕುವ ಬದಲು, ಸರ್ಕಾರ ಖಾಸಗೀ ಆಂಗ್ಲ ಮಾಧ್ಯಮ ಶಾಲೆಗಳನ್ನು ಬೆಂಬಲಿಸುತ್ತಿದೆ. ವಾಸ್ತವತೆಯ ದೃಷ್ಟಿಯಿಂದ ಆಂಗ್ಲ ಭಾಷೆಯ ಜ್ಞಾನ ಅವಶ್ಯ ವಾದರೂ, ಪ್ರಾಥಮಿಕ ಹಂತದಲ್ಲಿ ಮಾತೃ ಭಾಷಾ ಶಿಕ್ಷಣ ನೀಡುವುದು ಅವಶ್ಯಕ. ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕಂಡು ಬರುವುದಿಲ್ಲ.

ಪ್ರಸ್ತುತ ಪರಿಸ್ಥಿತಿಯಲ್ಲಿ ಕನ್ನಡ ಭಾಷಾ ಬೆಳವಣಿಗೆಗಾಗಿ ಯಾವ ಕ್ರಮ ಕೈಗೊಳ್ಳುತ್ತಿದ್ದೇವೆ ಎಂಬುದಕ್ಕಿಂತಲೂ ಹೆಚ್ಚಾಗಿ, ಟಿಪ್ಪು ಸುಲ್ತಾನ್ ಕನ್ನಡ ಪರವೋ, ವಿರೋಧಿಯೋ ಎಂಬುದರ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿರುವುದು, ಈ ವಾದ ವಿವಾದದಲ್ಲಿ ಧೀಮಂತ ಸಾಹಿತಿಗಳೂ ತೊಡಗಿರುವುದು ಸುವರ್ಣ ಕರ್ನಾಟಕದ ದುರಂತವೆಂದಷ್ಟೇ ಹೇಳಬಹುದು. ಇದಕ್ಕೆ ಪ್ರತಿಯಾಗಿ ಕನ್ನಡ ಪರ ಹೋರಾಟ ಸಂಘಟನೆಗಳು, ವಾಸ್ತವತೆಗಿಂತಲೂ, ಭಾವುಕತೆಗೇ ಹೆಚ್ಚು ಗಮನ ನೀಡುತ್ತಿರುವುದರಿಂದ, ಎಲ್ಲೆಲ್ಲೂ ಕನ್ನಡ ಧ್ವಜ ಹಾರಡುತ್ತಿದ್ದರೂ, ಕನ್ನಡ ಭಾಷೆ ಮರೆಯಾಗುತ್ತಿದೆ. ಭಾಷಾಭಿಮಾನ ಕೇವಲ ಮನರಂಜನೆಗೆ ಸೀಮಿತವಾಗುತ್ತಿದೆ. ಸಾಮಾಜಿಕ ವಾಸ್ತವತೆಯನ್ನು ಬಿಂಬಿಸುವ ನಾಟಕಗಳಿಗಿಂತಲೂ, ಭ್ರಮಾಲೋಕಗಳನ್ನು ಸೃಷ್ಟಿಸುವ ಸಿನಿಮಾ ರಂಗ ಹೆಚ್ಚು ಆಕರ್ಷಣೀಯವಾಗಿ ಪರಿಣಮಿಸುತ್ತಿದೆ. ಕವಿ, ಸಾಹಿತಿ ಕಲಾವಿದರಿಗಿಂತಲೂ, ಸಿನಿಮಾ ಹೀರೋಗಳು ಯುವಜನಾಂಗದ ಮಾದರಿಗಳಾಗುತ್ತಿದ್ದಾರೆ. ಈ ಎಲ್ಲ ವಿದ್ಯಮಾನಗಳಿಂದ ಯುವ ಜನತೆ ದಿಕ್ಕು ತಪ್ಪುತ್ತಿದೆ. ಹಿಂಸೆ, ಅಶ್ಲೀಲತೆ ಸಮಾಜದಲ್ಲಿ ತಾಂಡವಾಡುತ್ತಿವೆ. ಸಮಾಜ ತನ್ನ ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಿದೆ. **"ಗುಡಿ ಚರ್ಚು ಮಸೀದಿಗಳನು ಬಿಟ್ಟು ಹೊರಬನ್ನಿ", "ಕಟ್ಟುವೆವು ನಾವು ಹೊಸ ನಾಡೊಂದನು", "ಏನಾದರೂ ಆಗು ಮೊದಲು ಮಾನವನಾಗು"** ಎಲ್ಲೋ ಮರೆದಂತಿದೆ.

ಸುವರ್ಣ ಕರ್ನಾಟಕ ಮಹೋತ್ಸವವನ್ನು ಆಚರಿಸುವಾಗಲೂ ಕೇವಲ ಆಡಂಬರ, ಭಾವೋನ್ಮಾದಗಳೇ ಹೆಚ್ಚಾಗಿ ಕಾಣುತ್ತಿದ್ದುದು ವಿಷಾದನೀಯ. ರಾಜ್ಯೋತ್ಸವವನ್ನು ಅದ್ದೂರಿಯಾಗಿ ಮಾಡುವುದೊಂದೇ ಸುವರ್ಣ ಕರ್ನಾಟಕದ ಆಚರಣೆಯಾಗಿ ಪರಿಣಮಿಸಿರುವುದು, ಈ ಸುಸಂದರ್ಭದ ವಿಡಂಬನೆ. ಆಚರಣೆಗಳಲ್ಲಿ, ಘೋಷಣೆಗಳಲ್ಲಿ, ಭಾವನೆಗಳಲ್ಲಿ ನಮ್ಮ ರಾಜ್ಯದ ಸಾರ್ಥಕತೆಯನ್ನು ಕಂಡುಕೊಳ್ಳುವುದರಿಂದ, ವಾಸ್ತವತೆ ಮರೆಯಾಗುತ್ತದೆ. ಹಾಗಾಗಿಯೇ ಕಡಕೊಳದ ಘಟನೆ ಈ ಶುಭ ಸಂದರ್ಭದಲ್ಲಿ ಪ್ರಾಮುಖ್ಯತೆ ಪಡೆಯಲೇ ಇಲ್ಲ. ಬೆಳಗಾವಿಯ ಬಗ್ಗೆ ವ್ಯಕ್ತವಾದ ಭಾವುಕತೆ ಕಡಕೊಳದ ಬಹಿಷ್ಕೃತ ದಲಿತರ ಬಗ್ಗೆ ವ್ಯಕ್ತವಾಗಲಿಲ್ಲ. ಇಂಗ್ಲಿಷ್ ಕಲಿಕೆಯ ಬಗ್ಗೆ ನಡೆದ ಚರ್ಚೆ, ಪರ ವಿರೋಧ ವಾದಗಳು ಕನ್ನಡ ಮಾಧ್ಯಮದ ಅನುಷ್ಠಾನದ ಬಗ್ಗೆ ನಡೆಯಲಿಲ್ಲ. ಇವೆಲ್ಲವೂ ಸಮಾಜದಲ್ಲಿ ಸುಪ್ತವಾಗಿರುವ ಅವ್ಯಕ್ತ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ.

ಈ ದೃಷ್ಟಿಕೋನದಿಂದ ನೋಡಿದಾಗ ಸುವರ್ಣ ಕರ್ನಾಟಕದ ಸಂದರ್ಭ ಅಷ್ಟೇನೂ ಹಿತಕರವೆನಿಸುವುದಿಲ್ಲ. ೫೦ ವರ್ಷಗಳಲ್ಲಿ ರಾಜ್ಯ, ಆರ್ಥಿಕವಾಗಿ, ಸಾಮಾಜಿಕವಾಗಿ, ಭೌತಿಕವಾಗಿ, ಇನ್ನೂ ಹೆಚ್ಚು ಅಭಿವೃದ್ಧಿ ಸಾಧಿಸಬಹುದಿತ್ತು. ಒಂದು ಹಂತದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಅಭಿವೃದ್ಧಿಗೆ ಕಂಟಕವಾಗಿದ್ದರೆ, ಈಗ ಜಾಗತೀಕರಣ ಪ್ರಕ್ರಿಯೆ ಆ ಸ್ಥಾನವನ್ನಾಕ್ರಮಿಸಿದೆ. ಈ ಪ್ರಜಾ ವಿರೋಧಿ ಪ್ರಕ್ರಿಯೆಗಳನ್ನು ವಿರೋಧಿಸಿ ಹೋರಾಡುವ ಸಂಸದೀಯ ಎಡ ಪಕ್ಷಗಳ ಪ್ರಾಬಲ್ಯ ಕ್ಷೀಣಿಸುತ್ತಿದೆ. ಇನ್ನೊಂದೆಡೆ ಅನೇಕ ಪ್ರಜಾತಾಂತ್ರಿಕ ಚಳುವಳಿಗಳು ಜಾಗತೀಕರಣದ ಸುನಾಮಿ ಅಲೆಯಲ್ಲಿ ಕೊಚ್ಚಿ ಹೋಗುತ್ತಿವೆ. ಆದರೂ ಕನ್ನಡ ನಾಡಿನ ಜನತೆ ನಿರಾಶರಾಗಬೇಕಿಲ್ಲ. ಎಲ್ಲೋ ಒಂದು ಕಡೆ ಹೋರಾಟದ ಕಿಡಿಗಳು ತಮ್ಮ ಇರುವಿಕೆಯನ್ನು, ಪ್ರಸ್ತುತತೆಯನ್ನು ವ್ಯಕ್ತ ಪಡಿಸುತ್ತಿವೆ. ಎಷ್ಟೇ ಒಡಕುಂಟಾದರೂ ದಲಿತ ಚಳುವಳಿಯ ಬೇರುಗಳು ಇನ್ನೂ ಗಟ್ಟಿಯಾಗಿವೆ. ಸಾಂಸ್ಕೃತಿಕವಾಗಿ ಕುವೆಂಪುರವರ ಕಾವ್ಯಗಳಲ್ಲಿ, ಬೇಂದ್ರೆಯವರ ಪದ್ಯಗಳಲ್ಲಿ, ಅಡಿಗರ ಕವನಗಳಲ್ಲಿ, ಕಾರಂತರ ಮಹಾನ್ ಕೃತಿಗಳಲ್ಲಿ, ಕಾರ್ನಾಡರ ನಾಟಕಗಳಲ್ಲಿ, ಭೈರಪ್ಪನವರ ಸಾಹಿತ್ಯ ಕೃತಿಗಳಲ್ಲಿ, ಲಂಕೇಶ್-ದೇವನೂರು-ಸಿದ್ಧಲಿಂಗಯ್ಯನವರ ಕ್ರಾಂತಿಕಾರಿ ಕೃತಿಗಳಲ್ಲಿ, ಮತ್ತು ಕನ್ನಡ ಸಾರಸ್ವತ ಲೋಕದ ನೂರಾರು ಮಹಾನ್ ಚೇತನಗಳ ಸಾಹಿತ್ಯ ಕೃತಿಗಳಲ್ಲಿ, ಕನ್ನಡ ನಾಡಿನ ಭವ್ಯ ಪರಂಪರೆ ಹುದುಗಿದೆ. ಕನ್ನಡಿಗರ ಸಮಾಜ ಆರ್ಥಿಕ ಅಭಿವೃದ್ಧಿಯನ್ನು ಕಡೆಗಣಿಸಿ ಕನ್ನಡತನವನ್ನು ಹುಡು ಕುವುದು ವ್ಯರ್ಥವಾಗುತ್ತದೆ. ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ಈ ಸತ್ಯವನ್ನು ಗ್ರಹಿಸುವುದರಲ್ಲಿಯೇ ಕನ್ನಡಿಗರ ಶ್ರೇಯಸ್ಸು-ಅಡಗಿದೆ. ಇದನ್ನು ಸಾರ್ಥಕಗೊಳಿ ಸುವುದು ನಮ್ಮ ಕೈಯಲ್ಲೇ ಇದೆ. □

ಪ್ರಸ್ತುತ ಪರಿಸ್ಥಿತಿಯಲ್ಲಿ ಕನ್ನಡ ಭಾಷಾ ಬೆಳವಣಿಗೆಗಾಗಿ ಯಾವ ಕ್ರಮ ಕೈಗೊಳ್ಳುತ್ತಿದ್ದೇವೆ ಎಂಬುದಕ್ಕಿಂತಲೂ ಹೆಚ್ಚಾಗಿ, ಟಿಪ್ಪು ಸುಲ್ತಾನ್ ಕನ್ನಡ ಪರವೋ, ವಿರೋಧಿಯೋ ಎಂಬುದರ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿರುವುದು, ಈ ವಾದ ವಿವಾದದಲ್ಲಿ ಧೀಮಂತ ಸಾಹಿತಿಗಳೂ ತೊಡಗಿರುವುದು ಸುವರ್ಣ ಕರ್ನಾಟಕದ ದುರಂತವೆಂದಷ್ಟೇ ಹೇಳಬಹುದು. ಇದಕ್ಕೆ ಪ್ರತಿಯಾಗಿ ಕನ್ನಡ ಪರ ಹೋರಾಟ ಸಂಘಟನೆಗಳು, ವಾಸ್ತವತೆಗಿಂತಲೂ, ಭಾವುಕತೆಗೇ ಹೆಚ್ಚು ಗಮನ ನೀಡುತ್ತಿರುವುದರಿಂದ, ಎಲ್ಲೆಲ್ಲೂ ಕನ್ನಡ ಧ್ವಜ ಹಾರಡುತ್ತಿದ್ದರೂ, ಕನ್ನಡ ಭಾಷೆ ಮರೆಯಾಗುತ್ತಿದೆ. ಭಾಷಾಭಿಮಾನ ಮನರಂಜನೆಗೆ ಸೀಮಿತವಾಗುತ್ತಿದೆ.

ಇಂಗ್ಲಿಷ್ ಮರುಳಿನಲ್ಲಿ ನಡೆಯುತ್ತಿರುವ ಕನ್ನಡದ ಸುವರ್ಣೋತ್ಸವ

ರಾಜಕೀಯ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರವು ಅದರಿಂದ ಪಾರಾಗಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯೆಂಬ ಆಮಿಷದ ಮೂಲಕ ಈ ಜನಭಾಗದ ಮನಸ್ಸನ್ನು ಗೆಲ್ಲುವ ತಾತ್ವಿಕ ಮುಖವಾಡದ, ವಾಸ್ತವದಲ್ಲಿ ಅಗ್ಗದ ಜನಪ್ರಿಯತೆಯ ಪ್ರಯತ್ನವಾಗಿರುವಂತಹ ಕ್ರಮಕ್ಕೆ ಕೈ ಹಾಕಿದೆ. ಅಲ್ಲದೆ, ಅದನ್ನು ಶಿಕ್ಷಣದ ವಿಷಯದಲ್ಲಿ ಬಡ ಮತ್ತು ಗ್ರಾಮಾಂತರ ಮಕ್ಕಳಿಗೆ ಆಗುತ್ತಿರುವ ವಂಚನೆಯನ್ನು ತಪ್ಪಿಸುವ ಉದ್ದೇಶವುಳ್ಳ 'ವ್ಯಾವಹಾರಿಕ ನೀತಿ ಮಾತ್ರ' ಎಂದು ವರ್ಣಿಸುವ ಮೂಲಕ ಜನರನ್ನು ಒಡೆದು, ಯಾಮಾರಿಸಲು ಹೊರಟಿದೆ. ಆದರೆ ಮೂರು ಶತಮಾನಗಳ ಹಿಂದೆ ಇಂತಹ ರಾಜಕೀಯದಿಂದಲೇ ಕಿತ್ತಾಡಿಕೊಂಡು ಒಡೆದು ಹೋಗಿ, ಈಸ್ಟ್ ಇಂಡಿಯಾ ಕಂಪನಿಯನ್ನೂ 'ವ್ಯವಹಾರಕ್ಕೆ ಮಾತ್ರವಲ್ಲವೇ?' ಎಂದು ಸ್ವಾಗತಿಸಿದ್ದೆವು ಎಂಬುದನ್ನು ಮರೆತು, ಸರ್ಕಾರದ ಈ 'ವ್ಯಾವಹಾರಿಕ ಆಮಿಷ'ಕ್ಕೆ ಒಂದು ಜನಭಾಗ ಮರುಳಾಗಿದೆ.

ಡಿ.ಎಸ್.ನಾಗಭೂಷಣ

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡಿರುವ ಆಜ್ಞೆಯ ಮೂಲಕ, ಕನ್ನಡದಿಂದ ಅನ್ನ ಹುಟ್ಟುವುದಿಲ್ಲ ಹಾಗೂ 'ಅಭಿವೃದ್ಧಿ' ಸಾಧ್ಯವಿಲ್ಲ ಎಂಬ ಸಂದೇಶ ಸಾರಿರುವ ಕರ್ನಾಟಕ ಸರ್ಕಾರವು, ಕನ್ನಡ ರಾಜ್ಯೋದಯದ ಚಿನ್ನದ ಹಬ್ಬವನ್ನು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿರುವುದು ದೊಡ್ಡ ವಿಪರ್ಯಾಸವೇ ಸರಿ. ಈ ರಾಜ್ಯೋದಯಕ್ಕಾಗಿ ಹೋರಾಡಿದ ಹಲವರು, ಕೆಲಯೊಬ್ಬರನ್ನು ಬಿಟ್ಟರೆ, ಯಾವ ಘನೋದ್ದೇಶಕ್ಕಾಗಿ ಇವರೆಲ್ಲ ಹೋರಾಟ ಮಾಡಿದರೋ ಆ ಉದ್ದೇಶವನ್ನೇ ಅಪ್ರಸ್ತುತಗೊಳಿಸುವ ಸದರಿ ಸರ್ಕಾರಿ ಆಜ್ಞೆಯ ವಿರುದ್ಧ ಒಂದು ಸಣ್ಣ ಪ್ರತಿಭಟನೆಯ ಸೊಲ್ಲೂ ಇಲ್ಲದೆ, ರಾಜ್ಯ ಸರ್ಕಾರ ಕೊಡಮಾಡುತ್ತಿರುವ ಪ್ರಶಸ್ತಿಗಳನ್ನು ಸ್ವೀಕರಿಸಲು ಸಿದ್ಧವಾಗಿ ನಿಂತಿರುವುದನ್ನು ನೋಡಿದರೆ, ಇಂಗ್ಲಿಷ್ ಮರುಳು ಉಂಟು ಮಾಡಿರುವ 'ವಿಸ್ಮೃತಿ' ಎಷ್ಟು ವಿನಾಶಕಾರಿ ಆಯಾಮಗಳುಳ್ಳದ್ದು ಎಂಬುದು ಅರಿವಿಗೆ ಬಂದು ಭಯವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ನಮ್ಮ ಮಾಧ್ಯಮಗಳು-ಅದೂ ಕನ್ನಡದ ಕೆಲವು ಪತ್ರಿಕೆಗಳು- ತಮ್ಮ ಉದ್ಯಮದ ಎಲ್ಲಾ ನೀತಿ ಮರ್ಯಾದೆಗಳನ್ನೂ ಗಾಳಿಗೆ ತೂರಿ, ಭಿನ್ನಾಭಿಪ್ರಾಯಗಳಿಗೆ ಅವಕಾಶವನ್ನೇ ನಿರಾಕರಿಸಿ, ಸರ್ಕಾರಿ ಆಜ್ಞೆ ಪರ ವಾತಾವರಣ ನಿರ್ಮಾಣ ಮಾಡ ಹೊರಟಿರುವುದು ಈ ಸುವರ್ಣ ಕರ್ನಾಟಕಾಚರಣೆಯ ರುಚಿಯನ್ನೇ ಕೆಡಿಸಿದೆ. ಇವರೆಲ್ಲರೂ, ಕಳೆದ ಕೆಲವು ವರ್ಷಗಳಿಂದ ದೇಶಾದ್ಯಂತ ನಡೆಯುತ್ತಿರುವ ವಿಶ್ವ ಬ್ಯಾಂಕ್ ಆಯೋಜಿತ 'ಕಣ್ಣು ಕೋರೈಸುವಂತಹ ಬೃಹತ್ ಅಭಿವೃದ್ಧಿ'ಯ ರಾಜಕಾರಣದ ಬಲೆಗೆ ಬಿದ್ದಿರುವ ರೀತಿ-ನೀತಿಗಳನ್ನು ನೋಡಿದರೆ, 'ಈಸ್ಟ್ ಇಂಡಿಯಾ ಕಂಪನಿ' ರಾಜಕಾರಣದ ಹೊಸ ಆವೃತ್ತಿಗೆ ದೇಶ ಸಿದ್ಧವಾಗುತ್ತಿರುವಂತೆ ತೋರುತ್ತದೆ.

ವಸಾಹತುಶಾಹಿ ಮನಸ್ಸು ಮಾಡುವ ಮೊದಲ ಕೆಲಸವೆಂದರೆ, ದೇಶೀ ಜನರಲ್ಲಿ ದೇಶೀಯ ಪರಿಕರಗಳ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಅನುಮಾನ ಮತ್ತು ಅವರ ಜೀವನ ಮಟ್ಟವನ್ನು ಕುರಿತು ಅವಮಾನವನ್ನು ಸೃಷ್ಟಿಸುವುದು. ಈ ಹಿನ್ನೆಲೆಯಲ್ಲಿ ಇಂದು ಕರ್ನಾಟಕದಲ್ಲಿ ಕನ್ನಡ ಭಾಷೆಯ ಶಕ್ತಿ-ಸಾಮರ್ಥ್ಯಗಳನ್ನು ಕುರಿತು ಕನ್ನಡಿಗರಲ್ಲೇ ಮೂಡಿಸಲಾಗುತ್ತಿರುವ ಅನುಮಾನ ಹಾಗೂ ಭಾಷೆ ಮತ್ತು ಜಾತಿ ನಡುವೆ ತಳುಕು ಹಾಕಿ ವಿವಿಧ ಸಾಮಾಜಿಕ ವರ್ಗಗಳಲ್ಲಿ ಅಭಿವೃದ್ಧಿ ಪರಿಕಲ್ಪನೆ ಕುರಿತಂತೆ ಉಂಟು ಮಾಡಿರುವ ಗೊಂದಲ ಅನೇಕ ನೆಲೆಗಳಲ್ಲಿ ಪ್ರತಿಧ್ವನಿಗಳನ್ನು ಹೊರಡಿಸುವಂತಾಗಿವೆ: ಕಣ್ಣು ಕೋರೈಸುವ ಈ ಅಭಿವೃದ್ಧಿಯು, ಆ ಅಭಿವೃದ್ಧಿಯ ತಾಣಗಳಲ್ಲಿ ಉಂಟುಮಾಡಿರುವ ನೆಮ್ಮದಿ ಭಂಗವನ್ನೂ, ಸಾಮಾಜಿಕ ಅಶಾಂತಿಯನ್ನೂ ಅರ್ಥ ಮಾಡಿಕೊಳ್ಳಲಾಗದಷ್ಟು ನಮ್ಮನ್ನು ಅಸೂಕ್ಷ್ಮಗೊಳಿಸಿ, ಒಂದನೇ ತರಗತಿಯ ಇಂಗ್ಲಿಷ್ ಪ್ರಣೀತ ಅಭಿವೃದ್ಧಿ ಮತ್ತು ಸಾಮಾಜಿಕ ಸಮಾನತೆ ಎಂಬ ಮರೀಚಿಕೆಯ ಬೆನ್ನ ಹಿಂದೆ ಬೀಳುವಂತೆ ಮಾಡಿದೆ. ಹೀಗಾಗಿ, ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ನಂತರ ಅನೇಕ ಅಡೆತಡೆಗಳನ್ನು ನಿವಾರಿಸಿಕೊಂಡು ಸತತ ಕಾನೂನು ಹೋರಾಟದ ಮೂಲಕ ಭಾರತೀಯ ಶಾಲೆಗಳಲ್ಲಿ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯ ಮಾಡಬಹುದೆಂದು ಸರ್ವೋನ್ನತ ನ್ಯಾಯಾಲಯದಿಂದ ತೀರ್ಪು ಪಡೆದ ಭಾರತೀಯ ಭಾಷಾ ಆಂದೋಲನಕಾರರಿಗೆ ಇಂದು ಎದುರಾಗಿರುವವರು, ನಾವೇ-ನಮ್ಮ ಒಂದು ಭಾಗವೇ ಎಂಬುದು ವಿಚಿತ್ರವಾದರೂ ಸತ್ಯವಾಗಿದೆ!

ಈ ವಿಚಿತ್ರ ಸತ್ಯದ ಒಂದು ಭಾಗವಾಗಿ, ರಾಜಕೀಯ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರವು ಅದರಿಂದ ಪಾರಾಗಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯೆಂಬ ಆಮಿಷದ ಮೂಲಕ ಈ

ಜನಭಾಗದ ಮನಸ್ಸನ್ನು ಗೆಲ್ಲುವ ತಾತ್ವಿಕ ಮುಖವಾಡದ, ಆದರೆ ವಾಸ್ತವದಲ್ಲಿ ಅಗ್ಗದ ಜನಪ್ರಿಯತೆಯ ಪ್ರಯತ್ನವಾಗಿರುವಂತಹ ಕ್ರಮಕ್ಕೆ ಕೈ ಹಾಕಿದೆ. ಅಲ್ಲದೆ, ಅದನ್ನು ಶಿಕ್ಷಣದ ವಿಷಯದಲ್ಲಿ ಬಡ ಮತ್ತು ಗ್ರಾಮಾಂತರ ಮಕ್ಕಳಿಗೆ ಆಗುತ್ತಿರುವ ವಂಚನೆಯನ್ನು ತಪ್ಪಿಸುವ ಉದ್ದೇಶವುಳ್ಳ 'ವ್ಯಾವಹಾರಿಕ ನೀತಿ ಮಾತ್ರ' ಎಂದು ವರ್ಣಿಸುವ ಮೂಲಕ ಜನರನ್ನು ಒಡೆದು, ಯಾಮಾರಿಸಲು ಹೊರಟಿದೆ. ಆದರೆ ಮೂರು ಶತಮಾನಗಳ ಹಿಂದೆ ನಾವು ಹೀಗೆ ಇಂತಹ ರಾಜಕೀಯದಿಂದಲೇ ಕಿತ್ತಾಡಿಕೊಂಡು ಒಡೆದು ಹೋಗಿ, ಈಸ್ಟ್ ಇಂಡಿಯಾ ಕಂಪನಿಯನ್ನೂ 'ವ್ಯವಹಾರಕ್ಕೆ ಮಾತ್ರವಲ್ಲವೇ?' ಎಂದು ಸ್ವಾಗತಿಸಿದ್ದೆವು ಎಂಬುದನ್ನು ಮರೆತು, ಸರ್ಕಾರದ ಈ 'ವ್ಯಾವಹಾರಿಕ ಆಮಿಷ'ಕ್ಕೆ ಒಂದು ಜನಭಾಗ ಮರುಳಾಗಿದೆ. ಈ ಮರುಳಿನಲ್ಲಿ ಈ ಜನಭಾಗವು, ಕನ್ನಡ ಶಾಲೆಗಳಲ್ಲಿ ಕಲಿತ ಬಡ ಹಾಗೂ ಗ್ರಾಮಾಂತರ ಮಕ್ಕಳು ಈಗ ಜೀವನದಲ್ಲಿ ಯಶಸ್ವಿಯೇ ಆಗಿಲ್ಲವೇನೋ ಮತ್ತು ಯಶಸ್ವಿಯಾಗಿರದವರೆಲ್ಲರಿಗೂ, ಅವರು ಐದನೇ ತರಗತಿಯಿಂದ ಮಾತ್ರ ಇಂಗ್ಲಿಷ್ ಕಲಿಯುವಂತಾದುದೇ ಕಾರಣವೇನೋ ಎಂದೂ ಭಾವಿಸಿದಂತಿದೆ. ರಾಜ್ಯಾದ್ಯಂತ ಇರುವ ಬಹುತೇಕ ಕೈಗಾರಿಕೋದ್ಯಮಗಳು ಹಾಗೂ ಇತರೆ ಉದ್ಯೋಗ ಸಂಸ್ಥೆಗಳ ಒಳ ಹೊಕ್ಕು ನೋಡಿದರೆ, ಇದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿಲ್ಲ ಎಂಬುದು ಗೊತ್ತಾಗುತ್ತದೆ.

ಅಲ್ಲದೆ, ಈಗ ಎಲ್ಲರನ್ನೂ ಯಾಮಾರಿಸುತ್ತಿರುವ ಜಾಗತೀಕರಣದ ಅತ್ಯದ್ಭುತ ಸಾಧನೆಗಳ ಪ್ರತ್ಯಕ್ಷ ಮೂರ್ತಿಯಾಗಿ ಕಾಣುತ್ತಿರುವ ಇನ್ಫೊಸಿಸ್‌ನ ನಾರಾಯಣ ಮೂರ್ತಿಯವರೂ ಸೇರಿದಂತೆ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಕೆಲವರ ಪಾಲಿಗಷ್ಟೇ ದಿಢೀರ್ ಶ್ರೀಮಂತಿಕೆ ತಂದು ಕೊಟ್ಟಿರುವ ತಾಂತ್ರಿಕ ಉದ್ಯಮಗಳನ್ನು ಸ್ಥಾಪಿಸಿರುವವರು ಬಹುತೇಕ, ಈವರೆಗೆ ಚಾಲ್ತಿಯಲ್ಲಿರುವ ಶಿಕ್ಷಣ ಕ್ರಮದ ಶಿಶುಗಳೇ ಆಗಿದ್ದಾರೆ ಎಂಬುದು ಇವರ ಅರಿವಿಗೇ ಬಾರದಿರುವುದು ಈ ಮರುಳನ್ನು ಖಚಿತಪಡಿಸುತ್ತದೆ. ಇನ್ನು ಜಾಗತೀಕರಣವೆಂದರೆ, ಎಲ್ಲರಿಗೂ ಕಾರು-ಕಂಪ್ಯೂಟರ್ ಇತ್ಯಾದಿ ಅತ್ಯಾಧುನಿಕ ಸೌಲಭ್ಯಗಳ ಲಭ್ಯತೆಯೆಂದೂ, ಇನ್ನು ಮುಂದೆ ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿತವರಿಗೆ ಮಾತ್ರ ಇದರ ಲಭ್ಯತೆ ಸಾಧ್ಯವೆಂದು ಇವರು ನಂಬಿದಂತಿದೆ! ಆದರೆ ಇಂಗ್ಲಿಷ್ ಇರಲಿ, ಕನ್ನಡವನ್ನೂ ಸರಿಯಾಗಿ ಕಲಿಯದ ಬೆಂಗಳೂರಿನ ಬಹುತೇಕ ರೌಡಿಗಳು, ರಿಯಲ್ ಎಸ್ಟೇಟ್ ಏಜೆಂಟರುಗಳು ಹಾಗೂ ಈಗ ಚಾಲ್ತಿಗೆ ಬಂದಿರುವ ಹೊಸ ಹೊಸ ವ್ಯಾಪಾರ ಪದ್ಧತಿಗಳ ದಲ್ಲಾಳಿಗಳೂ ವೈವಿಧ್ಯಮಯ ಕಾರುಗಳನ್ನು ಓಡಿಸುತ್ತಾ ತಮ್ಮ ಬೃಹತ್ ಬಂಗಲೆಗಳಲ್ಲಿ ಕಂಪ್ಯೂಟರ್ ಇತ್ಯಾದಿ ಅತ್ಯಾಧುನಿಕ ಸಾಧನ ಸಲಕರಣೆಗಳನ್ನು ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಇಂತಹವರ ಗಮನಕ್ಕೆ ತರಬೇಕಿದೆ.

ಮಾತೃಭಾಷಾ ಶಾಲಾ ಶಿಕ್ಷಣ ಮಾಧ್ಯಮವನ್ನು ಎತ್ತಿ ಹಿಡಿದಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ನಮ್ಮ ಶಿಕ್ಷಣೋದ್ಯಮಿಗಳ ಜೊತೆಗೆ ಕಳೆದ ೧೩ ವರ್ಷಗಳಿಂದಲೂ ಮೌನವಾಗಿ ಶಾಮೀಲಾಗಿದ್ದುಕೊಂಡು, ಈಗ ಇಂಗ್ಲಿಷ್ ಕಲಿಕೆ ಆಜ್ಞೆಗೆ ಅನುವು ಮಾಡಿಕೊಳ್ಳಲಷ್ಟೇ ಆ ತಡೆಯಾಜ್ಞೆ ಕುರಿತಂತೆ ಎಚ್ಚೆತ್ತಿರುವ ರಾಜ್ಯ ಸರ್ಕಾರ (ಇದರಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ) ಕನ್ನಡದ ಪ್ರಶ್ನೆಯನ್ನು

ಬೌದ್ಧಿಕ ದಿವಾಳಿತನದ ದಟ್ಟ ವಾತಾವರಣದಲ್ಲಿ ಸಮಕಾಲೀನ ಭಾರತದ ಶ್ರೇಷ್ಠ ವಿಜ್ಞಾನಿ ಹಾಗೂ ಪ್ರಾಧ್ಯಾಪಕರೆನಿಸಿರುವ ಡಾ॥ ಸಿ.ಎನ್.ಆರ್. ರಾವ್ ಅವರ ಮಾತುಗಳು ಕಿವಿಗೆ ಬೀಳದಂತಾಗಿರುವುದು ಹಾಗೂ ಯುನೆಸ್ಕೊ ಮತ್ತು ನಮ್ಮದೇ ಶಿಕ್ಷಣ ಸಂಶೋಧನಾ ಸಂಸ್ಥೆ NCERTಯ ಸಮೀಕ್ಷೆ-ಶಿಫಾರ್ಸುಗಳ ಕಡೆ ನಮ್ಮ ಗಮನ ಹರಿಯದೇ ಇರುವುದು ಸಹಜವಾಗಿಯೇ ಇದೆ ಕೆಲವೇ ದಿನಗಳ ಹಿಂದೆ ಸಿ.ಎನ್.ಆರ್. ರಾವ್ ಅವರು ಧಾರವಾಡದಲ್ಲಿ ಈ ಇಂಗ್ಲಿಷ್ ಕಲಿಕೆ ವಿವಾದದ ಮಧ್ಯೆಯೇ, ಮೊದಲು ಮಕ್ಕಳಿಗೆ ಶಾಲೆಯಲ್ಲಿ ಕನ್ನಡ ಕಲಿಸಿ, ಬೋಧಿಸಿ; ನಂತರವಷ್ಟೇ ಇಂಗ್ಲಿಷ್ ಕಲಿಸಿ ಎಂದು ಹೇಳಿದ್ದಾರೆ ಮತ್ತು ಈ ಮೊದಲು ಉಲ್ಲೇಖಿಸಿದ ಜಾಗತಿಕ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಮಾತ್ರ ಅಥವಾ ಪರಿಸರ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಜಾರಿಗೆ ತರುವುದರ ಜೊತೆಗೆ ಹೊಂದಿಕೊಂಡಂತೆ ಮಾತ್ರ ಇಂಗ್ಲಿಷ್ ಕಲಿಸಲು ಶಿಫಾರ್ಸು ಮಾಡಿವೆ.

ಅದರೆಲ್ಲ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳುವ ಇಚ್ಛಾ ಶಕ್ತಿಯನ್ನಾಗಲೀ, ಪ್ರತಿಭೆಯನ್ನಾಗಲೀ ಹೊಂದಿದೆ ಎಂದು ನಂಬುವುದು ಕಷ್ಟ. ಕಟ್ಟು ಬಿಚ್ಚಿದ ಕುದುರೆಯಂತೆ ಈಗ ಅಡ್ಡಾದಿಡ್ಡಿ ನೆಗೆಯುತ್ತಾ, ಕೆನೆಯುತ್ತಾ ಓಡುತ್ತಿರುವ ಹೊಸ ಆರ್ಥಿಕತೆಯ ಸವಾರಿಗೆ ತಮ್ಮ ಮಕ್ಕಳನ್ನು ಹುರಿದುಂಬಿಸುತ್ತಿರುವ ನಮ್ಮ ಪಾಲಕರ ಹಪಾಹಪಿಯನ್ನೇ ಬಂಡವಾಳ ಮಾಡಿಕೊಂಡು ಕನ್ನಡದ ಬುಡಕ್ಕೇ ಕೊಡಲಿ ಹಾಕಲು ಹೊರಟಿರುವ ಈ ರಾಜಕಾರಣಿಗಳ ಹುನ್ನಾರಕ್ಕೆ ಜಾತಿ-ವರ್ಗಗಳ ಹೆಸರಲ್ಲಿ ನಮ್ಮ ಬುದ್ಧಿಜೀವಿಗಳೆನಿಸಿಕೊಂಡ ಅನೇಕರು ಬೆಂಬಲ ವ್ಯಕ್ತಪಡಿಸಿರುವುದರ ಹಿಂದಿನ ರಾಜಕಾರಣವು, ರಾಜಕಾರಣಿಗಳ ರಾಜಕಾರಣವನ್ನೂ ಮೀರಿಸುವಷ್ಟು ವೃತ್ತಿಪರವಾಗಿದೆ: ಇತ್ತೀಚೆಗೆ ಕೆಲವು ಕಾಂಗ್ರೆಸ್ಸಿಗರು ಸರ್ಕಾರಿ ಆಜ್ಞೆಯನ್ನು ಸ್ವಾಗತಿಸಿ, ತಮ್ಮ ವಾದಕ್ಕೆ ಬೆಂಬಲವಾಗಿ ಉಲ್ಲೇಖಿಸಿರುವ ಚಂದ್ರಶೇಖರ ಕಂಬಾರರು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಈ ಬಗ್ಗೆ ಒಂದು ವರದಿಯನ್ನೇ ಸಲ್ಲಿಸಿದ್ದ ಬರಗೂರು ರಾಮಚಂದ್ರಪ್ಪನವರು; ಈ ಮೊದಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದವರಾಗಿದ್ದು, ಕೆಲವು ಬುದ್ಧಿಜೀವಿಗಳು ಈ ವಿವಾದಕ್ಕೆ ಜಾತಿ ಸ್ಪರ್ಶ ನೀಡಿದೊಡನೆ ಪಕ್ಷಾಂತರ ಮಾಡಿದವರು.

ಕೂಡಲೇ 'ಬಂಡಾಯಿ'ಗಳ ಒಂದು ದಂಡೇ ಅವರ ಹಿಂದೆ ಪಕ್ಷಾಂತರ ಮಾಡಿ, ತಾವು ಮತ್ತು ತಮ್ಮ ಮಕ್ಕಳು ಹಿಂದುಳಿದಿರುವುದೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಯದಂತೆ ಮಾಡಿರುವ ಮೇಲ್ಜಾತಿ ಮನಸ್ಸುಗಳ ಹುನ್ನಾರದಿಂದ ಎಂಬ ಹೊಸ ಸತ್ಯವನ್ನು ಆವಿಷ್ಕರಿಸಿಕೊಳ್ಳುವ ಮೂಲಕ, ಆವರೆಗೆ ತಾವು ಇಂಗ್ಲಿಷ್ ಕಲಿಕೆ ಬಗ್ಗೆ ತಳೆದಿದ್ದ ನಿಲುವನ್ನು ಕ್ಷಣಾರ್ಧದಲ್ಲಿ ಬದಲಾಯಿಸಿಕೊಂಡು ತನ್ನ ಬೌದ್ಧಿಕ ದಿವಾಳಿತನವನ್ನು ಮೆರೆದಿದೆ! ಹಾಗೇ ಕನ್ನಡದ ಸೇನಾನಿ ಪಾಟೀಲ ಪುಟ್ಟಪ್ಪನವರು ಕೂಡಾ: ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯು ಕನ್ನಡಕ್ಕೆ ಧಕ್ಕೆ ತರುವಂತಹುದಲ್ಲ ಎಂದು ಈ ಹಿಂದಿನ ಮತ್ತು ಪ್ರಸ್ತುತ ಸರ್ಕಾರ ಬಾರಿ ಬಾರಿ ಹೇಳಿದ್ದರೂ ನಂಬದಿದ್ದ ಅವರೀಗ, ಈಚೆಗೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಸಮ್ಮುಖದಲ್ಲಿ ಪ್ರಾಥಮಿಕ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿಯವರು ಅದನ್ನೇ ಪುನರುಚ್ಚರಿಸಿದೊಡನೆ ಸಂಪ್ರೀತರಾಗಿ, ಹಾಗಿದ್ದಲ್ಲಿ ತಮ್ಮ ಅಭ್ಯಂತರವೇನೂ ಇಲ್ಲವೆಂದು ಅನುಮತಿ ಪತ್ರ ನೀಡಿದ್ದಾರೆ! ಇನ್ನು ಕನ್ನಡದ 'ಹುಟ್ಟು ಹೋರಾಟಗಾರ' ವಾಟಾಳ್ ನಾಗರಾಜ್ ಹಾಗೂ ಇತ್ತೀಚಿನವರೆಗೆ, ಕನ್ನಡ ಮಾಧ್ಯಮವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಅಪಾಯಕಾರಿ ಎಂದು ಸಾರಿ ಸಾರಿ ಹೇಳುತ್ತಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯನವರು ಈಗ ಈ ವಿಷಯದಲ್ಲಿ ಒಂದು ಮಾತನ್ನೂ ಆಡಲಾಗದ ಅಧಿಕಾರ ರಾಜಕಾರಣದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಇನ್ನು 'ಮೋರೆಗೆ ಮಸಿ' ಖ್ಯಾತಿಯ ಕನ್ನಡ ರಕ್ಷಣಾ ವೇದಿಕೆ ಈ ವಿಷಯದಲ್ಲಿ ಮೌನವಾಗಿರುವ ಮೂಲಕ ತನ್ನ ಮೋರೆಗೇ ಮಸಿ ಬಳಿದುಕೊಂಡಿದೆ.

ಇಂತಹ ಬೌದ್ಧಿಕ ದಿವಾಳಿತನದ ದಟ್ಟ ವಾತಾವರಣದಲ್ಲಿ ಸಮಕಾಲೀನ ಭಾರತದ ಶ್ರೇಷ್ಠ ವಿಜ್ಞಾನಿ ಹಾಗೂ ಪ್ರಾಧ್ಯಾಪಕರೆನಿಸಿರುವ ಡಾ॥ ಸಿ.ಎನ್.ಆರ್. ರಾವ್ ಅವರ ಮಾತುಗಳು ಕಿವಿಗೆ ಬೀಳದಂತಾಗಿರುವುದು ಹಾಗೂ ಯುನೆಸ್ಕೊ ಮತ್ತು ನಮ್ಮದೇ ಶಿಕ್ಷಣ ಸಂಶೋಧನಾ ಸಂಸ್ಥೆ NCERTಯ ಸಮೀಕ್ಷೆ-ಶಿಫಾರ್ಸುಗಳ ಕಡೆ ನಮ್ಮ ಗಮನ ಹರಿಯದೇ ಇರುವುದು ಸಹಜವಾಗಿಯೇ ಇದೆ: ಕೆಲವೇ ದಿನಗಳ ಹಿಂದೆ ಸಿ.ಎನ್.ಆರ್. ರಾವ್ ಅವರು ಧಾರವಾಡದಲ್ಲಿ ಈ ಇಂಗ್ಲಿಷ್ ಕಲಿಕೆ ವಿವಾದದ ಮಧ್ಯೆಯೇ, ಮೊದಲು ಮಕ್ಕಳಿಗೆ ಶಾಲೆಯಲ್ಲಿ ಕನ್ನಡ ಕಲಿಸಿ, ಬೋಧಿಸಿ; ನಂತರವಷ್ಟೇ ಇಂಗ್ಲಿಷ್ ಕಲಿಸಿ ಎಂದು ಹೇಳಿದ್ದಾರೆ ಮತ್ತು ಈ ಮೊದಲು ಉಲ್ಲೇಖಿಸಿದ ಜಾಗತಿಕ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಮಾತ್ರ ಅಥವಾ ಪರಿಸರ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಜಾರಿಗೆ ತರುವುದರ ಜೊತೆಗೆ ಹೊಂದಿಕೊಂಡಂತೆ ಮಾತ್ರ ಇಂಗ್ಲಿಷ್ ಕಲಿಸಲು ಶಿಫಾರ್ಸು ಮಾಡಿವೆ.

ಈಗ ಕಾಣುತ್ತಿರುವ ವಿಕ್ಷಿಪ್ತ ಅಭಿವೃದ್ಧಿಯ ಹಪಾಹಪಿಯಲ್ಲಿ, ಪರಿಣತ ವಲಯದ ಈ ಶಿಫಾರ್ಸುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಸ್ವಯಂ ಘೋಷಿತ ಸಾಮಾಜಿಕ ನ್ಯಾಯವಾದಿಗಳ ಹಾಗೂ ರಾಜಕೀಯ ಪುಢಾರಿಗಳ ಪ್ರಚಾರವನ್ನೇ ನಂಬಿ ಹೊರಟರೆ, ಮೊನ್ನೆ ಇನ್ಫೊಸಿಸ್‌ನ ನಾರಾಯಣ ಮೂರ್ತಿಯವರು ನೀಡಿದ 'ಇಂಗ್ಲಿಷ್ ಮಾಧ್ಯಮ ಕಡ್ಡಾಯವಾಗಲಿ' ಎಂಬ ಹೇಳಿಕೆಯು, ಒಂದು ಭಾಷೆಯಾಗಿ ಮಾತ್ರ ಇಂಗ್ಲಿಷ್ ಎಂಬ ಸರ್ಕಾರದ ಹಾಗೂ ಅವರ ಬೆಂಬಲಿಗರ ಘೋಷಣೆಯನ್ನೂ ಮೀರಿ ಹಲವು ಕಡೆಯಿಂದ ಚಲಾವಣೆಗೆ ಬರತೊಡಗಿ, ಕ್ರಮೇಣ 'ಸಾಮಾಜಿಕ ನ್ಯಾಯ'ದ ಪರಿವೇಷ ತೊಟ್ಟು, ಅಧಿಕೃತ ಮಾನ್ಯತೆ ಪಡೆಯುವಂತಾಗುತ್ತದೆ. ಏಕೆಂದರೆ, ಈಗಾಗಲೇ

ತಮ್ಮ ಹೇಳಿಕೆಯಲ್ಲಿ ನಾರಾಯಣ ಮೂರ್ತಿಯವರು ಕನ್ನಡ ಮಾಧ್ಯಮದ ಮೂಲಕ ದಲಿತರಿಗೆ ಹಾಗೂ ಹಿಂದುಳಿದವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಆದರೆ ಇಂಗ್ಲಿಷ್ ಮಾಧ್ಯಮದಲ್ಲೇ ಓದಿದ ಎಷ್ಟು ಜನ ದಲಿತರಿಗೆ ಹಾಗೂ ಹಿಂದುಳಿದವರಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದ ಎಷ್ಟು ಜನ ಇತರರಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ದೊರಕಿದೆ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಹೇಳಿದ್ದರೆ ಚೆನ್ನಿತ್ತು. ಇಡೀ ಜಗತ್ತೇ ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿತವಾಗುತ್ತಿರುವುದೆಂದು(?) ಹೇಳಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂಗ್ಲಿಷ್ ಮಾಧ್ಯಮದ ಅನಿವಾರ್ಯತೆಯನ್ನು ಎತ್ತಿ ಹೇಳಿರುವ ಅವರು, ಸ್ವತಃ ತಾವೇ ಕನ್ನಡ ಶಾಲೆಯಲ್ಲಿ ಓದಿ ಈ ಜಾಗತಿಕ ಮಾರುಕಟ್ಟೆಗೆ ಸೆಡ್ಡು ಹೊಡೆದು ನಿಲ್ಲಲು ಸಾಧ್ಯವಾಗಿರುವ ಸತ್ಯವನ್ನು ಮರೆಯುವಂತಾಗಿರುವುದು, ನವ ವಸಾಹತುಶಾಹಿ ಸೃಷ್ಟಿಸಿರುವ 'ವಿಸ್ಮೃತಿ'ಯ ಪರಿಣಾಮವೇ ಆಗಿರಬಹುದು. ಹಾಗಾಗಿಯೇ, ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ, ಕನ್ನಡ ಕಲಿತು ಬೆಳೆದ ನಾರಾಯಣ ಮೂರ್ತಿಯವರು 'ಕನ್ನಡದಲ್ಲಿ ಸಂದರ್ಶನ ನೀಡಿದರು' ಎಂದು 'ಪ್ರಜಾವಾಣಿ'ಯಂತಹ ಪತ್ರಿಕೆ ಸಂಭ್ರಮದಿಂದ ಹೇಳಿಕೊಳ್ಳುವಂತಹ ದುಃಸ್ಥಿತಿಗೆ ಕನ್ನಡ ಈಡಾಗಿರುವುದು!

ಪಾಸ್ ಪೋರ್ಟ್ ಹಾಗೂ ವೀಸಾಗಳ ನಿಯಮಾವಳಿ ದಿನೇದಿನೇ ಹೆಚ್ಚೆಚ್ಚು ಕಟ್ಟುನಿಟ್ಟಾಗುತ್ತಿದ್ದರೂ, ಇಡೀ ಜಗತ್ತೇ ಒಂದು ಹಳ್ಳಿಯಂತಾಗುತ್ತಿದೆ ಎಂದು *ಇಂಟರ್ ನೆಟ್ಟಿಗರು* ಹರಡುತ್ತಿರುವ ಹುಂಬ ನಂಬಿಕೆಗೆ ಮರುಳಾಗಿರುವ ನಾವು ನಮ್ಮ ಮಕ್ಕಳನ್ನು ನೆಲದಿಂದ ಕಿತ್ತು ಆಕಾಶಕ್ಕೆ ಎಸೆದು ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಹೊರಟಿದ್ದೇವೆ! ಆಧುನಿಕ ಮಾಧ್ಯಮ ಮಾಯಾಜಾಲವು ಸೃಷ್ಟಿಸಿಬಿಟ್ಟಿರುವ ಇಂತಹ ವಿಕ್ಷಿಪ್ತ ಜೀವನ ದೃಷ್ಟಿಯಿಂದಾಗಿಯೇ, ಆಧುನೀಕರಣದ ಆರಂಭದ ದಿನಗಳಲ್ಲಿ ಜ್ಞಾನದ ಕಿಟಕಿಯಾಗಿ ಕಂಡ ಇಂಗ್ಲಿಷ್, ಈಗ ಅದರ ಜಾಗತೀಕರಣ ಹಂತದಲ್ಲಿ ಯಾವುದೇ ಎಗ್ಗಿಲ್ಲದಂತಹ ಪೂರಾ ವ್ಯಾಪಾರದ ಕಿಟಕಿಯಾಗಿ ಮಾರ್ಪಾಡಾಗಿರುವ ವಾಸ್ತವಕ್ಕೆ ನಾವು ಅಷ್ಟೇನೂ ಎಚ್ಚರಾದಂತೆ ತೋರುವುದಿಲ್ಲ.

ಹಾಗೇ, ಈ ಜಾಗತೀಕರಣವು ಜಗತ್ತಿನ 'ಬೌದ್ಧಿಕ ಆಸ್ತಿ' ಎಂಬುದನ್ನು ನಿರ್ವಚಿಸಿ, ಅದನ್ನು ಹರಾಜಿಗಿಡುವ ಮೂಲಕ ಮಾನವ ಸಂಪನ್ಮೂಲದ ಪರಿಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿ, ಮಾನವ ಸತ್ವದ ಪಾವಿತ್ರ್ಯ ಹಾಗೂ ಅಖಂಡತೆಗೆ ಭಂಗ ತಂದಿರುವುದರ ಬಗ್ಗೆಯೂ ನಮ್ಮಲ್ಲಿ ಅಂತಹ ವ್ಯಸ್ತತೆಯೇನೂ ಉಂಟಾಗಿಲ್ಲ. ಹೀಗಾಗಿ ಪರಿಣಾಮದ ದೃಷ್ಟಿಯಿಂದ, ಜಾಗತೀಕರಣವೆಂದರೆ ಸಾಮ್ರಾಜ್ಯಶಾಹಿಯ ಸ್ವಯಂ ಅಥವಾ ದೇಶೀ ಪುನರುತ್ಪಾದನೆಯೇ ಆಗಿದೆ. ಅಲ್ಲದೇ ಅದು, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಿಗಷ್ಟೇ ಅನ್ವಯವಾಗದೆ ನಮ್ಮ ಕಲೆ–ಮಾನವಿಕ–ಕೃಷಿ (ಗ್ರಾಹಕ ಮಾರುಕಟ್ಟೆ ಹಾಗೂ ಮನರಂಜನಾ ಸಂಕೀರ್ಣಗಳ ನಿರ್ಮಾಣಕ್ಕಾಗಿ, ಕೃಷಿ ಭೂಮಿಯನ್ನು ಕಬಳಿಸುವ ವಿಶೇಷ ಆರ್ಥಿಕ ವಲಯಗಳ ಯೋಜನೆ ಈಗಾಗಲೇ ಜಾರಿಗೆ ಬರತೊಡಗಿ ಗ್ರಾಮಾಂತರ ಪ್ರದೇಶಗಳಲ್ಲಿ ತಳಮಳ ಆರಂಭವಾಗಿದೆ) ಕ್ಷೇತ್ರಗಳಿಗೂ ಅನ್ವಯವಾಗುವಂತಾಗಿರುವುದರ ಕಾರಣಗಳನ್ನು, ಆಧುನೀಕರಣ ನಿಜವಾಗಿ ಭಾರತಕ್ಕೆ, ಅದರ ಆತ್ಮಕ್ಕೆ ಏನು ಮಾಡಿದೆ ಎಂಬುದರ ಅನ್ವೇಷಣೆಯ ಹಾದಿಯಲ್ಲಿ ಕಂಡುಕೊಳ್ಳಬಹುದಾಗಿದೆ:

ನಿಲ್ಲದ ರೈತರ ಆತ್ಮಹತ್ಯೆ ಸರಣಿ, ಬೃಹತ್ ಯೋಜನೆಗಳಿಗಾಗಿ ಈಗಲೂ ಮುಂದುವರೆಯುತ್ತಿರುವ ಬಡ ಹಾಗೂ ಅಸಹಾಯಕ ಜನರ ನಿರ್ವಸತೀಕರಣ; ತಾರಕಕ್ಕೇರಿರುವ ವಿಶಿಷ್ಟ ಕಸುಬುಗಳ, ಜನ ವರ್ಗಗಳ ಆದಾಯಗಳಲ್ಲಿನ ಅಂತರದಿಂದಾಗಿ ಉಂಟಾಗುತ್ತಿರುವ ಆತಂಕ–ಅಶಾಂತಿಗಳ ವಿವಿಧ ರೂಪದ ಸ್ಫೋಟಗಳು; ಮೂಲಭೂತ ಬದಲಾವಣೆಗೆ ಒಳಗಾಗುತ್ತಿರುವ ದುಡಿಮೆಯ ಅರ್ಥ; ಇವುಗಳ ಮಧ್ಯೆಯೇ ನಗರಗಳಲ್ಲಿನ ಉದ್ಯಮ ಹಾಗೂ ಉದ್ಯಮಿಗಳಿಗಾಗಿ 'ಮೂಲಭೂತ ಸೌಕರ್ಯ'ಗಳ ನಿರ್ಮಾಣದ ಹೆಸರಿನಲ್ಲಿ ನಾಡಿನಾದ್ಯಂತ ಕಡಿದು ಬೀಳುತ್ತಿರುವ ಲಕ್ಷಾಂತರ ಮರಗಳು, ಅದರಿಂದ ಉಂಟಾಗುತ್ತಿರುವ ಜೀವ



ಪರಿಸರ ಸಮಸ್ಯೆಗಳು– ಇವುಗಳಿಂದಾಗಿ ಸೃಷ್ಟಿಯಾಗುತ್ತಿರುವ ಮಾರುಕಟ್ಟೆಯ ಮಾಯಾಜಾಲ (ಈಗ ಸಣ್ಣ ಊರುಗಳಲ್ಲೂ ಹವಾನಿಯಂತ್ರಣ ಯಂತ್ರಗಳು ಗೃಹೋಪಯೋಗಿ ವಸ್ತುಗಳಾಗಿ ಮಾರುಕಟ್ಟೆಗೆ ಬಂದಿವೆ!); ನದಿಗಳ ತುಂಡು ಮಾರಾಟ; ಆಧುನಿಕ ವಿದ್ಯೆ ಕಲಿತ ವೃತ್ತಿಪರರ ನೇತೃತ್ವದಲ್ಲಿಯೇ ನಡೆಯುತ್ತಿರುವ ಆತ್ಮಾಹುತಿಗಳ ಮೂಲಕ ವ್ಯಕ್ತವಾಗುತ್ತಿರುವ ಕೋಮುವಾದಿ ಉಗ್ರವಾದದ ಬರ್ಬರತೆ– ಇತ್ಯಾದಿಗಳಾವುದರಿಂದಲೂ ವಿಚಲಿತರಾಗದಂತೆ, ಜನ ಜಾಗತೀಕರಣದ ಫಲಗಳ ನ್ನುಣ್ಣಲು ಮುಗಿ ಬೀಳುತ್ತಿದ್ದಾರೆ. ಹೀಗೆ ಮುಗಿಬೀಳುವುದಕ್ಕೆ ಎಲ್ಲರಿಗೂ ಸಮಾನ ಅವಕಾಶ ಮಾಡಿಕೊಡಲು ಸಮಾನ ಇಂಗ್ಲಿಷ್ ಕಲಿಕೆ ಅಗತ್ಯವಾಗಿದೆ ಎಂಬುದೇ ಕರ್ನಾಟಕ ಸರ್ಕಾರದ ಆಜ್ಞೆಯ ಹಾಗೂ ಅದರ ಉದ್ದೀಪಕರ ಮತ್ತು ಬೆಂಬಲಿಗರ ವಾದದ ತಾತ್ಪರ್ಯವಾಗಿದ್ದಂತೆ ತೋರುತ್ತದೆ!

ಈ ಜಾಗತೀಕರಣವು ನಮ್ಮ ಜನಸಂಖ್ಯೆಯ ಎಷ್ಟು ಪಾಲಿನ ಜನರ ಹಸಿವನ್ನು ನೀಗಿಸಬಹುದು, ಯಾವ ಯಾವ ಜನ ವರ್ಗಗಳಲ್ಲಿ ಎಂತೆಂತಹ ದಾಹಗಳನ್ನು ಸೃಷ್ಟಿಸಿ–ಅವನ್ನು ಎಷ್ಟರ ಮಟ್ಟಿಗೆ ಹಿಂಗಿಸಬಲ್ಲುದು ಹಾಗೂ ಇನ್ನೆಷ್ಟು ಪಾಲಿನ ಜನರನ್ನು ತನ್ನ ಅಭಿವೃದ್ಧಿಯ ವ್ಯಾಪ್ತಿಯ ಹೊರಗಿಟ್ಟು ಇನ್ನೂ ಎಂತೆಂತಹ ಸಾಮಾಜಿಕ ಅಶಾಂತಿ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಸೃಷ್ಟಿಸಬಹುದು ಎಂಬುದರ ಒಂದು ಅಂದಾಜನ್ನಾದರೂ, ಈವರೆಗಿನ ಅನುಭವಗಳ ಆಧಾರದ ಮೇಲೆ ಇವರಿಗೆ ಮಾಡಲಿಕ್ಕಾಗಿಲ್ಲ. ಬದಲಿಗೆ ಇವರಿಗೆ ಎದ್ದು ಕಾಣುತ್ತಿರುವುದು, ಈಗ ಬೆಂಗಳೂರಿನಲ್ಲಿ ಒಂದು watch man ಕೆಲಸಕ್ಕೂ ಇಂಗ್ಲಿಷ್ ಜ್ಞಾನ ಅಗತ್ಯವಾಗಿದೆ ಎಂಬ ಮೇಲ್ಮೈ ಸತ್ಯ ಮಾತ್ರ. ಆದರೆ ಇದು ಏನನ್ನು ಸೂಚಿಸುತ್ತದೆ, ಇಂತಹ ಬೆಂಗಳೂರಿನ ಸೃಷ್ಟಿ ಹೇಗಾಯಿತು, ಇದು ರೂಪಿಸುತ್ತಿರುವ ಬದುಕಿನ ಸ್ವರೂಪ ಹಾಗೂ ಗುಣ ಮಟ್ಟವಾದರೂ ಎಂತಹುದು, ಇದು ಹೀಗೇ ಬೆಳೆಯಬೇಕೇ–ಬೇರೆ ಪರ್ಯಾಯಗಳಿಲ್ಲವೇ ಎಂಬ ಪ್ರಶ್ನೆಗಳಿಗೆ ಕಿವುಡಾಗಿರುವ ಸತ್ಯವಿದು.

ಪಾಸ್ ಪೋರ್ಟ್ ಹಾಗೂ ವೀಸಾಗಳ ನಿಯಮಾವಳಿ ದಿನೇದಿನೇ ಹೆಚ್ಚೆಚ್ಚು ಕಟ್ಟುನಿಟ್ಟಾಗುತ್ತಿದ್ದರೂ, ಇಡೀ ಜಗತ್ತೇ ಒಂದು ಹಳ್ಳಿಯಂತಾಗುತ್ತಿದೆ ಎಂದು *ಇಂಟರ್‌ನೆಟ್ಟಿಗರು* ಹರಡುತ್ತಿರುವ ಹುಂಬ ನಂಬಿಕೆಗೆ ಮರುಳಾಗಿರುವ ನಾವು ನಮ್ಮ ಮಕ್ಕಳನ್ನು ನೆಲದಿಂದ ಕಿತ್ತು ಆಕಾಶಕ್ಕೆ ಎಸೆದು ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಹೊರಟಿದ್ದೇವೆ! ಆಧುನಿಕ ಮಾಧ್ಯಮ ಮಾಯಾಜಾಲವು ಸೃಷ್ಟಿಸಿಬಿಟ್ಟಿರುವ ಇಂತಹ ವಿಕ್ಷಿಪ್ತ ಜೀವನ ದೃಷ್ಟಿಯಿಂದಾಗಿಯೇ, ಆಧುನೀಕರಣದ ಆರಂಭದ ದಿನಗಳಲ್ಲಿ ಜ್ಞಾನದ ಕಿಟಕಿಯಾಗಿ ಕಂಡ ಇಂಗ್ಲಿಷ್, ಈಗ ಅದರ ಜಾಗತೀಕರಣ ಹಂತದಲ್ಲಿ ಯಾವುದೇ ಎಗ್ಗಿಲ್ಲದಂತಹ ಪೂರಾ ವ್ಯಾಪಾರದ ಕಿಟಕಿಯಾಗಿ ಮಾರ್ಪಾಡಾಗಿರುವ ವಾಸ್ತವಕ್ಕೆ ನಾವು ಅಷ್ಟೇನೂ ಎಚ್ಚರಾದಂತೆ ತೋರುವುದಿಲ್ಲ. ಈ ಜಾಗತೀಕರಣವು ಜಗತ್ತಿನ 'ಬೌದ್ಧಿಕ ಆಸ್ತಿ' ಎಂಬುದನ್ನು ನಿರ್ವಚಿಸಿ, ಅದನ್ನು ಹರಾಜಿಗಿಡುವ ಮೂಲಕ ಮಾನವ ಸಂಪನ್ಮೂಲದ ಪರಿಕಲ್ಪನೆಯನ್ನೇ ವಿಕ್ಷಿಪ್ತ ಗೊಳಿಸಿ, ಮಾನವ ಸತ್ವದ ಪಾವಿತ್ರ್ಯ ಹಾಗೂ ಅಖಂಡತೆಗೆ ಭಂಗ ತಂದಿರುವುದರ ಬಗ್ಗೆಯೂ ನಮ್ಮಲ್ಲಿ ಅಂತಹ ವ್ಯಸ್ತತೆಯೇನೂ ಉಂಟಾಗಿಲ್ಲ.

ಇಂದು ಬೆಂಗಳೂರು, ಜನತೆ ಆಯ್ಕೆ ಮಾಡುವ ಸರ್ಕಾರಗಳನ್ನೇ (ಗ್ರಾಮ ಪಂಚಾಯ್ತಿಗಳಿಂದ ಹಿಡಿದು ರಾಜ್ಯ-ಕೇಂದ್ರ ಸರ್ಕಾರಗಳವರೆಗೆ) ಅಪ್ರಸ್ತುತಗೊಳಿಸುವಂತಹ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಆಡೊಂಬಲವಾಗಿ ಬೆಳೆಯುತ್ತಿದೆ: ಖಾಸಗಿ ಕಂಪನಿಗಳು-ನಿಗಮಗಳು ತಮ್ಮ ಬೃಹತ್ ಲಾಭಾಂಶಗಳ ಬೊಜ್ಜನ್ನು ಪ್ರದರ್ಶಿಸುತ್ತಾ, ಬಳಸಿಕೊಳ್ಳುತ್ತಾ-ಈ ಸರ್ಕಾರಗಳ ಅಧಿಕೃತತೆ, ಅಧಿಕಾರ ಹಾಗೂ ವಿಶ್ವಾಸಾರ್ಹತೆಗಳನ್ನೇ ಸಾರ್ವಜನಿಕವಾಗಿ ಪ್ರಶ್ನಿಸುತ್ತಾ-ಸಮಾನಾಂತರ ಸರ್ಕಾರಗಳಂತೆ ಕೆಲಸ ಮಾಡತೊಡಗಿವೆ. ಇವು ಸೃಷ್ಟಿಸುತ್ತಿರುವ ಅಮೂರ್ತ ಹಾಗೂ ಮೂರ್ತ ಹಿಂಸೆಗಳು (ವಾಚ್‌ಮನ್ ಕೆಲಸಕ್ಕೂ ಇಂಗ್ಲಿಷ್ ಅಗತ್ಯ ಎಂಬುದೂ ಸ್ಥಳೀಯತೆಯ-ಇದೊಂದು ಮೌಲ್ಯವೂ, ಪರಿಮಳವೂ ಆಗಿದೆ-ಮೇಲೆ ಎಸಗುವ ಅತ್ಯಾಚಾರವೇ ಆಗಿದೆ) ಸಾಮಾನ್ಯ ಜನ ತಮ್ಮ 'ಸ್ಮೃತಿ'ಯನ್ನೇ ಕಳೆದುಕೊಳ್ಳುವಂತೆ ಮಾಡುತ್ತಿವೆ: ಪ್ರಜಾಪ್ರಭುತ್ವ, ಸಮಾನತೆ ಹಾಗೂ ಜಾತ್ಯತೀತತೆಯ ಆಶಯ-ಆದರ್ಶಗಳು ಜನಮಾನಸದಲ್ಲಿ ಹಿನ್ನೆಲೆಗೆ ಸರಿಯುತ್ತಿವೆ.

ಇದರಿಂದ ಉಂಟಾಗುತ್ತಿರುವ ಕ್ಷೋಭೆಯನ್ನು ತಡೆಯಲು ಇಂದು ಕನ್ನಡವನ್ನು ತುರ್ತು ಅಗತ್ಯವೆಂಬಂತೆ-ಈಗ ಅದರ ಅಳಿದುಳಿರುವ ಸಾರ್ವಜನಿಕ ಸ್ಥಾನಮಾನಕ್ಕೆ ಕಿಂಚಿತ್ತೂ ಭಂಗಬಾರದಂತೆ-ಉಳಿಸಿಕೊಳ್ಳಬೇಕಾಗಿದೆ: ಜಾಗತೀಕರಣದ ದುಷ್ಪರಿಣಾಮಗಳು ವ್ಯಾಪಕವಾಗಿ ಹಬ್ಬದಂತೆ ಪ್ರತಿರೋಧ ಶಕ್ತಿಯಾಗಿ ಕನ್ನಡ ಶಿಕ್ಷಣದ ಪ್ರಾಥಮಿಕತೆಯನ್ನು ಉಳಿಸಿ ಬೆಳೆಸಬೇಕಾಗಿದೆ. ಶಾಲಾ ಶಿಕ್ಷಣದಲ್ಲಿ ಕನ್ನಡಿಗರಿಗಾದರೂ ಕನ್ನಡ ಮಾಧ್ಯಮ ಕಡ್ಡಾಯವಾಗಿ ಜಾರಿಯಾಗದೆ, ಕಡ್ಡಾಯ ಇಂಗ್ಲಿಷ್ ಕಲಿಕೆ ಕುರಿತ ಯಾವುದೇ ಆಜ್ಞೆ ಜಾರಿ ಮಾಡುವುದು ಮತ್ತು ಅದನ್ನು ಬೆಂಬಲಿಸುವುದು, ಬೆಂಗಳೂರಿನ ರೋಗವನ್ನು ವಾಸಿ ಮಾಡಲು ಹೋಗಿ ಅಂತಹ ರೋಗದ ವಿರುದ್ಧ ರಾಜ್ಯದ ಉಳಿದೆಡೆ ಉಳಿದುಕೊಂಡಿರುವ ಅಷ್ಟಿಷ್ಟಾದರೂ ಪ್ರತಿರೋಧ ಶಕ್ತಿಯನ್ನು ನಾಶ ಮಾಡುವಂತಹ ಆತ್ಮಘಾತುಕ ಕೆಲಸವಾಗುತ್ತದೆ.

ಗ್ರಾಮಾಂತರ ಮತ್ತು ದಲಿತ ಹಾಗೂ ಹಿಂದುಳಿದ ಜಾತಿ-ವರ್ಗಗಳ ಮಕ್ಕಳು ಸಮಕಾಲೀನ ಜೀವನದಲ್ಲಿ ಯಶಸ್ವಿಯಾಗುತ್ತಿಲ್ಲ ಎಂಬುದೇ ದೊಡ್ಡ ಸುಳ್ಳಾಗಿದೆ ಮತ್ತು ಇವರೆಲ್ಲರಿಗೂ ಐದನೆಯ ತರಗತಿಗೆ ಬದಲಾಗಿ, ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಲಾರಂಭಿಸಿದರೆ, ಅವರು ಯಶಸ್ವಿಯಾಗುತ್ತಾರೆ ಎಂಬುದು ಅದಕ್ಕಿಂತ ದೊಡ್ಡ ಸುಳ್ಳಾಗಿದೆ. ಬೃಹತ್ ವಾಣಿಜ್ಯ ಲಾಬಿಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದ ಹುಟ್ಟಿರುವಂತೆ ತೋರುವ ಈ ತರಹದ ಸುಳ್ಳು ಸುಳ್ಳಾದ ಚಿಂತನಾ ಲಹರಿಯು ಈ ಸಮುದಾಯಗಳ ಆತ್ಮವಿಶ್ವಾಸವನ್ನೇ ಭಂಗಗೊಳಿಸಿ, ಅವರನ್ನು ದಾರಿ ತಪ್ಪಿಸುವ ಹುನ್ನಾರವೂ ಆಗಿದ್ದರೆ ಆಶ್ಚರ್ಯವಿಲ್ಲ. ನಮ್ಮ ದಲಿತ ಹಾಗೂ ಹಿಂದುಳಿದ ವರ್ಗಗಳ ನಾಯಕತ್ವದ ಒಂದು ಭಾಗವು ತಮ್ಮ ಸಮುದಾಯಗಳ ಸಮಸ್ಯೆಗಳ ತಳ ಶೋಧನೆಗೆ ಕೈಹಾಕುವ ಕಷ್ಟ ತೆಗೆದುಕೊಳ್ಳದೆ, ತಮ್ಮ ಕೀಳರಿಮೆಗೆಲ್ಲಾ ಒಂದೊಂದು ಕಾಲದಲ್ಲಿ ಒಂದೊಂದು ಕಾರಣ ಹುಡುಕಿಕೊಳ್ಳುವ ಸಮೀಪ ದೃಷ್ಟಿದೋಷದಿಂದ ನರಳುತ್ತಿರುವಂತೆ ತೋರುತ್ತಿದೆ. ಈ ನಾಯಕತ್ವವು ತಮ್ಮನ್ನು ನಂಬಿರುವ ಮುಗ್ಧ ಜನಸ್ತೋಮವನ್ನು ಜಾತಿ ವರ್ಗಗಳ ಹೆಸರಿನಲ್ಲಿ ಕೆರಳಿಸುತ್ತಾ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದರಲ್ಲೇ ನಿರತವಾಗುತ್ತಿರುವದು ಈ ಸಂದರ್ಭದಲ್ಲೂ ಎದ್ದು ಕಾಣುವಂತಿದೆ.

ಇದು ಕೂಡಾ ಎಷ್ಟು ಹಾಸ್ಯಾಸ್ಪದವಾಗಿದೆಯೆಂದರೆ, ಮೊನ್ನೆ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಯೊಬ್ಬರು ಶಿವಮೊಗ್ಗದಲ್ಲಿ ಇಂಗ್ಲಿಷ್ ಕಲಿಕೆ ಕುರಿತ ಸರ್ಕಾರದ ಆಜ್ಞೆಯನ್ನು ವಿರೋಧಿಸುತ್ತಿರುವವರ ಮೇಲೆ ಆವೇಶದಿಂದ ಹರಿಹಾಯುತ್ತಾ, ಅಂಬೇಡ್ಕರ್ ಇಂಗ್ಲಿಷ್ ಕಲಿಯದಿದ್ದರೆ ಸಂವಿಧಾನ ರಚಿಸಲು ಸಾಧ್ಯವಾಗುತ್ತಿತ್ತೇ ಎಂದು ಕೇಳಿದ್ದಾರೆ; ಅಂಬೇಡ್ಕರ್ ಮೊದಲನೇ ತರಗತಿಯಿಂದಲೇ ಇಂಗ್ಲಿಷ್ ಕಲಿತಿದ್ದ ಹಾಗೆ! ಹಾಗೆ ನೋಡಿದರೆ, ಒಂದನೇ ತರಗತಿಯಿಂದಲೇ ಅಂಬೇಡ್ಕರ್ ಇಂಗ್ಲಿಷ್ ಕಲಿಯುವ ಪರಿಸ್ಥಿತಿ ಇದ್ದಲ್ಲಿ, ಅವರು ಇಷ್ಟೊಂದು ವ್ಯಾಪಕಾರ್ಥದ ಸಮಾನತೆಯ ತತ್ವವನ್ನು ಆಧರಿಸಿದ ಸಂವಿಧಾನವನ್ನು ರಚಿಸುತ್ತಿದ್ದರೆಂಬ ಬಗ್ಗೆ ನನಗೆ ಗಂಭೀರವಾದ ಅನುಮಾನಗಳಿವೆ.

ಇಂತಹವರ ಬೇಡಿಕೆಯನ್ನು ದಲಿತರ-ಹಿಂದುಳಿದವರ ಬೇಡಿಕೆಯೆಂದು ಸಾರಾಸಗಟಾಗಿ ನಂಬಿ, ಗ್ರಾಮಾಂತರ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಬಗೆಗಳ ಬಗ್ಗೆ ಕೆಲವರು ಸಲಹೆ-ಸೂಚನೆಗಳನ್ನು ಕೊಡುತ್ತಿರುವುದನ್ನು ಮತ್ತು ನಮ್ಮ ಶಾಲೆಗಳ ಶಿಕ್ಷಕರು ತಾವು ಇಂಗ್ಲಿಷ್ ಕಲಿಸಲು ಸಿದ್ಧವೆಂದು ಕೊಡುತ್ತಿರುವ ಹೇಳಿಕೆಗಳನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಗಿದೆ: ಇತ್ತೀಚೆಗೆ ತಾನೇ ನಮ್ಮ ಶಾಲೆಗಳಲ್ಲಿನ ಕಲಿಕೆ ಗುಣಮಟ್ಟದ ಬಗ್ಗೆ ಸಿದ್ಧಪಡಿಸಿರುವ ಅಧಿಕೃತ ವಾರ್ಷಿಕ ಶಿಕ್ಷಣ ವರದಿಯ ಫಲಿತಾಂಶಗಳು ಕನ್ನಡದ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದರ ಪ್ರಕಾರ ಕರ್ನಾಟಕದ ಗ್ರಾಮಾಂತರ ಶಾಲೆಗಳಲ್ಲಿನ ಏಳರಿಂದ ಹತ್ತು ವರ್ಷಗಳ ವಯೋಮಾನದ ಮಕ್ಕಳಲ್ಲಿ ಶೇ. ೫೩ರಷ್ಟು ಮಕ್ಕಳಿಗೆ ಒಂದು ಸಣ್ಣ ಮತ್ತು ಸರಳ ಗದ್ಯಭಾಗವನ್ನು ಸರಿಯಾಗಿ ಓದಲು ಬರುವುದಿಲ್ಲ ಹಾಗೂ ಶೇ. ೬೦ರಷ್ಟು ಮಕ್ಕಳಿಗೆ ಸರಳ ಕೂಡುವ ಮತ್ತು ಕಳೆಯುವ ಲೆಕ್ಕ ಬರುವುದಿಲ್ಲ. ಇನ್ನು ಶೇ. ೯೦ ಭಾಗ ಮಕ್ಕಳಿಗೆ ಸರಳ ಭಾಗಾಕಾರ ಮಾಡಲಾಗುವುದಿಲ್ಲ. ಇಂತಹ ದುಃಸ್ಥಿತಿಯಲ್ಲಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಸಲಾಗುವ ಇಂಗ್ಲಿಷ್ ಮೂಲಕ ನಮ್ಮ ಮಕ್ಕಳನ್ನು ಜಾಗತಿಕ ಉದ್ಯೋಗ ಮಾರುಕಟ್ಟೆಗೆ ತಯಾರು ಮಾಡಹೊರಟಿದ್ದೇವೆ!

ಕನ್ನಡದ ಮಕ್ಕಳಿಗೆ ಸುವರ್ಣ ಕರ್ನಾಟಕಾಚರಣೆಯ ಸಂದರ್ಭದಲ್ಲಿ ಮಾಡಬಹುದಾದ, ಇದಕ್ಕಿಂತ ದೊಡ್ಡ ಮೋಸ ಇನ್ನೊಂದಿದೆಯೇನು? ಕನ್ನಡದ ಜನ ವ್ಯವಧಾನದಲ್ಲಿ ಯೋಚಿಸ ಬೇಕಾದ ವಿಚಾರವಿದು. ಸರ್ಕಾರದ ಆಜ್ಞೆಯ ವಿರುದ್ಧವಿರುವವರು, ಇದರ ಬೆಂಬಲಿಗರು ಬಿಂಬಿಸುತ್ತಿರುವ ಹಾಗೆ, ಖಂಡಿತಾ ಇಂಗ್ಲಿಷ್ ವಿರೋಧಿಗಳಲ್ಲ. ಬದಲಿಗೆ, ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ ಕರ್ನಾಟಕದ ಎಲ್ಲ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸಿ, ಮೂರನೇ ತರಗತಿಯಿಂದ ಅನೌಪಚಾರಿಕವಾದ ಇಂಗ್ಲಿಷ್ ಕಲಿಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂಬುದೇ ಇಂತಹವರ ನಿಲುವಾಗಿದೆ. ಐದನೇ ತರಗತಿಯಿಂದ ಪಠ್ಯಾಧಾರಿತವಾದ ಇಂಗ್ಲಿಷ್ ಕಲಿಕೆ ಆರಂಭಿಸಬಹುದಾಗಿದೆ. ಇಲ್ಲೂ ಕೂಡಾ ಗಮನ, ವ್ಯಾವಹಾರಿಕ ಇಂಗ್ಲಿಷ್ ಕಡೆಗಿರಬೇಕೇ ಹೊರತು, ಈಗಿರುವಂತೆ ಸಾಹಿತ್ಯಕ ಇಂಗ್ಲಿಷ್ ಕಡೆಗಲ್ಲ.

(೩೨ನೇ ಪುಟವನ್ನೂ ನೋಡಿ)

□

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ - ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಕಾಂಗ್ರೆಸ್‌ನವರ ಇಂಗ್ಲಿಷ್ ರಾಜಕಾರಣ

ರಾಜ್ಯದ ಎಲ್ಲ ಸರ್ಕಾರಿ ಹಾಗೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವುದಕ್ಕೆ 'ಪಕ್ಷ ಭೇದ ಮರೆತು ಹಲವಾರು ಕಾಂಗ್ರೆಸ್ ಶಾಸಕರೂ ಮತ್ತು ಮಾಜಿ ಸಚಿವರೂ ಬೆಂಬಲ ಸೂಚಿಸಿ' ನೀಡಿರುವ ಸುದೀರ್ಘ ಹೇಳಿಕೆ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ಇಂಗ್ಲಿಷ್ ಕಲಿಕೆಯ ಸರ್ಕಾರದ ಸದರಿ ಆಜ್ಞೆಯ ಹಿಂದಿನ ನಿಜವಾದ ನಡಾವಳಿಯನ್ನು ಈ ಹಿಂದಿನ ಕಾಂಗ್ರೆಸ್ ಸರ್ಕಾರವೇ ಆರಂಭಿಸಿತ್ತೆಂಬ ಸಂಗತಿಯ ಹಿನ್ನೆಲೆಯಲ್ಲಿ ಈ ಹೇಳಿಕೆ ಆಶ್ಚರ್ಯಕರವೂ ಅಲ್ಲ ಮತ್ತು ಅವರು ನೀಡಿರುವ ಮಾಹಿತಿಯಲ್ಲಿ ಹೊಸದೇನೂ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಾಗಾಗಿ ಇದು, ಎಲ್ಲ ವಿಷಯಗಳಲ್ಲಿ ಅಧಿಕಾರರೂಢ ಪಕ್ಷಗಳಿಗಿಂತ ತಮ್ಮ ಪಕ್ಷ ಒಂದು ಹೆಜ್ಜೆ ಮುಂದಿರುವಂತೆ ತೋರಿಸಿಕೊಡಬೇಕಾದ ಅದರ ಚುನಾವಣಾ ರಾಜಕೀಯದ ಒಂದು ಪಟ್ಟು ಮಾತ್ರವಾಗಿ ಕಾಣುತ್ತದೆ.

ಮಾತೃಭಾಷಾ ಶಾಲಾ ಶಿಕ್ಷಣ ಮಾಧ್ಯಮವನ್ನು ಎತ್ತಿ ಹಿಡಿದಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ನಮ್ಮ ಶಿಕ್ಷಣೋದ್ಯಮಿಗಳ ಜೊತೆಗೆ ಕಳೆದ ೧೩ ವರ್ಷಗಳಿಂದಲೂ ಮೌನವಾಗಿ ಶಾಮೀಲಾಗಿದ್ದುಕೊಂಡು, ಈಗ ಇಂಗ್ಲಿಷ್ ಕಲಿಕೆ ಆಜ್ಞೆಗೆ ಅನುವು ಮಾಡಿಕೊಳ್ಳಲಷ್ಟೇ ಆ ತಡೆಯಾಜ್ಞೆ ಕುರಿತಂತೆ ಎಚ್ಚೆತ್ತಿರುವ ರಾಜ್ಯ ಸರ್ಕಾರ (ಇದರಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ) ಕನ್ನಡದ ಪ್ರಶ್ನೆಯನ್ನು ಅದರೆಲ್ಲ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳುವ ಇಚ್ಛಾ ಶಕ್ತಿಯನ್ನಾಗಲೀ, ಪ್ರತಿಭೆಯನ್ನಾಗಲೀ ಹೊಂದಿದೆ ಎಂದು ನಂಬುವುದು ಕಷ್ಟ. ಕಟ್ಟು ಬಿಚ್ಚಿದ ಕುದುರೆಯಂತೆ ಈಗ ಅಡ್ಡಾದಿಡ್ಡಿ ನೆಗೆಯುತ್ತಾ, ಕೆನೆಯುತ್ತಾ ಓಡುತ್ತಿರುವ ಹೊಸ ಆರ್ಥಿಕತೆಯ ಸವಾರಿಗೆ ತಮ್ಮ ಮಕ್ಕಳನ್ನು ಹುರಿದುಂಬಿಸುತ್ತಿರುವ ನಮ್ಮ ಪಾಲಕರ ಹಪಾಹಪಿಯನ್ನೇ ಬಂಡವಾಳ ಮಾಡಿಕೊಂಡು ಕನ್ನಡದ ಬುಡಕ್ಕೇ ಕೊಡಲಿ ಹಾಕಲು ಹೊರಟಿರುವ ರಾಜಕಾರಣಿಗಳ ಹುನ್ನಾರಕ್ಕೆ ಜಾತಿ-ವರ್ಗಗಳ ಹೆಸರಲ್ಲಿ ನಮ್ಮ ಬುದ್ಧಿಜೀವಿಗಳೆನಿಸಿಕೊಂಡ ಅನೇಕರು ಬೆಂಬಲ ವ್ಯಕ್ತಪಡಿಸಿರುವುದರ ಹಿಂದಿನ ರಾಜಕಾರಣವು, ರಾಜಕಾರಣಿಗಳ ರಾಜಕಾರಣವನ್ನೂ ಮೀರಿಸುವಷ್ಟು ವೃತ್ತಿಪರವಾಗಿದೆ:

ಕಾಂಗ್ರೆಸ್ಸಿಗರು ತಮ್ಮ ವಾದಕ್ಕೆ ಬೆಂಬಲವಾಗಿ ಉಲ್ಲೇಖಿಸಿರುವ ಚಂದ್ರಶೇಖರ ಕಂಬಾರರು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಈ ಬಗ್ಗೆ ಒಂದು ವರದಿಯನ್ನೇ ಸಲ್ಲಿಸಿದ್ದ ಬರಗೂರು ರಾಮಚಂದ್ರಪ್ಪನವರು ಈ ಮೊದಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದವರಾಗಿದ್ದು, ಕೆಲವು ಬುದ್ಧಿಜೀವಿಗಳು ಈ ವಿವಾದಕ್ಕೆ ಜಾತಿ ಸ್ಪರ್ಶ ನೀಡಿದೊಡನೆ ಪಕ್ಷಾಂತರ ಮಾಡಿದವರು. ಹಾಗೇ ಕನ್ನಡದ ಸೇನಾನಿ ಪಾಟೀಲ ಪುಟ್ಟಪ್ಪನವರು ಕೂಡಾ: ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯು ಕನ್ನಡಕ್ಕೆ ಧಕ್ಕೆ ತರುವಂತಹುದಲ್ಲ ಎಂದು ಈ ಹಿಂದಿನ ಮತ್ತು ಪ್ರಸ್ತುತ ಸರ್ಕಾರ ಬಾರಿ ಬಾರಿ ಹೇಳಿದ್ದರೂ ನಂಬದಿದ್ದ ಅವರೀಗ, ಮೊನ್ನೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಸಮ್ಮುಖದಲ್ಲಿ ಪ್ರಾಥಮಿಕ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿಯವರು ಅದನ್ನೇ ಪುನರುಚ್ಚರಿಸಿದೊಡನೆ ಸಂಪ್ರೀತರಾಗಿ, ಹಾಗಿದ್ದಲ್ಲಿ ತಮ್ಮ ಅಭ್ಯಂತರವೇನೂ ಇಲ್ಲವೆಂದು ಅನುಮತಿ ಪತ್ರ ನೀಡಿದ್ದಾರೆ! ಇನ್ನು ಕನ್ನಡದ 'ಹುಟ್ಟು ಹೋರಾಟಗಾರ' ವಾಟಾಳ್ ನಾಗರಾಜ್ ಹಾಗೂ ಇತ್ತೀಚಿನವರೆಗೆ ಕನ್ನಡ ಮಾಧ್ಯಮವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಅಪಾಯಕಾರಿ ಎಂದು ಸಾರಿ ಸಾರಿ ಹೇಳುತ್ತಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯನವರು ಈಗ ಈ ವಿಷಯದಲ್ಲಿ ಒಂದು ಮಾತನ್ನೂ ಆಡಲಾಗದ ಅಧಿಕಾರ ರಾಜಕಾರಣದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಇಂತಹ ವಾತಾವರಣದಲ್ಲಿ ಅಧಿಕಾರ ವಲಯವನ್ನು ಸಂಪ್ರೀತಗೊಳಿಸುವ ಅಥವಾ ಅಗ್ಗದ ಜನಪ್ರಿಯತೆಯ ಅಗತ್ಯವಿಲ್ಲದ ಸಮಾಜ ಸೇವಕರು ಮತ್ತು ಚಿಂತಕರ ಅಭಿಪ್ರಾಯಗಳಷ್ಟೇ ವಿಶ್ವಾಸಾರ್ಹವೆನಿಸುತ್ತವೆ.

ಅನಾಮಿಕ ಭಾಷಾತಜ್ಞರ ಮತ್ತು ಶಿಕ್ಷಣತಜ್ಞರ ಅಭಿಪ್ರಾಯ ಹಾಗೂ ಅಂಕಿ-ಅಂಶಗಳನ್ನು ಉಲ್ಲೇಖಿಸುವ ಕಾಂಗ್ರೆಸ್ಸಿಗರ ಹೇಳಿಕೆಯು, ಇಂದಿನ ಮಾರುಕಟ್ಟೆ ಮಾಯಾಬಜಾರಿನ ಗದ್ದಲದಲ್ಲಿ ಸಮಕಾಲೀನ ಭಾರತದ ಶ್ರೇಷ್ಠ ವಿಜ್ಞಾನಿ ಹಾಗೂ ಪ್ರಾಧ್ಯಾಪಕರೆನಿಸಿರುವ ಡಾ॥ ಸಿ.ಎನ್.ಆರ್. ರಾವ್ ಅವರ ಮಾತುಗಳ ಕಡೆ ಅಥವಾ ಯುನೆಸ್ಕೊ ಮತ್ತು ನಮ್ಮದೇ ಶಿಕ್ಷಣ ಸಂಶೋಧನಾ ಸಂಸ್ಥೆ NCERTಯ ಸಮೀಕ್ಷೆ-ಶಿಫಾರ್ಸುಗಳ ಕಡೆ ಗಮನ ಹರಿಸದಿರುವುದು ಅವರ ರಾಜಕೀಯ ವರಸೆಗೆ ಸಹಜವಾಗಿಯೇ ಇದೆ: ಮೊನ್ನೆ ತಾನೇ ಸಿ.ಎನ್.ಆರ್. ರಾವ್ ಅವರು ಧಾರವಾಡದಲ್ಲಿ ಈ ಇಂಗ್ಲಿಷ್ ಕಲಿಕೆ ವಿವಾದದ ಮಧ್ಯೆಯೇ, ಮೊದಲು ಮಕ್ಕಳಿಗೆ ಶಾಲೆಯಲ್ಲಿ ಕನ್ನಡ ಕಲಿಸಿ, ಬೋಧಿಸಿ;ನಂತರವಷ್ಟೇ ಇಂಗ್ಲಿಷ್ ಕಲಿಸಿ ಎಂದು ಹೇಳಿದ್ದು ಮತ್ತು ಈ ಮೊದಲು ಉಲ್ಲೇಖಿಸಿದ ಜಾಗತಿಕ ಹಾಗೂ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಮಾತೃ ಅಥವಾ ಪರಿಸರ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಜಾರಿಗೆ ತರುವುದರ ಜೊತೆಗೆ ಹೊಂದಿಕೊಂಡಂತೆ ಮಾತ್ರ ಇಂಗ್ಲಿಷ್ ಕಲಿಸಲು ಶಿಫಾರ್ಸು ಮಾಡಿವೆ.

ಹಾಗಾಗದೇ ಹೋದಲ್ಲಿ, ಮೊನ್ನೆ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರು ನೀಡಿದ 'ಇಂಗ್ಲಿಷ್ ಮಾಧ್ಯಮ ಕಡ್ಡಾಯವಾಗಲಿ' ಎಂಬ ಹೇಳಿಕೆಯು, ಒಂದು ಭಾಷೆಯಾಗಿ ಮಾತ್ರ ಇಂಗ್ಲಿಷ್ ಎಂಬ ಸರ್ಕಾರದ ಹಾಗೂ ಅವರ ಬೆಂಬಲಿಗರ ಘೋಷಣೆಯನ್ನೂ ಮೀರಿ ಹಲವು ಕಡೆಯಿಂದ ಚಲಾವಣೆಗೆ ಬರತೊಡಗಿ, ಕ್ರಮೇಣ 'ಸಾಮಾಜಿಕ ನ್ಯಾಯ'ದ ಪರಿವೇಷ ತೊಟ್ಟು ಮಾನ್ಯತೆ ಪಡೆಯುವಂತಾಗುತ್ತದೆ. ಏಕೆಂದರೆ, ಭಾಷಾ ಕಲಿಕೆಗೆ ಈಗ ನಮ್ಮ ಕೆಲವು ಬುದ್ಧಿಜೀವಿಗಳು ಅನ್ವಯ ಮಾಡುತ್ತಿರುವ 'ಸಾಮಾಜಿಕ ನ್ಯಾಯ'ದ ತರ್ಕವು ಭಾಷಾ ಮಾಧ್ಯಮಕ್ಕೂ ಅನ್ವಯವಾಗುವಂತಿದೆ. ಅಲ್ಲದೆ ಈಗಾಗಲೇ ತಮ್ಮ ಹೇಳಿಕೆಯಲ್ಲಿ, ನಾರಾಯಣ ಮೂರ್ತಿಯವರು ಕನ್ನಡ ಮಾಧ್ಯಮದ ಮೂಲಕ ದಲಿತರಿಗೆ ಹಾಗೂ ಹಿಂದುಳಿದವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಂಗ್ಲಿಷ್ ಮಾಧ್ಯಮದಲ್ಲೇ ಓದಿದ ಎಷ್ಟು ಜನ ದಲಿತರಿಗೆ ಹಾಗೂ ಹಿಂದುಳಿದವರಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದ ಎಷ್ಟು ಜನ ಇತರರಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ದೊರಕಿದೆ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಹೇಳಿದ್ದರೆ ಚೆನ್ನಿತ್ತು. ಇಡೀ ಜಗತ್ತೇ ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿತವಾಗುತ್ತಿರುವುದೆಂದು(?) ಹೇಳಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂಗ್ಲಿಷ್ ಮಾಧ್ಯಮದ ಅನಿವಾರ್ಯತೆಯನ್ನು ಎತ್ತಿ ಹೇಳಿರುವ ಅವರು, ಸ್ವತಃ ತಾವೇ ಕನ್ನಡ ಶಾಲೆಯಲ್ಲಿ ಓದಿ ಈ ಜಾಗತಿಕ

ಎಲ್ಲ ವಿಷಯಗಳಲ್ಲಿ ಅಧಿಕಾರರೂಢ ಪಕ್ಷಗಳಿಗಿಂತ ತಮ್ಮ ಪಕ್ಷ ಒಂದು ಹೆಜ್ಜೆ ಮುಂದಿರುವಂತೆ ತೋರಿಸಿಕೊಡಬೇಕಾದ ಅದರ ಚುನಾವಣಾ ರಾಜಕೀಯದ ಒಂದು ಪಟ್ಟು ಮಾತ್ರವಾಗಿ ಕಾಣುತ್ತದೆ. ಮಾತೃಭಾಷಾ ಶಾಲಾ ಶಿಕ್ಷಣ ಮಾಧ್ಯಮವನ್ನು ಎತ್ತಿ ಹಿಡಿದಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ನಮ್ಮ ಶಿಕ್ಷಣೋದ್ಯಮಿಗಳ ಜೊತೆಗೆ ಕಳೆದ ೧೩ ವರ್ಷಗಳಿಂದಲೂ ಮೌನವಾಗಿ ಶಾಮೀಲಾಗಿದ್ದುಕೊಂಡು, ಈಗ ಇಂಗ್ಲಿಷ್ ಕಲಿಕೆ ಆಜ್ಞೆಗೆ ಅನುವು ಮಾಡಿಕೊಳ್ಳಲಷ್ಟೇ ಆ ತಡೆಯಾಜ್ಞೆ ಕುರಿತಂತೆ ಎಚ್ಚೆತ್ತಿರುವ ರಾಜ್ಯ ಸರ್ಕಾರ(ಇದರಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ) ಕನ್ನಡದ ಪ್ರಶ್ನೆಯನ್ನು ಅದರೆಲ್ಲ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳುವ ಇಚ್ಛಾ ಶಕ್ತಿಯನ್ನಾಗಲೀ, ಪ್ರತಿಭೆಯನ್ನಾಗಲೀ ಹೊಂದಿದೆ ಎಂದು ನಂಬುವುದು ಕಷ್ಟ. ಕನ್ನಡದ ಬುಡಕ್ಕೇ ಕೊಡಲಿ ಹಾಕಲು ಹೊರಟಿರುವ ರಾಜಕಾರಣಿಗಳ ಹುನ್ನಾರಕ್ಕೆ ಜಾತಿ-ವರ್ಗಗಳ ಹೆಸರಲ್ಲಿ ನಮ್ಮ ಬುದ್ಧಿಜೀವಿಗಳೆನಿಸಿಕೊಂಡ ಅನೇಕರು ಬೆಂಬಲ ವ್ಯಕ್ತಪಡಿಸಿರುವುದರ ಹಿಂದಿನ ರಾಜಕಾರಣವು, ರಾಜಕಾರಣಿಗಳ ರಾಜಕಾರಣವನ್ನೂ ಮೀರಿಸುವಷ್ಟು ವೃತ್ತಿಪರವಾಗಿದೆ.

ಮಾರುಕಟ್ಟೆಗೆ ಸೆಡ್ಡು ಹೊಡೆದು ನಿಲ್ಲಲು ಸಾಧ್ಯವಾಗಿರುವ ಸತ್ಯವನ್ನು ಮರೆಯುಂತಾಗಿರುವುದು, ನವ ವಸಾಹತುಶಾಹಿ ಸೃಷ್ಟಿಸಿರುವ 'ವಿಸ್ಮೃತಿ'ಯ ಪರಿಣಾಮವೇ ಆಗಿರಬಹುದು. ಹಾಗಾಗಿಯೇ, ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ, ಕನ್ನಡ ಕಲಿತು ಬೆಳೆದ ನಾರಾಯಣ ಮೂರ್ತಿಯವರು 'ಕನ್ನಡದಲ್ಲಿ ಸಂದರ್ಶನ ನೀಡಿದರು' ಎಂದು 'ಪ್ರಜಾವಾಣಿ'ಯಂತಹ ಪತ್ರಿಕೆ ಸಂಭ್ರಮದಿಂದ ಹೇಳಿಕೊಳ್ಳುವಂತಹ ದುಃಸ್ಥಿತಿಗೆ ಕನ್ನಡ ಈಡಾಗಿರುವುದು!

ಕಾಂಗ್ರೆಸ್ಸಿನವರು ತಮ್ಮ ಸುದೀರ್ಘ ಹೇಳಿಕೆಯಲ್ಲಿ ಭಾರತದ ಇತರ ರಾಜ್ಯಗಳ ಶಿಕ್ಷಣ ವ್ಯವಸ್ಥೆಯ ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ರಾಜ್ಯಗಳಲ್ಲಿ ಆಯಾ ರಾಜ್ಯ ಭಾಷೆಗಳ 'ಅಭಿವೃದ್ಧಿ ಪ್ರಾಧಿಕಾರ', 'ಪುಸ್ತಕ ಪ್ರಾಧಿಕಾರ'ದಂತಹ ಸಂಸ್ಥೆಗಳನ್ನು ರಚಿಸುವಂತಹ ದುಃಸ್ಥಿತಿಯಲ್ಲಿ ಅಲ್ಲಿನ ಭಾಷೆಗಳಿಲ್ಲ. ಅಲ್ಲಿನ ಸರ್ಕಾರಗಳು ಸಮರ್ಥ ಭಾಷಾ ಹಾಗೂ ಶಿಕ್ಷಣ ನೀತಿಗಳ ಮೂಲಕ ಅಲ್ಲಿನ ರಾಜ್ಯ ಭಾಷೆಗಳನ್ನು ಪೋಷಿಸಿದ ನಂತರವಷ್ಟೇ ಇಂಗ್ಲಿಷ್ ಕಲಿಕೆ ಕಡೆ ಗಮನ ಹರಿಸಿವೆ. ಹಾಗೇ ಈ ವಿಷಯಕ್ಕೆ ಸಂಬಂಧಿಸಿದಂತೆ ಪದೇ ಪದೇ ಉಲ್ಲೇಖಗೊಳ್ಳುವ ಚೀನಾ ಮತ್ತು ಜಪಾನ್ ದೇಶಗಳಲ್ಲಿ ಕೂಡಾ ನಮ್ಮ ಕರ್ನಾಟಕದಲ್ಲಿರುವಂತೆ ಗಲ್ಲಿಗೊಂದು ಗಟಾರಕ್ಕೊಂದರಂತೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಲ್ಲ. ನಾವು ಸುಮಾರು ನೂರು ವರ್ಷಗಳ ಹಿಂದೆ ಆರಂಭಿಸಿದ ಇಂಗ್ಲಿಷ್ ಕಲಿಕೆಯನ್ನು ಅಲ್ಲೀಗ ಅವರು ಆರಂಭಿಸಿದ್ದಾರಷ್ಟೆ. ಹಾಗಾಗಿ ನಾವು ಅವರಿಗೆ ಉದಾಹರಣೆಯೇ ಹೊರತು, ಅವರು ನಮಗೆ ಉದಾಹರಣೆಯಾಗಲಾರರು.

ಇನ್ನು ನಮ್ಮ ಶಾಲೆಗಳ ಶಿಕ್ಷಕರು ತಾವು ಇಂಗ್ಲಿಷ್ ಕಲಿಸಲು ಸಿದ್ಧವೆಂದು ಹೇಳಿರುವುದನ್ನು ಕೇಳಿ ನಗಬೇಕೋ ಅಳಬೇಕೋ ತಿಳಿಯದಾಗಿದೆ: ಇತ್ತೀಚೆಗೆ ತಾನೇ ನಮ್ಮ ಶಾಲೆಗಳಲ್ಲಿನ ಕಲಿಕೆ ಗುಣಮಟ್ಟದ ಬಗ್ಗೆ ಸಿದ್ಧಪಡಿಸಿರುವ ವಾರ್ಷಿಕ ಶಿಕ್ಷಣ ವರದಿಯ ಫಲಿತಾಂಶಗಳು 'ಪ್ರಜಾವಾಣಿ' ಸೇರಿದಂತೆ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದರ ಪ್ರಕಾರ ಕರ್ನಾಟಕದ ಗ್ರಾಮಾಂತರ ಶಾಲೆಗಳಲ್ಲಿನ ಏಳರಿಂದ ಹತ್ತು ವರ್ಷಗಳ ವಯೋಮಾನದ ಮಕ್ಕಳಲ್ಲಿ ಶೇ. ೫೩ರಷ್ಟು ಮಕ್ಕಳಿಗೆ ಒಂದು ಸಣ್ಣ ಮತ್ತು ಸರಳ ಗದ್ಯಭಾಗವನ್ನು ಸರಿಯಾಗಿ ಓದಲು ಬರುವುದಿಲ್ಲ ಹಾಗೂ ಶೇ. ೬೦ರಷ್ಟು ಮಕ್ಕಳಿಗೆ ಸರಳ ಕೂಡುವ ಮತ್ತು ಕಳೆಯುವ ಲೆಕ್ಕ ಬರುವುದಿಲ್ಲ. ಇನ್ನು ಶೇ. ೯೦ ಭಾಗ ಮಕ್ಕಳಿಗೆ ಸರಳ ಭಾಗಾಕಾರ ಮಾಡಲಾಗುವುದಿಲ್ಲ. ಇಂತಹ ದುಃಸ್ಥಿತಿಯಲ್ಲಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಸಲಾಗುವ ಇಂಗ್ಲಿಷ್ ಮೂಲಕ ನಮ್ಮ ಮಕ್ಕಳನ್ನು ಜಾಗತಿಕ ಉದ್ಯೋಗ ಮಾರುಕಟ್ಟೆಗೆ ತಯಾರು ಮಾಡಹೊರಟಿದ್ದೇವೆ! ನಮ್ಮ ಮಕ್ಕಳಿಗೆ ಇದಕ್ಕಿಂತ ದೊಡ್ಡ ಮೋಸ ಇನ್ನೊಂದಿದೆಯೇನು?

ನಮ್ಮ ಶಾಸಕರು ಮತ್ತು ಸಚಿವರು, ಸರ್ಕಾರದ ಸದರಿ ಆಜ್ಞೆಯು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದ್ದಲ್ಲ; ಭಾಷಾ ಕಲಿಕೆಗೆ ಸಂಬಂಧಿಸಿದ್ದು ಎಂದು ಅನಗತ್ಯವಾಗಿ ಪದೇ ಪದೇ ಸ್ಪಷ್ಟಪಡಿಸುವ ಬದಲು, ಮಾಧ್ಯಮ ಕುರಿತ ಸರ್ವೋನ್ನತ ನ್ಯಾಯಾಲಯದ ತೀರ್ಪು ಜಾರಿಗೆ ಬರುವಂತೆ ಸರ್ಕಾರದ ಮೇಲೆ ಒತ್ತಡ ಹೇರಿ ಪ್ರಯತ್ನಿಸಲಿ. ಆಗ ಜನರನ್ನು ದಡ್ಡರೆಂದು ಭಾವಿಸಿ ಇಂತಹ ಸ್ಪಷ್ಟೀಕರಣಗಳನ್ನು ನೀಡುವ ಅಗತ್ಯ ಬೀಳಲಾರದು. □

'ಭಯೋತ್ಪಾದಕ' ಇಂಗ್ಲಿಷ್

ಒಂದು ಪತ್ರ

'ನನಗೆ ಇಂಗ್ಲಿಷ್ ಗೊತ್ತಿದ್ದರೂ ಮಾತನಾಡಲು ಹಿಂಜರಿಕೆ. ಶಬ್ದ ಜೋಡಣೆ, ವ್ಯಾಕರಣ ಎಲ್ಲಿ ತಪ್ಪಾಗುತ್ತೋ ಎಂಬ ಭಯವಿದೆ' ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಅಲವತ್ತುಕೊಂಡಿದ್ದಾರೆ. (ಪ್ರಜಾವಾಣಿ: ೧೮.೧೦.೦೬) ನಮ್ಮ ರಾಜ್ಯದ ಎಲ್ಲ ಪ್ರಜೆಗಳಿಗೆ ಸರ್ವೇ ಸಾಧಾರಣವಾಗಿ ಎಲ್ಲರಿಗೂ ಕನ್ನಡ ಅರ್ಥವಾಗುತ್ತದೆ. ಹೀಗಿದ್ದಾಗ್ಯೂ ಕುಮಾರಸ್ವಾಮಿಯವರಿಗೆ ಇಂಗ್ಲಿಷ್ ಮಾತನಾಡುವ ತುರ್ತು, ಮಾತನಾಡಲಾಗದ ಹಿಂಜರಿಕೆ, ಭಯ ಅದೇಕೋ ಅರ್ಥವಾಗುತ್ತಿಲ್ಲ. ಅವರನ್ನು ಭಯಕ್ಕೀಡು ಮಾಡಿರುವ 'ಭಯೋತ್ಪಾದಕ' ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ನಮ್ಮ ಮಕ್ಕಳ ಮೇಲೆ ಹೇರಬೇಡಿ ಎಂದಷ್ಟೇ ಅವರಲ್ಲಿ ನನ್ನ ಪ್ರಾರ್ಥನೆ.

ಇಂಗ್ಲಿಷ್ ಕಲಿತರೆ ಸಿರಿವಂತರಾಗಬಹುದು, ಬಡತನ ನೀಗುತ್ತದೆ ಎಂದೂ ಮಾನ್ಯ ಮುಖ್ಯಮಂತ್ರಿಗಳು ಹೇಳಿರುತ್ತಾರೆ. ಹಾಗಿದ್ದರೆ. ಶ್ರೀಯುತರಾದ ಎಚ್.ಡಿ. ದೇವೇಗೌಡ ಹಾಗೂ ಅವರ ಮಕ್ಕಳು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದು ಮತ್ತು ಅಲಂಕರಿಸಿರುವುದು ಕನ್ನಡದಿಂದಲೋ ಇಂಗ್ಲಿಷಿನಿಂದಲೋ? ಎಲ್ಲೆಡೆ ಮಿತಿ ಮೀರಿರುವ ಭ್ರಷ್ಟಾಚಾರ; ಕೆಲವೇ ವರ್ಗಗಳು ಗುಡ್ಡೆ ಹಾಕಿಕೊಂಡಿರುವ ಆಸ್ತಿ ಪಾಸ್ತಿ; ಇನ್ನೂ ಚಾಲ್ತಿಯಲ್ಲಿರುವ ಜಾತಿ ಪದ್ಧತಿ-ಅಸ್ಪೃಶ್ಯತೆ; ಸಾಮಾನ್ಯ ಪರಿಜ್ಞಾನವನ್ನೂ ನೀಡದಿರುವ, ಸಮುದಾಯದಲ್ಲಿ ಹಂಚಿಕೊಂಡು ತಿಂದು ಕೂಡಿ ಬಾಳಬೇಕು ಎಂದು ತಿಳಿಸಿಕೊಡದ, ಕನಿಷ್ಠ ಮಾನವೀಯತೆ ಕಲಿಸದ ಶಿಕ್ಷಣ ಪದ್ಧತಿ; ಕುಡಿತ, ಗುಟ್ಕಾ-ಮಟ್ಕಾ, ಲಾಟರಿ ಮುಂತಾದವುಗಳು ಬಡತನಕ್ಕೆ ಕಾರಣವಾಗಿವೆಯೆಂದು ತಿಳಿಯದೆ, ಇಂಗ್ಲಿಷನ್ನು ಸಿರಿವಂತಿಕೆಗೆ ತಳಕು ಹಾಕುವುದು ಎಷ್ಟು ಸರಿ? ಕನ್ನಡಕ್ಕೆ ಕರ್ನಾಟಕದ ಜನತೆಯ ಆಸೆ-ಅಗತ್ಯಗಳನ್ನು ಪೂರೈಸುವ ಶಕ್ತಿ ಇದೆಯೇ ಹೊರತು ದುರಾಸೆಯನ್ನಲ್ಲ! ನಮ್ಮ ಮುಖ್ಯಮಂತ್ರಿಗಳಿಂದ ಹಿಡಿದು ಅವರ ಸಚಿವ ಸಂಪುಟ, ವಿರೋಧ ಪಕ್ಷದ ಶಾಸಕರೆಲ್ಲರೂ ತಂತಮ್ಮ ಮಾತೃ ಅಥವಾ ಪರಿಸರದ ಭಾಷೆಯಲ್ಲಿ ಕಲಿತು ಈ ಹೊತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಅತ್ಯುನ್ನತ ಸ್ಥಾನ ಗಳಿಸಿದ್ದಾಗ್ಯೂ, ತಮ್ಮ ಮಕ್ಕಳು/ಮೊಮ್ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೇ ಕಳಿಸಿರುತ್ತಾರೆ.

ಕುಮಾರಸ್ವಾಮಿಯವರು ಕರ್ನಾಟಕದ ಮುಖ್ಯಮಂತ್ರಿಯಾಗಿ, ಜಗತ್ತಿನಲ್ಲಿ ಫ್ರಾನ್ಸ್ ಅಥವಾ ಜರ್ಮನಿಗಳ ಅಧ್ಯಕ್ಷರುಗಳು ಅಥವಾ ಚೀನಾ ಅಥವಾ ಜಪಾನ್‌ಗಳ ಪ್ರಧಾನಮಂತ್ರಿಗಳಿಗಿಂತ ಹೆಚ್ಚಿನ ಮಹತ್ವದ ಅಥವಾ ಜವಾಬ್ದಾರಿಯ ಸ್ಥಾನಮಾನವನ್ನೇನೂ ಹೊಂದಿಲ್ಲ. ಆದರೆ, ಅವರೆಲ್ಲ ನಮ್ಮ ಮುಖ್ಯಮಂತ್ರಿಗಳಂತೆ ಇಂಗ್ಲಿಷ್ ಬಗ್ಗೆ ಕೀಳರಿಮೆಯಿಂದ ನರಳದೆ, ವಿಶ್ವ ವೇದಿಕೆಗಳಲ್ಲೂ ಹೆಮ್ಮೆಯಿಂದ ತಂತಮ್ಮ ದೇಶ ಭಾಷೆಗಳಲ್ಲಿ ಮಾತನಾಡುತ್ತಾರೆ. ನಮ್ಮ ರಾಜಕಾರಣಿಗಳಂತೆ ಬೌದ್ಧಿಕ ದಾರಿದ್ರ್ಯದಿಂದ ನರಳದ ಅವರು,

ಕನ್ನಡಕ್ಕೆ ಕರ್ನಾಟಕದ ಜನತೆಯ ಆಸೆ-ಅಗತ್ಯಗಳನ್ನು ಪೂರೈಸುವ ಶಕ್ತಿ ಇದೆಯೇ ಹೊರತು ದುರಾಸೆಯನ್ನಲ್ಲ! ನಮ್ಮ ಮುಖ್ಯಮಂತ್ರಿಗಳಿಂದ ಹಿಡಿದು ಅವರ ಸಚಿವ ಸಂಪುಟ, ವಿರೋಧ ಪಕ್ಷದ ಶಾಸಕರೆ ಲ್ಲರೂ ತಂತಮ್ಮ ಮಾತೃ ಅಥವಾ ಪರಿಸರದ ಭಾಷೆಯಲ್ಲಿ ಕಲಿತು ಈ ಹೊತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಅತ್ಯುನ್ನತ ಸ್ಥಾನ ಗಳಿಸಿದ್ದಾಗ್ಯೂ, ತಮ್ಮ ಮಕ್ಕಳು/ಮೊಮ್ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೇ ಕಳಿಸಿರುತ್ತಾರೆ.

ಜಾಗತಿಕ ಮಟ್ಟದ ಎಲ್ಲ ಜ್ಞಾನವನ್ನು ತಂತಮ್ಮ ದೇಶ ಭಾಷೆಗಳಿಗೆ ತಂದುಕೊಳ್ಳುವ ವ್ಯವಸ್ಥೆ ಮಾಡುವ ಬದ್ಧತೆ ಹಾಗೂ ದಿಗಂತ ದೃಷ್ಟಿ ಹೊಂದಿದವರಾಗಿದ್ದಾರೆ. ಆದರೆ ರಾಜಕೀಯ ಪಟ್ಟುಗಳನ್ನು ಹಾಕುತ್ತಾ, ದುಡ್ಡು ಮಾಡುವ ದಂಧೆಯನ್ನೆ ಮೂಲ ಕಸುಬು ಮಾಡಿಕೊಂಡಿರುವ ನಮ್ಮ ನಾಯಕರು, ಇದರ ಭಾಗವಾಗಿಯೇ ಒತ್ತಡಕ್ಕೆ ಸಿಕ್ಕಾಗ, ತಮ್ಮ ಭಾಷೆಯೇ ಜಾಗತಿಕವಾಗಿ ಅಪ್ರಸ್ತುತವಾಗುತ್ತಿದೆ ಎಂದು ಘೋಷಿಸಲು ಹೇಸದವರಾಗುತ್ತಾರೆ. ಏಣಿ ಹತ್ತಿದ ಮೇಲೆ ಅದನ್ನು ಒದ್ದರೆ ಏನಾಗುತ್ತದೆ ಎಂಬುದನ್ನು ಕಾಲವೇ ಅವರಿಗೆ ತಿಳಿಸಿಕೊಡಬೇಕು. ಕರ್ನಾಟಕದಲ್ಲಿ ಐವತ್ತು ಪ್ರತಿಶತ ಇರುವ ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ನಾಮಕಾವಸ್ಥೆಗಾದರೂ ಒಂದು ಸ್ಥಾನ ಕೊಡದ, ತತ್ವ-ಸಿದ್ಧಾಂತಗಳಲ್ಲಿ ನಂಬಿಕೆ ಇಲ್ಲದ, ಕೇವಲ ಓಟ್ ಬ್ಯಾಂಕ್ ರಾಜಕಾರಣದ ಮೂಲಕ ತನ್ನ ಸ್ಥಾನ-ಮಾನ ಭದ್ರಪಡಿಸಿಕೊಳ್ಳಲು ಇಂಗ್ಲಿಷ್ ಶಿಕ್ಷಣದ ರಾಜಕಾರಣದ ಮೂಲಕ ಹಿಂದುಳಿದ ಮತ್ತು ದಲಿತ ಓಟ್ ಬ್ಯಾಂಕ್‌ಗೆ ಕೈ ಹಾಕಿರುವ ಸಮ್ಮಿಶ್ರ ಸರ್ಕಾರ, ಪ್ರಾಥಮಿಕ ಶಾಲೆಗಳಲ್ಲೂ ಇಂಗ್ಲಿಷ್ ಮಾಧ್ಯಮ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕುತ್ತಿದೆ-ಅದರ ಮೊದಲ ಹೆಜ್ಜೆಯೇ 'ಒಂದನೇ ತರಗತಿಯಿಂದಲೇ ಇಂಗ್ಲಿಷ್' ಎಂದು ತಿಳಿಯಬೇಕಾಗುತ್ತದೆ.

ಒಂದೆಡೆ ರೈತರು ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಗೆ ಮರಳುತ್ತಿದ್ದಾರೆ. ಮತ್ತೊಂದೆಡೆ ಪರಿಸರದ/ತಾಯಿ ಭಾಷೆ ಬಿಟ್ಟು ಅನ್ಯ ಭಾಷಾ ಶಿಕ್ಷಣಕ್ಕೆ ಮುಗಿ ಬೀಳುತ್ತಿದ್ದಾರೆ. ಇದನ್ನು ಹೇಗೆ ಅರ್ಥೈಸಬೇಕೋ ತಿಳಿಯದಾಗಿದೆ.

○ ಸವಿತಾ ನಾಗಭೂಷಣ

ಬ್ರಾಹ್ಮಿನ್ ಫೋಬಿಯಾ–ಭಾಗ ಎರಡು

'ಬ್ರಾಹ್ಮಣ' ಎಂಬುದು ಧರ್ಮವೊ? ಜಾತಿಯೋ?

'ಬ್ರಾಹ್ಮಣ' ಎನ್ನುವುದು ಧರ್ಮವೊ? ಜಾತಿಯೋ? ಎಂದರೆ ನಿಸ್ಸಂದೇಹವಾಗಿ ಧರ್ಮವೆಂದೇ ಕರೆಯಬೇಕಾಗುತ್ತದೆ. 'ಹಿಂದೂ' ಧರ್ಮವೆಂದು ಈಗ ಯಾವುದನ್ನು ಕರೆಯಲಾಗುತ್ತಿದೆಯೋ ಅದೇ ಚೌಕಟ್ಟಿನಲ್ಲಿ ಬ್ರಾಹ್ಮಣ ಧರ್ಮವನ್ನು ಇಡಲಾಗುವುದಿಲ್ಲ. ಏಕೆಂದರೆ 'ಹಿಂದೂ' ಎನ್ನುವ ದೊಡ್ಡ ಪೋಷಾಕಿನಲ್ಲಿ ಇತರ ಜನಸಮುದಾಯವನ್ನು ಯಶಸ್ವಿಯಾಗಿ ತನ್ನ ಅಧೀನತೆಗೆ ತೆಗೆದುಕೊಂಡಿದೆ. ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ 'ಹಿಂದೂ' ಎಂದು ಕರೆಯಲ್ಪಡುತ್ತಿರುವ ಧರ್ಮವನ್ನು ಬ್ರಾಹ್ಮಣ ಧರ್ಮದಿಂದ ಬೇರ್ಪಡಿಸಬೇಕು. 'ಬ್ರಾಹ್ಮಣ' ಎಂಬುದು ಒಂದು ಜಾತಿಯಲ್ಲ ಅದು ಹಿಂದೂ ಧರ್ಮದ ಚೌಕಟ್ಟಿನಲ್ಲಿ ನೋಡದೇ ಬೇರ್ಪಡಿಸಿಕೊಳ್ಳಬೇಕು 'ಬ್ರಾಹ್ಮಣ' ಎನ್ನವುದು ಒಂದು ಪ್ರತ್ಯೇಕವಾದ ಧರ್ಮ ಎಂದು ನೋಡಿದಾಗ ಮಾತ್ರ 'ಬ್ರಾಹ್ಮಣ' ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು.

ಡಾ॥ ಸಿ.ಜಿ. ಲಕ್ಷ್ಮಿಪತಿ

ಕಳೆದ ಸಂಚಿಕೆಯಲ್ಲಿ 'ಬ್ರಾಹ್ಮಿನ್ ಫೋಬಿಯಾ' ಎಂದರೇನು ಅದಕ್ಕೆ ತುತ್ತಾಗಿರುವ ಬ್ರಾಹ್ಮಣೇತರರು ಯಾರು ಎಂಬುದನ್ನು ಸೂತ್ರ ರೂಪದಲ್ಲಿ ಮಂಡಿಸಲಾಗಿತ್ತು. ಈ ಬಾರಿ ಬ್ರಾಹ್ಮಣ ಜಾತಿ/ಧರ್ಮ ಇಡೀ ಭಾರತೀಯ ಜನಸಮುದಾಯವನ್ನು ತನ್ನ ಸಾಂಸ್ಕೃತಿಕ/ಬೌದ್ಧಿಕ ಅಧೀನತೆಗೆ ತೆಗೆದುಕೊಂಡಿರುವ ಬಗೆಯನ್ನು ಅದರ ಕಾರ್ಯನಿರ್ವಹಣಾ ಶೈಲಿಯನ್ನು ವಿಶ್ಲೇಷಣೆಗೆ ಒಳ ಪಡಿಸೋಣ. ಅದಕ್ಕೂ ಮೊದಲು ಈಗಾಗಲೇ ಬ್ರಾಹ್ಮಣ ಜಾತಿ/ಧರ್ಮ ಬಗ್ಗೆ ಇರುವ ಕೆಲವು ಜನಪ್ರಿಯ ನಂಬಿಕೆಗಳನ್ನು ಪರಿಶೀಲಿಸಬೇಕಾಗುತ್ತದೆ.

'ಬ್ರಾಹ್ಮಣ' ಎನ್ನುವುದು ಧರ್ಮವೊ? ಜಾತಿಯೋ? ಎಂದರೆ ನಿಸ್ಸಂದೇಹವಾಗಿ ಧರ್ಮವೆಂದೇ ಕರೆಯಬೇಕಾಗುತ್ತದೆ. 'ಹಿಂದೂ' ಧರ್ಮವೆಂದು ಈಗ ಯಾವುದನ್ನು ಕರೆಯಲಾಗುತ್ತಿದೆಯೋ ಅದೇ ಚೌಕಟ್ಟಿನಲ್ಲಿ ಬ್ರಾಹ್ಮಣ ಧರ್ಮವನ್ನು ಇಡಲಾಗುವುದಿಲ್ಲ. ಏಕೆಂದರೆ 'ಹಿಂದೂ' ಎನ್ನುವ ದೊಡ್ಡ ಪೋಷಾಕಿನಲ್ಲಿ ಇತರ ಜನಸಮುದಾಯವನ್ನು ಯಶಸ್ವಿಯಾಗಿ ತನ್ನ ಅಧೀನತೆಗೆ ತೆಗೆದುಕೊಂಡಿದೆ. ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ 'ಹಿಂದೂ' ಎಂದು ಕರೆಯಲ್ಪಡುತ್ತಿರುವ ಧರ್ಮವನ್ನು ಬ್ರಾಹ್ಮಣ ಧರ್ಮದಿಂದ ಬೇರ್ಪಡಿಸಬೇಕು. 'ಬ್ರಾಹ್ಮಣ' ಎಂಬುದು ಒಂದು ಜಾತಿಯಲ್ಲ ಅದು ಹಿಂದೂ ಧರ್ಮದ ಚೌಕಟ್ಟಿನಲ್ಲಿ ನೋಡದೇ ಬೇರ್ಪಡಿಸಿಕೊಳ್ಳಬೇಕು 'ಬ್ರಾಹ್ಮಣ' ಎನ್ನವುದು ಒಂದು ಪ್ರತ್ಯೇಕವಾದ ಧರ್ಮ ಎಂದು ನೋಡಿದಾಗ ಮಾತ್ರ 'ಬ್ರಾಹ್ಮಣ' ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು.

'ಬ್ರಾಹ್ಮಣ' ಎಂಬುದೊಂದು ಜಾತಿಯಲ್ಲ ಅದೊಂದು ಧರ್ಮ ಹೇಗೆಂದು ನೋಡುವ.

ಬ್ರಾಹ್ಮಣ ಧರ್ಮದ ಉಗಮ

ಸಾಮಾನ್ಯವಾಗಿ ಶೂದ್ರರು ಮತ್ತು ದಲಿತ ಭಕ್ತಾದಿಗಳು ದೇವಸ್ಥಾನಕ್ಕೆ ಹೋದಾಗ ಅರ್ಚಕ/ಪೂಜಾರಿಯನ್ನು ಅವರ ಮಗನ/ಮಗಳ ಹೆಸರಿನಲ್ಲಿ ಅರ್ಚನೆ ಮಾಡಲು ಕೋರುತ್ತಾರೆ. ಸಹಜವಾಗಿಯೇ ಬ್ರಾಹ್ಮಣ ಧರ್ಮಿಯನಾದ ಪೂಜಾರಿಯು ನಿಮ್ಮ ಗೋತ್ರ, ಪ್ರವರಗಳನ್ನು ಹೇಳಿ ಎಂದು ಕೇಳುತ್ತಾನೆ. ಇವರಿಗೆ ಗೋತ್ರ ಪ್ರವರಗಳ ಪರಿಚಯವಿಲ್ಲದ ಕಾರಣ ಗೊತ್ತಿಲ್ಲ 'ನೀವೇ ಹೇಳಿ' ಎನ್ನುತ್ತಾರೆ. ಸರ್ವಸಾಮಾನ್ಯವಾಗಿ ಬಳಸುವ 'ವಿಷ್ಣುಗೋತ್ರ' ಎಂದು ಅರ್ಚನೆಯನ್ನು ಮಾಡುತ್ತಾನೆ. ಹಾಗಾದರೆ ಗೋತ್ರ, ಪ್ರವರ ಎಂದರೇನು? ಬ್ರಾಹ್ಮಣ ಧರ್ಮಕ್ಕೂ ಗೋತ್ರಕ್ಕೂ ಇರುವ ಸಂಬಂಧವೇನು? ಎಂಬುದನ್ನು ಆಲೋಚಿಸಬೇಕಾಗುತ್ತದೆ.

ಸಾಮಾನ್ಯವಾಗಿ ಸಾಂಪ್ರದಾಯಿಕ ಬ್ರಾಹ್ಮಣರಲ್ಲಿ 'ತ್ರಿಕಾಲ ವಂದನೆ' ಎಂಬ ಆಚರಣೆಯಿದೆ. ತ್ರಿಕಾಲ ಎಂದರೆ ಬೆಳಗ್ಗೆ, ಮಧ್ಯಾಹ್ನ, ಸಂಜೆ ತಮ್ಮ ಹಿರಿಯರನ್ನು ನೆನೆಪಿಸಿಕೊಂಡು ಗೌರವಿಸುತ್ತಾರೆ. ತಮ್ಮ ಋಷಿ ಪರಂಪರೆಯಲ್ಲಿ ಬಂದ ಮೂರು ಜನ ಅಥವಾ ಐದು ಜನರನ್ನು ನೆನಪಿಸಿಕೊಂಡು ಗುರುಹಿರಿಯರಿಗೆ ನಮಸ್ಕರಿಸುತ್ತಾರೆ. 'ಗೋತ್ರ'ದ ಮೂಲ ಪುರಷನ ಹೆಸರನ್ನು ನೆನಪಿಸಿಕೊಳ್ಳುತ್ತಾರೆ. 'ಗೋತ್ರ' ಎಂದರೆ ತಾನು ಹುಟ್ಟಿದ ವಂಶದ ಮೂಲ ಪುರುಷನ ಹೆಸರು. ಅಂದರೆ ಯಾವ ಋಷಿಯ ವಂಶದಲ್ಲಿ ಹುಟ್ಟಿದನೋ ಅವನ ಹೆಸರು. ಅದನ್ನೇ 'ಮನೆತನ' ಅಥವಾ 'ವಂಶ' ಎಂದು ಕರೆಯಲಾಗುತ್ತದೆ.

'ಪ್ರವರ' ಎಂದರೆ ಆಯಾ ವಂಶದಲ್ಲಿ ಪ್ರಸಿದ್ಧರಾದ ತಾತಾ, ಮುತ್ತಾತಂದಿರ ಹೆಸರು. ಅವರ ಹೆಸರುಗಳನ್ನು ಹೇಳಲಾಗುತ್ತದೆ. ಅದು ಬದಲಾಗಬಹುದು. ಬದಲಾಗದೆಯೂ ಇರಬಹುದು. ಗೋತ್ರ ಪ್ರವರಗಳನ್ನು ಹೇಳಿಯಾದ ಮೇಲೆ ಸೂತ್ರವನ್ನು ಹೇಳಲಾಗುತ್ತದೆ. ಸೂತ್ರ ಎಂದರೆ ವೇದ ಧರ್ಮ ತಿಳಿಯಲು ಆಚರಿಸಲು ಅನೇಕ ಸೂತ್ರಗಳನ್ನು ರಚಿಸಲಾಗಿದೆ. ಮುಖ್ಯವಾಗಿ ಅಪಸ್ತಂಭ ಸೂತ್ರವು, ಯಜುರ್ವೆದಕ್ಕೆ ಸೇರಿದೆ ಅಶ್ವಲೀಯನ ಸೂತ್ರವು ಋಗ್ವೇದಕ್ಕೆ ಸೇರಿದ್ದರೆ, ದ್ರಾಹ್ಯಾಯಣ ಸೂತ್ರವು ಸಾಮವೇದಕ್ಕೆ ಸೇರಿದೆ. ಉದಾಹರಣೆಗೆ ಸಾಂಪ್ರದಾಯಿಕ ಬ್ರಾಹ್ಮಣ ಧರ್ಮಿಯನೊಬ್ಬನನ್ನು ನೀನು ಯಾರು? ಎಂದು ಕೇಳಿದರೆ, ಇಂತಹ ಋಷಿಗಳ ವಂಶದಲ್ಲಿ ಹುಟ್ಟಿ ಇಂತಹ ಸೂತ್ರದ ಪ್ರಕಾರ ಷೋಡಷ ಕರ್ಮಗಳಿಗೆ ಒಳಪಟ್ಟು ಇಂಥ ವೇದವನ್ನು ಅಧಿಕರಿಸುವವನ್ನು ಎಂಬ ಉತ್ತರ ದೊರಕುತ್ತದೆ. ಗೋತ್ರ, ಪ್ರವರ, ಸೂತ್ರಗಳಿಗೂ ಬ್ರಾಹ್ಮಣ ಧರ್ಮದ ಉಗಮಕ್ಕೂ ನೇರವಾದ ಸಂಬಂಧವಿದೆ. ವೇದಗಳ ಪ್ರಕಾರ ಚತುರ್ಮುಖ ಬ್ರಹ್ಮನಿಂದ ಪರಂಪರೆಯಾಗಿ ಏಳುಮಂದಿ ಋಷಿಗಳು ಜನಿಸುತ್ತಾರೆ. ಭೃಗು, ಅಂಗೀರಸ, ಮರೀಚಿ, ಅತ್ರಿ, ಪುಲಹ, ಪೌಲಸ್ಯ, ವಿಶೇಷ ಇವರಲ್ಲಿ ಐನೆಯವರಾದ ಪುಲಹ ಋಷಿಯಿಂದ 'ರಾಕ್ಷಸರ' ಉತ್ಪನ್ನವಾಯಿತು. ಆರನೆಯವರಾದ ಪೌಲಸ್ತ್ರ್ಯರಿಂದ "ಪೈಶಾಚರ" ಉತ್ಪನ್ನರಾದರು.

ಆದುದರಿಂದ ಈಗಿರುವ ಅಖಿಲ ಬ್ರಾಹ್ಮಣ ಸಮೂಹವೆಲ್ಲವೂ ಮೊದಲು ತಿಳಿಸಿದ ಎಂದರೆ, ಭೃಗ, ಅಂಗೀರಸ, ಮರೀಚ ಅತ್ರಿ ಈ ನಾಲ್ಕು ಋಷಿ ಪರಂಪರೆಗೆ ಸೇರಿದವರಾಗಿದ್ದಾರೆ. (ವಿವರಗ ಳಿಗೆ ನೋಡಿ. ಗೋತ್ರ, ಪ್ರವರ, ಸೂತ್ರ, ಶಾಖಾ ವಿಚಾರ ಸೂಚಿ ಹೆಚ್.ಆರ್. ಸಂಪತ್ ಕುಮಾರ ೨೦೦೧) ಈ ವಿವರಗಳೆಲ್ಲವೂ ಎಷ್ಟು ವೈಜ್ಞಾನಿಕ ಎಷ್ಟು ತರ್ಕಬದ್ಧ ಎಂಬ ಚರ್ಚೆಗೆ ನಾನಿಲ್ಲಿ ಹೋಗುವುದಿಲ್ಲ. ನನ್ನ ಆಸಕ್ತಿಯಿರುವುದು ಬ್ರಾಹ್ಮಣ ಧರ್ಮದ ಉಗಮ ಮತ್ತು ಮೂಲವನ್ನು ತಿಳಿದು ಕೊಳ್ಳುವುದರಲ್ಲಿ ಹೇಗೆ ಇತರ ಧರ್ಮಗಳಾದ ಇಸ್ಲಾಂ, ಕ್ರಿಶ್ಚಿಯಾನಿಟಿ, ತಮ್ಮ ಮೂಲವನ್ನು ದೈವಿಕ ಸೃಷ್ಟಿಗೆ ಆರೋ ಪಿಸಿಕೊಳ್ಳತ್ತವೆಯೋ ಹಾಗೆಯೇ ಬ್ರಾಹ್ಮಣ ಧರ್ಮವು ಕೂಡ ಆರೋಪಿಸಿಕೊಳ್ಳುತ್ತದೆ. ಹಾಗಾದರೆ ಈ ಗೋತ್ರ ಗಳು ಬುಡಕಟ್ಟುಗಳಾಗಿರುವ ಸಾಧ್ಯತೆ ಇಲ್ಲವೇ? ಇದ್ದರೂ ಇರಬಹುದು ಇವು ಜಾತಿಗಳಾಗಿಯೂ ಇರಬಹುದು, ಅನೇಕ ಬದಲಾವಣೆಗೂ ಒಳಪಟ್ಟಿರಬಹುದು. ಆದರೂ 'ಬ್ರಾಹ್ಮಣ' ಎಂಬುದೊಂದು ಜಾತಿಗಿಂತ/ಧರ್ಮವಾಗಿಯೇ ಕಾಣಿಸಿಕೊಳ್ಳುತ್ತದೆ. ಅದರಲ್ಲಿ ವಿವಿಧ ಗುಂಪುಗಳಿದ್ದರೂ ಅವುಗಳ ರಚನೆ, ಸಾಮಾಜಿಕ ಸ್ಥಾನಮಾನ ಒಟ್ಟು ತಾತ್ವಿಕ ನೆಯ್ಗೆ, ಬದುಕಿನ ಕ್ರಮ ಅಖಿಲ ಭಾರತ ಮಟ್ಟದಲ್ಲಿ ಒಂದೇ ರೀತಿಯಲ್ಲಿರುವಂತೆ ಕಾಣ ಬರುತ್ತದೆ. ಆದರೆ ನಿಶ್ಚಿತವಾಗಿಯೂ ಜಗತ್ತಿನ ಇತರ ಧರ್ಮಗಳಿಗಿಂತ ಅತ್ಯಂತ ಭಿನ್ನವಾಗಿಯೂ, ಸಂಕೀರ್ಣ ಸ್ವರೂಪದ್ದಾ ಗಿಯೂ ತೋರುತ್ತದೆ. ದೈವಿಕ ಚತುರ್ಮುಖ ಬ್ರಹ್ಮನಲ್ಲಿ ಬ್ರಾಹ್ಮಣ ಧರ್ಮವು ತನ್ನ ಉಗಮವನ್ನು ಕಾಣುತ್ತದೆ. ತನ್ನ ಮೂಲವನ್ನು ನಿರ್ದಿಷ್ಟವಾದ ಧಾರ್ಮಿಕ ಆಚರಣೆಯ ಮೂಲಕ ಗುರುತಿಸಿಕೊಳ್ಳುತ್ತದೆ. ಬ್ರಾಹ್ಮಣ ಧರ್ಮದ ಗೋತ್ರಗಳ ಸ್ಥಾಪಕರ ಬಗೆಗೂ ಸ್ಪಷ್ಟವಾದ ತಿಳಿವಳಿಕೆ ಇದೆ. ಹೀಗಿರುವಾಗ ಅದನ್ನು ಧರ್ಮವೆಂದು ಕರೆಯಲು ಅಂತಹ ತಾತ್ವಿಕ ಅಡ್ಡಿಯನೂ ಆಗಲಾರದು ಎಂಬುದು ನನ್ನ ಭಾವನೆ.

'ಬ್ರಾಹ್ಮಣ' 'ಸನಾತನ' ಎಂಬ ಪದಗಳು ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಆದುದರಿಂದಲೇ 'ಬ್ರಾಹ್ಮಣ ಧರ್ಮ'ವೂ ಈ ಹಿಂದೂ ಧರ್ಮವೆಂದು ಕರೆಯಲ್ಪಡು ತ್ತಿರುವ ಧರ್ಮಕ್ಕಿಂತಲೂ ಹಳೆಯದು. 'ಹಿಂದೂ' ಎನ್ನುವ ಪದವನ್ನು ೮ ಮತ್ತು ೯ನೇ ಶತಮಾನದಲ್ಲಿ ಮುಸ್ಲಿಂ ಧಾಳಿಕೋರರು ಬಳಸಿದರು. ಮುಸ್ಲಿಂರಿಗಿಂತ ಭಿನ್ನವಾದ ಕ್ರಿಶ್ಚಿಯನ್ನರಿಗಿಂತ ಪ್ರತ್ಯೇಕವಾದ ಆಚಾರ ವಿಚಾ ರಗಳನ್ನು ಹೊಂದಿರುವ ಜನರನ್ನು 'ಹಿಂದೂ' ಎಂದು ಕರೆದರು. ಯುರೋಪಿಯನ್ನರು ಈ ಪರಿಕಲ್ಪನೆಯನ್ನು ಒಪ್ಪಿಕೊಂಡು ಮತ್ತಷ್ಟು ಧೃಡ ಪಡಿಸಿದರು. ಆಬೆಡುಬಾ ಹರ್ಬರ್ಟ್‌ರಿಸ್ಲೆಯವರು ಭಾರತದ ಜಾತಿಗಳ ಬಗೆಗೆ ಬರೆಯುವಾಗ ಬ್ರಾಹ್ಮಣರ ಬಗೆಗೂ ಬರೆಯುತ್ತಾರೆ. ಆಬೆಡುಬಾರ "ಹಿಂದೂ ಮ್ಯಾನರ್ಸ್, ಕಸ್ಟಂ ಮತ್ತು ಸೆರೆಮೊನೀಸ್" ಎಂಬ ಗ್ರಂಥದಲ್ಲಿ ಬ್ರಾಹ್ಮಣರನ್ನು ಕುರಿತು ಬರೆಯುತ್ತಾರೆ. ಅದನ್ನು ಸೂಕ್ಷ್ಮವಾಗಿ ಓದಿದಲ್ಲಿ 'ಬ್ರಾಹ್ಮಣ' ಎಂಬುದು ಇತರ ಜಾತಿಗಳಿಗಿಂತ ಪ್ರತ್ಯೇಕವಾಗಿ ನಿಲ್ಲುವುದು ಮಾತ್ರವಲ್ಲ. ಧರ್ಮವಾಗಿಯೂ ಗೋಚರವಾ ಗುತ್ತದೆ. ಆದುದರಿಂದಲೇ 'ಬ್ರಾಹ್ಮಣ' ಜಾತಿಯೋ? ಅಥವಾ ಧರ್ಮವೋ ಎಂಬ ಪ್ರಶ್ನೆಯು ವಿಶೇಷ ಅಧ್ಯಯ ನಕ್ಕೆ ಯೋಗ್ಯವಾದ ವಿಷಯ. ಇದೇ ಚರ್ಚೆಯನ್ನು ಮುಂದುವರೆಸುತ್ತ ಮತ್ತಷ್ಟು ಅಂಶಗಳನ್ನು ಗಮನಿಸುವ.

ಕ್ಯಾಸ್ಟ್ ಕೆಮಿಸ್ಟ್ರಿ

೩

ಬ್ರಾಹ್ಮಣ ಧರ್ಮಕ್ಕೊಂದು ಪವಿತ್ರಗ್ರಂಥವಿದೆಯೆ?

ಚತುರ್ಮುಖ ಬ್ರಹ್ಮನಿಂದ ರಚಿಸಿದ ಋಷಿಗಳು 'ಬ್ರಾಹ್ಮಣ'ರ ವಿವಿಧ ಗೋತ್ರಗಳಿಗೆ ಕಾರಣರಾದರು. ಈ ಹಿಂದೆಯೇ ವಿಶದ ಪಡಿಸಿದಂತೆ ತ್ರಿಕಾಲ ವಂದನೆಯ ಸಮಯದಲ್ಲಿಯೇ 'ಸೂತ್ರ'ಗಳನ್ನು ಹೇಳಲಾಗುತ್ತದೆ. ಆದರೆ ನಾನು ಇಂತಹ ವೇದದ ಇಂತಹ ಶಾಖೆಗೆ ಸೇರಿ ಕೊಳ್ಳುವವನು ಮತ್ತು ಆ ಸೂತ್ರಕ್ಕೆ ಬದ್ಧನಾಗಿರುವವನು

> 'ಬ್ರಾಹ್ಮಣ' 'ಸನಾತನ' ಎಂಬ ಪದಗಳು ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಆದುದರಿಂದಲೇ 'ಬ್ರಾಹ್ಮಣ ಧರ್ಮ'ವೂ ಈ ಹಿಂದೂ ಧರ್ಮವೆಂದು ಕರೆಯಲ್ಪಡು ತ್ತಿರುವ ಧರ್ಮಕ್ಕಿಂತಲೂ ಹಳೆಯದು. 'ಹಿಂದೂ' ಎನ್ನುವ ಪದವನ್ನು ೮ ಮತ್ತು ೯ನೇ ಶತಮಾನದಲ್ಲಿ ಮುಸ್ಲಿಂ ಧಾಳಿ ಕೋರರು ಬಳಸಿದರು. ಮುಸ್ಲಿಂರಿಗಿಂತ ಭಿನ್ನವಾದ ಕ್ರಿಶ್ಚಿಯನ್ನರಿಗಿಂತ ಪ್ರತ್ಯೇಕ ವಾದ ಆಚಾರ ವಿಚಾರಗಳನ್ನು ಹೊಂದಿ ರುವ ಜನರನ್ನು 'ಹಿಂದೂ' ಎಂದು ಕರೆ ದರು. ಯುರೋಪಿಯನ್ನರು ಈ ಪರಿಕಲ್ಪ ನೆಯನ್ನು ಒಪ್ಪಿಕೊಂಡು ಮತ್ತಷ್ಟು ಧೃಡ ಪಡಿಸಿದರು. ಆಬೆಡುಬಾ ಹರ್ಬರ್ಟ್‌ರಿಸ್ಲೆ ಯವರು ಭಾರತದ ಜಾತಿಗಳ ಬಗೆಗೆ ಬರೆಯುವಾಗ ಬ್ರಾಹ್ಮಣರ ಬಗೆಗೂ ಬರೆ ಯುತ್ತಾರೆ. ಆಬೆಡುಬಾರ "ಹಿಂದೂ ಮ್ಯಾನರ್ಸ್, ಕಸ್ಟಂ ಮತ್ತು ಸೆರೆಮೊನೀಸ್" ಎಂಬ ಗ್ರಂಥದಲ್ಲಿ ಬ್ರಾಹ್ಮಣರನ್ನು ಕುರಿತು ಬರೆಯುತ್ತಾರೆ. ಅದನ್ನು ಓದಿದಲ್ಲಿ 'ಬ್ರಾಹ್ಮಣ' ಎಂಬುದು ಇತರ ಜಾತಿಗಳಿ ಗಿಂತ ಪ್ರತ್ಯೇಕವಾಗಿ ನಿಲ್ಲುವುದು ಮಾತ್ರವಲ್ಲ. ಧರ್ಮವಾಗಿಯೂ ಗೋಚರವಾಗುತ್ತದೆ.

ಎಂದರ್ಥ. ಅಂದರೆ 'ಬ್ರಾಹ್ಮಣ' ಧರ್ಮ ಪರಿಪಾಲಕ ನಿರ್ದಿಷ್ಟವಾದ ಸೂತ್ರಕ್ಕೆ ಬದ್ಧನಾಗಿರುತ್ತಾನೆ ಎಂದಾಯಿತು. ಸೂತ್ರಗಳಿಗೆ ವೇದಗಳಿಗೂ ಬ್ರಾಹ್ಮಣಧರ್ಮವು ಬದ್ಧವಾಗಿರ ಬೇಕಾಗುತ್ತದೆ. ಮತ್ತು ಬದ್ಧವಾಗಿದೆ ಕೂಡ. ಆದುದರಿಂದ ವೇದಗಳೇ ಬ್ರಾಹ್ಮಣರ ಪವಿತ್ರಗ್ರಂಥಗಳಾಗಿವೆ. ಆದರೆ ಇಲ್ಲಿ ಮತ್ತೊಂದು ಪ್ರಮುಖವಾದ ಸಮಸ್ಯೆ ಎದುರಾಗುತ್ತದೆ. ಅದೇನೆಂದರೇ ಮಾರ್ಕ್ಸ್‌ವಾದಿ ಚಿಂತಕ ಸರ್ದೇಸಾಯಿವರು ಹೇಳುವಂತಹದು, 'ಹಿಂದೂ' ತತ್ವಶಾಸ್ತ್ರದ ಮುಖ್ಯ ಅಂಶವೆಂದರೆ ಅದರ ವಿರೋಧಾಭಾಸದ ಅಂಶಗಳು. ಪರಸ್ಪರ ವಿರುದ್ಧವಾದ ಹೇಳಿಕೆಗಳು ಕೂದಲು ಸೀಳುವ ತರ್ಕ, ಇತ್ಯಾದಿ. ವೇದಗಳಿಗೂ ಇದೇ ಅನ್ವಯಿಸುತ್ತದೆ. ವೇದಗಳಲ್ಲಿ ಹೇಳಲ್ಪಟ್ಟಿದ್ದು ಅದರದೇ ಕೊನೆಯ ಭಾಗದ ಉಪನಿಷತ್ತುಗಳಲ್ಲಿ ಹೇಳಿದ್ದಕ್ಕಿಂತ ಭಿನ್ನವಾಗಿರುತ್ತದೆ. ಆದುದರಿಂದಲೇ 'ಬ್ರಾಹ್ಮಣ'ರಿಗೂ ತಮ್ಮ ಧರ್ಮದ ಬಗೆಗೆ ಅಪಾರವಾದ ವೈರುಧ್ಯಗಳು ಗೊಂದಲಗಳೂ ಉಂಟಾಗಿ ದ್ದವು. ಈ ಬಗೆಯ ಗೊಂದಲ ಅವರ ಉನ್ನತಿಯನ್ನು ಕಾಯ್ದುಕೊಳ್ಳಲು ಅಷ್ಟೇನು ನೆರವಾಗುತ್ತಿರಲಿಲ್ಲ. ಗುಪ್ತರ ಕಾಲದ ವೇಳೆಗೆ ಅವರಿಗೆ ಅವರದೇ Codified (ಸಂಹಿ ತೆಗೊಳಿಸಲ್ಪಟ್ಟ) ಗ್ರಂಥಗಳ ಅವಶ್ಯಕತೆ ಉಂಟಾಯಿತು. ಲಿಪಿ ಅಸ್ತಿತ್ವಕ್ಕೆ ಬರುವ ಮೊದಲು 'ಶೃತಿ'ಗಳು ಬಂದವು.

ಸ್ಮೃತಿಗಳು ವೇದಕ್ಕೆ ಪೋಷಕವಾದ ಗ್ರಂಥಗಳು. ಮನು, ಯಜ್ಞವಲ್ಕ್ಯಮೊದಲಾದವರು ಈ ಸ್ಮೃತಿಗಳ ರಚನೆಕಾರರು. ಸ್ಮೃತಿಗಳು ವೇದಕ್ಕೆ ಪೂರಕವಾದ ಅಂಶಗ ಳಾಗಿವೆ. ಗುಪ್ತರ ಕಾಲದಲ್ಲಿ ರಚಿಸಲ್ಪಟ್ಟದೆಂದು ಹೇಳಲಾದ ಮನುಸ್ಮೃತಿಯು ಅತ್ಯಂತ ಜನಪ್ರಿಯವಾದ ಗ್ರಂಥವಾಗಿದೆ. ಮತ್ತು ಲೇಖಕನ ತಿಳುವಳಿಕೆ ಸನಾತನ ಬ್ರಾಹ್ಮಣ ಧರ್ಮಕ್ಕೆ Codified ಆದ ನೀತಿ ಸಂಹಿತೆಯನ್ನು ಒದಗಿಸುವುದರ ಜೊತೆಗೆ ಇಡೀ ಭಾರತೀಯ ಸಮಾಜವನ್ನು ಬ್ರಾಹ್ಮಣ ಧರ್ಮದ ಅಧೀನತೆಗೆ ಅವಶ್ಯಕತೆಯಾಗಿಯೇ ರೂಪು ಗೊಂಡಿದೆ. 'ಹಿಂದೂಧರ್ಮ'ವೆಂದು ಕರೆಯಲ್ಪಡುತ್ತಿರುವ ಅಪಾರ ಜನಸಮುದಾಯದ ಬುನಾದಿ ಗ್ರಂಥವೆಂದು ಮನಸ್ಮೃತಿಯನ್ನು ಪರಿಗಣಿಸಿದ್ದರೂ ಸಹ ಸೂಕ್ಷ್ಮ ವ್ಯತ್ಯಾಸ ವನ್ನು ತಿಳಿಯಬಹುದಾಗಿದೆ. ೧೨ ಅಧ್ಯಾಯಗಳನ್ನೊಳ ಗೊಂಡಿದ್ದು ೨೬೮೪ ಶ್ಲೋಕಗಳನ್ನೊಳಗೊಂಡಿರುವ ಮನುಸ್ಮೃತಿಯು ಒಂದು ಬಗೆಯಲ್ಲಿ ಭಾರತದ ಜನಸಮು ದಾಯದ ಇಡೀ ಸಾಮಾಜಿಕ ಆಧ್ಯಾತ್ಮಿಕ ಬದುಕಿನ ಕ್ರಮ ವನ್ನು ಒಂದು ರೀತಿಯಲ್ಲಿ ನಿರ್ದೇಶಿಸುತ್ತಿದೆ. ಆದರೆ ಪ್ರತಿ ಶ್ಲೋಕವೂ 'ಬ್ರಾಹ್ಮಣಧರ್ಮ'ವು ಇತರ ಜಾತಿಗಳನ್ನು ತನ್ನ ಅಧೀನದಲ್ಲಿ ಇರಿಸಿಕೊಳ್ಳುವುದರ ತಂತ್ರ ವಿವರಿಸುವುದೇ ಆಗಿದೆ. ಆದುದರಿಂದ ನಾವು ಗ್ರಹಿಸಬಹುದಾದ್ದೆಂದರೆ ಈ ಗ್ರಂಥವು 'ಬ್ರಾಹ್ಮಣಧರ್ಮ'ವು ವೇದಗಳನ್ನಾಶ್ರಯಿಸಿ ತನ್ನ ಅಸ್ತಿತ್ವಕ್ಕಾಗಿಯೇ ರಚಿಸಿಕೊಂಡ ಸೂತ್ರ ರೂಪ ಮತ್ತು ಇತರ ಜನ ಸಮುದಾಯಗಳ ಮೇಲೆ ತನ್ನ ಅಧಿಕಾರವನ್ನು ಹೇರಲು ಬಳಸಿಕೊಂಡ ಕಾನೂನಾಗಿದೆ.

'ಬ್ರಾಹ್ಮಣ ಧರ್ಮ'ವು ಮನುಸ್ಮೃತಿಗೆ ಅನುಗುಣ ವಾಗಿ ಹೇಗೆ ನಡೆಯು ತ್ತಿದೆಯೆಂದು ಉದಾಹರಣೆ ಸಹಿತ ನೋಡುವ ಅಥವಾ ಬ್ರಾಹ್ಮಣಧರ್ಮಕ್ಕೂ ಮನುಸ್ಮೃತಿಗೂ ಇರುವ ನಿಕಟ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಓದುಗರಾದ ತಾವು ಭಾರತ ಅಥವಾ ಕರ್ನಾಟಕದ ಯಾವುದೇ ಭಾಗದಲ್ಲಿರುವ ಬ್ರಾಹ್ಮಣಧರ್ಮಿಯರನ್ನು ಸೂಕ್ಷ್ಮವಾಗಿ ಗಮನಿಸಿ ದರೂ ಆಗುತ್ತದೆ.

(ಮುಂದಿನ ಸಂಚಿಕೆಯಲ್ಲಿ) □

ಹಾಡು ಕೃಷಿ

○ ಕೃಷ್ಣಮೂರ್ತಿ ಬಿಳಿಗೆರೆ



೧ ಹಾಡಿನ ಗೂಡಿನ ಕಟ್ಟೆ
ಆಡಿನ ಊಟದ ತಟ್ಟೆ

ಬೇಲಿ ಎಂದರೆ ತರತರ ಹೂವು
ಮುಳ್ಳಿನ ಜೊತೆಗೆ ಸರಸರ ಹಾವು
ಬೇಲಿ ಎಂದರೆ ಕಹಿಬೇವು
ಜೇನು ತುಪ್ಪದ ತಾವು

ಬೇಲಿ ಎಂದರೆ ಹಸಿರ ಕಲೆ
ಕೋಟಿ ಕೀಟಗಳ ನೆಲೆಯ ಬಲೆ
ಹಬ್ಬಿದ ಬಳ್ಳಿಯ ತಬ್ಬುವ ಲೀಲೆ
ಇಲ್ಲಿ ನೆರಳಿದೆ ಬಾರೆಲೆ ಕೋಗಿಲೆ.

ಬೇಲಿ ಎಂದರೆ ಮೆತ್ತಗೆ ಮಲ್ಲಗೆ
ಪಿಸುಮಾತುಗಳ ದನಿಯೇ ತಣ್ಣಗೆ
ಬೇಲಿಯ ಮುಖದಲಿ ಕಣ್ಣು ಅಪಾರ
ಈ ಕಣ್ಣಲಿ ಕುಡಿವುದು ಮಳೆಯ ನೀರ



ತಡೆಯ ಒಡ್ಡುವುದು ಒಂದೇ ಅಲ್ಲ
ಹಸಿರು ಹೊನ್ನನು ಬೆಳೆಯುವುದು
ಬೇಲಿ ಎಂದರೆ ಗೋಡೆಯಲ್ಲ
ಉಸಿರಿನ ಹೂವ ಕಟ್ಟುವುದು.

ಬೇಲಿಯ ಒಳಗೆ ಹೊರಗೆ ಒಳಗೆ
ಹಾಡಿನ ಗೂಡಲಿ ಹಕ್ಕಿ ಬೆಚ್ಚಗೆ
ಹಕ್ಕಿಯ ಒಡಲಲಿ ಬೀಜ ಬೆಚ್ಚಗೆ
ನೆಲಕೆ ಇಳಿಯಿತು ಬೆಳೆಯಿತು ನೆಟ್ಟಗೆ

ನೆಲದ ಆಳಕೆ ನೆಲದ ಆಳ್ವಿಕೆ
ಬೇರೋ ಬೇರು ಬೇರು
ಬೇರಿನ ಊರಿನ ತುಂಬಾ
ನಿರೋ ನೀರು ನೀರು

ಇದು ಹಾಡಿನ ಗೂಡಿನ ಕಟ್ಟೆ
ಇದು ಆಡಿನ ಊಟದ ತಟ್ಟೆ
ತೋಟ ಹೊಲಗಳಲಿ ಬೇಲಿಯ ಬಟ್ಟೆ
ಬೇಲಿ ಇಲ್ಲದಿರೆ ಖಂಡಿತ ಕೆಟ್ಟೆ

೨ ಮಲ್ಚಿಂಗ್ ಮಂತ್ರ

ಇದು ಮಾಯಾ ಇದು ಮಂತ್ರ
ಮಲ್ಚಿಂಗ್ ಮಾಯಾ ಮಂತ್ರ

ನೆಲದ ನೋವಿಗೆ ಹಸಿಯ ಮೈಯ್ಯಿಗೆ
ಉರಿವ ಸೂರ್ಯನ ಬಿಸಿಲಿನ ತಡೆಗೆ
ಅನುವು ತನುವು ಮಲ್ಚಿಂಗ್ ಮಂತ್ರ

ಇದುವೇ ಮಲ್ಚಿಂಗ್ ಮಾಯ್ಯಾ ಮಂತ್ರ

ಬುಡದಲೆ ಅಡಗಲಿ ಅದರದೆ ಎಲೆಗಳು
ಬಿಡಮೂಡುವುವು ಹೊಸ ಹಸಿ ಕುಡಿಗಳು
ಗರಿಗಳು ಎಲೆಗಳು, ಸೊಪ್ಪುಸೆದೆಗಳು
ಕೋಟಿ ಕೀಟಗಳ ಅನ್ನದ ಅಗಳು

ಹನಿಹನಿ ನೀರು ನೆಲದಲಿ ಹಿಂಗಲಿ
ಸೂರ್ಯ ನೀರನು ಕಡಲಲಿ ಕುಡಿಯಲಿ
ಬೇರಿನ ಊರು ಹಬ್ಬಲಿ ಹರಡಲಿ
ಹೊನ್ನ ಹೂವಿನ ತೇರು ಹರಿಯಲಿ

ಬೇಸಿಗೆಯಲ್ಲಿ ಬೆಂಕಿಯ ನಾಲಗೆ
ಮಲ್ಚಿಂಗ್ ಮಾಯವ ಸುಡದಿರಲಿ
ಅಲ್ಲೆ ಗೊಬ್ಬರ ಅಲ್ಲೆ ಉಬ್ಬರ
ಅಬ್ಬರದಲ್ಲಿ ಪಸಲನು ಬಿಡಲಿ

ಬೇಡವೆ ಬೇಡ ಪ್ಲಾಸ್ಟಿಕ್ ಮಲ್ಚಿಂಗ್
ಬೇಕೇ ಬೇಕು ಹಸಿರೆಸಲೆ ಮಲ್ಚಿಂಗ್
ಒಣ ಎಲೆ ಒಣಗರಿ ಚಿನ್ನದ ಮಲ್ಚಿಂಗ್
ಎರೆಯ ಹುಳುವಿನ ಅನ್ನದ ಮಲ್ಚಿಂಗ್

ಮಲ್ಚಿಂಗ್ ಮುಚ್ಚಿಕೆ ಮಲ್ಚಿಂಗ್
ಹೆಚ್ಚುಗಾರಿಕೆ ಮುಚ್ಚಿಕೆ ಮಲ್ಚಿಂಗ್
ಇದು ಮಾಯಾ ಇದು ಮಂತ್ರ
ಇದು ಮಲ್ಚಿಂಗ್ ಮಾಯಾ ಮಂತ್ರ

೩. ಬೆಂಕಿ ಬೊಮ್ಮರ ಪದ

ಮಣ್ಣಿನ ಬೀಜವ ಸಿಡಿಸುತ್ತೀವಿ
ಕಲ್ಲಿನ ಹೂವ ಹೊಸಕುತ್ತೀವಿ
ಸಿಕ್ಕಿದ್ದೆಲ್ಲವ ಸುಡುತ್ತೀವಿ
ಬೆಂಕಿಯ ಬೊಮ್ಮರು ನಾವು

ಹಸಿರು ಹುಲ್ಲನು ಉರಿಸುತ್ತೀವಿ
ತರಗೆಲೆಗಳನು ಉರುಬುತ್ತೀವಿ
ಬೇಲಿಗೆ ಬೆಂಕಿಯ ಇಡುತ್ತೀವಿ
ಕೈಯ್ಯಾರೆ ಜೇನನು ಕೊಲ್ಲುತ್ತೀವಿ

ಎರೆಯ ಹುಳುವಿನ ಕಣ್ಣಿಗೆ
ಬಣ್ಣದ ಚಿಟ್ಟೆಯ ರೆಕ್ಕೆಗೆ
ಸುಡುವ ಕೊಳ್ಳಿಯ ಸೋಕಿಸುತ್ತೀವಿ
ಬೂದಿಯ ಗಾಳಿಗೆ ತೂರುತ್ತೀವಿ

ಸ್ವಾಗೆ ಸೀಬಿ ಎಡೆದಿಬ್ಬಿಗಳ
ಜ್ವಾಳದ ನಾರು ಬೇರುಗಳ
ಕಬ್ಬಿನ ಒಣಗರಿ ಸಿಪ್ಪೆಗಳ
ಬೆಂಕಿಗೆ ನೂಕಿವಿ ನಗುತೀವಿ



ಅಕ್ಕ ಪಕ್ಕಕೆ ಜ್ವಾಲೆ ಹಬ್ಬಲಿ
ಹಸಿರು ನೆರಳನು ಕರ್ರಗೆ ಮಾಡಲಿ
ಆಳ ಆಳಕೆ ಬೆಂಕಿ ಹಿಂಗಲಿ
ಬೆಂಕಿಯ ಕಲ್ಚರ್ ಎಲ್ಲೆಡೆ ಹಬ್ಬಲಿ

ಮೂರ್ಖರು ನಾವು ಸುಟ್ಟುಕೊಂಡೆವು
ಸುಡಲಿನ್ನೇನು ಉಳಿದಿಲ್ಲ
ಸುಟ್ಟರೆ ಬೂದಿ ಸುಟ್ಟು ಕೆಟ್ಟೆವು
ಬೆಂಕಿಯ ಬೆಳಕು ನಮಗಿಲ್ಲ

೪ ಯಾಕೆ ಸುಡುತೀರಾ ಸುಮ್ಮನೆ

ಯಾಕೆ ಸುಡುತೀರಾ ಸುಮ್ಮನೆ
ಸುಖವಾ ಸುಮ್ಮಾನೆ
ತೆಂಗೀನ ಗರಿಯಾ
ತರಗು ಹಕ್ಕಿ ಮರಿಯಾ

ನೆಲದೊಳ ನೇಗಿಲು
ಎರೆಯಾ ಹುಳುಗಳು
ಹುಲ್ಲು ಬೇರಿನ ಕಸಗಳು
ನೀರಿನ ದಾರಿಗಳು

ಮಣ್ಣು ಮಣ್ಣೆಂದರೆ ,
ಮಣ್ಣಲ್ಲ ಕಣಣ್ಣ
ಮಣ್ಣೊಳಗೆ ಬಚ್ಚಿಟ್ಟ
ಅನ್ನದಗಳು ಅಗುಳು

ತೇವ ತಿನ್ನುವುದೋ ಬೆಂಕಿ
ಜೀವ ನುಂಗುವುದೋ ಬೆಂಕಿ
ಬೆಳಕಿನಾ ಹೂವಾ ಸುಡಬ್ಯಾಡಿರೋ

ಸುಟ್ಟಾರೆ ಸುಡುಗಾಡು
ಸುಡಬ್ಯಾಡಿರೋ
ನಿಮ್ಮ ಸುಡುವಾ ಮನಸನ್ನು
ಸೂಡಾಡಿರೋ

ಇಂಗ್ಲಿಷ್ ಎಂಬ ದೇವತೆ



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಕಮ್ಮಿಯೆಂದರೂ ಮೂರು ಖಂಡಗಳಿಂದ ಆಗಮಿಸಿದ ವಿವಿಧ ಶಿಸ್ತುಗಳ ಬುದ್ಧಿ ಜೀವಿಗಳ ಮಧ್ಯೆ, "ದಲಿತ ದೇವತೆಯಾಗಿ ಇಂಗ್ಲಿಷ್" ಎನ್ನುವುದು ಅಕ್ಟೋಬರ್ ೨೫ರಂದು ನನ್ನ ಮನೆಯಲ್ಲಿ ಕೆಲವು ಮುಖ್ಯ ಕಾರಣಗಳಿಗಾಗಿ ಹುಟ್ಟಿಕೊಂಡಿತು.

ಚರಿತ್ರೆಯ ಬೃಹತ್ ಜನಾಂದೋಲನವೊಂದರ ಆರಂಭ ಕಾಣಿಸಿಕೊಂಡಿದೆ.. ಬಿರುಗಾಳಿಯಂತೆ ಜಗತ್ತನ್ನು ಇಂಗ್ಲಿಷ್ ಎಂಬ ದಲಿತ ದೇವತೆ ವಶಕ್ಕೆ ತೆಗೆದುಕೊಂಡಿದ್ದಾಳೆ. ಮಾರ್ಚ್ ೩೧ರಂದು ಇಂಟರ್‌ನೆಟ್ ಜಾಲದಲ್ಲಿ ಪೀಪಲ್ಸ್ ಡೈರಿ ಒಂದು ಅಚ್ಚರಿಯ ಸಂಗತಿಯನ್ನು ವರದಿ ಮಾಡಿತ್ತು, "ಇಂಗ್ಲಿಷ್‌ನ ಮೋಹ (ಕ್ರೇಝ್) ವಿಚಿತ್ರವಾದುದು. ಚೀನಾದಲ್ಲಿ ೩೦೦ ಮಿಲಿಯ ಜನ ಇಂಗ್ಲಿಷ್ ಕಲಿಯುತ್ತಿದ್ದಾರೆ"

ಈ ಜನಾಂದೋಲನದೊಂದಿಗೆ ಜಪಾನ್ ಕೂಡಾ ಕೈಜೋಡಿಸಿದೆ. ಫ್ರೆಂಚರು, ಇಟಾಲಿಯನ್ನರು ಮತ್ತು ಗ್ರೀಕರು ತಮ್ಮ ಭಾಷಾ ದುರಹಂಕಾರವನ್ನು ಬಿಟ್ಟುಕೊಟ್ಟಿದ್ದಾರೆ. 'ಇಂಗ್ಲಿಷ್ ಕಲಿಯಿರಿ' ಎನ್ನುವ ಆಂದೋಲನ ಇಂಗ್ಲಿಷೇತರ ಖಂಡಗಳನ್ನು ಆವರಿಸಿಕೊಳ್ಳುತ್ತಿದೆ. ವೆಬ್ ಜಾಲದ ಈ ಯುಗದಲ್ಲಿ ಯಾರೂ ಸಹ ತಾನು ಉರ್‍ಝುಕ್ ಅಥವಾ ಖುರ್ಝುಕ್ ಎಂದು ತೋರಿಸಿಕೊಳ್ಳಲು ಇಷ್ಟಪಡುವುದಿಲ್ಲ. ಇವರೂ ಸಹ ಇಂಗ್ಲಿಷ್ ಕಲಿಯಲಾರಂಭಿಸಿದ್ದಾರೆ. ದಲಿತ ದೇವತೆಯಾಗಿರುವ ಇಂಗ್ಲಿಷ್ ಇಂದು ಜಾಗತಿಕ ಶಕ್ತಿಯಾಗಿ ನಿಂತಿದೆ.

೨೦೨೫ರ ವೇಳೆಗೆ ಜಗತ್ತಿನ ಭಾಷಾ ನಕಾಶೆಯು ಬಹಳಷ್ಟು ಬದಲಾಗಲಿದೆ: ಇಂಗ್ಲಿಷ್ ಮಾತನಾಡಲು ಬಾರದ ಕ್ಯಾಬ್ ಡ್ರೈವರ್‌ಗಳಿಗಿಂತ ಇಂಗ್ಲಿಷ್ ಬಲ್ಲ ಡ್ರೈವರ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತದೆ; ಎಟಿಎಂಗಳಲ್ಲಿ ಕಾಯುವ ಕಾವಲುಗಾರನಿಗೆ ಇಂಗ್ಲಿಷ್‌ನ ಜ್ಞಾನ ಅಗತ್ಯವಾಗುತ್ತದೆ; ಕಛೇರಿ ಸಹಾಯಕರು ಇಂಗ್ಲಿಷ್ ಕಲಿಯಲೇ ಬೇಕಾಗುತ್ತದೆ. ತಂತ್ರಜ್ಞಾನ ಎಷ್ಟು ಬದಲಾಗುತ್ತದೆಯೆಂದರೆ ಒಬ್ಬ ಸಾಮಾನ್ಯನೂ ಸಹ ಅಲ್ಪ ಮಟ್ಟಿನ ಇಂಗ್ಲಿಷ್ ತಿಳಿದಿರ ಬೇಕಾಗುತ್ತದೆ. ೨೧೦೦ ವರ್ಷಗಳ ವೇಳೆಗೆ ಇಂಗ್ಲಿಷೇತರ ಭಾಷೆಗಳು ಇವೊತ್ತಿನ ಸಂಸ್ಕೃತದಂತೆ ಆಗಿಬಿಡುತ್ತದೆ.

ಹಾಗಾದರೆ ಈ ದಲಿತ ದೇವತೆಯಾದ ಇಂಗ್ಲಿಷ್ ಸಂಘಟಿಸುವ ಜಗತ್ತಿನಲ್ಲಿ ದಲಿತ/ಆದಿವಾಸಿಗಳ ಮುಂದಿನ ತಲೆಮಾರುಗಳು ಜಾಗ ಪಡೆಯ ಬಲ್ಲವೇ? ಉತ್ತರ ಖಚಿತವಾಗಿ ನಕಾರಾತ್ಮಕವಾಗುತ್ತದೆ. ಇದಕ್ಕೆ ಪರಿಹಾರವೆಂದರೆ ಇ ದೇವತೆಯನ್ನು ಸಂಪೂರ್ಣವಾಗಿ ಒಪ್ಪಿ, ಆದಷ್ಟು ಬೇಗ ಇಂಗ್ಲಿಷ್ ಮಾತನಾಡುವುದು ಅಗತ್ಯವಾಗಿದೆ.

ಈ ಇಂಗ್ಲಿಷ್ ದೇವತೆ ನಿಜವಾಗಿಯೂ ವಿಮೋಚನಾ ದೇವತೆಯಾಗಿದ್ದಾಳೆ. ಈ ಆಂದೋಲನವು ಜಾತಿ ವ್ಯವಸ್ಥೆಯ ವಿರುದ್ಧವಿದ್ದು, ಸ್ಥಳೀಯ ಭಾಷೆಗಳನ್ನು ಮೆಟ್ಟಿ ನಿಲ್ಲುತ್ತದೆ. ಭಾರತೀಯ ಭಾಷೆಗಳೆಂದರೆ ಪೂರ್ವಾಗ್ರಹ ಪೀಡಿತ, ತಾರತಮ್ಯಗಳ ಮತ್ತು ದ್ವೇಷದ ಗೂಡುಗಳಾಗಿದ್ದು, ಅವುಗಳು ಅಭಿವ್ಯಕ್ತಿಯ ಸಂವಹನ ಮಾಧ್ಯಮವಾಗಿಲ್ಲ.

ಭಾರತದ ಪ್ರಥಮ ಶಿಕ್ಷಕಿ ಎನಿಸಿರುವ ಶ್ರೀಮತಿ ಸಾವಿತ್ರಿ ಬಾಯಿ ಫುಲೆ ಹೀಗೆಂದಿದ್ದಾರೆ, "ಇಂಗ್ಲಿಷ್ ಕಲಿಯುವುದರ ಮೂಲಕ ಜಾತೀಯತೆಯನ್ನು ಹಾಗೂ ಬ್ರಾಹ್ಮಣ್ಯದ ಬೋಧನೆಯನ್ನು ಸಂಪೂರ್ಣವಾಗಿ ತೊಡೆದುಬಿಡಬಹುದು".

ವಿಮೋಚನಾ ತತ್ತ್ವಜ್ಞರಾದ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮಾತುಗಳನ್ನು ಗಮನಿಸಿ, "ಇಂಗ್ಲಿಷ್ ಎನ್ನುವುದು ಸಿಂಹಿಣಿಯ ಹಾಲು". ಈ ಇಂಗ್ಲಿಷ್‌ನಿಂದಲೇ ಬಾಬಾ ಸಾಹೇಬ್ ಮತ್ತಷ್ಟು ಶಕ್ತಿಶಾಲಿಯಾಗಿ ಹೊರಹೊಮ್ಮಿದ್ದು. ಅಚಿದು ಕೆಲವೇ ಜನಕ್ಕೆ ಮಾತ್ರ ಇಂಗ್ಲಿಷ್ ತಿಳಿದಿದ್ದರೂ, ಅಂಬೇಡ್ಕರವರು ನಮಗೆ ರಕ್ಷಣಾ ಮಾರ್ಗವನ್ನು ಆ ಮೂಲಕ ಬೋಧಿಸಿದ್ದಾರೆ.

ಇಂಗ್ಲಿಷ್ ಬಲ್ಲ ದಲಿತ/ಆದಿವಾಸಿಗಳನ್ನು ಯಾರೂ ಅಗೌರವದಿಂದ ಕಾಣುಚುದಿಲ್ಲ. ಈ ಇಂಗ್ಲೀಷ್ ದೇವತೆಯಿಂದ ಶಕ್ತಿ ಪಡೆದಲ್ಲಿ ದಲಿತರೆಲ್ಲರು ತಮ್ಮ ಎಲ್ಲಾ ಜಾತಿ ನಿರ್ಧಾರಿತ ಕಸುಬನ್ನು ತೊರೆದು ಬಿಡಬಹುದು. ಜಾತಿಯೆಂದರೆ ಆ ಕಸುಬೇ ಆಗಿದೆ. ಅದಿಲ್ಲದಿದ್ದರೆ ಜಾತಿ ಐಡೆಂಟಿಟಿ ಇರುವುದಿಲ್ಲ. ಜಾತಿ ವ್ಯವಸ್ಥೆಯೆಂದರೆ ಈ ಕಸುಬೇ ಕೊಂಡಿಯಾಗಿ ಬದುಕನ್ನು ಜಾತೀಯವಾಗಿಸಿಬಿಡುತ್ತದೆ. ಇದರಿಂದ ಮುಕ್ತಿ ಪಡೆಯುವುದೆಂದರೆ ದಲಿತರ ವಿಮೋಚನೆ ಆದಂತೆಯೇ ಆಗುತ್ತದೆ. ಅಂದು ನನ್ನ ಮನೆಯಲ್ಲಿ ನೆರೆದಿದ್ದ ಬುದ್ಧಿಜೀವಿಗಳೆಲ್ಲರೂ ನಿರ್ಧರಿಸಿದ್ದೇನಂದರೆ:

v/s ಎಲ್ಲಾ ಹುಟ್ಟಿದ ನವಜಾತ ದಲಿತ/ಆದಿವಾಸಿ ಮಕ್ಕಳು ತಮ್ಮ ಪೋಷಕರಿಂದ A B C...

ಶಬ್ದಗಳನ್ನು ಆಲಿಸಬೇಕು

v/s ಈ ಎಲ್ಲಾ ನವಜಾತ ದಲಿತ/ಆದಿವಾಸಿ ಮಕ್ಕಳು ಮೊದಲು ನೋಡುವುದೇ ಇಂಗ್ಲಿಷ್

ದೇವತೆಯ ಚಿತ್ರಪಟವನ್ನು, ಇದನ್ನು ದಲಿತ ಕಲಾಕಾರ ಶಾಂತ್ ಸ್ವರೂಪ್ ಬೌದ್ಧ್ ತಯಾರಿಸಲಿದ್ದಾರೆ.

v/s ಎಲ್ಲಾ ದಲಿತ/ಆದಿವಾಸಿ ಜನ ತಮ್ಮದೇ ಇಂಗ್ಲೀಷ್ ದೇವತೆಯ ಭಗವತೀ ಮಂತ್ರವನ್ನು ಲಾರ್ಡ್ ಮೆಕಾಲೆ ಹುಟ್ಟಿದ ಅಕ್ಟೋಬರ್ ೨೫ ರಂದು ಪಡೆಯುತ್ತಾರೆ.

v/s ಎಲ್ಲಾ ದಲಿತ/ಆದಿವಾಸಿಗಲ ಪೂರ್ಣ ವಿಮೋಚನೆಗಾಗಿ ಪೋಷಕರು ಯಾವುದೇ

ರೀತಿಯಿಂದಲಾದರೂ ಸರಿ ಇಂಗ್ಲಿಷ್ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ದೊರಕಿಸಿಕೊಡುವುದು.

ಅಗತ್ಯ ಬಿದ್ದಲ್ಲಿ ಕೆಲವು ತಾಸು ಹೆಚ್ಚಿಗೆ ದುಡಿದು, ಸಾಲ ಮಾಡಿ, ಆಭರಣ ಮಾರಿ, ಆಸ್ತಿಯನ್ನು

v/s ಗಿರವಿಗಿಟ್ಟು... ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ದೊರಕಿಸಲೇ ಬೇಕಾಗುತ್ತದೆ.

ಆಧುನಿಕ ಭಾರತದ ಪಿತಾಮಹನೆನಿಸಿದ ಲಾರ್ಡ್ ಮೆಕಾಲೆಯ ೨೦೬ ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅಂದರೆ ಅಕ್ಟೋಬರ್ ೨೫ ರಂದೇ ಇಂಗ್ಲಿಷನ್ನು ದಲಿತ ದೇವತೆಯಾಗಿ ಸ್ವೀಕರಿಸಬಾರದೇಕೆ? ಆ ದಿನಕ್ಕಿಂತಲೂ ಉತ್ತಮವಾದ ದಿನ ಬೇರಾವುದಿದೆ? ೧೮೫೪ದಲ್ಲಿ ಜಾರಿಯಾದ ಮೆಕಾಲೆಯ ಹುಟ್ಟು ಹಬ್ಬದ ಆಚರಣೆಯನ್ನು ದಲಿತ ಲೇಖಕರಾದ ನೇಮಿಶ್‌ರೈನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇಂಗ್ಲಿಷ್ ದೇವತೆಗೆ ಚಿರಾಯುವಾಗಲಿ ಎಂಬ ಘೋಷಣೆಗಳೊಂದಿಗೆ, ಆ ದೇವತೆಯ ಚಿತ್ರಪಟವನ್ನು ಅನಾವರನಗೊಳಿಸಿದ್ದು ಲಿಟಲ್ ಮ್ಯಾಗಜಿನ್ ಸಂಪಾದಕರಾದ ಅಮರ್‌ದೇವ್ ಸೇನ್.

ಚರಿತ್ರೆಯ ಬೃಹತ್ ಜನಾಂದೋಲನವೊಂದರ ಆರಂಭ ಕಾಣಿಸಿ ಕೊಂಡಿದೆ.. ಬಿರುಗಾಳಿಯಂತೆ ಜಗತ್ತನ್ನು ಇಂಗ್ಲಿಷ್ ಎಂಬ ದಲಿತ ದೇವತೆ ವಶಕ್ಕೆ ತೆಗೆದುಕೊಂಡಿದ್ದಾಳೆ. ಮಾರ್ಚ್ ೩೧ರಂದು ಇಂಟರ್‌ನೆಟ್ ಜಾಲದಲ್ಲಿ ಪೀಪಲ್ಸ್ ಡೈರಿ ಒಂದು ಅಚ್ಚರಿಯ ಸಂಗತಿಯನ್ನು ವರದಿ ಮಾಡಿತ್ತು, 'ಇಂಗ್ಲಿಷ್‌ನ ಮೋಹ (ಕ್ರೇಝ್) ವಿಚಿತ್ರವಾದುದು. ಚೀನಾದಲ್ಲಿ ೩೦೦ ಮಿಲಿಯ ಜನ ಇಂಗ್ಲಿಷ್ ಕಲಿಯುತ್ತಿದ್ದಾರೆ' ಈ ಜನಾಂದೋಲನದೊಂದಿಗೆ ಜಪಾನ್ ಕೂಡಾ ಕೈಜೋಡಿಸಿದೆ. ಫ್ರೆಂಚರು, ಇಟಾಲಿಯನ್ನರು ಮತ್ತು ಗ್ರೀಕರು ತಮ್ಮ ಭಾಷಾ ದುರಹಂಕಾರವನ್ನು ಬಿಟ್ಟುಕೊಟ್ಟಿದ್ದಾರೆ. 'ಇಂಗ್ಲಿಷ್ ಕಲಿಯಿರಿ' ಎನ್ನುವ ಆಂದೋಲನ ಇಂಗ್ಲಿಷೇತರ ಖಂಡಗಳನ್ನು ಆವರಿಸಿಕೊಳ್ಳುತ್ತಿದೆ. ಎಲ್ಲರೂ ಇಂಗ್ಲಿಷ್ ಕಲಿಯಲಾರಂಭಿಸಿದ್ದಾರೆ. ದಲಿತ ದೇವತೆಯಾಗಿರುವ ಇಂಗ್ಲಿಷ್ ಇಂದು ಜಾಗತಿಕ ಶಕ್ತಿಯಾಗಿ ನಿಂತಿದೆ.

ಅನು: ಡೊಮಿನಿಕ್. ಡಿ

ಭಾರತದ ನಾಚಿಕೆ ಗೇಡಿತನದಲ್ಲಿ ಹಿಂದ...

ಭಾರತದ ನಾಚಿಕೆಗೇಡಿತನ

ಪುರೋಹಿತಶಾಹಿ ಅಥವಾ ಬ್ರಾಹ್ಮಣರು ಮೊಟ್ಟ ಮೊದಲಿಗರಾಗಿ ನಿಲ್ಲುತ್ತಾರೆ. ಆಧ್ಯಾತ್ಮಿಕವಾಗಿ ಬೆತ್ತಲೆಯಾಗಿರುವುದಲ್ಲದೆ, ವಿಧಿ-ಆಚರಣೆಯಲ್ಲೂ ನಗ್ನರಾಗಿರುವ ಈ ಬ್ರಾಹ್ಮಣರನ್ನು ಅತ್ಯಂತ ಅಶುದ್ಧ-ಮೈಲಿಗೆಯ ವರ್ಗವೆಂದು ಘೋಷಿಸಲೇ ಬೇಕಾಗುತ್ತದೆ. ಅವರ ನೆರಳೂ ಸಹ ಅಷ್ಟೇ ಮೈಲಿಗೆಯದ್ದು.

ಭಾರತದ ಕೆಲವು ಭಾಗಗಳಲ್ಲಿ ಅಸ್ಪೃಶ್ಯರು ಅಸ್ಪೃಶ್ಯೇತರರ ವಾಸ ಸ್ಥಳವನ್ನು ಪ್ರವೇಶಿಸುವಂತಿಲ್ಲ. ಕಾನೂನನ್ನು ದ್ವೇಷಿಸುವ ಭೂಮಾಲೀಕ ವರ್ಗ ಎರಡನೆಯ ಸ್ಥಾನದಲ್ಲಿ ನಿಲ್ಲುತ್ತಾರೆ. ಅನೇಕ ಸಲ ಇವರ್‍ಯಾರು ಕೂಲಿಕಾರ್ಮಿಕರಿಗೆ ಕನಿಷ್ಠವೇತನವನ್ನು ಸಹ ನೀಡುವುದಿಲ್ಲ. ಕೆಲವೊಮ್ಮೆ ಈ ಕಾರ್ಮಿಕರ ಮಕ್ಕಳು ಬಿಟ್ಟಿಚಾಕರಿಯನ್ನು ಮಾಡಬೇಕಾಗುತ್ತದೆ.

ಮಲೇರಿಯಾ ಮೂರನೇ ಸ್ಥಾನದಲ್ಲಿ ನಿಲ್ಲುತ್ತದೆ. ೧೯೫೩ರಲ್ಲಿ ಆರಂಭವಾದ ರಾಷ್ಟ್ರೀಯ ಮಲೇರಿಯಾ ನಿಯಂತ್ರಣಾ ಕಾರ್ಯಕ್ರಮದಿಂದಾಗಿ ಮಿಲಿಯಗಟ್ಟಲೆ ಜನ ಆ ಕಾಯಿಲೆಯಿಂದ ಬದುಕುಳಿಯುವಂತಾಯಿತು. ಚೇನಾದಲ್ಲಿ ಆರೋಗ್ಯಕ್ಕಾಗಿ ಖರ್ಚಾಗುವ ೧/೪ರಷ್ಟನ್ನು ೧೯೭೭ ರಿಂದಲೂ ಈ ಮಲೇರಿಯಾ ನಿಯಂತ್ರಣಕ್ಕಾಗಿ ವ್ಯಯಿಸಲಾಗುತ್ತಿದೆ. ಆದರೂ ಮಲೇರಿಯಾ ದೇಶವನ್ನು ಇನ್ನೂ ಕಾಡುತ್ತಿದೆ.

ಮಕ್ಕಳ ವೇಶ್ಯಾವಾಟಿಕೆ ಭಾರತದ ನಾಚಿಕೆಗೇಡಿತನದ ಶ್ರೇಣಿಯಲ್ಲಿ ನಾಲ್ಕನೇ ಸ್ಥಾನವನ್ನು ಅಲಂಕರಿಸುತ್ತದೆ. ವಿಶ್ವ ಸಂಸ್ಥೆಯ ಅಧ್ಯಯನದ ಪ್ರಕಾರ ಮಕ್ಕಳ ವೇಶ್ಯಾವಾಟಿಕೆಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ವೇಶ್ಯಾವಾಟಿಕೆಯ ದೊರೆಗಳು ಅಲ್ಲೇನೂ(ಮಕ್ಕಳು ಮತ್ತು ಮಹಿಳೆಯರ ನಡುವೆ) ತಾರತಮ್ಯ ಅನುಸರಿಸುವುದೇ ಪುಣ್ಯದ ಕೆಲಸವೆಂದು ಭಾವಿಸಿರಬೇಕು.

ಭಾರತೀಯ ಸಮಾಜದಲ್ಲಿ ಪ್ರತ್ಯೇಕತೆಯನ್ನು ಹರಡುತ್ತಿರುವ ಮೆರಿಟ್ ಪ್ರಶ್ನೆಯನ್ನು ಎತ್ತಿ ಹಿಡಿದಿರುವ ಖಾಸಗಿ ವಲಯ ಐದನೇ ಸ್ಥಾನದಲ್ಲಿ ನಿಲ್ಲುತ್ತದೆ. ಹೀಗಿರುವಲ್ಲಿ ಡಾ.ಜೆ.ಜೆ.ಇರಾನಿಯವರ ವರದಿ ಭಾರತೀಯ ಕೈಗಾರಿಕೋದ್ಯಮವನ್ನು ಆ ನಾಚಿಕೆಗೇಡಿತನದಿಂದ ಸ್ವಲ್ಪ ಮಟ್ಟಿಗೆ ಉಳಿಸಿದೆ. ಕಾರಣ ಆ ವರದಿ ತನ್ನ ಶ್ರಮಶಕ್ತಿ ಮತ್ತು ವಾಣಿಜ್ಯ ವಹಿವಾಟಿನಲ್ಲಿ ದಲಿತ/ಆದಿವಾಸಿಗಳನ್ನು ಒಳಗೊಳ್ಳುವ ಭರವಸೆಯನ್ನು ನೀಡಿದೆ. ಈ ಭರವಸೆ ಎಷ್ಟು ನಿಜವಾದುದು ಎಂಬುದು ಇನ್ನೊಂದು ವರ್ಷದಲ್ಲಿ ತಿಳಿಯುತ್ತದೆ.

ಭಾರತೀಯ ಉದ್ಯಮವೇನೂ ಪ್ರಗತಿಪರ ನಿಲುವನ್ನು ಎಂದೂ ತಾಳಿಲ್ಲ. ಆದರು ಅದರ ಪ್ರಕಾರ, "ಖಾಸಗಿ ವಲಯ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿದೆ."

ನನ್ನ ದಲಿತ ಸ್ನೇಹಿತರೊಡನೆ ಭಾರತೀಯ ಮಾಧ್ಯಮಗಳ ಬಗ್ಗೆ ಮಾತನಾಡುತ್ತಿರಬೇಕಾದರೆ, ಅವರೆಲ್ಲಾ ಈ ಮಾಧ್ಯಮ ಜಗತ್ತಿಗೆ ಮೊದಲ ರ್‍ಯಾಂಕ್ ನೀಡಿದರು. ಅಂದರೆ ಪುರೋಹಿತಶಾಹಿ ಎರಡನೇ ಸ್ಥಾನಕ್ಕಿಳಿದು, ಮಾಧ್ಯಮವನ್ನು ಮೊದಲ ಸ್ಥಾನಕ್ಕೆ ಏರಿಸಿದರು. ಈ ನಾಚಿಕೆಗೇಡಿತನದ ಶ್ರೇಣಿಯಲ್ಲಿ ಮಾಧ್ಯಮವನ್ನು ನಿಲ್ಲಿಸಲು

"ಅಭಿಪ್ರಾಯ ಸಂಘಟಕ ಪೋಲೀಸ್" ಎಂದು ಮಾನ್ಯತೆ ಪಡೆದಿರುವ ಈ ಮಾಧ್ಯಮವು 'ಸಾರ್ವಜನಿಕ ಭಾವನೆ' ಯನ್ನು ಅಪಹರಿಸುವಲ್ಲಿ ಪ್ರಸಿದ್ಧವಾದುದು. ಈ ಶಕ್ತಿಯಿಂದಾಗೆ ಮಾಧ್ಯಮವು ಸರ್ಕಾರದಿಂದ ಹಲವಾರು ಸಬ್ಸಿಡಿಗಳನ್ನು ಪಡೆಯುತ್ತಿದೆ. ಇವೆಲ್ಲದ್ದರ ನಡುವೆಯೂ ಜಾತಿ ತಾರತಮ್ಯದಿಂದ ಮಾಧ್ಯಮವು ನರಳುತ್ತಿದೆ. ಜನಾಂಗೀಯತೆಯಿಂದ ಛಿದ್ರಗೊಂಡಿರುವ ಅಮೆರಿಕಾದ ಮಾಧ್ಯಮವೂ ಸಹ ಇಂಥದ್ದೇ ಸಮಸ್ಯೆಯನ್ನು ಎದುರುಗೊಂಡಿತ್ತು. ಆಗ ಅಮೆರಿಕಾದ ಸಮಾಜದಲ್ಲಿದ್ದ ಪ್ರತ್ಯೇಕತೆಯನ್ನು ಹೋಗಲಾಡಿಸುವ ವಿಷಯವು ೭೦ರ ದಶಕದಲ್ಲಿ ನಡೆದ ನಾಗರಿಕ ಹಕ್ಕುಗಳ ಚಳುವಳಿಗೆ ಕಾರಣವಾಯಿತು. ಆ ಸಂದರ್ಭದಲ್ಲಿ ಅಮೆರಿಕನ್ ಸೊಸೈಟಿ ಫಾರ್ ನ್ಯೂಸ್ ಪೇಪರ್ ಎಡಿಟರ್ಸ್ ೧೯೭೫ರಲ್ಲಿ ಕೈಗೊಂಡ ಮೊದಲ ಕಾರ್ಯವೆಂದರೆ ಜನಾಂಗೀಯವಾಗಿ ಪ್ರತಿನಿಧಿಗೊಂಡಂತಹ ಪತ್ರಕರ್ತರ ಅಂಕಿ-ಅಂಶವನ್ನು ಕಲೆಹಾಕಿದ್ದು. ಆಗ ತಿಳಿದ ಸಂಗತಿ ಮಾತ್ರ ಭಯಾನಕವಾಗಿತ್ತು. ದೃಢಪಟ್ಟ ಸಂಗತಿಯೆಂದರೆ ಮುಖ್ಯವಾಹಿನಿಯ ದಿನ ಪತ್ರಿಕೆಗಳು/ಟಿವಿ ಚಾನೆಲ್‌ಗಳಲ್ಲಿ ಉದ್ಯೋಗ ಪಡೆದ ಒಟ್ಟು ಪತ್ರಕರ್ತರಲ್ಲಿ ಕಪ್ಪುಜನ/ಸ್ಥಳೀಯ ಅಮೆರಿಕನ್ನರು/ಹಿಸ್ಪಾನಿಯನ್ನರ ಸಂಖ್ಯೆ ಕೇವಲ ಶೇ. ೩.೯೫.

ಎರಡು ಮುಖ್ಯ ಕಾರಣಗಳಿವೆ: ಒಂದು, ಲಾಭದ ದಂಧೆಯಲ್ಲಿ ತೊಡಗಿರುವ ಇತರ ಉದ್ಯಮದಂತೆ ಮಾಧ್ಯಮವೂ ಸಹ ಒಂದು ಲಾಭದಾಯಕ ಉದ್ಯಮವಾಗಿದೆ. ಎರಡು, ಉಳಿದ ನಾಲ್ಕು ನಾಚಿಕೆಗೇಡಿತನದ ಸಂಗತಿಗಳಂತೆ ಭಾರತೀಯ ಮಾಧ್ಯಮದವರು ಹೊತ್ತಿರುವ ನೈತಿಕತೆ ಎರಡನೇ ಎಲಿಬೇತ್ ರಾಣಿ ಕೀರಿಟವನ್ನು ಧರಿಸಿದಕ್ಕಿಂತಲೂ ಹೆಚ್ಚಿನದ್ದು.

"ಅಭಿಪ್ರಾಯ ಸಂಘಟಕ ಪೋಲೀಸ್" ಎಂದು ಮಾನ್ಯತೆ ಪಡೆದಿರುವ ಈ ಮಾಧ್ಯಮವು 'ಸಾರ್ವಜನಿಕ ಭಾವನೆ'ಯನ್ನು ಅಪಹರಿಸುವಲ್ಲಿ ಪ್ರಸಿದ್ಧವಾದುದು. ಈ ಶಕ್ತಿಯಿಂದಾಗೆ ಮಾಧ್ಯಮವು ಸರ್ಕಾರದಿಂದ ಹಲವಾರು ಸಬ್ಸಿಡಿಗಳನ್ನು ಪಡೆಯುತ್ತಿದೆ. ಇವೆಲ್ಲದ್ದರ ನಡುವೆಯೂ ಜಾತಿ ತಾರತಮ್ಯದಿಂದ ಮಾಧ್ಯಮವು ನರಳುತ್ತಿದೆ.

ಜನಾಂಗೀಯತೆಯಿಂದ ಛಿದ್ರಗೊಂಡಿರುವ ಅಮೆರಿಕಾದ ಮಾಧ್ಯಮವೂ ಸಹ ಇಂಥದ್ದೇ ಸಮಸ್ಯೆಯನ್ನು ಎದುರುಗೊಂಡಿತ್ತು. ಆಗ ಅಮೆರಿಕಾದ ಸಮಾಜದಲ್ಲಿದ್ದ ಪ್ರತ್ಯೇಕತೆಯನ್ನು ಹೋಗಲಾಡಿಸುವ ವಿಷಯವು ೭೦ರ ದಶಕದಲ್ಲಿ ನಡೆದ ನಾಗರಿಕ ಹಕ್ಕುಗಳ ಚಳುವಳಿಗೆ ಕಾರಣವಾಯಿತು. ಆ ಸಂದರ್ಭದಲ್ಲಿ ಎ.ಎಸ್.ಎನ್.ಇ (ಅಮೆರಿಕನ್ ಸೊಸೈಟಿ ಫಾರ್ ನ್ಯೂಸ್‌ಪೇಪರ್ ಎಡಿಟರ್ಸ್) ೧೯೭೫ರಲ್ಲಿ ಕೈಗೊಂಡ ಮೊದಲ ಕಾರ್ಯವೆಂದರೆ ಜನಾಂಗೀಯವಾಗಿ ಪ್ರತಿನಿಧಿಗೊಂಡಂತಹ ಪತ್ರಕರ್ತರ ಅಂಕಿ-ಅಂಶವನ್ನು ಕಲೆಹಾಕಿದ್ದು. ಆಗ ತಿಳಿದ ಸಂಗತಿ ಮಾತ್ರ ಭಯಾನಕವಾಗಿತ್ತು. ದೃಢಪಟ್ಟ ಸಂಗತಿಯೆಂದರೆ ಮುಖ್ಯವಾಹಿನಿಯ ದಿನ ಪತ್ರಿಕೆಗಳು/ಟಿವಿ ಚಾನೆಲ್‌ಗಳಲ್ಲಿ ಉದ್ಯೋಗ ಪಡೆದ ಒಟ್ಟು ಪತ್ರಕರ್ತರಲ್ಲಿ ಕಪ್ಪುಜನ/ಸ್ಥಳೀಯ ಅಮೆರಿಕನ್ನರು/ಹಿಸ್ಪಾನಿಯನ್ನರ ಸಂಖ್ಯೆ ಕೇವಲ ಶೇ.೩.೯೫.

೧೯೭೮ರಲ್ಲಿ ಎ.ಎಸ್.ಎನ್.ಇಯು ಕಪ್ಪುಜನ/ಇತರೆ ಜನಾಂಗೀಯ ಪಂಗಡಗಳಿಂದ ಪತ್ರಕರ್ತರನ್ನು ಒಳಗೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡುವ ಮೂಲಕ "ವೈವಿಧ್ಯತೆ ಮತ್ತು ೨೦೦೦ ವರ್ಷದ ಧ್ಯೇಯ"ಕ್ಕಾಗಿ ಗಟ್ಟಿ ನಿರ್ಧಾರ ಕೈಗೊಂಡಿತು. ಇಂದು ಪತ್ರಕರ್ತರ ಸಮೂಹದಲ್ಲಿ ಶೇ.೧೪ರಷ್ಟು ಕಪ್ಪುಜನ/ಇತರೆ ಜನಾಂಗೀಯ ಅಲ್ಪ ಸಂಖ್ಯಾತರು ಇದ್ದಾರೆ. ಇಂತಹ ಗುಂಪುಗಳಿಂದ ಪತ್ರಕರ್ತರನ್ನು ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಅಮೆರಿಕಾದ ದಿನ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು 'ಸಕಾರಾತ್ಮಕ ಕ್ರಿಯೆ/ವೈವಿಧ್ಯತೆಯ ಮಂಡಲಿ'ಯನ್ನು ಸ್ವೀಕರಿಸಿದೆ.

ಹಾಗಾದರೆ, ಭಾರತದಲ್ಲಿ ಏನಾಗಿದೆ? 'ಒಬ್ಬ ದಲಿತ ಪತ್ರಕರ್ತನಿಗಾಗಿ ಶೋಧ' ನವೆಂಬರ್ ೧೬, ೧೯೯೬) K°ÀÄ¨S ಸಂಶೋಧನಾ ಲೇಖನವನ್ನು ಈಗ ದಂತಕತೆಯಾಗಿರುವ ಶ್ರೀ ಬಿ.ಎನ್. ಉನ್ನಿಯಲ್ ಪ್ರಕಟಿಸಿದ್ದರು. ದೆಹಲಿಯಲ್ಲಿರುವ ಎಲ್ಲ ದಿನಪತ್ರಿಕೆಗಳನ್ನು ಹುಡುಕಿದರು ಒಬ್ಬ ದಲಿತ ಪತ್ರಕರ್ತನೂ ಅಲ್ಲಿ ಸಿಗಲಿಲ್ಲ ಎಂಬ ಸಂಗತಿ ಆ ಲೇಖನ ತಿಳಿಸಿತು.

ನವೆಂಬರ್ ೧೬, ೧೯೯೬ರಿಂದ ಇಲ್ಲಿಯವರೆಗೆ ಏನಾದರೂ ಬದಲಾವಣೆ ಅಲ್ಲಿ ಕಂಡುಬಂದಿದೆಯಾ? ಖಚಿತವಾಗಿಯೂ ಹೌದು. ಏಪ್ರಿಲ್ ೪, ೧೯೯೯ರಲ್ಲಿ ಇದೇ ದಿನ ಪತ್ರಿಕೆಯಿಂದ (ದಿ ಪಾಯಿನಿಯರ್) ಮೊದಲ ದಲಿತ ಕಾಲಂ ಆರಂಭವಾಯಿತು. ಹೀಗೆ ಹಲವಾರು ದಲಿತ ಪತ್ರಕರ್ತರು ನವೆಂಬರ್ ೧೬, ೧೯೯೬ರಲ್ಲಿ ಬೇರೆಡೆ ಇದ್ದಿರಬಹುದು. ಇಂದು ಆ ಸಂಖ್ಯೆ ಹೆಚ್ಚಾಗಿರಬಹುದು. ಅಂದರೆ ದಲಿತ ಪತ್ರಕರ್ತರು ತಮ್ಮ ನೈಜ ಅಸ್ತಿತ್ವ ಮರೆಮಾಚಿ ಪತ್ರಕರ್ತರಾಗಿ ಉಳಿದಿದ್ದಾರೆಂದರೆ

ಭಾರತೀಯ ಮಾಧ್ಯಮವು ಇನ್ನೂ ಜಾತಿಯತೆ ಯಿಂದಲೇ ಕೂಡಿದೆ.

ಈ ಭಾರತೀಯ ಸಂಪಾದಕರು/ನ್ಯೂಸ್ ಚಾನೆಲ್ ಲಾಭಕೋರರು ತಿಳಿಯ ಬೇಕಾಗಿರುವ ಸಂಗತಿಯೆಂದರೆ ನಾಚಿಕೆಗೇಡಿತನದಿಂದ ಕೂಡಿರುವ ಈ ವಿದ್ಯಮಾನ ಬಹಳಷ್ಟು ತಮಾಷೆ/ಅಣಕವನ್ನು ಹುಟ್ಟುಹಾಕುತ್ತಿರುವುದು.

ಕೆಲವೊಮ್ಮೆ ಕಲ್ಪನಾತ್ಮಕವಾದುದು ನಿಜವಾಗಲು ಬಹುದು ಅಥವಾ ತದ್ವಿರುದ್ಧವೂ ಆಗಿ ನಿಲ್ಲಬಹುದು. ಹಾಗಾದರೆ, ಈ ಕಲ್ಪನಾತ್ಮಕ ನಿರೂಪಣೆ ವಾಸ್ತವವೇ? ನೀವೆ ನಿರ್ಧರಿಸಿ.

"ಹಾಗೇ ಲೈನಲ್ಲಿ ಇರಿ... ನಾನು ನಿಮ್ಮ ಪ್ರಶ್ನಾವಳಿಯನ್ನು ಪರಿಶೀಲಿಸಿದ್ದೇನೆ" ಎಂದು ಇಂಗ್ಲಿಷ್ ಪತ್ರಿಕೆಯ ನುರಿತ ಸಂಪಾದಕ ಮಧ್ಯೆ ಪ್ರವೇಶಿಸಿದ. "ದೇವರಾಣೆ... ಮಾಧ್ಯಮವನ್ನು ಜಾತಿಯಾಧಾರದ ಮೇಲೆ ವಿಂಗಡಿಸಬೇಡ" ಎಂದು ದುಃಖಿತನಾದ ಸಂಪಾದಕ ವಾದಿಸಿದ.

"ಹಾಗಾದರೆ ಸಾಮಾಜಿಕ ವಲಯವನ್ನು ಕುರಿತಂತೆ ವರದಿ ತಯಾರಿಸುವ ನನ್ನ ವರದಿಗಾರ ಒಬ್ಬ ಉಪಸಂಪಾದಕ ಶರ್ಮಾ, ಭಟ್ಟಾಚಾರ್ಯ, ಪುಟಪರಿಶೀಲಕನಾದ ಪಾಂಡೆ, ಬ್ಯೂರೊ ಮುಖ್ಯಸ್ಥ ಪಾಠಕ್, ಪುಟ ವಿನ್ಯಾಸಕನಾದ ಮಿಶ್ರ, ಫೋಟೋಗ್ರಾಫರ್ ದ್ವಿವೇದಿ, ಹಿರಿಯ ಉಪಸಂಪಾದಕನಾದ ಜೋಶಿ, ವಿತರಕನಾದ ಚತುರ್ವೇದಿ, ಮಾರುಕಟ್ಟೆ ನಿರ್ವಾಹಕ ದೇಶಪಾಂಡೆ, ಹಾಗೂ ನಾನೊಬ್ಬ ಜ್ಹಾ... ಎಂದಿಟ್ಟುಕೊಳ್ಳೋಣ... ಇದರಿಂದ ಸಮಸ್ಯೆಯಾದರೂ ಏನು" ಎಂದು ಬಡಬಡಾಯಿಸಿದ ಆ ಸಂಪಾದಕ. 'ನನ್ನ ಕ್ಷಮಿಸು... ನೀನೊಬ್ಬ ಜಾತಿವಾದಿ, ಪಕ್ಷಪಾತಿ ಮತ್ತು ನಿನ್ನ ವಿಚಾರಣೆ ವಿಧ್ವಂಸಕವಾದುದು" ಎಂದು ಅಂಗಲಾಚಿದ ಆ ಸಂಪಾದಕ, "ನಮಗೆ ಸೇವೆ ಸಲ್ಲಿಸುತ್ತಿರುವವರ ಜಾತಿ ಯಾವುದೆಂದು ನಿನಗೆ ಗೊತ್ತಾ?" ಎಂದು ಮತ್ತೆ ವಿವೇಚಿಸಿದ ಸಂಪಾದಕ. "ನಿನಗೇನಾದರೂ ಈ ನ್ಯೂಸ್ ಪೇಪರ್ ಬ್ಯುಸಿನೆಸ್ ಗೊತ್ತಾ?" ಎಂದು ಕೋಪಗೊಂಡ ಸಂಪಾದಕ.

"ದಿನ ಪತ್ರಿಕೆ ಎನ್ನುವುದೊಂದು ಪದಾರ್ಥ. ಅದೊಂದು ಈಜು ಉಡುಗೆ. ನಿನ್ನಂಥ ಸಾಮಾನ್ಯರು ಆ ಉಡುಗೆಯ ಬರಿ ವಿನ್ಯಾಸಕ ಮತ್ತು ಅದನ್ನು ಪ್ರಾಯೋಜಿಸಿದವರನ್ನಷ್ಟೆ ನೋಡುತ್ತಾರೆ. ಹತ್ತಿಬೆಳೆದ ರೈತನನ್ನು ಅಲ್ಲ. ಆ ಹತ್ತಿಯನ್ನು ಬಟ್ಟೆಯಾಗಿಸಿದ ಸಾಮಾನ್ಯ ಕೈಗಳನ್ನಾಗಲಿ, ಆ ಬಟ್ಟೆಯನ್ನು ಈಜು ಉಡುಗೆಯನ್ನಾಗಿ ಮಾಡಿದ ಕಾರ್ಮಿಕನನ್ನು ನೋಡುವುದಿಲ್ಲ" ಎಂದು ವಿವರಿಸಲಾರಂಭಿಸಿದ ಆ ಸಂಪಾದಕ. "ದಯವಿಟ್ಟು ನಮ್ಮ ಪತ್ರಕರ್ತ ಬಳಗವನ್ನು ಹೀಯಾಳಿಸಬೇಡ. ದಲಿತರು/ಆದಿವಾಸಿಗಳನ್ನು ಮತ ಪೆಟ್ಟಿಗೆಯನ್ನಾಗಿ ಮಾಡಿಕೊಂಡಿರುವ ಆ ದುರಾಸೆಯ ರಾಜಕಾರಣಿಗಳಷ್ಟೆ 'ಸಕಾರಾತ್ಮಕ ಕ್ರಿಯೆ' ಯನ್ನು ಆಚರಣೆಗೆ ತರುತ್ತಾರೆ. ದಲಿತರು/ಆದಿವಾಸಿಗಳಿಗಾಗಿ ಖಾಸಗಿ ವಲಯ ಸಕಾರಾತ್ಮಕ ಕ್ರಿಯೆಯನ್ನು ಜಾರಿ ಮಾಡ ಬಯಸುತ್ತದೆ, ಕಾರಣ ಅವರೆಲ್ಲಾ ಗ್ರಾಹಕ ಬ್ಯಾಂಕ್ ಆಗಿದ್ದಾರೆ" ಎಂದು ತನ್ನ ವಿಶ್ಲೇಷಣಾ ನೈಪುಣ್ಯತೆಯನ್ನು ನನ್ನ ಮುಂದಿಟ್ಟ ಆ ಸಂಪಾದಕ. ಆತ ಮತ್ತೂ ಮುಂದುವರೆದು, "ಸಂಪಾದಕರಾದ ನಾವು ಪ್ರಜ್ಞೆಯನ್ನು ತೀಡುತ್ತಾ, ರಾಷ್ಟ್ರವನ್ನು ಕಟ್ಟುವವರಾಗಿದ್ದೇವೆ. ನಮಗೆ ಪತ್ರಿಕೆಗಳನ್ನು ಪ್ಯಾಕ್ ಮಾಡುವವ, ಸಂಪಾದಕನಷ್ಟೇ ಮುಖ್ಯ... ಆದ್ದರಿಂದ ನ್ಯೂಸ್‌ರೂಂಗಳಲ್ಲಿ ಜಾತಿಯನ್ನು ದಯವಿಟ್ಟು ತರಬೇಡ" ಎಂದು ದೈನತೆಯಿಂದ ವಿನಂತಿಸಿಕೊಂಡು ತನ್ನ ಅಧಿಕಾರದ ಮುದ್ರೆಯನ್ನು ಒತ್ತಿದ.

ಒಬ್ಬ ಉಪಸಂಪಾದಕ ಶರ್ಮಾ, ಭಟ್ಟಾಚಾರ್ಯ, ಪುಟಪರಿಶೀಲಕನಾದ ಪಾಂಡೆ, ಬ್ಯೂರೊ ಮುಖ್ಯಸ್ಥ ಪಾಠಕ್, ಪುಟ ವಿನ್ಯಾಸಕನಾದ ಮಿಶ್ರ, ಫೋಟೋಗ್ರಾಫರ್ ದ್ವಿವೇದಿ, ಹಿರಿಯ ಉಪಸಂಪಾದಕನಾದ ಜೋಶಿ, ವಿತರಕನಾದ ಚತುರ್ವೇದಿ, ಮಾರುಕಟ್ಟೆ ನಿರ್ವಾಹಕ ದೇಶಪಾಂಡೆ, ಹಾಗೂ ನಾನೊಬ್ಬ ಜ್ಹಾ... ಎಂದಿಟ್ಟುಕೊಳ್ಳೋಣ... ಇದರಿಂದ ಸಮಸ್ಯೆಯಾದರೂ ಏನು" ಎಂದು ಬಡಬಡಾಯಿಸಿದ ಆ ಸಂಪಾದಕ. 'ನನ್ನ ಕ್ಷಮಿಸು... ನೀನೊಬ್ಬ ಜಾತಿವಾದಿ, ಪಕ್ಷಪಾತಿ ಮತ್ತು ನಿನ್ನ ವಿಚಾರಣೆ ವಿಧ್ವಂಸಕವಾದುದು" ಎಂದು ಅಂಗಲಾಚಿದ ಆ ಸಂಪಾದಕ, "ನಮಗೆ ಸೇವೆ ಸಲ್ಲಿಸುತ್ತಿರುವವರ ಜಾತಿ ಯಾವುದೆಂದು ನಿನಗೆ ಗೊತ್ತಾ?" ಎಂದು ಮತ್ತೆ ವಿವೇಚಿಸಿದ ಸಂಪಾದಕ. "ನಿನಗೇನಾದರೂ ಈ ನ್ಯೂಸ್ ಪೇಪರ್ ಬ್ಯುಸಿನೆಸ್ ಗೊತ್ತಾ?" ಎಂದು ಕೋಪಗೊಂಡ ಸಂಪಾದಕ. "ದಿನ ಪತ್ರಿಕೆ ಎನ್ನುವುದೊಂದು ಪದಾರ್ಥ. ಅದೊಂದು ಈಜು ಉಡುಗೆ. ನಿನ್ನಂಥ ಸಾಮಾನ್ಯರು ಆ ಉಡುಗೆಯ ಬರಿ ವಿನ್ಯಾಸಕ ಮತ್ತು ಅದನ್ನು ಪ್ರಾಯೋಜಿಸಿದವರನ್ನಷ್ಟೆ ನೋಡುತ್ತಾರೆ. ಹತ್ತಿಬೆಳೆದ ರೈತನನ್ನು ಅಲ್ಲ.

"ನಿನಗೆ ಬೇಕಾದರೆ... ಈ ಪ್ಲೇಟ್ ಇಡ್ಲಿ-ಕಾಫಿ ತೆಗೆದುಕೊಂಡು ಜಾಗ ಖಾಲಿಮಾಡಬಹುದು" ಎಂದ ದಕ್ಷಿಣ ಭಾರತದ ಪ್ರಸಿದ್ಧ ದಿನ ಪತ್ರಿಕೆಯ ಸಂಪಾದಕ. "ದಯವಿಟ್ಟು ನಮ್ಮ ಸಂಪಾದಕೀಯ ಪುಟವನ್ನು ಹಾಳು ಮಾಡಬೇಡ... ನಮ್ಮಲ್ಲಿ ಬ್ರಾಹ್ಮಣ ಡೈರಿ ಎಂದೇನಾದ್ರೂ ಇದೆಯಾ?" ಎಂದು ಆಘಾತಗೊಂಡಂತೆ ಆತ ಕೇಳಿದ. "ರಾಜಕಾರಣಿಗಳು ಮತ್ತು ದುರಾಸೆಯ ಖಾಸಗಿ ವಲಯವನ್ನು ನಾನೆಂದು ಗಂಭೀರವಾಗಿ ಪರಿಗಣಿಸಲಾರೆ. ಅವರೆಲ್ಲಾ ದಲಿತರನ್ನು ಮತಪೆಟ್ಟಿಗೆ ಮತ್ತು ಗ್ರಾಹಕ ಬ್ಯಾಂಕ್ ಆಗಿ ಮಾತ್ರ ನೋಡುತ್ತಾರೆ. ನಾನು ದಲಿತರನ್ನು ಸಮಾನವಾಗಿ ಕಾಣುತ್ತೇನೆ" ಎಂದು ಸಾಂತ್ವಾನಗೊಂಡು ನುಡಿದ.

"ಅಲ್ಲದೆ, ಕಾಲಂ ಮತ್ತು ಕಾಲಂ ಬರೆಯುವರನ್ನು ಅಣಕಿಸಬೇಡ... ಈ ಕಾಲಂಗಳನ್ನು ಜಾತಿ, ಧರ್ಮ, ಸಿದ್ಧಾಂತಗಳನ್ನು ಮೀರಿದ ಬುದ್ಧಿಜೀವಿಗಳು, ವಿದ್ವಾಂಸರು ಮತ್ತು ಚಿಂತಕರು ಬರೆಯುತ್ತಾರೆ" ಎಂದು ತನ್ನ ಮೌಲ್ಯಮಾಪನವನ್ನು ನನ್ನೆದುರಿಟ್ಟು ಹೋದ. ಹೋಗುವ ಮೊದಲು ಹೀಗೆಂದ, "ದಯವಿಟ್ಟು, ನ್ಯಾಯ ಮತ್ತು ಸಮಾನತೆಯ ಬಗ್ಗೆ ನನಗೆ ಪಾಠ ಹೇಳುವುದು ಬೇಡ. ನಾನೊಬ್ಬ ಅಂತರರಾಷ್ಟ್ರೀಯ ವ್ಯಕ್ತಿ. ನ್ಯೂಸ್‌ರೂಂ ವೈವಿಧ್ಯತೆ ಅಮೆರಿಕಾದ ಮಾಧ್ಯಮವನ್ನು ಜನಾಂಗೀಯವಾಗಿ ಬೇರ್ಪಡಿಸಿದೆ".

"ದೇವರಾಣೆ! ... ಹಿಂದೂಗಳನ್ನು ಜಾತಿ ಹೆಸರಿನಲ್ಲಿ ವಿಂಗಡಿಸಬೇಡ" ಎಂದು ದೊಡ್ಡ ಹಿಂದಿ ದಿನ ಪತ್ರಿಕೆಯ ಸಂಪಾದಕ ನನ್ನನ್ನು ಎಚ್ಚರಿಸಿ, "ನಾವು ದೈವದೊಡನೆ ಆಡುವುದು ಬೇಡ... ದೈವ ಆದಿಶಕ್ತಿ. ಈ ದೈವವೇ ಸಾಮರ್ಥ್ಯಕ್ಕೆ ತಕ್ಕಂತೆ ಕರ್ತವ್ಯಗಳನ್ನು ಹಂಚಿದೆ. ಭಾರತೀಯ ಮಾಧ್ಯಮವೆಂದರೆ ಆ ದೈವದ ಸಾಕ್ಷಾತ್ ರೂಪವಾಗಿದ್ದು ಮೈಲಿಗೆಯಿಂದ ಕೂಡಿಲ್ಲವಾದ್ದರಿಂದ ಅದನ್ನು ಜಾತಿಯಿಂದ ರಕ್ಷಿಸೋಣ" ಎಂದು ವಾದಿಸಿದ ಸಂಪಾದಕ.

"ದಲಿತರ ಅಭಿರುಚಿಯನ್ನು ಮತ್ತು ಪ್ರಜಾಪ್ರಭುತ್ವವನ್ನು ರಾಜಕಾರಣಿಗಳು ಮೀಸಲಾತಿಯ ಮೂಲಕ ಕೆಡಿಸಿದ್ದಾರೆ. ಖಾಸಗಿ ವಲಯ ಸಕಾರಾತ್ಮಕ ಕ್ರಿಯೆಯನ್ನು ಆಚರಣೆಗೆ ತರಲು ರೆಡಿಯಾಗುತ್ತಿದೆ. ನನ್ನ ಇಂಡಿಯಾವನ್ನು ರಕ್ಷಿಸುವವರಾದರು ಯಾರು?" ಎಂದ ಮತ್ತೊಬ್ಬ ಸಂಪಾದಕ. "ಜ್ಞಾನೋದಯದ ಕೂಸೆ, ನಿನ್ನ ಉಲ್ಲೇಖಗಳಿಗೆ ವಂದನೆ. ನಾನೆಂದೂ ಈ ವಿಂಗಡನೆಯನ್ನು ಭಾವಿಸಿದ್ದಿಲ್ಲ. ನಿನಗೆ ನಿಜವಾಗಿಯೂ ವಂದನೆಗಳು" ಎಂದು ನುಡಿದ ಆ ನ್ಯೂಸ್‌ಚಾನೆಲ್ ಸಂಪಾದಕ ಮತ್ತು ನಿರೂಪಕ.

"ಕ್ಷಮೆ ಇರಲಿ... ಈ ನೇಮಕಾತಿ ಪಡೆಯಲು ಎರಡುವರೆ ವರ್ಷ ತೆಗೆದುಕೊಂಡಿದೆ" ಎಂದು ಆತನೆ ಮುಂದುವರೆದ, "ನಿನ್ನ ನೈತಿಕತೆಯ ಬಗ್ಗೆ ನನ್ನ ಮೆಚ್ಚಿಗೆಯಿದೆ. ನಾನೂ ಆ ಕಾರಣವನ್ನು ಒಪ್ಪಲಾರೆ..."ಎಂದು ಆ ವ್ಯಕ್ತಿ ಗಾಢವಾಗಿ ಯೋಚಿಸತೊಡಗಿದ. "ನಾನು ನಿನ್ನ ಪ್ರಶ್ನಾವಳಿಯನ್ನು ಗಮನಿಸಿದ್ದೇನೆ. ದಲಿತರ ಬಗ್ಗೆ ನನಗೂ ಅನುಕಂಪವಿದೆ. ಆದರೆ ನೀನು ಸಮಸ್ಯೆಯ ಬೇರಿಗೆ ಕೈ ಹಾಕಿದ್ದಿ. ನಾವೆಲ್ಲಾ ಜಾತಿರಹಿತರಾಗಬೇಕು. ನಮ್ಮಲ್ಲಿ ಉದ್ಯೋಗ ಬಯಸುವವರೆಲ್ಲಾ ಜಾತಿರಹಿತರಾಗಿರಬೇಕು' ಎಂದು ಆತನೇ ಹೇಳುತ್ತಾ, "ಕ್ಷಮಿಸು... ದಲಿತರು ಜಾತಿರಹಿತರಾಗಲು ಇಚ್ಚಿಸುವುದಿಲ್ಲ' ಎಂದು ಹೇಳುತ್ತಾ ದಲಿತ ಡೈರಿಗೆ ಅನುಕಂಪವನ್ನು ವ್ಯಕ್ತ ಪಡಿಸಿದ. "ನಾನು ನ್ಯಾಯ ಮತ್ತು ಸಮಾನತೆಯ ಮೌಲ್ಯಗಳಲ್ಲಿ ಬೆಳೆದವ. ... ಅಲ್ಲದೆ, ನನ್ನ ಸ್ಟುಡಿಯೊದಲ್ಲಿ ಜಾತಿ ತರುವುದರ ಮೂಲಕ ನಾನು ರಾಜಿ ಮಾಡಿಕೊಳ್ಳಲಾರೆ" ಎಂದು ತೃಪ್ತಿಯಿಂದ ಬೀಗಿದ.

ಜಾತಿಯಿಂದ ಉಚ್ಚಾಟನೆಗೊಂಡಿರುವ ಭಾರತೀಯ ಮಾಧ್ಯಮವನ್ನು ತರ್ಕ ಮತ್ತು ಸೋದರತ್ವಕ್ಕೆ ತರುವಂಥ ಮಹಾತ್ಮ ಯಾರಾದರೂ ಇದ್ದಾರೆಯೇ?

ಜಾತಿರಹಿತ ಮಾಧ್ಯಮಗಳು

ಕಾನ್ಶಿರಾಂ ಎಂದರೆ ಮುಕ್ತಿಯ ಸಾಕಾರ ರೂಪ

ನನ್ನ ಹಳ್ಳಿಯಲ್ಲಿ ದೀಹ್ ಬಾಬಾ ಎನ್ನುವ ದೇವಸ್ಥಾನ ಇಂದು ಹಾಳು ಬಿದ್ದಿದೆ. ಇದೊಂದು ವಿಚಿತ್ರವೆಂದು ಕಾಣಬಹುದು. ಈ ದೀಹ್ ಬಾಬಾ ದೇವಸ್ಥಾನವು ದಲಿತ ಕೇರಿಯಲ್ಲಿ ಇದೆ. ಎಲ್ಲಾ ಜಾತಿಯವರಿಂದಲೂ ಪೂಜಿತವಾಗುತ್ತಿದ್ದ ದೇವಾಸ್ಥಾನವೆಂದರೆ ಇದೊಂದೆ. ಹಳ್ಳಿಯ ಕೆಲವು ಶ್ರೀಮಂತ ದಲಿತರು ಅದನ್ನು ಜೀರ್ಣೋದ್ಧಾರ ಮಾಡಿ, ಅದರಲ್ಲಿದ್ದ ದೇವ-ದೇವತೆಗಳ ಮಣ್ಣಿನ ಮೂರ್ತಿಗಳನ್ನು ನವೀಕರಿಸಿದರು. ಈ ವರ್ಷಕ್ಕಿಂತ ಹಿಂದಿನ ವರ್ಷ ಅಂದರೆ ೧೯೮೪ರಲ್ಲಿ ಬಹುಜನ ಸಮಾಜ ಪಕ್ಷ ಅಸ್ತಿತ್ವಕ್ಕೆ ಬಂದಿತ್ತು.

೧೯೯೫ ರಲ್ಲಿ ನಾನು ಗ್ರಾಮಕ್ಕೆ ಭೇಟಿ ನೀಡಿದಾಗ ಆ ಎಲ್ಲಾ ಮೂರ್ತಿಗಳು ಒಂದೊಂದೇ ಕಾಣೆಯಾಗಿದ್ದವು. ಆ ದೀಹ್ ಬಾಬಾ ದೇವಸ್ಥಾನವು ಮತ್ತೇ ಪಾಳು ಬಿದ್ದಿತ್ತು.

೯೦ರ ದಶಕದ ಆರಂಭದಲ್ಲಿ ಉತ್ತರ ಪ್ರದೇಶದ ಎಲ್ಲಾ ಜಿಲ್ಲೆಗಳನ್ನು ನಾನು ಸಂದರ್ಶಿಸಿದ್ದೆ. ಅಲ್ಲದೆ, ಉತ್ತರ ಭಾಗಗಳ ಒಳನಾಡಿನಲ್ಲೂ ಸೈಕಲ್‌ನಲ್ಲಿ ಸಂಚಾರ ಮಾಡಿದ್ದೆ. ನಾನು ದಲಿತ ಕೇರಿಗಳಲ್ಲಿ ಉಳಿದುಕೊಳ್ಳುತ್ತಿದ್ದೆ. ಆ ಸಂದರ್ಭದಲ್ಲಿ ಶಿಕ್ಷಣದ ಮಹತ್ವವನ್ನು ತಿಳಿಸಿ ಕೊಡುತ್ತಿದ್ದೆ. ಆಗ ನಾನೇನು ಧಾರ್ಮಿಕ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೂ, ನಾನು ಗಮನಿಸಿದ ಸಂಗತಿಯೆಂದರೆ ಅನೇಕ ಬಿಎಸ್‌ಪಿ ಮತದಾರರು ಹಿಂದೂ ದೇವ-ದೇವತೆಗಳ ಚಿತ್ರ ಪಟಗಳನ್ನು ತೊರೆದು ಬಿಟ್ಟಿದ್ದರು. ಆ ಸ್ಥಳೀಯ ದೈವಗಳ ಜಾಗ ಲಾರ್ಡ್ ಬುದ್ಧ ಮತ್ತು ಅಂಬೇಡ್ಕರವರ ಭಾವಚಿತ್ರಗಳಿಗೆ ಪಲ್ಲಟಗೊಂಡಿತ್ತು.

ಆ ಪ್ರದೇಶದಲ್ಲಿ ಮೂರು ವರ್ಷಗಳ ಕಾಲ ಜೀವಿಸಿದ್ದರಿಂದ ಅದು ಹೇಗೆ ಸಾಧ್ಯವಾಯಿತು ಎಂಬುದನ್ನು ನಾನು ಅರ್ಥಮಾಡಿಕೊಂಡೆ. ನಕ್ಸಲೀಯನಾದ ನಾನು .೩೮ರ ರಿವಾಲ್ವರ್ ಹೊತ್ತು ಸುತ್ತುತ್ತಿದ್ದು, ಮಾವೋನ ಹೊಸ ಪ್ರಜಾಪ್ರಭುತ್ವದ ಕ್ರಾಂತಿ ಭಾರತದಲ್ಲಿ ಆಗಬೇಕೆಂದು ಉತ್ತರ ಪ್ರದೇಶದ ಹಳ್ಳಿಗಾಡಿನಲ್ಲಿ ಸಮುದಾಯಗಳನ್ನು ಸಂಘಟಿಸುತ್ತಿದ್ದೆ. ಜಾತಿಯಾಧಾರದಲ್ಲಿ ಭಿನ್ನತೆಗಳು ಎದ್ದು ನಾನು ಆ ಪ್ರಚಾರವನ್ನು ಬಿಟ್ಟು ಮತ್ತೆ ಜವಹಾರ್‌ಲಾಲ್ ನೆಹರು ವಿಶ್ವವಿದ್ಯಾಲಯಕ್ಕೆ ಸೇರಿಕೊಂಡೆ.

ಉತ್ತರ ಪ್ರದೇಶದಲ್ಲಿ ೮೦ರ ದಶಕದ ಆರಂಭದಲ್ಲೇ ಸಣ್ಣ ಗಾತ್ರದ ದಲಿತ ಮಧ್ಯಮವರ್ಗವೊಂದು ಕಾಣಿಸಿಕೊಂಡಿತ್ತು. ಈ ಸಶಕ್ತ ದಲಿತರು ಮುಖ್ಯವಾಹಿನಿಯ ಸಮಾಜದಲ್ಲಿ ನೇರವಾಗಿ ಪಾಲ್ಗೊಂಡಿದ್ದರು. ಅಂದರೆ ಅವರೆಲ್ಲಾ ಒಂದು ಮುಖ್ಯವಾಹಿನಿಯ ಧರ್ಮದಲ್ಲಿ ಪ್ರವೇಶ ಪಡೆದಿದ್ದರು. ಈ ಗುಂಪಿನಲ್ಲಿ ದೇವ-ದೇವತೆಗಳ ಕ್ಯಾಲೆಂಡರ್‌ಗಳಿಗೆ ಅಧಿಕ ದಾಹ ವ್ಯಕ್ತವಾಗಿತ್ತು. ಇದೇ ರೀತಯ ಹುಚ್ಚು ಆದಿವಾಸಿ ಪ್ರದೇಶಗಳಲ್ಲೂ ಕಾಣಬಹುದು.

ಆದರೆ, ೯೦ರ ದಶಕದ ಮಧ್ಯಭಾಗದ ವೇಳೆಗೆ ಅನೇಕ ಬಿಎಸ್‌ಪಿ ಕುಟುಂಬಗಳಿಂದ ಹಿಂದೂ ದೇವ-ದೇವತೆಗಳು ತಮ್ಮ ಜಾಗ ಖಾಲಿ ಮಾಡಿದ್ದವು. ಕಾನ್ಶಿರಾಂ ಸಾರ್ವಜನಿಕವಾಗಿ ಭೌದ್ಧ ಧರ್ಮಕ್ಕೇನೂ ಮತಾಂತರಗೊಂಡಿರಲಿಲ್ಲ. ಅಲ್ಲದೆ, ಯಾವುದೇ ಧಾರ್ಮಿಕ ಆಂದೋಲನವನ್ನು ನಡೆಸಲಿಲ್ಲ. ಆದರೂ ಕಾನ್ಶಿರಾಂರ ಬಿಎಸ್‌ಪಿ ಕ್ಷೇತ್ರ ಭೌದ್ಧಧರ್ಮಕ್ಕೆ ಪರಿವರ್ತನೆಗೊಂಡಿದೆ. ಈ ಪವಾಡ ಕೆಲವೇ ವರ್ಷಗಳಲ್ಲಿ ಘಟಿಸಿದೆ. ಅಂದರೆ ಮತಾಂತರ ಆಗುವುದು ಬೇಡವೆಂದು ಇದರರ್ಥವಲ್ಲ. ಅವರೇನಾದರೂ ಇನ್ನೂ ಕೆಲವು ವರ್ಷಗಳ ಕಾಲ ಜೀವಿಸಿದ್ದರೆ, ಬಾಬಾ ಸಾಹೇಬ್ ಅಂಬೇಡ್ಕರ್‌ರಂತೆ ಮಿಲಿಯಗಟ್ಟಲೇ ಜನರನ್ನು ಸಾರ್ವಜನಿಕವಾಗಿಯೇ ಬೌದ್ಧ ಧರ್ಮಕ್ಕೆ ಕೊಂಡೊಯ್ಯುತ್ತಿದ್ದರು. ಬಾಬಾ ಸಾಹೇಬ್ ಅಂಬೇಡ್ಕರರವರ ಸ್ಫೂರ್ತಿಯನ್ನು ಹೊರತುಪಡಿಸಿದಲ್ಲಿ, ಕಳೆದ ನೂರು ವರ್ಷಗಳಿಂದೀಚೆಗೆ ಕಾನ್ಶಿರಾಂರವರಂತೆ ಮಿಲಿಯಗಟ್ಟಲೆ ಜನರನ್ನು ಪ್ರಭಾವಿಸಿದ ವ್ಯಕ್ತಿ ಮತ್ತೊಬ್ಬರಿದ್ದಾರೆಯೇ? ಬಿಎಸ್‌ಪಿ ಮತದಾರನೊಬ್ಬ ಸತ್ತ ಪ್ರಾಣಿಗಳನ್ನು ಎಂದಾದರೂ ಹೊತ್ತಿದ್ದಾನೆಯೇ? ದಾಖಲೆಗೆಂಬಂತೆ ಸತ್ತ ಪ್ರಾಣಿಯನ್ನು ಎತ್ತುವುದು ಮತ್ತು ಅದರ ಚರ್ಮ ಸುಲಿಯುವುದು ಎರಡೂ ಭಿನ್ನ ಸಂಗತಿಗಳೇ ಆಗಿವೆ.



೯೦ರ ದಶಕದ ಆರಂಭದಲ್ಲಿ ಉತ್ತರ ಪ್ರದೇಶದ ಎಲ್ಲಾ ಜಿಲ್ಲೆಗಳನ್ನು ನಾನು ಸಂದರ್ಶಿಸಿದ್ದೆ. ಅಲ್ಲದೆ, ಉತ್ತರ ಭಾಗಗಳ ಒಳನಾಡಿನಲ್ಲೂ ಸೈಕಲ್‌ನಲ್ಲಿ ಸಂಚಾರ ಮಾಡಿದ್ದೆ. ನಾನು ದಲಿತ ಕೇರಿಗಳಲ್ಲಿ ಉಳಿದುಕೊಳ್ಳುತ್ತಿದ್ದೆ. ಆ ಸಂದರ್ಭದಲ್ಲಿ ಶಿಕ್ಷಣದ ಮಹತ್ವವನ್ನು ತಿಳಿಸಿ ಕೊಡುತ್ತಿದ್ದೆ. ಆಗ ನಾನೇನು ಧಾರ್ಮಿಕ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೂ, ನಾನು ಗಮನಿಸಿದ ಸಂಗತಿಯೆಂದರೆ ಅನೇಕ ಬಿಎಸ್‌ಪಿ ಮತದಾರರು ಹಿಂದೂ ದೇವ-ದೇವತೆಗಳ ಚಿತ್ರ ಪಟಗಳನ್ನು ತೊರೆದು ಬಿಟ್ಟಿದ್ದರು. ಆ ಸ್ಥಳೀಯ ದೈವಗಳ ಜಾಗ ಲಾರ್ಡ್ ಬುದ್ಧ ಮತ್ತು ಅಂಬೇಡ್ಕರವರ ಭಾವಚಿತ್ರಗಳಿಗೆ ಪಲ್ಲಟಗೊಂಡಿತ್ತು.

ಒಂದು ಎಮ್ಮೆಯೊ-ದನವೋ ಗ್ರಾಮದಲ್ಲಿ ಸತ್ತರೆ, ಅದರ ಮಾಲೀಕರು ಯಾರೇ ಇರಲಿ, ಅದನ್ನು ಗ್ರಾಮದಿಂದಾಚೆಗೆ ಒಯ್ಯುವುದು ದಲಿತರ ಕೆಲಸವಾಗಿತ್ತು. ಇದು ಜಾತಿಯ ಕರ್ತವ್ಯವೇ ಆಗಿತ್ತು. ಚರ್ಮ ಸುಲಿಯುವುದು ಒಬ್ಬ ವ್ಯಕ್ತಿಯ ಕಾರ್ಯವಷ್ಟೆ. ಒಂದು ಕುಟುಂಬ ಅದರಲ್ಲಿ ಪರಿಣತಿಯನ್ನು ಪಡೆಯುತ್ತಿತ್ತು. ಆದರೆ ಬೇರೆಯವರಿಗೆ ಅದು ಜಾತಿ ಶೋಷಣೆಯಾಗಿ ಮತ್ತು ಅವಮಾನದ ಸಂಕೇತವಾಗಿತ್ತು.

೯೦ರ ಮಧ್ಯಭಾಗದ ವೇಳೆಗೆ ಬಿಎಸ್‌ಪಿ ಮತದಾರರು ಅದನ್ನು ಬಿಟ್ಟರು. ಇಂದು ದಲಿತೇತರರೇ ಕೂಡಿಕೊಂಡು ಸತ್ತ ಪ್ರಾಣಿಗಳನ್ನು ಟ್ರಾಕ್ಟರ್/ಎತ್ತಿನಗಾಡಿಯ ಮೂಲಕ ಹೊಯ್ದು ಹೊಲಗಳಲ್ಲಿ ಬಿಸಾಡುತ್ತಾರೆ. ಹೀಗೆ ಯುಗಗಳ ಜಾತಿ ಆಚರಣೆಯ ಅವಮಾನದಿಂದ ಬಿಡುಗಡೆಯಾದ ದಲಿತರು ಗೌರವಯುತವಾದ ಅಸ್ತಿತ್ವವನ್ನು ಪಡೆದಿದ್ದಾರೆ.

ಕಾನ್ಶಿರಾಂ ಎಂದರೆ ಮುಕ್ತಿಯ ಸಾಕಾರ ರೂಪ. ಅವರು ಬ್ರಾಹ್ಮಣ್ಯವನ್ನು ಉಲ್ಟಮಾಡಿ ತೋರಿಸಿದರು. ಬಿಎಸ್‌ಪಿಯ ಮುಂಚಿನ ದಿನಗಳಲ್ಲಿ ಉತ್ತರ ಪ್ರದೇಶದ ಅನೇಕ ದಲಿತ ರಾಜಕಾರಣಿಗಳು ಎಂಎಲ್‌ಎ/ಎಂಪಿಗಳಾಗಲು ಮುಖ್ಯವಾಹಿನಿಯ ಪಕ್ಷರಾಜಕಾರಣಿಗಳಿಗೆ ಶರಣು ಹೋಗುತ್ತಿದ್ದರು. ಅವರ ಈ ವರ್ತನೆ ಇಡೀ ಸಮುದಾಯವನ್ನೇ ನಾಚಿಸುವಂತಿತ್ತು.

ಹೀಗಿರುವಲ್ಲಿ ದಲಿತೇತರ ರಾಜಕಾರಣಿಗಳು ಬಿಎಸ್‌ಪಿಯ ಪಾದಕ್ಕೆರಗುವಂತೆ ಕಾನ್ಶಿರಾಂ ಹೊಸ ಸನ್ನಿವೇಶವನ್ನೇ ಸೃಷ್ಟಿಸಿದರು. ಇದು ದಲಿತರಲ್ಲಿ ಘನತೆಯ ಹುಟ್ಟಿಗೆ ಕಾರಣವಾಯಿತು. ಒಬ್ಬ ದಲಿತ ಇಂದು ದಲಿತೇತರ ವ್ಯಕ್ತಿಯನ್ನು ನಗುಮೊಗದಿಂದ ನೋಡುವಂತಾಗಿದೆ.

ಈ ನೂತನ ಸನ್ನಿವೇಶವನ್ನು ಹೇಗೆ ನಿಭಾಯಿಸಬೇಕೆಂದರಿಯದ ದಲಿತೇತರ ಬುದ್ಧಿಜೀವಿವರ್ಗ ಬಿಎಸ್‌ಪಿಯನ್ನು ಬ್ರಾಹ್ಮಣ್ಯದ ಆರ್ಚಕರೆಂದು ಆಪಾದಿಸಿತ್ತು. ಅದೇನೂ ಅಲ್ಲ. ನಿಜವಾಗಿ ಹೇಳಬೇಕೆಂದರೆ ಕಾನ್ಶಿರಾಂ ಆ ಬ್ರಾಹ್ಮಣ್ಯದ ಆಚರಣೆಯಿಂದ 'ಪಾದಕ್ಕೆರಗುವಿಕೆ'ಯನ್ನು ಪಲ್ಟಿಹೊಡೆಸಿದ್ದಾರೆ.

ಕೇವಲ ಎರಡು ದಶಕಗಳಲ್ಲೇ ಕಾನ್ಶಿರಾಂರವರು ಉತ್ತರ ಪ್ರದೇಶದ ದಲಿತರನ್ನು ತಲೆಯೆತ್ತಿ ನಡೆಯುವಂತೆ ಮಾಡಿದರು. ಇಡೀ ಭಾರತದ ದಲಿತರು ಕಾನ್ಶಿರಾಂರವರ ಮಾರ್ಗವನ್ನು ಅನುಸರಿಸುವ ದಿನ ದೂರವಿಲ್ಲ ಎಂಬುದನ್ನು ನಾವು ಒಪ್ಪಲೇ ಬೇಕಾಗುತ್ತದೆ. □

ತಪ್ಪನ್ನು ಅರಿಯಲಿಲ್ಲ ಹಾಗಾಗಿ....!

ಬುದ್ಧಾಯಣ

೧೮

'ಎಲೈ ಶಿಕಾರಿಯೇ, ನಾನು ಮನುಷ್ಯ, ಜಾತಿಯಲ್ಲಿ ಬ್ರಾಹ್ಮಣ. ನಾನು ವಾರಣಾಸಿ ರಾಜನ ಅಸ್ಥಾನದಲ್ಲಿ ನ್ಯಾಯಾಧೀಶನಾಗಿದ್ದೆ. ನನ್ನನ್ನು ನಾನು ಅರಿಯಲಿಲ್ಲ. ನನ್ನ ಕರ್ತವ್ಯವನ್ನು ನಾನು ಅರಿಯಲಿಲ್ಲ. ನಾನು ಜಾತಿಯ ಆಹಂಗೆ ತುತ್ತಾಗಿದ್ದೆ. ಹಣದ ದುರಾಸೆಗೆ ವಶನಾಗಿದ್ದೆ. ನನ್ನ ಘನತೆಗೆ ಮೀರಿ ನನ್ನ ಬಳಿ ಬರುವ ಅಪರಾಧಿಗಳಿಂದ ಲಂಚ ಪಡೆದು ನಿರಪರಾಧಿಗಳಿಗೆ ಶಿಕ್ಷೆ ವಿಧಿಸುತ್ತಿದ್ದೆ. ಹಾಗೆ ಮೊದಲು ಲಂಚ ಪಡೆದಾಗ ನನ್ನ ಬೆನ್ನು 'ಜುಮು ಜುಮು' ಎಂದಿತು. ಈ ಲಂಚದ ಪಾಪವು ಹನಿ ಹನಿಯಾಗಿ ಕೊಡುತ್ತಾ ಕೊನೆಗೊಮ್ಮೆ ನನ್ನ ಪಾಪದ ಕೊಡ ತುಂಬೇ ಬಿಟ್ಟಿತು.

ಸಿ. ಎಚ್. ರಾಜಶೇಖರ್

ಗೌತಮ ಬುದ್ಧರು ಮಗಧ ರಾಜ್ಯದಲ್ಲಿ ಸಂಚರಿಸುತ್ತಾ ಧರ್ಮೋಪದೇಶ ಮಾಡುತ್ತಿದ್ದ ಸಂದರ್ಭದಲ್ಲಿ ಒಬ್ಬ ಉಪಾಸಕ ಬುದ್ಧರಿಗೆ ವಂದಿಸಿ ಪ್ರಶ್ನಿಸಿದ:

'ಭಂತೆ, ಲಂಚವನ್ನು ಸ್ವೀಕರಿಸಬೇಡಿ ಭ್ರಷ್ಟಾಚಾರಕ್ಕೆ ವಶರಾಗಬೇಡಿರೆನ್ನುವಿರಲ್ಲ ಏಕೆ?' ಎಂದ ಆಗ ಬುದ್ಧರು ಒಂದು ಸ್ವಾರಸ್ಯಕರ ಕತೆಯನ್ನು ಹೇಳಿದರು. ಅದು ಹೀಗಿದೆ:

ಹಿಮಾಲಯ ಪರ್ವತದ ತಪ್ಪಲಲ್ಲಿ ಕೋಸಿಕೀ ನದಿಯು ತುಂಬಿ ಹರಿಯುತ್ತಿತ್ತು. ಅದರ ದಡದಲ್ಲೊಂದು ವಿಸ್ತಾರವಾದ ಮಾವಿನ ತೋಪಿತ್ತು. ಆ ತೋಪಿನ ನಡುವಿನಿಂದ ಮನುಷ್ಯನೊಬ್ಬನ ವಿಕಾರ ಅಳುವಿನ ಚಿತ್ಕಾರ ಕೇಳಿಬರುತ್ತಿತ್ತು. ಶಿಕಾರಿಯೊಬ್ಬ ಅಂದು ಭೇಟಿಯಾಡಿದ ಹಂದಿಯೊಂದನ್ನು ತನ್ನ ಹೆಗಲ ಮೇಲೊತ್ತುತ್ತ ಬರುತ್ತಿರಲು ಆ ಚಿತ್ಕಾರ ಬರುತ್ತಿದ್ದ ಧ್ವನಿಯನ್ನು ಅನುಸರಿಸಿ ನಡೆದ ಅಲ್ಲೊಬ್ಬ ಪ್ರೇತಾಕಾರದ ಮನುಷ್ಯನನ್ನು ಕಂಡ ಆತ ಗಡ್ಡ, ಮೀಸೆ, ಬೆಳೆದು ನಿಂತ ತಲೆಕೂದಲಿನಿಂತ ವಿಕಾರವಾಗಿ ಕಾಣುತ್ತಿದ್ದ. ಆತನ ಎರಡೂ ಕೈಗಳು ಸಹಜ ಸ್ಥಿತಿಗಿಂತ ಅತಿ ಉದ್ದವಾಗಿ ಬೆಳೆದು ನಿಂತಿತ್ತು. ಆದರೆ ಆ ಎರಡೂ ಕೈಗಳಲ್ಲಿ ಬೆರಳುಗಳಿರಲಿಲ್ಲ. ಬದಲಿಗೆ ಬಲಗೈಯಲ್ಲಿ ಒಂದು ಉದ್ದವಾದ ಉಗುರು ಬೆಳೆದು ಹರಿತವಾದ ಗುದ್ದಲಿಯ ಆಕಾರದಲ್ಲಿತ್ತು. ಆ ಉಗುರಿನಿಂದ ಆತ ತನ್ನ ಬೆನ್ನಿನ್ನ ಮಾಂಸವನ್ನು ಬಗೆ ಬಗೆದು ತಿನ್ನುತ್ತಿದ್ದ. ನಡು ನಡುವೆ ವಿಕಾರವಾಗಿ ನಗುತ್ತಿದ್ದ ಮತ್ತು ಕರ್ಕಶವಾಗಿ ಅಳುತ್ತಾ ಚೀರುತ್ತಿದ್ದ. ಮೊದಲ ಭಾರಿಗೆ ಈ ಶಿಕಾರಿಯು ಬೆಚ್ಚಿ ಕಣ್ಣು ಮುಚ್ಚಿದ. ಮರು ಕ್ಷಣವೇ ಈತನಿಗೆ ತಿನ್ನಲು ಏನೂ ಸಿಗದ ಕಾರಣ ಅಪಾರ ಹಸಿವೆಯನ್ನು ತಾಳಲಾರದೆ ತನ್ನ ಬೆನ್ನಿನ ಮಾಂಸವನ್ನು ಕಿತ್ತು ತಿನ್ನುತ್ತಿರಬಹುದೆಂದು ಬಗೆದ ತಕ್ಷಣವೇ ಅಯ್ಯೋ ಪಾಪವೆನಿಸಿ ತನ್ನ ಭೇಟಿಯನ್ನು ಆತನಿಗೆ ಅರ್ಪಿಸಲು ನಿರ್ಧರಿಸಿ ಆತನ ಎದುರು ನಿಂತು:

'ಅಯ್ಯ ನೀನಾರು? ಪ್ರೇತವೋ? ಯಕ್ಷನೋ? ಮಾಯಾವಿಯೋ? ಹೀಗೇಕೆ ನಿನ್ನ ಬೆನ್ನಿನ ಮಾಂಸವನ್ನು ನೀನೇ ಕಿತ್ತು ತಿನ್ನುತ್ತಿರುವೆ? ನೀನು ಈ ಭೇಟಿಯನ್ನು ತಿಂದು ನಿನ್ನ ಹಸಿವನ್ನು ನೀಗಿಕೋ....!' ಎನ್ನುತ್ತಾ ಹೆಗಲ ಮೇಲಿದ್ದ ಹಂದಿಯನ್ನು ಆತನ ಎದುರು ಇರಿಸಲು ಆತ:

'ಎಲೈ ಶಿಕಾರಿಯೇ, ನಾನು ಮನುಷ್ಯ, ಜಾತಿಯಲ್ಲಿ ಬ್ರಾಹ್ಮಣ. ನಾನು ವಾರಣಾಸಿ ರಾಜನ ಅಸ್ಥಾನದಲ್ಲಿ ನ್ಯಾಯಾಧೀಶನಾಗಿದ್ದೆ. ನನ್ನನ್ನು ನಾನು ಅರಿಯಲಿಲ್ಲ. ನನ್ನ ಕರ್ತವ್ಯವನ್ನು ನಾನು ಅರಿಯಲಿಲ್ಲ. ನಾನು ಜಾತಿಯ ಆಹಂಗೆ ತುತ್ತಾಗಿದ್ದೆ. ಹಣದ ದುರಾಸೆಗೆ ವಶನಾಗಿದ್ದೆ. ನನ್ನ ಘನತೆಗೆ ಮೀರಿ ನನ್ನ ಬಳಿ ಬರುವ ಅಪರಾಧಿಗಳಿಂದ ಲಂಚ ಪಡೆದು ನಿರಪರಾಧಿಗಳಿಗೆ ಶಿಕ್ಷೆ ವಿಧಿಸುತ್ತಿದ್ದೆ. ಹಾಗೆ ಮೊದಲು ಲಂಚ ಪಡೆದಾಗ ನನ್ನ ಬೆನ್ನು 'ಜುಮು ಜುಮು' ಎಂದಿತು. ಈ ಲಂಚದ ಪಾಪವು ಹನಿ ಹನಿಯಾಗಿ ಕೊಡುತ್ತಾ ಕೊನೆಗೊಮ್ಮೆ ನನ್ನ ಪಾಪದ ಕೊಡ ತುಂಬೆ ಬಿಟ್ಟಿತು.

ದಿನದಿಂದ ದಿನಕ್ಕೆ ನನ್ನ ಕೈ ಉದ್ದ ಬೆಳೆಯಿತು. ನಂತರ ಕೈ ಬೆರಳುಗಳು ಕಳಿತ ಹಣ್ಣಿನಂತೆ ಉದುರಿ ಹೋದವು. ಹಗಲಲ್ಲಿ ನೆಮ್ಮದಿ ಇಲ್ಲ. ರಾತ್ರಿಯಲ್ಲಿ ನಿದ್ದೆ ಇಲ್ಲ. ಬೆನ್ನು ಒಂದೇ ಸಮ ಕೆರೆಯ ತೊಡೆಯಿತು. ಗೋಡೆಗೆ, ಬಂಡೆಗೆ ಬೆನ್ನುಜ್ಜುತ್ತಿದೆ. ಬಳಿಕ ಬಲಗೈಯಲ್ಲಿ ಗುದ್ದಲಿಯಂತಹ ಉಗುರು ಮೂಡಿತು. ಬೆನ್ನನ್ನು ಕೆರೆದುಕೊಳ್ಳುತ್ತಿದ್ದೆ. ಮೊದಲು ಸಣ್ಣ ಗಾಯವಾಯಿತು. ನಂತರ ರಕ್ತ ಬಂದಿತು. ಬಳಿಕ ನಂಜಾಗಿ, ಹುಣ್ಣಾಗಿ, ಕೀವಾಗಿ ವ್ರಣವಾಯಿತು.

ಸಕಲ ವೈದ್ಯವು ಪ್ರಯೋಜನಕ್ಕೆ ಬರಲಿಲ್ಲ. ಆಗ ಸ್ವಲ್ಪ ಸ್ವಲ್ಪವೇ ಬೆನ್ನಿನ ಮಾಂಸವನ್ನು ಉಗುರಿನಿಂದ ಕಿತ್ತು ಕಿತ್ತು ತಿನ್ನತೊಡಗಿದೆ. ಸ್ವಲ್ಪ ಸಮಾಧಾನವಾಗತೊಡಗಿತು. ಮನೆಯವರು ಅಕ್ಕಪಕ್ಕದವರು ಊರವರು ನನ್ನನ್ನು ನರಭಕ್ಷನೆಂದು ಕಾಡಿಗೆ ಅಟ್ಟಿದರು. ಅಲೆಯುತ್ತಾ ಅಲೆಯುತ್ತಾ ಇಲ್ಲಿಗೆ ಬಂದು ಸೇರಿದೆ.

ನನಗೆ ನಿನ್ನ ಶಿಕಾರಿಯನ್ನಾಗಲಿ ಅನ್ಯಶಿಕಾರಿಯನ್ನಾಗಿಲಿ ತಿಂದರೆ ಹಸಿವು ನೀಗದು ನನ್ನ ಬೆನ್ನಿನ ಮಾಂಸವೇ ಆಗಬೇಕು...!' ಎನ್ನಲು ಆ ಶಿಕಾರಿಯು ಹೆದರಿ ನಡುಗುತ್ತಾ ತನ್ನ ಭೇಟಿಯನ್ನು ಅಲ್ಲಿಯೇ ಬಿಟ್ಟು ಎದ್ದು ಬಿದ್ದು ಓಡತೊಡಗಿದ. ಆಗ ಆ ಲಂಚಕೋರನು ಆತನನ್ನು ಹೀಗೆ ಹಂಗಿಸಿದ:

'ನೀನೊಬ್ಬ ಅವಿವೇಕಿ...! ನಾನು ತಿನ್ನುತ್ತಿರುವುದು ನನ್ನ ಬೆನ್ನಿನ ಮಾಂಸವನ್ನಲ್ಲ....! ನಿರಪರಾಧಿ ಕಕ್ಷಿದಾರರ ಶಾಪವನ್ನಲ್ಲ....! ನನ್ನ ಲಂಚದ ಹಣವನ್ನು...!!' ಎನ್ನುತ್ತಾ ಮತ್ತೆ ಮುಂದುವರಿಸಿದ. □

'ದಾನಬೇಡ: ನನ್ನ ಕರ್ಮಫಲವೇ ಸಾಕೆನಗೆ!?'

ಹಿಮಗಿರಿಯ ಮಹಾಚಕ್ರವರ್ತಿಯಾದ ದೇವರಾಜನು ತನ್ನ ಆಸ್ಥಾನದಲ್ಲಿ ಸುಧರ್ಮ ಸಭೆಯನ್ನು ಏರ್ಪಡಿಸಿದ್ದ. ಅದಕ್ಕಾಗಿ ಇಡೀ ಜಂಬೂದ್ವೀಪದ ಎಲ್ಲಾ ರಾಜ ಮಹಾರಾಜರಿಗೂ ಆಹ್ವಾನವನ್ನು ಕಳುಹಿಸಿದ್ದ. ಎಲ್ಲರೂ ತಮ್ಮ ತಮ್ಮ ರಥವೇರಿ ಸಭೆಗೆ ಬಂದು ತಮ್ಮ ತಮ್ಮ ಪೀಠದಲ್ಲಿ ಅಲಂಕೃತರಾದರು ಆದರೆ ಏಕೈಕ ಪೀಠವು ಖಾಲಿ ಇತ್ತು. ಆ ಪೀಠವು ಮಿಥಿಲೆಯ ಸಾಧೀನ ರಾಜನ ಪೀಠವಾಗಿತ್ತು!

'ಆತನೇಕೆ ಸುಧರ್ಮ ಸಭೆಗೆ ಬರಲಿಲ್ಲ'ವೆಂದು ದೇವರಾಜನು ತನ್ನ ಧೂತರನ್ನು ಕೇಳಲಾಗಿ:

'ಪ್ರಭುವೇ, ಅತ ಹೀಗೆ ಉತ್ತರಿಸಿದ: ಧೂತರೇ. ದೇವರಾಜನಿಗೆ ನನ್ನ ವಂದನೆಯೊಂದಿಗೆ ಈ ಸಂದೇಶವನ್ನು ಮುಟ್ಟಿಸಿ, ನನ್ನ ಕರ್ತವ್ಯವೇ ನನಗೆ ಸುಧರ್ಮ... ಎಂದು ಬಿಟ್ಟ!' ಎನ್ನಲು, ದೇವರಾಜನು ತನ್ನ ಪರಮ ಮಿತ್ರನಾದ ಸಾಧೀನ ರಾಜನ ಗುಣಗಾನ ಮಾಡುತ್ತಾ:

'ಹೌದು, ಅತ ನಿಜಕ್ಕೂ ಧರ್ಮರಾಜನೇ ಸರಿ...!' ಎನ್ನುತ್ತಾ ಆತನ ರಾಜ್ಯಭಾರದ ವಿಧಿ ವಿಧಾನಗಳನ್ನು ಎಳೆಎಳೆಯಾಗಿ ಸಭೆಗೆ ವರ್ಣಿಸಿದ, ಅದರಿಂದ ಸ್ಫೂರ್ತಿಗೊಂಡ ಇತರೆ ರಾಜರು:

'ಪ್ರಭು ದೇವರಾಜನೇ, ಹಾಗಾದರೆ ಆ ಪುಣ್ಯವಂತನ ದರ್ಶನ ಭಾಗ್ಯದಿಂದಲಾದರೂ ನಾವುಗಳು ಸ್ಫೂರ್ತಿಗೊಳ್ಳುತ್ತೇವೆ ಆತನನ್ನು ಸಭೆಗೆ ಕರೆಸಿ ಧರ್ಮೋಪದೇಶ ಮಾಡಿಸಿ!' ಎಂದು ದುಂಬಾಲು ಬೀಳಲು ಆತ ತನ್ನ ಸಾರಥಿಯಾದ ಮಾತಲಿಗೆ.

ಎಲೈ ಮಾತಲಿಯೇ. ಈಗೀಂದಿಗಲೇ ನನ್ನ ವೈಜಯಂತಿ ರಥವನ್ನು ಹೂಡಿಕೊಂಡು ಹೋಗಿ ಸಾಧೀನ ರಾಜನನ್ನು ಕರೆದು ತಾ...!' ಎಂದು ಆಜ್ಞಾಪಿಸಿದ. ಆತನು ಹಾಗೇ ಮಾಡಿದ. ಆತನ ದಿವ್ಯದರ್ಶನದಿಂದ ಮತ್ತು ಧರ್ಮೋಪದೇಶದಿಂದ ಪುಳುಕಿತರಾದ ರಾಜ ಮಹಾರಾಜರು ತಮ್ಮ ತಮ್ಮ ರಾಜ್ಯಕ್ಕೆ ಹಿಂದಿರುಗಿದರು ಬಳಿಕ ದೇವರಾಜನು ತನ್ನ ಅತಿಭವ್ಯವಾದ ಮುವತ್ತು ಮೂರು ಭವನಗಳಿಂದ ಕೂಡಿದ್ದ ತ್ರಯೋತ್ರಿಂಶ ಅರಮನೆಯನ್ನು ಸಾಧೀನ ರಾಜನಿಗೆ ಕಾಣಿಕೆಯನ್ನಾಗಿ ನೀಡಿದ. ಅದರಲ್ಲಿ ಭೋಗಜೀವನಕ್ಕೆ ಬೇಕಾದ ಸಕಲ ಸೌಕರ್ಯವನ್ನು ಸಜ್ಜುಗೊಳಿಸಿದ್ದ ಅಲ್ಲದೆ ಒಂದು ನೂರು ಅಪ್ಸರೆಯರನ್ನು ಸೇವೆಗಾಗಿ ನೇಮಿಸಿ:

'ಎಲೈ ಸಾಧೀನ ರಾಜನೇ ಇದು ನನ್ನ ನಿನ್ನ ಸ್ನೇಹದ ಕುರುವು. ನೀನು ಇರುವಷ್ಟು ದಿನವು ಇಲ್ಲಿದ್ದು ಸ್ವರ್ಗದ ಸಕಲ ಸುಖಭೋಗವನ್ನು ಅನುಭವಿಸು!' ಎಂದ ಮೊದ ಮೊದಲು ಸ್ನೇಹಕ್ಕೆ ಕಟ್ಟು ಬಿದ್ದು ಒಪ್ಪಿಕೊಂಡ ಬಳಿಕ ಅಲ್ಲಿನ ಸುಖಭೋಗಕ್ಕೆ ಮೈ ಮನಸ್ಸು ಸೋತು ಏಳು ವರ್ಷಗಳು ಉರುಳಿದ್ದು ಆತನ ಗಮನಕ್ಕೆ ಬಾರಲೇ ಇಲ್ಲ. ಒಂದು ದಿನ ಆತನಿಗೆ ತನ್ನ ಬಗ್ಗೆಯೇ ಜಿಗುಪ್ಸೆ ಮೂಡಲು ದೇವರಾಜನನ್ನು ಸಂಧಿಸಿ:

'ಎಲೈ ಗೆಳೆಯಾ. ನಾನು ಮೊದ ಮೊದಲು ಇಲ್ಲಿನ ನೃತ್ಯ, ಗೀತೆ ಮತ್ತು ಸುಖಭೋಗದಿಂದ ಮುಕ್ತನಾದೆ. ಬಹಳ ಸಂತೋಷ ಪಟ್ಟೆ, ಸ್ವರ್ಗವೆಂದರೆ ಇದೇ ಎಂದು



ಕನಸು ಕಂಡೆ ಆದರೆ ನನಗೆ ಈಗ ಅನ್ನಿಸುತ್ತದೆ. ಬೇರೆಯವರು ಕೊಟ್ಟದಾನವಾಗಲಿ, ಕಾಣಿಕೆಯಾಗಲಿ ಉಡುಗರೆಯಾಗಲಿ ಅಥವಾ ಅತಿರ್ಥವಾಗಲಿ ನನ್ನ ಬದುಕಿನ ಭಾಗವಲ್ಲ. ನನ್ನ ಕರ್ಮದ ಫಲವಲ್ಲ ಅನ್ನಿಸುತ್ತಿದೆ. ಇದರಿಂದ ನಾನು ಕರ್ತವ್ಯ ಚ್ಯುತನಾಗಿದ್ದೇನೆ ಅನ್ನಿಸುತ್ತಿದೆ. ನನ್ನ ಆಯಸ್ಸು ಕ್ಷೀಣಿಸುತ್ತಿರುವಂತೆ ನಾನು ಮುದುಕನಾದಂತೆ, ನಾನು ಮೂಢನಾದಂತೆ ಅನ್ನಿಸುತ್ತಿದೆ. ನಾನು ಮಾಡಿದ ಧರ್ಮ ಕರ್ಮಗಳೇ ನನ್ನ ಪರಂಪರಾಗತ ಆಸ್ತಿ ಎಂಬ ಅಂತಿಮ ತೀರ್ಮಾನಕ್ಕೆ ಬಂದಿದ್ದೇನೆ, ಹಾಗಾಗಿ ನಾನು ಮತ್ತೆ ನನ್ನ ರಾಜ್ಯಕ್ಕೆ ನನ್ನ ಕರ್ಮಭೂಮಿಗೆ ಮರಳಲು ನಿರ್ಧರಿಸಿದ್ದೇನೆ. ನನ್ನ ಪ್ರಜೆಗಳ ಪಾಲನೆಯೇ ನನ್ನ ಧರ್ಮ' ಎನ್ನಲು ದೇವರಾಜನು ಮತ್ತೆ ತನ್ನ ಸಾರಥಿಯಾದ ಮಾತಲಿಯನ್ನು ಕರೆದು.

'ಎಲೈ ಸಾರಥಿಯೇ, ಈ ನನ್ನ ಗೆಳೆಯನನ್ನು ಆತನ ಕರ್ಮಭೂಮಿಗೆ ತಲುಪಿಸಿ ಬಾ...!' ಎಂದ ಬಳಿಕ ಸಾಧೀನರಾಜನನ್ನು ಬೀಳ್ಕೊಡಿಗೆ ಕೊಡುತ್ತಾ:

'ಹೌದು ಗೆಳೆಯಾ. ಉರವಲು ಪಡೆದದ್ದು ಎಂದೆಂದಿಗೂ ಎರವಲೇ ಹೌದು....!' ಅದು ನಿನ್ನದಾಗಲಿ ನನ್ನದಾಗಲಿ ಹೇಗಾಗಲು ಸಾಧ್ಯ...? ನಮ್ಮ ನಮ್ಮ ಧರ್ಮವೇ ನಮ್ಮದು....! ನಮ್ಮ ನಮ್ಮ ಕರ್ಮವೇ ನಮ್ಮದು...! ಅದರಿಂದ ದಕ್ಕಿದ ಫಲವೆ ನಮ್ಮ ನಿಜ ಆಸ್ತಿ...!' ಎನ್ನಲು ಸಾಧೀನ ರಾಜನು ತನ್ನನ್ನು ತಾನೇ ನಿಂದಿಸಿಕೊಳ್ಳುವಂತೆ.

'ಕಾಲವನ್ನು ಮರೆಮಾಚಲು ಪ್ರಯತ್ನಿಸಿದೆ. ಆಯಸ್ಸನ್ನು ವ್ಯರ್ಥಗೊಳಿಸಿಕೊಂಡೆ. ಧರ್ಮವನ್ನು ಮರೆಮಾಚಲು ಪ್ರಯತ್ನಿಸಿದೆ. ಕರ್ಮವನ್ನು ಕಳೆದುಕೊಂಡೆ....!!' ಎಂದ. □

'SAMVADA' Kannada Monthly, Dec 2006 RNI-KAR KAN/2002/9246 CPMG/KA/BGW-706/
Office of Posting: RAJAJINAGAR HO, Date of Posting: 27-28 of Every Month

ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ

ಸುಮಾರು ೨೦೦೦ ವರ್ಷಗಳ ಇತಿಹಾಸ ಕನ್ನಡಿಗರದು. ನಾನಾಕಾರಣಗಳಿಂದಾಗಿ ಬೇರೆ ಬೇರೆ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ ೧, ೧೯೫೬ ರಂದು ಒಂದಾದರು. ಇದು ಏಕೀಕೃತ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾ ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ-೫೦ ವರ್ಷಗಳ ಒಂದು ಅವಲೋಕನ

* ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ.
* "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತ ಮೊದಲ ರಾಜ್ಯ.
* ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾ
* ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂ ಮೊದಲ ಮಾದರಿ ರಾಜ್ಯ.
* ಸಾಕ್ಷರತೆಯಲ್ಲಿ ಗಣನೀಯ ಸಾಧನೆ–ಕೇವಲ ಶೇ. ೨೪ ರಷ್ಟಿದ್ದ ಸಾಕ್ಷರತೆ ಈಗ ಶೇ. ೭೧
* ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
* ನೀರಾವರಿ ಸಾಮರ್ಥ್ಯ–೨೬.೮೪ ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.
* ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜನೆಯಡಿ ರೈತರಿಗೆ ಕಂ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.
* ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃ ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂ ಕಂಕಣಬದ್ಧರಾಗೋಣ.

ಕರ್ನಾಟಕ ವಾ
Karnataka Infor